ಬಿಸಿಲ

ಆಗಸ್ಟ್ 1998 ರೂ. 10

ಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಮಾಸಪತ್ರಿಕೆ



ಪುನರ್ಜನ್ಮ

ಚಿತ್ರ
ೂಡುಗೆ

ಮಾರ್ಗದರ್ಶಿ

ವಿದ್ಯಾರ್ಥಿ-ನಿರುದ್ಯೋಗಿಗಳ ಕೈಪಿಡಿ

ಬೇಕಾಗಿದ್ದಾರೆ

'ಬಿಸಿಲ ಬದುಕು' ಮಾಸಪತ್ರಿಕೆಗೆ ಈ ಕೆಳಗಿನ ಹುದ್ದೆಗಳಿಗೆ ಯೋಗ್ಯ ಅಭ್ಯರ್ಥಿಗಳು ಬೇಕಾಗಿದ್ದಾರೆ. ಅರ್ಹ ಅಭ್ಯರ್ಥಿಗಳಿಗೆ ಆಕರ್ಷಕ ಸಂಬಳ ನೀಡಲಾಗುವುದು. ಪ್ರಾಮಾಣಿಕ ಪರಿಶ್ರಮದಲ್ಲಿ ನಂಬಿಕೆಯಿರುವ ಗಂಭೀರ ಪ್ರವೃತ್ತಿಯ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

ಉಪ ಸಂಪಾದಕರು

ಕನ್ನಡ ಭಾಷೆಯ ಮೇಲೆ ಪ್ರಭುತ್ವವಿರಬೇಕು. ಕಾಗುಣಿತ ತಪ್ಪಿಲ್ಲದೆ ಶುದ್ಧ ಕನ್ನಡ ಬರೆಯಬಲ್ಲವರಾಗಿರಬೇಕು. ಪತ್ರಿಕೆಯ ಸ್ವರೂಪಕ್ಕೆ ತಕ್ಕ ಲೇಖನಗಳನ್ನು ಆಯ್ದು ಪ್ರಕಟಣೆಗೆ ಸಿದ್ಧಪಡಿಸುವ ಜ್ಞಾನ ಅಗತ್ಯ. ಸಂಪಾದಕೀಯ ವಿಭಾಗದಲ್ಲಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬಲ್ಲಷ್ಟು ಅನುಭವ, ಪ್ರತಿಭೆ ಅಪೇಕ್ಷಣೀಯ. ಡಿಗ್ರಿ ಕಡ್ಡಾಯವಲ್ಲ.

ಡಿ. ಟಿ. ಪಿ. ಆಪರೇಟರ್

ಕನ್ನಡ ಡಿ.ಟಿ.ಪಿ. ಸಾಫ್ಟ್‌ವೇರ್ ಶ್ರೀಲಿಪಿ ಹಾಗೂ ಪೇಜ್‌ಮೇಕರ್‌ನಲ್ಲಿ ಕಾರ್ಯ ನಿರ್ವಹಿಸಿದ ಅನುಭವಸ್ಥ ಡಿ.ಟಿ.ಪಿ. ಆಪರೇಟರ್‌ಗಳು ಅರ್ಜಿ ಸಲ್ಲಿಸಬಹುದು. ಡಿ.ಟಿ.ಪಿ. ವಿಭಾಗವನ್ನು ಸ್ವತಂತ್ರವಾಗಿ, ಜವಾಬ್ದಾರಿಯಿಂದ, ಪ್ರಾಮಾಣಿಕವಾಗಿ ನಿರ್ವಹಿಸುವ ಅರ್ಹತೆಯುಳ್ಳವರಿಗೆ ಆದ್ಯತೆ.

ಪ್ರಸಾರಣಾಧಿಕಾರಿ

ಪತ್ರಿಕೆಯ ಸರ್ಕ್ಯೂಲೇಷನ್ ವಿಭಾಗವನ್ನು ದಕ್ಷತೆಯಿಂದ ನಿಭಾಯಿಸಬಲ್ಲ ವ್ಯವಹಾರ ಜ್ಞಾನ ಉಳ್ಳವರು ಈ ಹುದ್ದೆಗೆ ಅರ್ಜಿ ಸಲ್ಲಿಸಬೇಕು. ಡಿಗ್ರಿ ಕಡ್ಡಾಯವಲ್ಲ. ಈ ಕ್ಷೇತ್ರದಲ್ಲಿ ಅನುಭವ ಹಾಗೂ ಚಾಣಾಕ್ಷತೆ ಇರುವವರನ್ನು ಆಯ್ಕೆ ಮಾಡಲಾಗುವುದು.

ಜಾಹೀರಾತು ಪ್ರತಿನಿಧಿ

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಮೀಷನ್ ಆಧಾರದ ಮೇಲೆ ಜಾಹೀರಾತು ಸಂಗ್ರಹಿಸಲು ಪ್ರತಿನಿಧಿಗಳು ಬೇಕಾಗಿದ್ದಾರೆ. ಪದವಿ ಕಡ್ಡಾಯವಿಲ್ಲ. ಉತ್ತಮ ಜನಸಂಪರ್ಕ, ಪ್ರಾಮಾಣಿಕ ಪರಿಶ್ರಮವೇ ಅರ್ಹತೆ. ಪ್ರತಿನಿಧಿಯಾಗಿ ಆಯ್ಕೆಯಾದವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಕರ್ಷಕ ಕಮೀಷನ್ ಗಳಿಸಬಹುದು.

ಸಂಪೂರ್ಣ ವೈಯಕ್ತಿಕ ವಿವರ, ಅನುಭವ - ಅರ್ಹತೆ ಕುರಿತ ದಾಖಲೆ ಪತ್ರಗಳನ್ನು ಲಗತ್ತಿಸಿದ ಹಾಗೂ ಅಪೇಕ್ಷಿಸುವ ಸಂಬಳ ನಮೂದಿಸಿದ ಅರ್ಜಿಯನ್ನು ಈ ಕೂಡಲೇ ಕೆಳಗಿನ ವಿಳಾಸಕ್ಕೆ ರವಾನಿಸಿ.

ಸಂಪಾದಕ, **ಬಿಸಿಲ ಬದುಕು** ಮಾಸಪತ್ರಿಕೆ
ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು - ೫೬೦ ೦೭೯,, ದೂರವಾಣಿ : ೦೮೦-೩೩೦೭೮೧೦

ಬಿಸಿಲ ಬದುಕು

ಆಗಸ್ಟ್ 1998 ಸಂಪುಟ 2 ಸಂಚಿಕೆ 2

ಮತ್ತೊಂದು ಮುಖ

ದೇಶದ ಎದುರು ಎದೆ ತಟ್ಟಿ ನಿಂತಿರುವ ಹಲವು ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆಗೆ ಅತಿಯಾದ ಮಹತ್ವವಿದೆ. ಏಕೆಂದರೆ ನಿರುದ್ಯೋಗವೆಂಬುದು ಪ್ರಜೆಗಳ ವೈಯಕ್ತಿಕ ಬದುಕು ಹಾಗೂ ರಾಷ್ಟ್ರದ ಸಾಮೂಹಿಕ ಕರ್ತೃತ್ವ ಶಕ್ತಿಯೊಂದಿಗೆ ತಳುಕು ಹಾಕಿಕೊಂಡಿದೆ. ನಿರುದ್ಯೋಗದ ಪ್ರಶ್ನೆ ಹೆಡೆಯೆತ್ತಿದಾಗಲೆಲ್ಲ ನಾವು ಹೊಣೆಗಾರಿಕೆಯನ್ನು ಹೊತ್ತುಹಾಕುವುದು ಹದಗೆಟ್ಟ ವ್ಯವಸ್ಥೆಯ ಮೇಲೆ. ಆಂಗ್ಲರು ಗುಮಾಸ್ತರನ್ನು ಸೃಷ್ಟಿಸಲು ರೂಪಿಸಿದ ಶಿಕ್ಷಣ ಪದ್ಧತಿಯನ್ನೇ ಬಳುವಳಿಯಾಗಿ ಪಡೆದು ಮುಂದುವರಿದಿರುವ ನಮ್ಮ ಶಿಕ್ಷಣ ನೀತಿಯನ್ನು ಸಕಾರಣವಾಗಿ ಜರಿಯಬಹುದು. ಕೋಟಿಗಟ್ಟಲೆ ಉದ್ಯೋಗ ಸೃಷ್ಟಿಸುವ ಘೋಷಣೆಯೊಂದಿಗೆ ರಾಷ್ಟ್ರದ ಗದ್ದುಗೆಯೇರಿದ **ಕಮಲಸಾಥರ** ಸರಕಾರ ಇತ್ತೀಚೆಗೆ ಕೇಂದ್ರ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ಏರಿಸಿರುವುದು ಕೂಡಾ ಪ್ರಶ್ನಾರ್ಹ. ಆದರೆ ರಾಷ್ಟ್ರದ ಜೀವಂತಿಕೆಯನ್ನು ಇಂಚಿಂಚಾಗಿ ಕಬಳಿಸುತ್ತಿರುವ ನಿರುದ್ಯೋಗ ಸಮಸ್ಯೆಯ ಮತ್ತೊಂದು ಸರ್ಕಾರೇತರ ಮುಖವನ್ನು ನಾವೇಕೋ ಮುದ್ದಾಂ ಕಡೆಗಣಿಸುತ್ತಿದ್ದೇವೆ. ಈ ದೇಶದ ನಾಗರಿಕರಾಗಿ ನಿರುದ್ಯೋಗ ಸಮಸ್ಯೆಯ ಉಲ್ಬಣಕ್ಕೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಕಾರಣರಾಗಿರುವ ನಾವು ನಮ್ಮ ವೈಯಕ್ತಿಕ ನೆಲೆಯಲ್ಲಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಜವಾಬ್ದಾರಿ, ಜಾಣತನ ಪ್ರದರ್ಶಿಸಿಲ್ಲವೇಕೆ?

ವಿದ್ಯಾರ್ಥಿಗಳು, ನಿರುದ್ಯೋಗಿಗಳು ಕಿವಿಗೊಟ್ಟು ಕೇಳಿ ಮಿದುಳಿನಲ್ಲಿ ಮುದ್ರಿಸಿಕೊಳ್ಳಬೇಕಾದ ಗುಟ್ಟೊಂದಿದೆ. ಉದ್ಯೋಗ ನೀಡುವ ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ತನ್ನ ನೌಕರನಿಂದ ಬಯಸುವ ಮೊಟ್ಟಮೊದಲ ಗುಣವೆಂದರೆ ನಿರ್ದಿಷ್ಟ ಹುದ್ದೆಗೆ ತಕ್ಕ ನಿಪುಣತೆ. ಉದ್ಯೋಗ ಸಿಗುತ್ತಿಲ್ಲವೆಂದು ಹಲುಬುವ ನಮ್ಮ ಬಹುಪಾಲು ಪದವೀಧರರಿಗೆ ಇಂಥ ನಿಪುಣತೆಯೇ ಇರುವುದಿಲ್ಲ. ಒಂದು ಹುದ್ದೆಗೆ ಅರ್ಜಿ ಹಾಕುವ ಮುನ್ನ ಆ ಸ್ಥಾನಕ್ಕೆ ತಾನೆಷ್ಟು ಅರ್ಹ ಎಂದು ಪ್ರಶ್ನಿಸಿಕೊಳ್ಳದ ನಿರುದ್ಯೋಗಿಗಳು ಯಾಂತ್ರಿಕವಾಗಿ ಅರ್ಜಿ ಗುಜರಾಯಿಸಿ ನಿರಾಶೆಯ ಹುತ್ತದಲ್ಲಿ ಹುದುಗುತ್ತಾರೆ. ಯಾವುದೋ ಒಂದು ಉದ್ಯೋಗ ಸಿಕ್ಕರೆ ಸಾಕು ಎಂದು ಕಾತರಿಸುವ ಅಭ್ಯರ್ಥಿ ಉದ್ಯೋಗ ನೀಡುವವರ ನಿರೀಕ್ಷೆಯನ್ನು ಗ್ರಹಿಸದಿರುವುದೇ ಇಂಥ ಸ್ಥಿತಿಗೆ ಕಾರಣ.

ವಾಸ್ತವದಲ್ಲಿ ಈ ದೇಶ ಪರಿಣತ, ಪರಿಪಕ್ವ ಅಭ್ಯರ್ಥಿಗಳ ಕೊರತೆಯನ್ನು ಅನುಭವಿಸುತ್ತಿದೆ. ಅನೇಕ ಸಂಸ್ಥೆಗಳು ಸೂಕ್ತ ಅಭ್ಯರ್ಥಿಗಳಿಗಾಗಿ ಕಾಯುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಬರೀ ಪದವಿ ಪತ್ರಗಳನ್ನು ಹಿಡಿದು ಹತಾಶೆಯಿಂದ ಓಡಾಡುವ ಬದಲು ನಿರುದ್ಯೋಗಿಗಳು ತಮ್ಮದೇ ಆದ ಕ್ಷೇತ್ರ ಅಥವಾ ವಿಭಾಗವನ್ನು ಗುರುತಿಸಿಕೊಂಡು ಅದರಲ್ಲಿ ಅರ್ಹತೆಯನ್ನು ಗಳಿಸುವುದು ಒಳಿತು.

– ಸಂಪಾದಕ

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಅರವಿಂದ ನಾವಡ, ರವಿಶಂಕರ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ಹೆಚ್.ಎಂ.ಪಿ. ಆರಾಧ್ಯ

ಅಕ್ಷರ ಜೋಡಣೆ
ನರೇಂದ್ರ ಪಾಟೀಲ, ಕೋಕಿಲ

ಮುಖಪುಟ ಛಾಯಾ ಚಿತ್ರ ಕಲಾಕೃತಿ
ಮನೋಹರ ಆಚಾರ್ಯ

ವಿನ್ಯಾಸ
ಹರಿಹರನ್

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು-560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattarahalli, Old Madras Road, Bangalore - 49 Editor : Chandrakanta Vaddu

ಸರಸ ವಾರ್ತೆ

ಮಂಗನಿಂದ ಮಾನವ ಅನ್ನೋದಂತು ಗ್ಯಾರಂಟಿ. ಈ ಮಾತನ್ನು ದೃಢೀಕರಿಸಿದ್ದು ಇತ್ತೀಚಿನ ಆಸ್ಟ್ರೇಲಿಯಾದ ಸಂಶೋಧನೆಯ ಫಲಿತಾಂಶ. 3-4 ವರ್ಷದ ಮಕ್ಕಳು ಕಾಗದದ ಮೇಲೆ ಗೀಚೋ ಗೆರೆಗಳನ್ನು ಈ ಕೋತಿಗಳು ಗೀಚ್ತಾವಂತೆ. ಅದ್ರಲ್ಲೂ ಆಶ್ಚರ್ಯವೆಂದರೆ ಇವರಿಬ್ಬರ ಗೆರೆಗಳಲ್ಲಿ ಸಾಮ್ಯ ಕಂಡುಬಂದಿರೋದು. ಈ ವಿಚಾರ ತಿಳಿದ್ಮೇಲೆ ನೀವೆಲ್ಲಾದರೂ ಈ ಸಂಶೋಧನೆಯನ್ನು ಮತ್ತೆ ಸ್ವಯಂ-ಪರೀಕ್ಷೆ ಮಾಡೋಕೆ ಹೋಗೀರಿ, ಹುಷಾರ್! ಕಾಗದದ ಮೇಲೆ ಗೆರೆ ಗೀಚದೇ ಇದ್ರೂ, ಅಪರಿಚಿತರಾದ ನಿಮ್ಮ ಮುಖದ ಮೇಲೆ ಗೆರೆ ಗೀಚಿ ಮಾಯವಾಗಬಹುದು. ಕಾರಣ ಸಂಶೋಧನೆ ನಡೆಸಿದ್ದು ಮೃಗಾಲಯದ ಕೋತಿಗಳ ಬಳಿ.

ನಮ್ಮ ಪೂರ್ವಜರ ಈ ಕಲಾನೈಪುಣ್ಯಕ್ಕೆ ನಾವು ದೂರದಿಂದಲೇ ವ್ಹಾ - ವಾನರ ಅಂತಾ ಶಹಭಾಸ್‌ಗಿರಿ ಹೇಳಲೇಬೇಕಲ್ವೇ ?

●

Made For each other ಅಂದ್ರೆ, ಒಬ್ಬರಿಗೊಬ್ಬರು ಹೇಳಿ ಮಾಡಿಸಿದಂತೆ ಅನ್ನೋ ಅರ್ಥ ತಾನೇ ? ಈಗ ಈ ಮಾತನ್ನು ಹೆಚ್ಚು ಅರ್ಥಪೂರ್ಣವಾಗಿಸೋಕೆ ತೈವಾನ್‌ನ ಕಂಪನಿಯೊಂದು ಎಲೆಕ್ಟ್ರಾನಿಕ್ ಸಾಧನವನ್ನು ಕಂಡು ಹಿಡಿದಿದೆ. ಅದು ದಂಪತಿಗಳಾಗೋರ ಬಗ್ಗೆ ಪರಸ್ಪರ ಹೊಂದಾಣಿಕೆ, ಅಭಿರುಚಿ, ಅಭಿಪ್ರಾಯ, ಹವ್ಯಾಸ, ಜನ್ಮ ದಿನಾಂಕವನ್ನೆಲ್ಲಾ ತಾಳೆ ಹಾಕಿ ತಿಳಿಸುತ್ತಂತೆ. ಆ ಯಂತ್ರದಲ್ಲಿ ಬೊಂಬೆಯ ನಗುಮುಖ ಬಂದ್ರೆ, ಇವರಿಬ್ಬರು ಸಂಸಾರಿಗಳಾಗಿ ಬಾಳಬಹುದು ಅಂತ ಅರ್ಥ. ಆದ್ರೆ ಕೆಲವೊಮ್ಮೆ ಹೀಗೂ ಆಗಬಹುದು; ಅನ್ಯೋನ್ಯ ದಂಪತಿಗಳು ತಮ್ಮ ಅನ್ಯೋನ್ಯತೆಯನ್ನು ಅಳೆಯೋ ಪ್ರಯತ್ನದಲ್ಲಿ ಯಂತ್ರದ ತಾಂತ್ರಿಕ ತೊಂದರೆಯಿಂದ ಬೊಂಬೆಯ ನಗುಮುಖ ಬರದೇ ಇವರ ಮುಖದ ನಗು ಮಾಯವಾಗಿ ದಂ-ಬೇರೆ ಪತಿ-ಬೇರೆ ಆಗಿ ವಿಚ್ಛೇದನ ಮಟ್ಟಕ್ಕೂ ಹೋಗಬಹುದು.

ಆದೇನೇ ಇರಲಿ, ಈ ಯಂತ್ರ ಭಾರತಕ್ಕೆ ಬಂದ್ರೆ ನಮ್ಮ ಭಾವಿ ತರುಣ ತರುಣಿಯರು ತಮ್ಮ ಬಾಳಸಂಗಾತಿಗಳ ಆಯ್ಕೆಗೆ ಯಂತ್ರದ ಮುಂದೆ ಕ್ಯೂ ನಿಲ್ಲಬೇಕಾಗಬಹುದು. ಆಗ ವಧು-ವರರ ಅನ್ವೇಷಕರು, ವಿಶ್ಲೇಷಕರೆಲ್ಲಾ ಒಂದೊಂದು ಯಂತ್ರವನ್ನು ಖರೀದಿಸಬೇಕಾದೀತು.

●

ಇತ್ತೀಚೆಗೆ ಫುಟ್ಬಾಲ್ ಜ್ವರ ಕಡಿಮೆಯಾಗ್ತಾ ಬರ್ತಿದೆ. ಆದ್ರೂ ಫೈನಲ್‌ನಲ್ಲಿ ಸೋತ ಬ್ರೆಜಿಲ್‌ನಲ್ಲಿ ಆ ಜ್ವರ ಅಲ್ಲಿನವರನ್ನು ಇನ್ನೂ ಕಾಡ್ತಾ ಇದೆಯಂತೆ. ಈ ಫುಟ್ಬಾಲ್ ಪಂದ್ಯ ನಡೀತಾ ಇದ್ದಾಗ ಒಂದು ರಾತ್ರಿ ಥೈಲ್ಯಾಂಡ್‌ನಲ್ಲಿ ಏನಾಯ್ತು ಗೊತ್ತೆ?

ಪಾಪ ಫುಟ್ಬಾಲ್ ಪ್ರೇಮಿಗಳು ಸ್ವಲ್ಪ ತಿಂಡಿ, ಅದಕ್ಕೆ ಕಾಂಬಿನೇಷನ್ನಾಗಿ ಸ್ಕಾಚ್‌ವಿಸ್ಕಿ ಸೇವಿಸ್ತಾ ಫುಟ್ಬಾಲ್ ರಸದೌತಣವನ್ನು ಟಿ.ವಿ. ನೋಡ್ತಾ ಸವೀತಾ ಇದ್ರು. ಅಷ್ಟರಲ್ಲೇ ಬಾಗಿಲ ಮೂಲಕ ಬಂದ ಕಳ್ಳ ಜೇಬಿನಿಂದ ಪಿಸ್ತೂಲ್ ತೆಗೆದು ಒಮ್ಮೆಲೇ Hands up ಅಂತ ಅಬ್ಬರಿಸಿದ. ಈ ಫುಟ್ಬಾಲ್ ಪ್ರೇಮಿಗಳು ಇದೇನೋ ಜಾಹೀರಾತು ಇರಬೇಕು ಅಂತ ಅಲಕ್ಷಿಸಿ ಮತ್ತೆ ಟಿ.ವಿ. ದರ್ಶನದಲ್ಲಿ ತಲ್ಲೀನರಾದರು. ತಾಳ್ಮೆಗೆಟ್ಟ ಕಳ್ಳ ಒಂದು ಗುಂಡನ್ನು ಗಾಳೀಲಿ ಹಾರಿಸೇಬಿಟ್ಟ. 'ಢಂ' ಅಂದ ಶಬ್ದ ಫುಟ್ಬಾಲ್ ಪ್ರೇಮಿಗಳನ್ನು ಈ ಲೋಕಕ್ಕೆ ಕರ್ಕೊಂಡು ಬಂತು. ನೋಡ್ತಾರೇ ನಿಜವಾಗ್ಲೂ ಕಳ್ಳ, ಸಿಕ್ಕಿದ್ದನ್ನು ಬಾಚಿಕೊಂಡು ಓಡಿ ಹೋದ ಕಳ್ಳ, ಅಂತಿಂಥ ಕಳ್ಳನಲ್ಲ; ನಾಗರೀಕ ಕಳ್ಳ, ಕಾರಣ ಈತ ಶ್ರೀಮಂತರ ಹಣವನ್ನು ದೋಚಿ ಬಡವರಿಗೆ ಕೊಡ್ತಾ ಇದ್ದನಂತೆ. ಅದೆಲ್ಲಾ ಆಮೇಲೆ, ಸದ್ಯಕ್ಕೆ ಅವನೀಗ ಇರೋದು ಶ್ರೀ ಕೃಷ್ಣನ ಜನ್ಮ ಸ್ಥಾನದಲ್ಲಿ.

●

ಈ ಜಾಹೀರಾತು ಪ್ರಪಂಚ ಎಷ್ಟೊಂದು ರೋಚಕ ರೋಮಾಂಚಕ ಅಂತೀರಿ. ಕೆಲವೊಮ್ಮೆ ವಿವಾದಗಳಿಗೆ ಕಾರಣವಾಗೋದು ನಿಜ. ಈ ಪರಂಪರೆಗೆ ನಾಂದಿ ಹಾಡಿದ್ದು ಮಧು ಸಪ್ರೆ ಮಿಲಿಂದ್‌ಸೋಮನ್‌ರ ಶೂ ಜಾಹೀರಾತು. ನಂತರ ಕಾಮಸೂತ್ರ ಕಾಂಡೋಮ್‌ನ ಸರದಿ. ಈಗ ಕ್ಯಾಲಿಡಾ ಕಂಪನಿಯದು. ಬಾಂಬೆಯ ಒಂದು ಜಾಹೀರಾತು ಕಂಪನಿ ಒಳ ಉಡುಪುಗಳ ಉತ್ಕೃಷ್ಟತೆ ಹಾಗೂ ಶ್ರೇಷ್ಠತೆಯನ್ನು ಪ್ರಚಾರ ಪಡಿಸೋಕೆ ಆರಿಸಿಕೊಂಡಿರೋ ವಿಧಾನ ಏನು ಗೊತ್ತೇ? ಡಿನೋ ಬಸುಳ ಒಳಉಡುಪನ್ನು ತನ್ನ ಶಕ್ತಿಯೆಲ್ಲಾ ಪ್ರಯೋಗಿಸಿ ಹಲ್ಲಿನಿಂದ ಕಚ್ಚಿ ಎಳೆಯೋದಿಕ್ಕೆ ಪ್ರಯತ್ನಿಸಿರೋದು. ಅಷ್ಟಾದರೂ ಆ ಒಳಉಡುಪು ಗಟ್ಟಿಮುಟ್ಟು. ಈಗ ಈ ಜಾಹೀರಾತು ಬಾಂಬೆಯಲ್ಲಿ ದೊಡ್ಡ ಬಿರುಗಾಳಿ ಎಬ್ಬಿಸಿದೆ. ಗೃಹಿಣಿಯರಿಂದ ಹಿಡಿದು ಸಮಾಜದ ಗಣ್ಯವ್ಯಕ್ತಿಗಳ ತನಕ ಸಾಮೂಹಿಕ ವಿರೋಧ. ಆದರೆ "ನಮ್ಮ ವಸ್ತುಗಳ ಗುಣಮಟ್ಟವನ್ನು ಜನರಿಗೆ ಜಾಹೀರು ಪಡಿಸೋದಷ್ಟೇ ಈ ಜಾಹೀರಾತು ಉದ್ದೇಶ" ಅನ್ನೋ ಅಭಿಪ್ರಾಯ ಕಂಪನಿಯದ್ದು.

ಅದರ ಗುಣಮಟ್ಟ ಸಾರೋದಿಕ್ಕೆ ಹೋಗಿ ಸಮಾಜದಲ್ಲಿ ಕಂಪನಿಯ ಹೆಸರಿಗೆ ಕೆಸರು ಸಿಡಿಸ್ಕೊಂಡಿದ್ದಂತೂ ಸತ್ಯ!


●

ಟೈಟಾನಿಕ್ ಹೀರೋ ಡಿಕಾಪ್ರಿಯೋ ಇಂದಿನ ಯುವತಿಯರ ನಿದ್ದೆಯನ್ನು ಕದ್ದಿರೋ ಮಹಾಶಯ. ಯಾಕೆ ಗೊತ್ತಲ್ಲ; ಅವನ ಪರ್ಸನಾಲಿಟಿ, ಮುದ್ದು ಮುಖ, ನಗು, ಜೊತೆಗೆ ಅಭಿನಯ. ಬ್ರಿಟನ್‌ನ ಮ್ಯಾಗಜೀನೊಂದು ಅವನನ್ನು 'ಚುಂಬನ'ದ ಬಗ್ಗೆ ಪ್ರಶ್ನಿಸಿದಾಗ ಈ ಚುಂಬನ ಆಕರ್ಷಕವಾದದ್ದು, ಆದರೆ ಅಷ್ಟೇ ಅಸಹ್ಯವಾದದ್ದು ಎಂದು ಹೇಳೇ ಬಿಟ್ಟ. ಸರಿ, ಈ ಪತ್ರಿಕೆಯವರಿಗೆ ಕೆಟ್ಟ ಕುತೂಹಲ. ಅದ್ಹೇಗೇಳ್ತೀರಿ ಅಂತ ಮರುಪ್ರಶ್ನೆ ಹಾಕಬೇಕೇ! ಅದ್ಕೆ, ಈ ಭೂಗ್ರಹದಲ್ಲಿರೋ ಅಸಹ್ಯ ವಸ್ತುಗಳಲ್ಲಿ ಈ ಮನುಷ್ಯನ ಬಾಯಿಯೂ ಒಂದು. ಅಸಂಖ್ಯಾತ ಬ್ಯಾಕ್ಟೀರಿಯಾಗಳಿಂದ ಈ ಬಾಯಿ ಎಷ್ಟು ಹೊಲಸಾಗಿರುತ್ತೆ ಅಂದ್ರೆ ನಾಯಿ ಬಾಯಿ ಎಷ್ಟೋ ವಾಸಿ, ಅಂದ್ನಂತೆ. ಹಾಗಾದ್ರೆ ಈ ಮಾತು ಅನುಭವದ್ದೋ ಎಂದು ತಿಳ್ಕೋಳ್ಳೋ ಕುತೂಹಲ ಈ ಚುಂಬನಾಸಕ್ತ ಯುವತಿಯರಿಗೆ. ■





ಒಳನೋಟ



ಪುನರ್ಜನ್ಮ ಇದೆಯೇ?

ಡಾ. ಎಸ್. ಎಲ್. ಭೈರಪ್ಪ, ಹೆಚ್. ಕೆ. ಪಾಟೀಲ, ಡಾ.ಎಂ.ಚಿದಾನಂದ ಮೂರ್ತಿ, ವಿನಯಾ ಪ್ರಸಾದ್, ನಾ.ಡಿಸೋಜ, ಟಿ. ಮಹಾಬಲೇಶ್ವರ ಭಟ್, ತೋಂಟದ ಸಿದ್ಧಲಿಂಗಸ್ವಾಮೀಜಿ ಮೊದಲಾದವರು ಈ ಅಪರೂಪದ ಸಮೀಕ್ಷೆಯಲ್ಲಿ ಮನಬಿಚ್ಚಿ ಮಾತನಾಡಿದ್ದಾರೆ. 8





ವಿದ್ಯೆ - ಉದ್ಯೋಗ

ಸ್ಥಿರ ಶೀರ್ಷಿಕೆಗಳು

ಟಪಾಲು

ಏಕೆ ?

ಜುಲೈ ಸಂಚಿಕೆಯ ಟಪಾಲು ವಿಭಾಗದಲ್ಲಿ ಪ್ರಕಟವಾದ ನನ್ನ ಪತ್ರದ ಕೆಳಗೆ 'ಹೊಸ ಮೋಕಾ' ಬದಲಾಗಿ ಹೊಸಪೇಟೆ ಎಂದಾಗಿದೆ. ಏಕೆ ?

-ಎಂ. ವೀರೇಶ್, ಹೊಸಮೋಕಾ

ಸ್ಥಿರ ಶೀರ್ಷಿಕೆಯಾದ 'ಅಡುಗೆ ಮನೆ' ಏಕೆ ಮಾಯವಾಗಿದೆ ?

- ಕೆ. ವರಗಪ್ಪ, ಶ್ರೀಧರ ಗಡ್ಡೆ

ಕಣ್ಣು ತೆರೆಸಿತು

'ಮನೆ ಮದ್ದು' ವಿಭಾಗದಲ್ಲಿ ಪ್ರಕಟಿಸಿದ "ಅಜ್ಜಿಯ ಆಂಟಿಬಯೋಟಿಕ್ಸ್-ಬೆಳ್ಳುಳ್ಳಿ" ಲೇಖನ ತುಂಬಾ ಸೊಗಸಾಗಿ ಮಾಡಿಬಂದಿದೆ. ಬೆಳ್ಳುಳ್ಳಿ ತಿನ್ನದ ನನಗೆ, ನನ್ನಂತಹ ಸಾವಿರಾರು ಜನರಿಗೆ, ಲೇಖನ ಕಣ್ಣು ತೆರೆಸಿತು.

ಅನೇಕ ರೋಗಗಳ ನಿವಾರಣೆ ಹಾಗೂ ಶಕ್ತಿ ವರ್ಧನೆ ಗುಣವುಳ್ಳ ಬೆಳ್ಳುಳ್ಳಿಯ ಮಹತ್ವದ ಅರಿವಾಯ್ತು.

-ಡಿ.ಬಿ. ತಿಮ್ಮಪ್ಪ, ಸಂತೆಬೆನ್ನೂರು.

ಅರ್ಜಿ ಹಾಕುವ ವಿಧಾನ

ಉದ್ಯೋಗಕ್ಕೆ ಅರ್ಜಿ ಹಾಕುವ ವಿಧಾನದ ಬಗ್ಗೆ ಚೆನ್ನಾಗಿ, ವಿವರವಾಗಿ ತಿಳಿಸಿದ್ದಕ್ಕೆ ಕೃತಜ್ಞತೆಗಳು. ಏಕೆಂದರೆ ಅನೇಕರಿಗೆ ಅರ್ಜಿಯನ್ನು ಬರೆಯುವ ಪ್ರಾಥಮಿಕ ಕ್ರಮವೇ ಗೊತ್ತಿರುವುದಿಲ್ಲ. ಹೆಸರು ಬರೆಯುವ ಕಡೆ ಜನ್ಮ ದಿನಾಂಕ, ಜನ್ಮ ದಿನಾಂಕ ಬರೆಯುವ ಕಡೆ ದಾಖಲಾತಿ ದಿನಾಂಕ ಬರೆದಿರುತ್ತಾರೆ. ನೌಕರಿ ಆಯ್ಕೆಯ ಮಾಹಿತಿಯೂ ಉಪಯುಕ್ತವಾಗಿತ್ತು

- ಶಾಪ ಸಾಬ್, ನಾಗರಹಾಳು.

ಒಳ್ಳೆಯ ಮಿತ್ರ

ಒಂದು ನಿರಾಶಾಜನಕ ಸ್ಥಿತಿಯಲ್ಲಿ 'ಬದುಕು' ಸಿಕ್ಕಿತು. ಮನುಷ್ಯನಿಗೆ ಪುಸ್ತಕಗಳೇ ಒಳ್ಳೆಯ ಮಿತ್ರ ಎಂಬ ಮಾತು ನಿಮ್ಮ ಪತ್ರಿಕೆಯಿಂದ ಸಾಬೀತಾಗಿದೆ. ಪತ್ರಿಕೆಯಲ್ಲಿ ಮಾಹಿತಿಗಳನ್ನು ಓದಿ ಈಗ ನನಗೆ ಮರುಜೀವ ಬಂದಂತೆ ಅನ್ನಿಸುತ್ತಿದೆ. ಹಾಗೇ ನಿಮ್ಮ ಪತ್ರಿಕೆ ಓದುತ್ತ ನಾನು ಮೊದಲಿನ ಹಾಗೆ ಒಳ್ಳೆಯ ವಿದ್ಯಾರ್ಥಿ ಆಗಿಬಿಡುತ್ತೇನೆ ಎಂಬ ನಂಬಿಕೆ ನನಗೆ ಬಂದಿದೆ.

-ಗಿರೀಶ್ ಕಾಜೆ, ಹಾರೂರಗೇರಿ.

ಅನಾಕರ್ಷಕ

ಜುಲೈ 98ರ ಸಂಚಿಕೆಯ ಮುಖಪುಟ ಆಕರ್ಷಣೆ ಕಳೆದುಕೊಂಡಿತ್ತು. ನಾನು ಬುಕ್ ಸ್ಟಾಲ್‌ನಲ್ಲಿ 'ಬದುಕು' ಕೊಂಡಾಗ ಇದು ಯಾವ ಪುಸ್ತಕ ಎಂದು ಥಟ್ಟನೆ ಹೊಳೆಯಲಿಲ್ಲ. ಹೀಗೇಕೆ ಆಯ್ತು ?

-ಡಿ.ಎಚ್. ದಯಾನಂದ,
ಹೊನ್ನಾವರ.

ಹೊಸ 'ಬದುಕು'

ಜುಲೈ ತಿಂಗಳಲ್ಲಿ ಅತ್ಯಾಕರ್ಷಕ ಮುಖಪುಟದೊಂದಿಗೆ 'ಬದುಕು' ಬಂದಾಗ ಎಲ್ಲರಿಗೂ ಖುಷಿಯೋ ಖುಷಿ. ವಿದ್ಯೆ-ಉದ್ಯೋಗದೊಂದಿಗೆ 'ಬದುಕು' ಅನೇಕ ಉಪಯುಕ್ತ ವಿಷಯಗಳನ್ನು ಪ್ರಕಟಿಸುತ್ತಿದೆ. ಅದಕ್ಕಾಗಿ ಧನ್ಯವಾದಗಳು.

- ಪ್ರವೀಣ ರಾಜು ಸೊನ್ನದ,
ಮುದ್ದೇಬಿಹಾಳ.

ಜುಲೈ 98ರ ಸಂಚಿಕೆ ಜುಲೈ 97ರ ಸಂಚಿಕೆಗಿಂತ ತುಂಬಾ ಸುಧಾರಿಸಿದೆ. ಇನ್ನೂ ಸುಧಾರಿಸಲಿ.

- ಅಮರೇಶ ಯಲಬುಣಚಿ, ರಾಮಪುರ.

'ಸಂವೇದನೆ' ಹಾಗೂ 'ಬಾಗಲಕೋಟೆ ಪಟ್ಟಣ ಸಹಕಾರಿ ಬ್ಯಾಂಕ್" ಈ ಎರಡೂ ಲೇಖನಗಳು ಬೇಸರ ಬರಿಸುವಂತಿದ್ದವು. 'ಅಡುಗೆ ಮನೆ' ಇಲ್ಲದ್ದು ಸಂತೋಷದ ವಿಷಯ. ಹಾಗೆಯೇ ಜಾಹೀರಾತು ಹಾಗೂ ಹನಿಗವನ ತೆಗೆದುಹಾಕಿ.

- ಜಯತೀರ್ಥ ಶರ್ಮಾ, ಗುರುಮಠಕಲ್

ಪರವಾ ಇಲ್ಲ

ಜುಲೈ 'ಬದುಕು' ಪರವಾ ಇಲ್ಲ. 'ವ್ಯಕ್ತಿತ್ವ ವಿಕಾಸ' ಹಿಡಿಸಿತು. ನನ್ನ ಗಮನಕ್ಕೆ ಬಂದ ಒಂದು ಕೊರತೆಯೆಂದರೆ ಕಥೆ ಇಲ್ಲದ್ದು! ಒಂದೇ ಒಂದು ಕಥೆ ಇದ್ದಿದ್ದರೆ ಮನೆಯಲ್ಲಿ ಎಲ್ಲರಿಗೂ ಹಿಡಿಸುತ್ತಿತ್ತು.

-ಶ್ರೀಪಾದ ಮೆಣ್ಸುಮನೆ, ಯಲ್ಲಾಪುರ.

ಒಂದು ವರ್ಷ ಅದೆಷ್ಟು ಬೇಗ ಸರಿಯಿತು. ಅಲ್ಲವೇ? ಕಳೆದ ವರ್ಷದಿಂದ ಓದುಗರಿಗೆ ಸಾಕಷ್ಟು ಜ್ಞಾನ ನೀಡಿದ 'ಬಿಸಿಲ ಬದುಕು' ಪತ್ರಿಕೆಯು ಜುಲೈ-98ರ ಸಂಚಿಕೆಯಿಂದ ಎರಡನೇ ವರ್ಷಕ್ಕೆ ಕಾಲಿಡುತ್ತಿರುವುದು ನನಗೆ ತುಂಬಾ ಸಂತಸ ನೀಡಿದೆ. ಮುಂದೆಯೂ ಕೂಡಾ ಇದೇ ರೀತಿಯ ವೈವಿಧ್ಯಮಯ ವಿಷಯಗಳಿಂದ ಹೊರ ಬರಲಿ. ನೂರ್ಕಾಲ ಬಾಳಲಿ, ಎಂದು ನನ್ನ ಆಸೆ ಮತ್ತು ಹಾರೈಕೆ.

- ಶಂಕರಗೌಡ ವೈ.ಪಾಟೀಲ, ಬಾದಾಮಿ.

ಒಂದು ವರ್ಷ ತುಂಬಿದ ವೇಳೆಯಲ್ಲಿ ಪತ್ರಿಕೆಗೆ ಶುಭ ಹಾರೈಕೆಗಳು.

-ಪಾಂಡುರಂಗ ಎನ್.ಎನ್, ಕೆರೂರು.

ಬೇರೆಯವರ ಹೆಸರು

ಜುಲೈ 1998ರ 'ಬಿಸಿಲ ಬದುಕು' ಪುಟ 21ರ 'ಚೌಚೌ'ದಲ್ಲಿ 'ವಿಶಿಷ್ಟ ಜಾತ್ರೆ' ಎಂಬ ನಾನು ಬರೆದ ಲೇಖನದ ಕೆಳಗೆ ಬೇರೆಯವರ ಹೆಸರು (ಟಿ.ತೇಜಾನಂದ ಕೊಟ್ಟೂರು) ಮುದ್ರಿತ

ಲೇಖಕರ ಬೆಂಬಲ

'ಬಿಸಿಲು' ತನ್ನ 'ಬದುಕ'ನ್ನು ರೂಪಿಸಿಕೊಳ್ಳುತ್ತಿದ್ದ, ಅದರ ಹುಟ್ಟಿಗಿಂತ ಮೊದಲಿನ ಆ ದಿನಗಳಿಂದಲೂ ತುಂಬ ಆಸಕ್ತಿಯಿಂದ ಅಷ್ಟೇ ಆತಂಕದಿಂದ ಇದನ್ನು ಗಮನಿಸುತ್ತ ಬಂದವನು ನಾನು. ಕನ್ನಡದ ಮಟ್ಟಿಗೆ ಹೇಳುವುದಾದರೆ ಉದ್ಯಮಪತಿಗಳಲ್ಲದವರು ಒಂದು ಪತ್ರಿಕೆಯನ್ನು ಹೊರತರಬಹುದೇನೋ ನಿಜ, ಆದರೆ ಅದನ್ನು ಬದುಕಿಸಿಕೊಂಡು ಹೋಗುವ ಬವಣೆ ಶಬ್ದಗಳಿಗೆ ಸಿಲುಕದಂಥದ್ದು. ಇಂಥ ವಿಪರೀತ ಪರಿಸ್ಥಿತಿಯಲ್ಲಿ 'ಬಿಸಿಲ ಬದುಕು' ಹದಿಮೂರರ ಹರೆಯಕ್ಕೆ ಕಾಲಿರಿಸಿದೆ. ಇತ್ತಿತ್ತಲಾಗಿ ಮೈದುಂಬಿಕೊಂಡೂ ಬರುತ್ತಿದೆ. ಆದರೆ ಈ ಹದಿಹರೆಯವೆಂಬುದೇ ಸಂಭ್ರಮ, ತಳ್ಳಂಕ, ಆಸೆ, ಅಪೇಕ್ಷೆ, ಗೊಂದಲಗಳ ಕಲಸುಮೇಲೋಗರ. ಅಲ್ಲದೆ ನೋಡುಗರ ಕಣ್ಣುಗಳೂ ಈಗ ಇವಳ ಅರಳುತ್ತಿರುವ ಅಂಗಾಂಗಗಳ ಮೇಲೆ ಕೇಂದ್ರೀಕೃತ. ಒಂದು ಕ್ಷಣವೂ ಎಚ್ಚರ ತಪ್ಪದಿರಲಿ.

ಸೂರ್ಯ ನಡುನೆತ್ತಿಗೇರಿದಾಗಲೇ ಬಿಸಿಲಿನ ಪ್ರಖರತೆಯೂ ತೀವ್ರ. ಆದರೆ ಬಿಸಿಲೇ ಬದುಕಾಗಿರುವ ಈ ಪತ್ರಿಕೆಗೆಂಥ ಬಿಸಿಲಿನ ಝಳ! ಇಂದು ಬಿಸಿಲ ಬದುಕು ಎಲ್ಲಾ ವರ್ಗದವರ, ಎಲ್ಲಾ ವಯಸ್ಸಿನವರ, ವಿಭಿನ್ನ ಆಸಕ್ತಿಯುಳ್ಳವರ ಪತ್ರಿಕೆಯಾಗಿ ಮೈದಳೆಯುತ್ತಿದೆ. ಇದು ಇನ್ನೂ ಹೆಚ್ಚು ಹೆಚ್ಚು ಅರ್ಥಪೂರ್ಣವಾಗಲಿ. ವೈಯಕ್ತಿಕ ನೆಲೆಗಟ್ಟಿನಲ್ಲಿ ನನ್ನಿಂದಾಗಬಲ್ಲ ಎಂಥದೇ ಕಾಂಟ್ರಿಬ್ಯೂಷನ್‌ಗೂ ನಾನು ಸಿದ್ಧ.

ಕೊನೆಯಲ್ಲಿ ಒಂದು ಮಾತು. ಬಿಸಿಲ ಬದುಕು ಕನ್ನಡ ಲೇಖಕರ ಅಭಿಮಾನದ ಪತ್ರಿಕೆಯಾಗಿ ಮೆರೆಯುತ್ತಿರುವುದು ಕೆಲವರ ಕಣ್ಣು ಕುಕ್ಕಲೂ ಬಹುದು. ಅಂಥ ಪರಿಸ್ಥಿತಿ ಏನಾದರೂ ಎದುರಾದರೆ (ಹಾಗಾಗದಿರಲೆಂದೇ ಹಾರೈಸೋಣ) ಲೇಖಕರ ವೃಂದವೇ ಈ ಪತ್ರಿಕೆಗೆ ಶ್ರೀರಕ್ಷೆಯಾಗಿ ನಿಲ್ಲಬೇಕು, ನಿಲ್ಲುತ್ತಾರೆ.

-ಡಾ. ಅನಿಲ ಕಮತಿ, ಬೆಳಗಾವಿ.

ಗೊಂಡಿದೆ. ಇದರಿಂದ ತುಂಬಾ ಬೇಜಾರಾಯಿತು. ಈ ರೀತಿ ತಪ್ಪು ನೀವು ಮಾಡ್ತೀರೆಂದು ನಂಬಿರಲಿಲ್ಲ. ನಿಮ್ಮ ಪತ್ರಿಕೆ ಕರಡು ತಿದ್ದುಪಡಿ ವಿಭಾಗದಲ್ಲಿ 'ರಾಯರ ಕುದುರೆ' ಯಂತಾಗುತ್ತಿದೆ ಅನ್ನಿಸಿ ನೋವಿನಿಂದ ಪತ್ರ ಬರೆಯುತ್ತಿರುವೆ.

-ಮಲ್ಲಿಕಾರ್ಜುನ ಕುಂಬಾರ, ರೋಣ.

ಮನೋವಿಜ್ಞಾನ

ನನ್ನ ವಿನಂತಿ ಏನೆಂದರೆ - ಈ ಪತ್ರಿಕೆಯಲ್ಲಿ ಮನೋವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳನ್ನೂ ಪ್ರಕಟಿಸಿ.

-ಎಸ್.ಎನ್. ಅತ್ತಾರ್, ಧಾರವಾಡ.

ಮನೆ ಯಾವಾಗ ?

ಜುಲೈ ಸಂಚಿಕೆ ನೋಡಿ ಆದ ಆನಂದ ಅಷ್ಟಿಷ್ಟಲ್ಲ. ವಿದ್ಯೆ-ಉದ್ಯೋಗ ಕುರಿತ ಮಾಹಿತಿ ತುಂಬಾ ಇಷ್ಟವಾಯಿತು. 'ಮನೆ' ಯನ್ನು ಯಾವಾಗ ತರುತ್ತೀರಿ ? ನಾನು ಅದರ ನಿರೀಕ್ಷೆಯಲ್ಲಿದ್ದೇನೆ.

-ಮಹೇಶ ಪಟ್ಟಣಶೆಟ್ಟಿ, ಹುಬ್ಬಳ್ಳಿ.

ಮೈ ಜುಂ ಎಂದಿತು

ಈ ಸಾರಿಯ 'ಬಿಸಿಲ ಬದುಕು' ವಿನ್ಯಾಸ ಸ್ವಲ್ಪ ಬದಲಾವಣೆಯಾಗಿದೆ. ಮುಖ ಪುಟ ಸುಂದರವಾಗಿ, ಆಕರ್ಷಕವಾಗಿದೆ. 'ನೀವೆಷ್ಟು ಗಂಡಸರು ?' ಲೇಖನ ಓದಿ ಮೈ ಜುಂ ಎಂದಿತು! ಈ ಉಪಯುಕ್ತ ಮಾಹಿತಿ ಸಂಗ್ರಹ ಯೋಗ್ಯವಾಗಿದೆ.

ಒಂದು ಅನುಮಾನ : ನಮ್ಮ 'ಮನೆ' ನಮಗೆ ದೊರಕಬಹುದೇ?! ಯಾವಾಗ?

ಒಂದು ಕುತೂಹಲ : 2 ರೂಪಾಯಿಗೆ ದೊರಕುವ 'ಮನೆ' ಯನ್ನು ಬೇಗ ನಮ್ಮದಾಗಿಸಿಕೊಳ್ಳಬೇಕೆನ್ನುವ ಕುತೂಹಲ.

-ಸ್ಫೂರ್ತಿ ಬೆಟ್ಟದೂರು, ಕಪಗಲ್.

ಹೊಸ ಆಸೆ

ಜುಲೈ 98ರ ತಮ್ಮ ಮಾಸಿಕದಲ್ಲಿ ಡಾ.ಸುನಂದಾ ಕುಲಕರ್ಣಿಯವರ ಲೇಖನ 'ನೀವೆಷ್ಟು ಗಂಡಸರು?' ಎಂಬುದನ್ನು ಪ್ರಕಟಿಸಿರುತ್ತೀರಿ. ಇಂಥ ಸಮಸ್ಯೆಗಳಿಂದ ಬಳಲುತ್ತಿರುವ ನನ್ನಂಥವರಿಗೆ ಈ ಲೇಖನ ಹೊಸ ಆಸೆ ಮೂಡಿಸಿದೆ. ನಾನೋರ್ವ ಗಂಡಿನ ನಡವಳಿಕೆ ಇರುವ ಹೆಣ್ಣು. ಈಗಾಗಲೇ ಸಾಕಷ್ಟು ನೊಂದಿರುವ ನನಗೆ ಗಂಡಾಗಲು ಸಾಧ್ಯವಿದೆಯೆಂಬ ಅಂಶ ಸಂತಸ ತಂದಿದೆ. ದಯಮಾಡಿ ಲಿಂಗ ಪರಿವರ್ತನೆ ಮಾಡುವ ಆಸ್ಪತ್ರೆ ಮತ್ತು ತಗುಲಬಹುದಾದ ಖರ್ಚಿನ ಬಗ್ಗೆ ಸೂಕ್ತ ಮಾಹಿತಿಯನ್ನು ಪ್ರಕಟಿಸಿ ನನ್ನಂಥವರ ಬದುಕು ನೆಮ್ಮದಿಯಿಂದ ಸಾಗಲು ಅವಕಾಶ ಮಾಡಿಕೊಡಿರೆಂದು ಕೋರುತ್ತೇನೆ. ಇಂಥ ಉತ್ತಮ ಲೇಖನ ಪ್ರಕಟಿಸಿದ ನಿಮಗೆ ಮತ್ತು ವೈದ್ಯೆಗೆ ನನ್ನ ಧನ್ಯವಾದಗಳು.

-ಟಿ.ಎಸ್. ಸೌಮ್ಯ, ಮೈಸೂರು.

ತನ್ನತನ

'ಬದುಕು' ಇತ್ತೀಚೆಗೆ ತನ್ನತನ ಕಳೆದುಕೊಳ್ಳುತ್ತಿದೆ ಎನಿಸುತ್ತಿದೆ, ಹಾಗಾಗದಿರಲಿ.

-ಹಣಮಂತಪ್ಪ ಸೇಡಂಕರ್,
ಗುರುಮಠಕಲ್

ಅರ್ಥ - ಅಪಾರ್ಥ

ಅವರ ಸಂಗದಿಂದ ದೂರಾಗಿ ತನ್ನ ಹೀನ ಕೃತ್ಯಗಳಿಗೆ ಯಾವುದೇ ಸಾಕ್ಷ್ಯಗಳನ್ನು ಉಳಿಸದಿರಲು ನಿರ್ಧರಿಸಿ **ಕೊಳೆಗಳನ್ನು** ಮಾಡತೊಡಗಿದ.

[*ಸಂಜೆ ವಾಣಿ,* 6-7-98] **- ಚ. ಶ್ರೀನಿವಾಸಮೂರ್ತಿ,** ಶ್ರೀನಿವಾಸಪುರ.

ಮೈದೊಳಲು, ಮಲ್ಲಾಪುರ, ಕಲ್ಲಜ್ಜನಾಳ್ ಗ್ರಾಮಗಳಲ್ಲಿ ಅನೇಕರು ಹೆಂಡತಿಯ **ತಾಲಿಯನ್ನೇ** ಮಾರಿ ಹೆಂಡವನ್ನು ಕುಡಿದರು.

[*ಪ್ರಜಾವಾಣಿ,* 3-7-98] **- ದಸ್ತಗೀರ ಮ.ಕ.,** ಮಾಲಗಾರ.

ನೆಗಡಿಯಂತಹ ಜಡ್ಡಿಲ್ಲ ಬುಗುಡಿಯಂತಹ **ಆಭರವಿಲ್ಲ.**

[ಬಿಸಿಲ ಬದುಕು, ಜುಲೈ 1998] **-ಕೆ.ಎಂ. ಮಲ್ಲಿಕಾರ್ಜುನಯ್ಯ,** ಆಲಬನೂರು.

ಧಾಬಾದ ಮುಂದೆ **ಸಲ್ಲಿಸಿದ್ದರಿಂದ,** ವಿನಾಕಾರಣ ವಿಳಂಬವಾಗಿ ತೊಂದರೆಗೊಳಗಾದ ಶಿವಮೊಗ್ಗ ಪ್ರಯಾಣಿಕರೊಬ್ಬರು ಗ್ರಾಹಕರ ವೇದಿಕೆಗೆ ಮೊರೆ ಹೋಗಿ 6 ಸಾವಿರ ರೂ. ಪರಿಹಾರ ಪಡೆದಿದ್ದರೂ ಊರ ನಡುವಿನ ಧಾಬಾಗಳ ಕಾಟದಿಂದ ಪ್ರಯಾಣಿಕರು ಮುಕ್ತರಾಗಿಲ್ಲ.

[*ಸಂಯುಕ್ತ ಕರ್ನಾಟಕ, 7-7-98*] **-ಸೋಮೇಶ ಬದಾಮಿ,** ರಾಮಪುರ.

ದೇವೇಗೌಡರ ಸಚಿವ ಸಂಪುಟದಲ್ಲಿ **ಉನ್ಮತ್ತ** ಶಿಕ್ಷಣ ಸಚಿವರಾಗಿದ್ದ ಡಿ.ಮಂಜುನಾಥ್ ಆನಂತರ ಪಟೇಲ್ ಮು.ಮ. ಆದಾಗ ಮನೆಗೆ ಹೋಗಿದ್ದರು.

[*ಲಂಕೇಶ್ ಪತ್ರಿಕೆ, 8-7-98*] **-ಸುನಿಧಿ ಸುರೇಶ್,** ಬೆಂಗಳೂರು.

ನೀವು ಓದುವ ಪತ್ರಿಕೆಗಳಲ್ಲಿ ವಾಕ್ಯದ ಅರ್ಥವನ್ನೇ ಕಳೆಯುವ ಇಂಥ ಹಲವು ಸಾಲುಗಳು ಆಗಾಗ ನುಸುಳುವುದುಂಟು. ಹೀಗೆ ಉಂಟಾಗುವ ದೋಷಗಳು ಮೇಲ್ನೋಟಕ್ಕೆ ತಮಾಷೆಯಾಗಿ ಕಂಡರೂ ಗಂಭೀರ ಪರಿಣಾಮ ಬೀರಬಲ್ಲವು. ಸ್ಥಳೀಯ ಪತ್ರಿಕೆಗಳಲ್ಲಿ, ರಾಜ್ಯ-ರಾಷ್ಟ್ರ ಮಟ್ಟದ ಪತ್ರಿಕೆಗಳಲ್ಲಿ ಇಂಥ ದೋಷಗಳನ್ನು ಹುಡುಕಿ ನಮಗೆ ಕಳಿಸಿಕೊಡಿ. ನಿಮ್ಮ ಹೆಸರಿನೊಂದಿಗೆ ಪ್ರಕಟಿಸಲಾಗುವುದು. ನೀವು ದೋಷ ಗಮನಿಸಿದ ಪತ್ರಿಕೆಯ ಅರ್ಥಾಂತರವಾದ ಭಾಗವನ್ನು ಕತ್ತರಿಸಿ ಕಳಿಸುವುದು ಅತ್ಯಗತ್ಯ. ಪತ್ರಿಕೆಯ ಹೆಸರು, ದಿನಾಂಕವೂ ಇರಬೇಕು.

-ಸಂ.

ಪುನರ್ಜನ್ಮ

ಪುನರ್ಜನ್ಮ ಇದೆಯೇ ? - ಈ ಪ್ರಶ್ನೆ ಎತ್ತಿಕೊಂಡ 'ಬದುಕು' ರಾಜ್ಯದ ಮೂಲೆ ಮೂಲೆ ಸುತ್ತಿತು. ವಿವಿಧ ಭಾಗದ, ಬಗೆ ಬಗೆ ಹಿನ್ನೆಲೆಯ ಜನರನ್ನು ಸಂಪರ್ಕಿಸಿ ಅಭಿಪ್ರಾಯ ಸಂಗ್ರಹಿಸಲಾಯಿತು. ಸಂಗ್ರಹಿಸಿದ ಸಾವಿರಾರು ಅಭಿಪ್ರಾಯಗಳಲ್ಲಿ ಕೆಲವು ಪ್ರಾತಿನಿಧಿಕ ವಿಚಾರಗಳನ್ನಿಲ್ಲಿ ನೀಡುತ್ತಿದ್ದೇವೆ.

ಸಮೀಕ್ಷಕರು

ಅರವಿಂದ ನಾವಡ	- ಬೆಂಗಳೂರು
ಹೇಮಲತಾ ದೇಸಾಯಿ	- ಗದಗ
ಡಾ.ಟಿ.ಕೆ. ತಾಪಸ್	- ಹುಬ್ಬಳ್ಳಿ
ಪ್ರಕಾಶ್ ಮುಲಗೆ	- ಗುಲಬರ್ಗಾ
ಶಿವು ಲಕ್ಕಣ್ಣವರ	- ಹಾವೇರಿ



ಪುನರ್ಜನ್ಮ ಸತ್ಯವೇ? ಮಿಥ್ಯವೇ?

■ ಡಾ. ವಿಜಯಕುಮಾರ ಮಹಾನುಭಾವಿಗಳು
ಪ್ರಭುದೇವ ಧರ್ಮಪೀಠ, ಜೋಗ, ಶಿವಮೊಗ್ಗ ಜಿಲ್ಲೆ



ಪೂರ್ವಜನ್ಮಗಳು ನಿಜವೋ? ಸುಳ್ಳೋ? ಈ ವಿಷಯದ ಬಗೆಗೆ ಪ್ರತಿಕ್ರಿಯಿಸುವವರು ಐದು ವಿಧ ಇದ್ದಾರೆ.

1. ನಿಜವಿರಲಿ, ಸುಳ್ಳಿರಲಿ ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ಇರುವವರು.
2. ಪುನರ್ಜನ್ಮ ಸುಳ್ಳು ಎಂದು ಪೂರ್ವನಿರ್ಧಾರ ಇಟ್ಟುಕೊಂಡೆ ನಿರಾಕರಿಸಿಬಿಡುವವರು.
3. ಪುನರ್ಜನ್ಮ ವಿಷಯವನ್ನು ಕೇಳಿ ಮರೆತು ಬಿಡುವವರು.
4. ಪೂರ್ವಜನ್ಮದ ಸಂಗತಿಗಳು ಪತ್ರಿಕೆಗಳಲ್ಲಿ ಸುದ್ದಿಯಾದಾಗ ಕುತೂಹಲದಿಂದ ಚರ್ಚೆ ಪ್ರತಿ ಚರ್ಚೆಗಳನ್ನು ಓದುವವರು.
5. ಇಂತಹ ವಿಷಯಗಳು ಗಮನಕ್ಕೆ ಬಂದಾಗ ಅವುಗಳ ಸತ್ಯಾಸತ್ಯತೆಯನ್ನು ಶೋಧನೆಗೆ ಒಳಪಡಿಸಿ ಸತ್ಯವನ್ನು ತಿಳಿಯಲು ಗಂಭೀರವಾಗಿ ಪ್ರಯತ್ನಿಸುವವರು.


ನನ್ನ 17ನೇ ವಯಸ್ಸಿನಲ್ಲಿ ವಚನ ಸಾಹಿತ್ಯವನ್ನು ವಿಶೇಷ ಹಂಬಲದಿಂದ ಅಧ್ಯಯನ ಮಾಡತೊಡಗಿದೆ. ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ ನಿಮ್ಮಾಣೆ ನಿಮ್ಮ ಪ್ರಮಾಥದಾಣೆ ಎಂದು ಬಸವಣ್ಣನವರು ಒಂದು ವಚನದಲ್ಲಿ ಪ್ರಸ್ತಾಪಿಸಿದರೆ, ತಮ್ಮ ನಾಲ್ಕು ವಚನಗಳಲ್ಲಿ ನಾನು ಈ ಹಿಂದೆ ಆರು ಜನ್ಮದಲ್ಲಿ ಬಂದಿದ್ದೇನೆ, ಈಗ ಏಳನೆಯ ಜನ್ಮದಲ್ಲಿ ನನ್ನನ್ನು ಬಸವಣ್ಣನಾಗಿ ಹುಟ್ಟಿಸಿರುವಿರಿ ಎಂದು ಪರಮಾತ್ಮನಲ್ಲಿ ಹೇಳಿಕೊಳ್ಳುತ್ತಾರೆ. ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿರ್ದಿರಯ್ಯ ಎನ್ನುತ್ತಾರೆ. ನಾನು ಆರನೆಯ ಜನ್ಮದಲ್ಲಿ ಶಿವನು ಏರುವ ವಾಹನ ನಂದಿಯಾಗಿದ್ದೆ ಎಂದು ತಮ್ಮ 3ನೆಯ ವಚನದಲ್ಲಿ 6 ಜನ್ಮಗಳ ಉಗಮ, ಹೆಸರು ಹೇಳಿಕೊಂಡಿದ್ದಾರೆ. ಪ್ರಭುದೇವರು ತಮ್ಮ ಆರು ವಚನಗಳಲ್ಲಿ ತಾವು ಈ ಹಿಂದೆ 3 ಜನ್ಮಗಳಲ್ಲಿ ಬಂದಿರುವುದಾಗಿ ಹೇಳಿದ್ದಾರೆ. ಬಸವಣ್ಣ ಮತ್ತು ಪ್ರಭುದೇವರು ತಮ್ಮ ಹಿಂದಿನ ಜನ್ಮದ ಹೆಸರುಗಳನ್ನು ಕೂಡ ಹೇಳಿಕೊಂಡಿದ್ದಾರೆ. ಈ ವಿಚಾರವನ್ನು ವ್ಯಾಖ್ಯಾನಿಸುವ ವಿದ್ವಾಂಸರು ಸಾಂಕೇತಿಕವಾಗಿ ತೆಗೆದುಕೊಳ್ಳಬೇಕು, ವಸ್ತುಸತ್ಯವಾಗಿ ತೆಗೆದುಕೊಳ್ಳಬಾರದು ಎನ್ನುತ್ತಾರೆ. 1982ರಲ್ಲಿ ಮಾನ್ಯ ಬಿ.ಡಿ. ಜತ್ತಿಯವರೊಂದಿಗೆ ಈ ಚರ್ಚೆ ಮಾಡುತ್ತಿದ್ದಾಗ ಜತ್ತಿಯವರು ಇಡೀ ವಚನವನ್ನು ಇನ್ನೊಂದು ಅರ್ಥದಲ್ಲಿ ವಿವರಿಸಿದರು. ಶಿಲಾಯುಗ, ಲೋಹದ ಯುಗ, ಯಂತ್ರ ಹಾಗೂ ಜ್ಞಾನದ ಯುಗ ಹೀಗೆ ವಿಕಾಸದ ಸ್ತರದಲ್ಲಿ ಅವರು ವಿಸ್ತರಿಸಿ ಹೇಳಿದರು. ಪೂರ್ವ ಜನ್ಮ, ಪುನರ್ಜನ್ಮ ವಿಚಾರದ ಪ್ರಸ್ತಾಪ ಸುದ್ದಿಯಾದಾಗ ಮಾನ್ಯ ನಿಜಲಿಂಗಪ್ಪನವರು ಇದನ್ನು ತುಂಬ ಸಿಟ್ಟಿನಿಂದ ಸುಳ್ಳು ಎಂದು ಹೇಳಿದ್ದನ್ನು ವರದಿಯಾದ ಸುದ್ದಿಯನ್ನು ಪ್ರಜಾವಾಣಿಯಲ್ಲಿ ಅನೇಕ ಸಲ ಓದಿದ್ದೇನೆ. 1974ರಲ್ಲಿ ಚಿತ್ರದುರ್ಗದ ಅವರ ಮನೆಯಲ್ಲಿ ಕೆಲವರು ಚರ್ಚೆ ಮಾಡುತ್ತಿದ್ದಾಗ ಆಗಲೂ ಮಾನ್ಯ ನಿಜಲಿಂಗಪ್ಪನವರು ಅದನ್ನು ವಿರೋಧಿಸಿ ಸುಳ್ಳು ಎಂದು ಹೇಳಿದ್ದು ಈಗಲೂ ನನಗೆ ನೆನಪಿದೆ.

ಧಾರವಾಡ ಜಿಲ್ಲೆಯ ರೋಣದ ನರೇಗಲ್ಲಿನ ವಿಶ್ವನಾಥ ಎನ್ನುವ ನಾಲ್ಕು ವರ್ಷದ ಮಗು ನಾನು ಹಿಂದೆ ಹುಟ್ಟಿ ಬಂದಿದ್ದೆ ಎನ್ನುವ ವಿವರಗಳು ಪತ್ರಿಕೆಗಳಲ್ಲಿ ಸುದ್ದಿಯಾಗಿವೆ. ಆ ವಿವರಗಳನ್ನು ಸುಳ್ಳು ಎಂದು ಹೇಳುವವರು ಪತ್ರಿಕೆಗಳಲ್ಲಿ ತಮ್ಮ ಶೋಧನೆಯನ್ನು ತಿಳಿಸಿದ್ದಾರೆ. ಪ್ರಭುದೇವರು ಬಸವಣ್ಣ, ಚೆನ್ನಬಸವಣ್ಣನವರನ್ನು ಕುರಿತು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಬಸವಣ್ಣ ನಿನಗೆ ಏಳು ಜನ್ಮ
ನನಗೆ ನಾಲ್ಕು ಜನ್ಮ
ಚೆನ್ನ ಬಸವಣ್ಣಂಗೆ ಒಂದೆ ಜನ್ಮ

ಅಕ್ಕಮಹಾದೇವಿಯವರೂ ನಾನು ಈ ಹಿಂದೆ ಜನ್ಮದಲ್ಲಿ ಬಂದಿದ್ದೆ ಎನ್ನುತ್ತಾರೆ. ಬಸವಣ್ಣನವರ ಮೇಲೆ ಪಿ.ಎಚ್.ಡಿ.ಗಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜಿ.ಎಸ್. ಶಿವರುದ್ರಪ್ಪನವರ ನಿರ್ದೇಶನದಲ್ಲಿ ಅಧ್ಯಯನ ಮಾಡುತ್ತಿದ್ದಾಗ ಈ ವಿಷಯದ ಬಗ್ಗೆ ಮತ್ತೆ ಅಧ್ಯಯನ, ಚರ್ಚೆ ನಡೆಸಿದೆ. ಶರಣರು ಪೂರ್ವಜನ್ಮಗಳನ್ನು ಒಪ್ಪಿದರೆ


ಗೊತ್ತಿಲ್ಲ!



ಪುನರ್ಜನ್ಮದ ಬಗ್ಗೆ ಇಲ್ಲ ಅಥವಾ ಇದೆಯೆನ್ನಲು ಬರುವುದಿಲ್ಲ. ಕಾರಣ ನನ್ನ ಕಣ್ಣಿಗೆ ಕಾಣದ್ದನ್ನು ನಾನು ನಂಬುವುದಿಲ್ಲ, ನನ್ನ ಅನುಭವಕ್ಕೆ ಬಾರದ್ದನ್ನು ಸತ್ಯವೆಂದು ಒಪ್ಪುವುದಿಲ್ಲವೆನ್ನುವುದು ವಿಚಾರವಾದ. ಆದರೆ ನಮ್ಮ ಇಂದ್ರಿಯ ಮಟ್ಟ ಬಹಳ ಮಿತವಾದುದು. ನಮ್ಮ ಸೀಮಿತತೆಯಲ್ಲಿ ಎಲ್ಲವೂ ಅನುಭವಕ್ಕೆ ಬರಲು ಸಾಧ್ಯವಿಲ್ಲ. ಒಂದು ವಿಚಾರದ ಬಗ್ಗೆ 'ಇದೆ' ಎನ್ನಲು ಸಾಮಾನ್ಯ ಜ್ಞಾನ ಸಾಕು. ಅದೇ ವಿಚಾರವನ್ನು 'ಇಲ್ಲ'ವೆಂದು ಹೇಳಲು ಅಧಿಕ ಜ್ಞಾನ ಅತ್ಯವಶ್ಯಕ. ಒಂದು 'ಸೂಜಿ' ಮನೆಯಲ್ಲಿದೆ ಎನ್ನುವುದಾದರೆ ಈ ಹಿಂದೆ ಕ್ಯಾಲೆಂಡರ್‌ನ ತುದಿಯಲ್ಲೋ ಇನ್ನೆಲ್ಲೋ ಕಂಡಿರಬೇಕು. ಆದರೆ ಆ ಸೂಜಿ ಇಲ್ಲವೆನ್ನಲು ಮನೆಯ ಪ್ರತಿ ಮೂಲೆಯನ್ನು ಅರಿತಿರುವುದು ಅತ್ಯವಶ್ಯವಲ್ಲವೇ? ಆದ್ದರಿಂದ ನಮಗೆ ತಿಳಿದಿರದ ವಿಷಯದ ಬಗ್ಗೆ 'ಗೊತ್ತಿಲ್ಲ'ವೆನ್ನುವುದು ವಿನಯದ ಉತ್ತರ.

■ **ಡಾ.ಎಸ್.ಎಲ್ ಭೈರಪ್ಪ**
ಸಾಹಿತಿಗಳು, 1007, ಉದಯರವಿ ರಸ್ತೆ,
ಕುವೆಂಪುನಗರ, ಮೈಸೂರು


ನಮ್ಮ ನೆರಳಿನಂತೆ ಸತ್ಯ



ಪುನರ್ಜನ್ಮದಲ್ಲಿ ನನಗೆ ನಂಬಿಕೆ ಇದೆ. ಪುಣ್ಯಕಾರ್ಯ ಮಾಡಿದರೆ ಮಾತ್ರ ಮರುಜನ್ಮದಲ್ಲಿ ಮಾನವಜನ್ಮ ಪಡೆಯಲು ಸಾಧ್ಯ! ನಾಸ್ಟ್ರಾಡಾಮಸ್‌ನ ಭವಿಷ್ಯದ ಹೇಳಿಕೆಗಳಲ್ಲೂ ನನಗೆ ನಂಬಿಕೆಯಿದೆ. 'ಮರುಜನ್ಮ ನಮ್ಮ ನೆರಳಿನಂತೆಯೇ ಸತ್ಯ' ಎಂದು ನನ್ನ ಅನಿಸಿಕೆ.

■ **ವಿಶ್ವನಾಥ ರಟಿಕಲ್**
ಸಮಾಜ ಸೇವಕರು,
ಕಲಬುರ್ಗಿ


ವಿಶ್ವಾಸ ಮುಖ್ಯ



ಪುನರ್ಜನ್ಮದಲ್ಲಿ ನಂಬಿಕೆಯಿದೆ. ಹಿಂದೂ ಧರ್ಮದಲ್ಲಿ ಇದರ ಬಗ್ಗೆ ತಿಳಿಸಿದ್ದಾರೆ. ವೈಜ್ಞಾನಿಕವಾಗಿ ನಿಷ್ಕರ್ಷೆ ಮಾಡುವಾಗ ಹಾಗೂ ತಾರ್ಕಿಕ ದೃಷ್ಟಿಯಲ್ಲಿ ಗಮನಿಸುವಾಗ ಹತ್ತು ಹಲವಾರು ಸಂಶಯಗಳು ಬರುವುದು ಸಹಜ. ಈ ಧರ್ಮ, ಪರಂಪರೆಯಲ್ಲಿ ನಡೆದುಬಂದಿರುವ ನಾವು ಈ ವಿಷಯಗಳಲ್ಲಿ ವಿಶ್ವಾಸವಿಡಬೇಕು. ಯಾವ ರೀತಿ ದೇವರನ್ನು ನಂಬಿದ್ದೇವೋ ಹಾಗೆ. ಇನ್ನು ಈ ಜನುಮದ ಆಸೆಗಳೇ ಸಂಪೂರ್ಣವಾಗಿ ಈಡೇರದಿದ್ದರಿಂದ ಮುಂದಿನ ಜನ್ಮದ ಬಗ್ಗೆ ಆಲೋಚನೆ ಮಾಡುವ ಪ್ರಮೇಯ ಉದ್ಭವಿಸಿಲ್ಲ.

■ **ಹೆಚ್.ಕೆ. ಪಾಟೀಲ**
ವಿರೋಧ ಪಕ್ಷದ ನಾಯಕರು
ವಿಧಾನ ಪರಿಷತ್
ಬೆಂಗಳೂರು.

ನಾನೇನೂ ಹೇಳಲಾರೆ



ಈ ಪುನರ್ಜನ್ಮದ ಬಗ್ಗೆ ನಾನು ಯೋಚನೆಯನ್ನೇ ಮಾಡಿಲ್ಲ. ಈ ವಿಷಯ ಸೂಕ್ಷ್ಮ ಅಂತ ಅಲ್ಲ. ಆದ್ರೆ ಅದರ ಬಗ್ಗೆ ಕಥೆ ಕೇಳಿದ್ದೇನೆಯೇ ವಿನಾ ನನಗೆ ಮನವರಿಕೆ ಯಾಗುವಂತಹ ಘಟನೆ ಕಂಡಿಲ್ಲ. ಜೊತೆಗೆ ನನಗೆ ಮನವರಿಕೆ ಆಗಿಲ್ಲ. ಈ ಪುನರ್ಜನ್ಮದ ವಾಸ್ತವಿಕತೆ, ಸಾಧ್ಯಅಸಾಧ್ಯಗಳ ಬಗ್ಗೆ ನನಗೆ ಕಲ್ಪನೆಯಿಲ್ಲ. ಆದ್ದರಿಂದ ಇದರ ಬಗ್ಗೆ ನಾನು ಏನೂ ಹೇಳಲಾರೆ.


■ **ಡಾ.ಎಂ.ಚಿದಾನಂದ ಮೂರ್ತಿ**
ಕನ್ನಡ ಶಕ್ತಿ ಕೇಂದ್ರದ ಅಧ್ಯಕ್ಷರು
ಮಿಂಚು, 6/ಎ, 4ನೇ ಕ್ರಾಸ್
11ನೇ ಮೈನ್,
ವಿಜಯನಗರ ಎರಡನೇ ಹಂತ,
ಬೆಂಗಳೂರು - 40.

ಅದು ಅವರ ನಂಬಿಕೆ, ಅಷ್ಟೇ ಅದನ್ನು ನಾನು ಒಪ್ಪಬೇಕಿಲ್ಲ ಎಂದು ಈ ವಿಷಯಗಳನ್ನು ಆಗ ನಿರಾಕರಿಸಿದೆ. ಅದೇ ವೇಳೆಗೆ 1985, ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ "Incarnation Fact or Myth" ಎನ್ನುವ ಅಗ್ರ ಲೇಖನವು ಸಂಡೇ ಹೆರಾಲ್ಡ್‌ನಲ್ಲಿ ಪ್ರಕಟವಾಯಿತು. ಡಾ. ಸತವಂತ್ ಭಸ್ರೀಚ ಎನ್ನುವ ಹೆಣ್ಣುಮಗಳು ಬೆಂಗಳೂರು ವಿಶ್ವವಿದ್ಯಾಲಯ ಸೈಕಾಲಜಿ ವಿಭಾಗದಲ್ಲಿ "An Investigation into reported cases of persons who claim to reincarnation" ಎನ್ನುವ ಪಿ.ಎಚ್.ಡಿ. ಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು. ಇದರಲ್ಲಿ ಅವರು ಉತ್ತರ ಭಾರತದಲ್ಲಿ 24 ವ್ಯಕ್ತಿಗಳು ಪುನರ್ಜನ್ಮದಲ್ಲಿ ಹುಟ್ಟಿಬಂದಿರುವ ಆಧಾರ, ಅಧ್ಯಯನಗಳನ್ನು ಕೊಟ್ಟಿದ್ದಾರೆ. ಅವರು ಮತ್ತೆ ಮಹಾರಾಷ್ಟ್ರದ ನಾಗಪುರದಲ್ಲಿ ನಡೆದ ಪ್ರಪಂಚಮಟ್ಟದ ಪುನರ್ಜನ್ಮ ವಿಷಯಕ್ಕೆ ಸಂಬಂಧಿಸಿದ ವಿಚಾರಸಂಕಿರಣದಲ್ಲಿ ಭಾರತದಲ್ಲಿ ನಾಲ್ಕು ವ್ಯಕ್ತಿಗಳು ಮತ್ತೆ ಹುಟ್ಟಿ ಬಂದ ವಿವರದ ಲೇಖನವನ್ನು ಮಂಡಿಸಿದರು. ಈ ಕಾಲಕ್ಕೆ ಬಸವಣ್ಣನವರ ಮೇಲೆ ಪಿ.ಎಚ್.ಡಿ.ಗಾಗಿ ಅಧ್ಯಯನ ಮಾಡುತ್ತಿದ್ದ ನಾವು ಡಾ.ಭಸ್ರೀಚ ಅವರನ್ನು ಸಂಪರ್ಕಿಸಿ ಚರ್ಚಿಸಿದೆವು. ನಮ್ಮಲ್ಲಿ ಶರಣರು ಹನ್ನೆರಡನೇ ಶತಮಾನದಲ್ಲಿ ಪೂರ್ವ ಜನ್ಮಗಳಲ್ಲಿ ಬಂದುದರ ವಚನಗಳ ವಿವರಗಳನ್ನು ಅವರ ಗಮನಕ್ಕೆ ತಂದೆವು. ಅವರು ಪೂರ್ವಜನ್ಮ ಇವೆ ಎಂದೇ ಹೇಳಿದರು. ಮಹಾಕವಿ ಹರಿಹರನ ಎಲ್ಲ ಕೃತಿಗಳ ನಾಯಕರು ಮತ್ತೆ ಹುಟ್ಟಿ ಬಂದವರೇ ಆಗಿದ್ದಾರೆ. ಭಾರತ ಮತ್ತು ಪಾಶ್ಚಾತ್ಯ ದೇಶಗಳ ವಿದ್ವಾಂಸರು ಈ ಬಗ್ಗೆ ಸಾಕಷ್ಟು ಚರ್ಚೆ ನಡೆಸಿದ್ದಾರೆ. ಅಮೇರಿಕದ ತತ್ವಜ್ಞಾನದ ಪ್ರಾಧ್ಯಾಪಕ ಸ್ಟೀವನ್‌ಸನ್ ಇದುವರೆಗೆ ಅಮೇರಿಕದಲ್ಲಿ 3120 ಜನರು ಮತ್ತೆ ಹುಟ್ಟಿ ಬಂದ ಆಧಾರಗಳನ್ನು ತಮ್ಮ ಗಮನಕ್ಕೆ ಬಂದ ವಿವರಗಳಲ್ಲಿ ಅಧ್ಯಯನಮಾಡಿ ಬರೆದಿದ್ದಾರೆ.

ಇನ್ನು ನಮ್ಮ ಮಹಾಕಾವ್ಯಗಳು ಹೇಳುವ ವಿಷಯಗಳ ಬಗೆಗೆ ಒಂದಿಷ್ಟು ತಿಳಿಯಬಹುದು. ಮಹಾಕವಿ ಮಿಲ್ಟನ್ ತನ್ನ ಮಹಾಕಾವ್ಯದಲ್ಲಿ ಪುನರ್ಜನ್ಮ ಪೂರ್ವಜನ್ಮಗಳನ್ನು ಒಪ್ಪಿ ಕೃತಿ ರಚನೆ ಮಾಡಿದ್ದಾರೆ. ನಮ್ಮ ಮಹಾಕವಿಗಳಾದ ಪಂಪ, ರನ್ನ, ಪೊನ್ನ, ಜನ್ನ ಇವರೆಲ್ಲ ಈ ಪೂರ್ವಜನ್ಮ, ಪುನರ್ಜನ್ಮಗಳನ್ನು ಒಪ್ಪಿಯೇ ಕೃತಿರಚನೆ ಮಾಡಿದ್ದಾರೆ. ಜೈನ ಧರ್ಮದ ನಾಯಕರು, ಪಾತ್ರಗಳು ಅನೇಕ ಜನ್ಮಗಳಲ್ಲಿ ಬಂದ ವಿಸ್ತಾರ ಚಿತ್ರಣ ಈ ಕೃತಿಗಳಲ್ಲಿ ಸಿಗುತ್ತದೆ. ವಡ್ಡಾರಾಧನೆ ಕೃತಿಗಳಲ್ಲಿಯೂ ಜನ್ಮಾಂತರದ ಅನೇಕ ಕಥೆಗಳಿವೆ. ಜಾತಕಕಥೆಗಳು ಬುದ್ಧನು ಈ ಹಿಂದೆ 544 ಜನ್ಮಗಳಲ್ಲಿ ಬಂದಿರುವನೆಂದು ಪ್ರತಿಪಾದನೆ ಮಾಡಿವೆ.

ಬೌದ್ಧ ಮತ್ತು ಜೈನ ಧರ್ಮಗಳು ನಾಸ್ತಿಕ ಧರ್ಮಗಳು, ದೇವರನ್ನು ಒಪ್ಪುವುದಿಲ್ಲ. ಆದರೂ ಈ ಧರ್ಮಗಳು ಜನ್ಮಾಂತರ ಕಥೆಗಳನ್ನು ಪ್ರತಿಪಾದನೆ ಮಾಡುತ್ತವೆ. ಜನ್ಮಾಂತರಗಳು ಇವೆ ಎನ್ನುತ್ತವೆ. ಬಹುಶಃ ನಮ್ಮ ಗಮನಕ್ಕೆ ಬಂದ ಅಧ್ಯಯನದ ಪರಿಧಿಯಲ್ಲಿ ಹೇಳುವುದಾದರೆ ಪ್ರಪಂಚದ ಎಲ್ಲ ಧರ್ಮಗಳೂ ಜನ್ಮಾಂತರವನ್ನು ಒಪ್ಪಿವೆ. ಪ್ರತಿಪಾದನೆ ಮಾಡಿವೆ. 1976 ಮತ್ತು 1978ರಲ್ಲಿ ನಮ್ಮ ಚೈತ್ರ ಪತ್ರಿಕೆಗಾಗಿ ರಾಷ್ಟ್ರಕವಿ ಕುವೆಂಪು ಅವರನ್ನು ನಾವು ಸಂದರ್ಶನ ಮಾಡಿದಾಗ ಅವರು ಎರಡೂ ಸಂದರ್ಶನಗಳಲ್ಲಿ ಪೂರ್ವಜನ್ಮ, ಪುನರ್ಜನ್ಮ ವಿಚಾರಗಳನ್ನು ಪ್ರಸ್ತಾಪಿಸಿ ಅವುಗಳನ್ನು ಒಪ್ಪಿ ಮಾತನಾಡಿದರು. ಈ ಜೀವನವನ್ನು ಯಾರು ಗಂಭೀರವಾಗಿ ಶೋಧನೆ ಮಾಡಿದ್ದಾರೊ ಅವರೆಲ್ಲ ಪೂರ್ವಜನ್ಮ, ಪುನರ್ಜನ್ಮಗಳನ್ನು ಒಪ್ಪಿದ್ದಾರೆ. ಅವರವರ ಅನುಭವ ತತ್ವವನ್ನು ಇಲ್ಲ ಎಂದು ಹೇಳಲು ನಾವು ಯಾರು? ಅಭಿಪ್ರಾಯವನ್ನು ಹೇಳುವ ಮೊದಲು ಅಧ್ಯಯನ ಮಾಡುವುದು ಒಳ್ಳೆಯದು. ■

ಆತ್ಮದ ಸಂಸ್ಕಾರ



ಪುನರ್ಜನ್ಮವಿದೆ ಯೆನ್ನುವುದಕ್ಕಿಂತಲೂ ಹಿಂದಣ ಜನ್ಮ ದಲ್ಲಿನ ಆತ್ಮದ ಸಂಸ್ಕಾರಗಳು ಪುನರಾವರ್ತನೆಗೊಳ್ಳುತ್ತವೆ. ಆತ್ಮದ ವಿಕಾಸವಾದದ ಬಗ್ಗೆ ತತ್ವಜ್ಞಾನಿಗಳು ಹೇಳುತ್ತಲೇ ಬಂದಿದ್ದಾರೆ. ಆದರೆ ನಾನು ಒಂದು ಮಾತ್ರ ಒಪ್ಪಿಕೊಳ್ಳೋದಿಲ್ಲ, ಯಾವುದೆಂದರೆ ಹಿಂದಣ ಜನ್ಮದಲ್ಲಿ ನಾನು ಅಲ್ಲಿದ್ದೆ, ಡಾಕ್ಟರಾಗಿದ್ದೆ, ಇತ್ಯಾದಿ. ಆದರೆ ಆತ್ಮದಲ್ಲಿ ಸಂಚಯನಗೊಂಡ ಗುಣಗಳು ಮಾತ್ರ ಮುಂದಣ ಜನ್ಮದಲ್ಲಿ ಕಾಣಿಸಿಕೊಳ್ಳುವವು.

■ **ಡಾ.ಮ.ಗು. ಬಿರಾದಾರ**
ಕಲಬುರ್ಗಿ

ಪಾಪಪುಣ್ಯವೇ ಆಧಾರ !



ಈ ಜನ್ಮದಲ್ಲಿ ಮಾಡಿರುವ ಪಾಪಪುಣ್ಯ, ದೈವಭಕ್ತಿ, ದಾನಧರ್ಮಗಳ ಆಧಾರದ ಮೇಲೆ ಮರುಜನ್ಮದಲ್ಲಿ ಮಾನವನಾಗಿ ಜನಿಸಬಲ್ಲ, ಕತ್ತಲೆಯ ರೂಪದಲ್ಲಿ ದೇಹದಿಂದ ಹೊರಹೋಗುವ ಪ್ರಾಣಪಕ್ಷಿ ಅವಕಾಶ ಅರಸುತ್ತಾ ಸಿಕ್ಕ ಜೀವಿಗಳಲ್ಲಿ ಸೇರಿಕೊಳ್ಳುತ್ತದೆ. ಇದನ್ನೇ ದೇವರ ಸೃಷ್ಟಿ ಅನ್ನೋದು. ಈ ಕಾರಣದಿಂದ ನನಗೆ ಸಂಪೂರ್ಣವಾಗಿ ಪುನರ್ಜನ್ಮದಲ್ಲಿ ನಂಬಿಕೆಯಿದೆ.

■ **ಎನ್.ಪ್ರಕಾಶ್**
ಅಂಗವಿಕಲರ ದೂರವಾಣಿ ಬೂತಿನ ಚಾಲಕರು
ಮದರ್‌ಡೈರಿ ಬಸ್‌ಸ್ಟಾಪ್ ಬಳಿ,
ಯಲಹಂಕ ಉಪನಗರ, ಬೆಂಗಳೂರು.

ನೂರಕ್ಕೆ ನೂರು ಸತ್ಯ



ಇರುವ ೮೪ ಕೋಟಿ ಜೀವರಾಶಿಯಲ್ಲಿ ಮನುಷ್ಯ ಜನ್ಮ ಶ್ರೇಷ್ಠ. ಈ ಜನ್ಮಕ್ಕೆ ಬರಬೇಕಾದರೆ ಸಾಕಷ್ಟು ಸತ್ಕರ್ಮಗಳ ಸಾಂಗತ್ಯ ಬೇಕಾಗುವುದು. ನಾವು ನಡೆಸಿದ ಈ ಜನ್ಮದ ಒಟ್ಟು ಒಳಿತು- ಕೆಡಕಿನ ಪರಿಣಾಮವೇ ಮುಂದಿನ ಜನ್ಮದ ಆಗು-ಹೋಗಿಗೆ ಸಂಬಂಧಿಸಿರುತ್ತದೆ. ಬಹಳ ದಿನದಿಂದಲೂ ಪುರಾಣ - ಪ್ರವಚನಗಳಲ್ಲಿ ಪುನರ್ಜನ್ಮದ ಕುರಿತು ಹೇಳಿದ್ದರೂ, ಅದು ಬರೀ ಕಲ್ಪನೆಯಲ್ಲ ಪುನರ್ಜನ್ಮದ ಕುರಿತು ನೆನಪಿಸುವ ಮುನ್ಸೂಚನೆ. ಪುನರ್ಜನ್ಮವಿರುವುದು ನೂರಕ್ಕೆ ನೂರು ಸತ್ಯ.

■ **ಶ್ರೀಕಾಂತ ಪಾಟೀಲ**
ಓರ್ವ ಓದುಗ, ಕಳಸೂರ

ನಂಬಿಕೆಯೇ ಮುಖ್ಯ



ನನಗೆ ಪುನರ್ಜನ್ಮದಲ್ಲಿ ನಂಬಿಕೆಯಿದೆ. ಜಗತ್ತಿನಲ್ಲಿ ನಂಬಿಕೇನೇ ಮುಖ್ಯ. ಎಲ್ಲರಿಗೂ ಮನುಷ್ಯನ ಜನ್ಮನೇ ಅಂತಾ ಖಚಿತವಿಲ್ಲ. ಆತ್ಮ ಶಾಶ್ವತ, ಅದಕ್ಕೆ ಸಾವಿಲ್ಲ. ಆದ್ದರಿಂದ ನಮ್ಮಿಂದ ಹೊರಟ ಆತ್ಮವೇ ಜಗತ್ತಿನ ಯಾವ ಮೂಲೆಯಲ್ಲಾದರೂ, ಯಾವ ರೂಪದಲ್ಲಾದರೂ ಅಸ್ತಿತ್ವವನ್ನು ಪಡೆಯಬಹುದು. ಹೀಗೆ ನಂಬಿಕೆಯಿಟ್ಟುಕೊಂಡರೆ ಇದೆ, ಇಲ್ಲ ಅಂದ್ರೆ ಇಲ್ಲ.

■ **ಹೆಚ್.ವಿ. ಮಂಜುನಾಥ**
ರಾಷ್ಟ್ರಮಟ್ಟದ ದೇಹದಾರ್ಢ್ಯ ಪಟು
ಕೋರಮಂಗಲ, ಬೆಂಗಳೂರು- 34.

ಈ ಜನ್ಮದಲ್ಲೇ ಹೆಚ್ಚು ನಂಬಿಕೆ




ವಿಜ್ಞಾನದ ಪ್ರಕಾರ ಸೃಷ್ಟಿಯಲ್ಲಿನ ಒಟ್ಟು ವಸ್ತುವಿನ ದ್ರವ್ಯರಾಶಿಯ ಮೊತ್ತ ಒಂದೇ ಆಗಿದ್ದು ಅದು ಬೇರೆ ಬೇರೆ ರೂಪಗಳಲ್ಲಿ ಕಾಣಸಿಗುತ್ತದೆ. ಸಾವಿನ ನಂತರದ ಮನಸ್ಥಿತಿಯ ಬಗ್ಗೆ ಗೊಂದಲವಿದೆ. ಬುದ್ಧ ಬಸವರಿಂದ ಐನ್‌ಸ್ಟೈನ್, ರಸೆಲ್‌ವರೆಗೂ ಅವರೆಲ್ಲ ಈ ಜನ್ಮಕ್ಕೆ ಪ್ರಾಮುಖ್ಯ ನೀಡಿ ''ಮಾನವ ಜನ್ಮ ಬಲುದೊಡ್ಡದು ಹಾನಿಮಾಡಬೇಡಿ ಹುಚ್ಚಪ್ಪಗಳಿರಾ'' ಎಂದು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬದುಕಿನ ಪ್ರತಿ ಕ್ಷಣವನ್ನು ವ್ಯರ್ಥಗೊಳಿಸದೆ ನಮ್ಮ ಇತಿಮಿತಿಗಳಲ್ಲಿ ಹೆಚ್ಚಿನ ಶ್ರದ್ಧೆಯಿಂದ ಕಾಲವನ್ನು ಸದುಪಯೋಗಪಡಿಸಿಕೊಳ್ಳಬೇಕು. ನಮ್ಮ ಸುತ್ತಮುತ್ತಲಿನ ಪರಿಸರ, ಪ್ರಜ್ಞಾವಂತಿಕೆ ಬೆಳೆಸಿಕೊಂಡು ನುಡಿದಂತೆ ನಡೆದರೆ ಈ ಜನ್ಮದಲ್ಲಿಯೇ ಎಲ್ಲವನ್ನೂ ಅನುಭವಿಸಿ ಆನಂದಿಸಬಹುದು. ಆದ ಕಾರಣ ನನಗೆ ಪುನರ್ಜನ್ಮಕ್ಕಿಂತಲೂ ಈ ಜನ್ಮದಲ್ಲಿಯೇ ಹೆಚ್ಚು ನಂಬಿಕೆ.

■ **ಹರಿಹರ ಶ್ರೀನಿವಾಸರಾವ್**
ಶಾಸನ ಸಂಶೋಧಕರು
'ಸಮರ್ಥ', 75/ 15, ಬನಶಂಕರಿ 3ನೇ ಹಂತ,
5ನೇ ಬ್ಲಾಕ್, ಬೆಂಗಳೂರು - 85.

ಹಕ್ಕಿಯಾಗಿ ಹುಟ್ಟುವ ಆಸೆ



ನನಗೆ ಪುನರ್ಜನ್ಮದಲ್ಲಿ ನಂಬಿಕೆಯುಂಟು. ಈ ನಂಬಿಕೆಗೆ ಆಧಾರ ರಾಮಾಯಣ-ಮಹಾಭಾರತ. ಆದರೆ ಪುನರ್ಜನ್ಮದಲ್ಲಿ ಮಾನವ ಜನುಮವೆಂದೇ ಅಲ್ಲ; ಕರ್ಮಗಳ ಆಧಾರದ ಮೇಲೆ ಮಾನವ, ಪ್ರಾಣಿ, ಪಕ್ಷಿ ಹೀಗೆ ಜನುಮ ನಿರ್ಧಾರವಾಗುತ್ತದೆ. ಜನಸಂಖ್ಯಾಸ್ಫೋಟಕ್ಕೆ ಕ್ರಿಮಿಕೀಟಗಳು ತಮ್ಮ ಸತ್ಕರ್ಮದಿಂದ ಮಾನವರಾಗಿ ಜನಿಸುವುದೇ ಕಾರಣ. ವ್ಯಾವಹಾರಿಕ ಬದುಕಿನಲ್ಲಿ ನಷ್ಟ ಅನುಭವಿಸಿದರೆ ಸಾಲಗಾರನ ಕಾಟ; ಲಾಭ ಗಳಿಸಿದರೆ ಆದಾಯ ತೆರಿಗೆಯವರ ಕಾಟ. ಹಾಗಾಗಿ ಈ ಚಿಂತೆಗಳಿಂದ ಮುಕ್ತನಾಗಿ ಬಾಳಬೇಕೆಂಬ ಇಚ್ಛೆ, ಆದ್ದರಿಂದ ಮರುಜನ್ಮದಲ್ಲಿ ಹಕ್ಕಿಯಾಗಿ ಹುಟ್ಟಿ ಮನಸೋಇಚ್ಛೆ ಸ್ವಚ್ಛಂದವಾಗಿ ಪ್ರಕೃತಿಯೊಂದಿಗೆ ಒಂದಾಗಿ ಬಾಳುವ ಆಸೆ ನನ್ನದು.

■ **ಪ್ರದೀಪ್ ಕುಮಾರ್ ಹೆಗ್ಡೆ**
ಮಾಲೀಕರು
ಡೆಕ್ಕನ್ ಡ್ರೈವಿಂಗ್ ಸ್ಕೂಲ್
58/ 3, ಹೊಸೂರು ರಸ್ತೆ,
ಮಡಿವಾಳ,
ಬೆಂಗಳೂರು - 68.


ತಮಾಷೆಯ ವಿಷಯ



ಇದೊಂದು ತಮಾಷೆಯ ವಿಷಯ ಎಂದೇ ನನ್ನ ನಂಬಿಕೆ. ಸತ್ತವನು ಬೇರೊಂದು ಶರೀರ ಧರಿಸಿ ಹುಟ್ಟುತ್ತಾನೆಂಬುದಾಗಲಿ, ಹಿಂದಿನ ಜನ್ಮದಲ್ಲಿ ಮಾಡಿದ ಪಾಪಪುಣ್ಯಗಳ ಫಲವನ್ನು ಈ ಜನ್ಮದಲ್ಲಿ ಅನುಭವಿಸುತ್ತಾನೆಂಬುದಾಗಲಿ ವೈಜ್ಞಾನಿಕವಾಗಿ ಸಮರ್ಥಿಸಲಾಗದಂತಹ ವಿಷಯ. ಈ ಜನ್ಮದಲ್ಲಿ ಹುಟ್ಟಿದವನಿಗೆ ಹಿಂದೆ ತಾನು ಏನು ಮಾಡಿದೆ ಎಂಬುದರ ಸ್ಮರಣೆಯೇ ಇರುವುದಿಲ್ಲವಾದರೆ ಈ ಜನ್ಮ ಅವನಿಗೆ ಶಿಕ್ಷೆಯೋ ವರವೋ ಆಗುವುದಾದರೂ ಹೇಗೆ? ಪುನರ್ಜನ್ಮದ ನಂಬಿಕೆಯ ಹಿಂದೆ ಎರಡು ಅಂಶಗಳು ಮುಖ್ಯವಾಗಿವೆ. ಒಂದು ಮನುಷ್ಯ ತಾನು ಮತ್ತೆ ಹುಟ್ಟಿ ಬರುತ್ತೇನೆ ಎಂಬ ನಂಬಿಕೆಯಿಂದ ಸಾವನ್ನು ಎದುರಿಸಲಿ ಎಂಬುದು. ಇನ್ನೊಂದು ಮುಂದಿನ ಜನ್ಮಕ್ಕೆ ಹೆದರಿ ಇಂದಿನ ಬದುಕನ್ನು ಚೆನ್ನಾಗಿ ನಡೆಸಲಿ ಎಂಬುದು. ಇದಿಷ್ಟು ಬಿಟ್ಟರೆ ಹೆಚ್ಚಿನ ಆಳ ಅರ್ಥಗಳು ಈ ಪುನರ್ಜನ್ಮಕ್ಕೆ ಇಲ್ಲ.

■ **ನಾ.ಡಿಸೋಜ**
ಸಾಹಿತಿಗಳು; 15/ 14, 2ನೇ ಕ್ರಾಸ್,
ನೆಹರುನಗರ, ಸಾಗರ - 577 401.

ಕೋಗಿಲೆಯಾಗಿ ಹುಟ್ಟುವೆ



ಪುನರ್ಜನ್ಮದಲ್ಲಿ ನಂಬಿಕೆ ಮಟ್ಟಿದೆ. ಯಾವುದೇ ನಂಬಿಕೆ, ತಿಳುವಳಿಕೆಯ ಪರಿಣಾಮ. ನನ್ನ ಬಗ್ಗೆ 'ನಾನು ಯಾರು' ಎಂದು ಕೇಳಿಕೊಂಡಾಗಲೆಲ್ಲ, ನಾನು ಸದ್ಯ ಹೊಂದಿರುವ 'ದೇಹ' 'ರೂಪ' ಮಾತ್ರ ಅಲ್ಲ; ನಾನೊಂದು ಪ್ರಜ್ಞೆ. ಈ ಪ್ರಜ್ಞೆಗೆ ದೇಹ ರೂಪ ಒಂದು ಭೌತಿಕ ಪರಿಸರ. ಇದು ಸದ್ಯದ್ದು - ಕಾಣುವಂತಹದು. ಈ ಮುಂಚೆ ಇದಕ್ಕೆ ಯಾವ ಭೌತಿಕ ರೂಪ ಇತ್ತೋ ನೆನಪಿಲ್ಲ. ಮುಂದೆ ಬರಲಿರುವುದು ಯಾವುದೋ, ಊಹೆಗೂ ಸಿಗುತ್ತಿಲ್ಲ. ಪುನರ್ಜನ್ಮದಲ್ಲಿ ನಂಬಿಕೆ ಇಟ್ಟುಕೊಳ್ಳುವುದು ಆಶಾವಾದದ ಲಕ್ಷಣ.

ನಂಬಿಕೆಗೆ ಪ್ರತ್ಯಕ್ಷ ಪ್ರಮಾಣದ ಅನುಭವ ಯಾವುದೂ ಇಲ್ಲ. ಮತ್ತೊಬ್ಬರಿಗೆ ಮನವರಿಕೆ ಮಾಡಿಕೊಡುವಂತಹ ವೈಜ್ಞಾನಿಕ-ಆಧಾರ ನನ್ನ ಬಳಿ ಇಲ್ಲ.

ಭೌತಿಕ ಜಗತ್ತಿನ ಉಗಮ, ವಿಕಾಸ; ಮಾನವ (ಜೀವ)ನ ಅಂಕುರ; ಬೆಳವಣಿಗೆ; ಭೌತಿಕತೆಯ ಡಯಲ್‌ಕ್ಟಿಕ್ಸ್, ಸಾಮಾಜಿಕ ವೈರುಧ್ಯಗಳ ಸ್ವರೂಪ ಇವನ್ನೆಲ್ಲ ಕ್ರೋಢಿಕರಿಸಿಕೊಂಡು ವಿಚಾರ ಮಾಡಿದಾಗ ಹೊಳೆದ ಅನುಭವ ಇದು: ನಾನು ಇವತ್ತಿನವನಲ್ಲ. ನನ್ನ ಕೊನೆ ಇಲ್ಲಿಗೇ ಇಲ್ಲ. ನಿರಂತರ ಪಯಣವೊಂದರ ಒಂದು ನಿಲ್ದಾಣ ಈ ಜನ್ಮ.

ಜನ್ಮ ಮರುಜನ್ಮದ ಈ ನಂಬಿಕೆ, ನನ್ನನ್ನು ಈ ಜನ್ಮದಲ್ಲಿ ಹೆಚ್ಚು ಹೆಚ್ಚು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಹೊಣೆಯುಳ್ಳ ವ್ಯಕ್ತಿಯನ್ನಾಗಿ ಪ್ರೇರೇಪಿಸಿದೆ.

ನೆರವೇರಬೇಕೆಂಬ ಹಟವೇನೂ ಇಲ್ಲದೆ ನಾನು ಮುಂದಿನ ಜನ್ಮದಲ್ಲಿ ಇಷ್ಟಪಡುವುದೇನೆಂದರೆ - ಯಾರ ಬೇಟೆಗೂ ಸಿಗದಂತಹ ದಟ್ಟ ಕಾಡೊಂದರಲ್ಲಿ ಕೋಗಿಲೆಯಾಗಿ ಹುಟ್ಟುವುದು; ಹಾಡುವುದು.

■ **ಶ್ಯಾಮಸುಂದರ ಬಿದರಕುಂದಿ**
ಸಾಹಿತಿಗಳು
4, ರಾಯಬಾಗಕರ ಆವರಣ
ಮಸಾರಿ, ಗದಗ

ನನಗೆ ನಂಬಿಕೆ ಇಲ್ಲ

ನಾನು ವಿದ್ಯಾವಂತ ಸ್ವಾಮಿಯಾಗಿದ್ದರೂ ಬಸವತತ್ವದವರು. ವೈಜ್ಞಾನಿಕವಾಗಿ ಖಚಿತಪಡಿಸಲಾರದ ಪುನರ್ಜನ್ಮ ಕುರಿತು ನಂಬಿಕೆ ಇರದವನು.

ಡಾರ್ವಿನ್ ವಿಕಾಸವಾದದ ಹಿಂದೂ ಅವತರಣಿಕೆಗಳು

'ಬಿಸಿಲ ಬದುಕು' ಪರವಾಗಿ ಈ ಸಮೀಕ್ಷಕ 'ಪುನರ್ಜನ್ಮ' ಕುರಿತು ನಗರದ ಐವರು ಗಣ್ಯರ ಅಭಿಪ್ರಾಯ ಸಂಗ್ರಹಿಸಲು ಓಡಾಡಿದಾಗ....... ಏಕಲವ್ಯನಂತೆ, ತಮ್ಮ ಕಾರ್ಯಕ್ಷೇತ್ರದ ಹೊರತಾಗಿ ಇತರ ಬಹಳಷ್ಟು ಕ್ಷೇತ್ರಗಳಲ್ಲಿ ಪ್ರತಿಭೆ ಮೆರೆದಿರುವ ನಗರದ ಖ್ಯಾತ, ವಯೋವೃದ್ಧ ಡಾ.ಕೆ.ಎಸ್. ಕಾಮತ್ ಅವರ ಅಭಿಪ್ರಾಯದಲ್ಲಿ ''ಮಾನವನ ಅರಿವಿಗೆ ಇದೂವರೆಗೆ ಖಚಿತವಾಗಿ ಬರದಿರುವ ಅದೃಶ್ಯ ಶಕ್ತಿಯೊಂದು ಪಂಚ ಮಹಾಭೂತಗಳ ಸೃಷ್ಟಿಗೆ ಕಾರಣವಾಗಿದ್ದು ಅವುಗಳಿಂದ ಸೃಷ್ಟಿಯಾಗಿರುವುದೆಲ್ಲವೂ ಕಾರಣಾಂತರದಲ್ಲಿ ಅವುಗಳಲ್ಲಿಯೇ ಲೀನವಾಗಿ ಪುನಃ ಬೇರೊಂದು ಸೃಷ್ಟಿಯಾಗುವ ಕ್ರಿಯೆ ನಿರಂತರವಾದ ಪುನರ್ಜನ್ಮ ಕ್ರಿಯೆ. ಅದಿಲ್ಲದಿದ್ದರೆ ಪ್ರಗತಿ ಅಸಾಧ್ಯ. ಈ ಜನ್ಮದಲ್ಲಿ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಾಗಿದ್ದರೆ' ಅದಕ್ಕೆ ಬೇಕಾದ ಓದನ್ನು ಅವರು ಹಿಂದಿನ ಜನ್ಮದಲ್ಲಿಯೇ ಮುಗಿಸಿರಬಹುದೆಂದು ಹೇಳುತ್ತಾರೆ. ಇದು ವಿಜ್ಞಾನಕ್ಕೆ ನಿಲುಕದ 'ಅನುಭೂತಿ'ಯ ಕ್ಷೇತ್ರ. ಆದರೂ ಅದೇ ಮನುಷ್ಯ ಮತ್ತೇ ಹುಟ್ಟಿಬಂದಿದ್ದಾನೆ ಎಂದು ವಿವಾದಾತೀತವಾಗಿ ಹೇಳುವುದು ಸಾಧ್ಯವಿಲ್ಲ. ರಾಮನ ನಂತರ ಕೃಷ್ಣ ಹುಟ್ಟಿದನೇ ಹೊರತು ಆತ ಕಿರಿಯ ರಾಮನಾಗಲಿಲ್ಲ.''

ಖ್ಯಾತ ಲೇಖಕರೂ, ಸಂಸ್ಕೃತ ವಿದ್ವಾಂಸರೂ ಆಗಿರುವ ಶ್ರೀನಿವಾಸ ತೋಫಖಾನೆಯವರ ದೃಷ್ಟಿಯಲ್ಲಿ 'ಪುನರ್ಜನ್ಮವನ್ನು ಯುಕ್ತಾಯುಕ್ತ ವಿವೇಚನೆಯಿಂದ ತರ್ಕಬದ್ಧವಾಗಿ ಸಿದ್ಧಗೊಳಿಸಲು ಸಾಧ್ಯವಿಲ್ಲ. ಶ್ರೀಶೈಲದ ಶಿಖರ ನೋಡಿದವರಿಗೆ, ಜ್ಞಾನೋದಯವಾದವರಿಗೆ, ಶ್ರದ್ಧಾವಂತ ಕ್ರಿಸ್ತ ಧರ್ಮೀಯನಿಗೆ ಪುನರ್‌ಜನ್ಮವಿಲ್ಲ ಎಂಬ ಉಕ್ತಿಗಳು ಇತರರಿಗೆ ಪುನರ್ಜನ್ಮವಿದೆ ಎಂಬ ಧ್ವನಿ ಹೊರಡಿಸಿದರೂ, ಅದೊಂದು ಭ್ರಮೆ. ಅವತಾರಗಳು ಸಹ ಡಾರ್ವಿನ್‌ನ ವಿಕಾಸವಾದದ ಹಿಂದೂ ಅವತರಣಿಕೆಗಳು'. ಕೊನೆಗೊಂದು ಸಲಹೆ : ವಿಶ್ವನಾಥನನ್ನು ಪಂಜಾಬಿಗೆ ಕರೆದೊಯ್ದು ಆತನ ಹೇಳಿಕೆಗಳನ್ನು ಒರೆಗೆ ಹಚ್ಚಬಹುದಲ್ಲವೇ?

ಮಾಜಿ ಶಾಸಕಿ, ಪ್ರಖ್ಯಾತ ಸಂಗೀತ ಕಲಾವಿದೆ ಡಾ.ಗಂಗೂಬಾಯಿ ಹಾನಗಲ್ ತಮ್ಮ ಅಜ್ಜಿ ಹೇಳಿದ ಕಥೆ ಹೇಳಿ ಇದಕ್ಕಿಂತ ಹೆಚ್ಚಿಗೆ ನಾನು ಏನನ್ನು ಹೇಳುವುದಿಲ್ಲ ಎಂದರು. ಕಥೆ : ''ಧಾರವಾಡದಲ್ಲಿದ್ದಾಗ ಅಜ್ಜಿ, ಫಕ್ಕೀರವ್ವನಿಗೆ ಹುಟ್ಟಿದ ಹೆಣ್ಣುಮಗುವಿನ ಬಗ್ಗೆ ಹೇಳಿದ್ದಳು. ಅಜ್ಜಿ ಕನಸು ಕಂಡಾಗ ಮೂರು ದಿವಸದ ಮಗು ತೊಟ್ಟಿಲಲ್ಲಿ ಎದ್ದು ಕುಳಿತು ನಾನು 'ಪೀರಿ' ಎಂದಾಗ ನಿದ್ದೆ ತಿಳಿದೆದ್ದ ಅಜ್ಜಿ ಎಲ್ಲರಲ್ಲೂ ಈ ಸುದ್ದಿಯನ್ನು ಹರಡಿದಾಗ ಹಾನಗಲ್ಲಿನಲ್ಲಿ ವಿಚಾರಿಸಿ ಬಂದದ್ದಾಯಿತು. ಅಲ್ಲಿ ಈ ಪೀರವ್ವ ಎಂಬ ಕೆಲಸದಾಕೆ ಇದ್ದದ್ದು ಇತ್ತೀಚೆಗೆ ಸತ್ತಿದ್ದು ತಿಳಿಯಿತು.''

ನಗರದ ಮಹಿಳಾ ಮಹಾವಿದ್ಯಾಲಯದಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥೆಯಾಗಿರುವ ಆಶಾ ಅವರ ಪ್ರಕಾರ ''ಪರಮಾನಸಶಾಸ್ತ್ರಕ್ಕೆ ಸೇರಿದ ಈ ವಿಷಯ ಇನ್ನೂ ಬಹಳ ಸಂಶೋಧನೆಗೊಳಪಡಬೇಕಿದೆ. ಈಗಾಗಲೇ ಪ್ರಕಟವಾಗಿರುವ ಪ್ರಕರಣಗಳಿಂದ ಪುನರ್ಜನ್ಮ ಇದೆ ಎಂಬ ಒಲವು ಮೂಡಿದೆ. ಆದರೆ ವೈಯಕ್ತಿಕವಾಗಿ ನನ್ನ ಅನುಭವಕ್ಕೆ ಯಾವ ಪುನರ್ಜನ್ಮ ಪ್ರಕರಣ ಬಂದಿಲ್ಲ'' ಎಂದರು.

ನಗರದ ಪ್ರಜಾಪಿತ ಬ್ರಹ್ಮಕುಮಾರಿ ವಿದ್ಯಾಲಯದ ಉಸ್ತುವಾರಿಯಲ್ಲಿರುವ ಕುಮಾರಿ ನಿರ್ಮಲಾದೇವಿಯವರು ಹೇಳಿದ್ದು: 'ನಾವು ಪುನರ್ಜನ್ಮ ಇದೆ ಎಂದು ನಂಬುತ್ತೇವೆ. ಆ ನಂಬುಗೆಯ ಶಾಸ್ತ್ರೀಯತೆಯ ಬಗೆಗೂ ನಮಗೆ ವಿಶ್ವಾಸವಿದೆ. ಆದರೆ ನಿಮ್ಮ 'ಪತ್ರಿಕೆ' ಆಹ್ವಾನಿಸಿದರೆ ಈ ವಿಷಯ ಕುರಿತು ಅಧಿಕೃತವಾದ ಲೇಖನವನ್ನು ಪ್ರಕಟಿಸಲು ಕಳಿಸಿಕೊಡುತ್ತೇವೆ'. ■



ಕಣ್ಣಿಗೆ ಕಾಣದ ಕೈಗೆ ಸಿಗದ ಜನ್ಮಾಂತರಗಳ ಕುರಿತು ಯೋಚಿಸುವುದಕ್ಕಿಂತ ಪ್ರಾಕ್ಟಿಕಲ್ಲಾಗಿ ಯಾವುದು ಕಾಣುತ್ತದೆಯೋ, ಯಾವುದು ನಂಬಿಕೆಗೆ ಅರ್ಹವೋ ಆ ವಿಷಯ ಕುರಿತು ನಾನು ನಿಖರವಾಗಿ ಉತ್ತರಿಸಬಲ್ಲೆನಾದ್ದರಿಂದ, ಇನ್ನೂ ವಿಜ್ಞಾನಿಗಳಿಗೆ, ವೈದ್ಯರಿಗೆ ನಿರ್ಣಯಿಸಲಾರದ ಇದರ ಬಗ್ಗೆ ಖಚಿತವಾಗಿ ಹೇಳಲಾರೆ. ಅಲ್ಲದೆ ಡಾ.ಕೋವೂರ ಈ ವಿಷಯದ ಕುರಿತು ವಿಶ್ವದಾದ್ಯಂತ ಹೇಳಿಕೆ ನೀಡಿ ರಹಸ್ಯ ಭೇದಿಸಲು ಆಹ್ವಾನ ಕೊಟ್ಟಿದ್ದರು. ಆದರೆ ಇದೂವರೆಗೂ ಯಾರಿಂದಲೂ ಹುಟ್ಟು ಸಾವುಗಳ ಕುರಿತು ರಹಸ್ಯವನ್ನು ಭೇದಿಸಲು ಸಾಧ್ಯವಾಗಿಲ್ಲ ಅಲ್ಲವೇ?

ಪುನರ್ಜನ್ಮದಲ್ಲಿಯೇ ನಂಬಿಕೆ ಇರದ ನನಗೆ ಮುಂದಿನ ಜನ್ಮದಲ್ಲಿ ಏನಾಗಿ ಹುಟ್ಟಬೇಕೆಂಬ ಆಸೆ ಬರಲು ಸಾಧ್ಯವೆ? ಹುಟ್ಟು ಆಕಸ್ಮಿಕ. ಅದರಂತೆ ಸಾವು ಖಚಿತ. ಈ ಎರಡರ ನಡುವೆ ಇದ್ದಷ್ಟು ದಿನ ಇರಬೇಕೇ ವಿನಾ ಪುನರ್ಜನ್ಮದ ಕುರಿತು ಯೋಚಿಸುವುದು ಅನಗತ್ಯ.

■ ಸಿದ್ಧಲಿಂಗೇಶ್ವರ ಸ್ವಾಮಿಗಳು
ತೋಂಟದಾರ್ಯ ಮಠ
ಗದಗ - 582 101

ಒಬ್ಬ ವೈದ್ಯನಾಗಿ ....




ಪುನರ್ಜನ್ಮದಲ್ಲಿ ನನಗೆ ನಂಬಿಕೆಯೇನೋ ಇದೆ. ಆದರೆ ನಾನೋರ್ವ ವೈದ್ಯನಾಗಿ ಅದರ ಬಗ್ಗೆ ವಿಶ್ಲೇಷಣೆ ಮಾಡುವುದು ಕೊಂಚ ಕಷ್ಟ. ಈಗಾಗಲೇ ಪುನರ್ಜನ್ಮ ಕುರಿತು ನಾನು ಎಷ್ಟೋ ಪ್ರಯೋಗಗಳನ್ನು ನಡೆಸಿದ್ದೇನೆ. ಆದರೆ ಇನ್ನೂ ಯಶಸ್ವಿಯಾಗಿಲ್ಲ. ಪುನರ್ಜನ್ಮ ಇದೆ ಎಂಬುದಕ್ಕೆ ಬೇಕಾದಷ್ಟು ಆಧಾರಗಳು ಸಿಕ್ಕಿವೆ. ಆದರೆ ಪುರಾವೆಗಳಿಲ್ಲ. ಈ ದಿಸೆಯಲ್ಲಿ ನಾವಿನ್ನೂ ಪ್ರಯೋಗ ನಡೆಸಬೇಕಿದೆ. ಈಗಾಗಲೇ ಈ ಕುರಿತು ಸಂಶೋಧನೆಗಳು ಸಹ ನಡೆಯುತ್ತಿವೆ. ಇನ್ನೊಂದು 'ಕ್ಲ್ಯೂ' ಸಿಕ್ಕೀತು ಎನ್ನುವಷ್ಟರಲ್ಲಿ ಕೈತಪ್ಪಿ ಹೋಗುತ್ತಿರುವ ಅವಕಾಶಗಳು ಹೆಚ್ಚಿವೆ. ನರೇಗಲ್‌ನ ವಿಶ್ವನಾಥನ ಪ್ರಕರಣವೂ ಅದೇ ರೀತಿಯಾಗಿದೆ. ನಾನೀಗಾಗಲೇ ಸ್ವತಃ ಆ ಹುಡುಗನೊಂದಿಗೆ ಮಾತನಾಡಿದ್ದೇನೆ, ಅಲ್ಲದೆ ಆತನು ನೀಡಿದ ವಿವರಗಳನ್ನು ಪತ್ತೆ ಹಚ್ಚಲು ಪ್ರಯತ್ನಿಸಿದ್ದೇನೆ. ಆದರೆ ಆತನು ನೀಡಿದ ವಿವರಗಳು ಇನ್ನೂ ಖಚಿತವಾಗಿಲ್ಲ.

ಜೀವನದಲ್ಲಿ ನಾವು ಬಯಸುವುದೆಲ್ಲ ಆಗುವಂತಿದ್ದರೆ, ಮುಂದಿನ ಜನ್ಮದಲ್ಲಿ ನಾನು ಏನಾಗ ಬಯಸುವೆನೆಂದು ಹೇಳಬಹುದಿತ್ತು. ಅಲ್ಲದೆ ಪುನರ್ಜನ್ಮ ಇದ್ದದ್ದೇ ಆದರೆ ನಾನು ನಕ್ಷತ್ರವಾಗಿ ಹುಟ್ಟಲು ಬಯಸುತ್ತೇನೆ.

■ ಡಾ. ತಾರಾನಾಥ ಮುಗಳಿ
ವೈದ್ಯರು,
ಗದಗ


ಆತ್ಮದ ಸ್ಥಾನ ಪಲ್ಲಟ



ದೇಹಕ್ಕೆ ಅಳಿವು ಇದೆ. ಆತ್ಮಕ್ಕಿಲ್ಲ. ವಿಶ್ವವನ್ನೇ ಹತೋಟಿಯಲ್ಲಿಡುವ ಅಗೋಚರ ದಿವ್ಯಶಕ್ತಿಯೊಂದರ ಹೆಸರೇ ಪರಮ-ಆತ್ಮ. ಆ ಪರಮ-ಆತ್ಮದ ಒಂದೊಂದು ಸೆಳಕು ಪ್ರತಿ ಮಾನವನಲ್ಲಿಯ ಅಂತರಾತ್ಮ. ಸೃಷ್ಟಿಯ ನಿಯಮದಂತೆ ಆಯಾ ಕಾಯದ ಕೆಲಸ ಮುಗಿದಾಕ್ಷಣ ಕಾಯದೊಳಗಿನ ಆತ್ಮ ಸ್ಥಾನ ಪಲ್ಲಟಿಸುವುದು. ಅದುವೇ ಪುನರ್ಜನ್ಮ. ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ ಬಸವಾದಿ ಪ್ರಮಥರೆಲ್ಲರ ಗ್ರಂಥಗಳಲ್ಲೂ ಪುನರ್ಜನ್ಮದ ಬಗ್ಗೆ ಸ್ಪಷ್ಟ ತೀರ್ಮಾನವಿದೆ. ಈ ಬಗ್ಗೆ ಬಸವಣ್ಣನವರ 'ಪಿಂಡ ಜ್ಞಾನ ಸ್ಥಲ'ವೇ ಸಾಕ್ಷಿ. ಜೈನಧರ್ಮದಲ್ಲೂ ೨೪ ಭವಾವಳಿಗಳ ನಿರ್ಣಯವಿದೆ. ಈ ಭವಾಂತರವು ನಿಶ್ಚಿತವಾದುದು. ಭಾವಾತೀತಕ್ಕೆ ಹೋದಾಗ (ಭಾವ-ಅತೀತ) ಜನ್ಮ ಜನ್ಮಾಂತರ ವ್ಯವಹಾರವೆಲ್ಲಾ ಸ್ಪಷ್ಟವಾಗಿ ತಿಳಿಯುವುದು. ಅದು ಕೆಲವರಲ್ಲಿ ಆಗಾಗ ಕಾಣಿಸಿಕೊಳ್ಳಬಹುದು. ಅಂತಹ ಭಾವಾತೀತ ಸ್ಥಿತಿ ತಲುಪುವುದರ ಪರಿಣಾಮವೇ ಪೂರ್ವಜನ್ಮದ ನೆನಪು. ಪುನರ್ಜನ್ಮವು ಸತ್ಯವಾಗಿದೆ!

■ ಡಾ. ಭೋಜರಾಜ್ ಪಾಟೀಲ
ಸಂಶೋಧಕರು
ಕನ್ನಡ ವಿಭಾಗ ಮುಖ್ಯಸ್ಥ
ಹಂಸಭಾವಿ
ತಾ. ಹಿರೇಕೆರೂರು, ಜಿ. ಹಾವೇರಿ.

ಪುರಾಣಗಳು ಸುಳ್ಳೇ?



ಹೇಗೆ ರಾತ್ರಿ-ಹಗಲು, ಮಳೆ-ಬಿಸಿಲು, ಜನನ-ಮರಣ ಎಂಬುದು ಅವಿರತವಾಗಿ ನಡೆಯುತ್ತಿದೆಯೋ ಹಾಗೆಯೇ ಜೀವಿಗಳಿಗೆಲ್ಲಾ ಪುನರ್ಜನ್ಮ ಎಂಬುದು ಇದ್ದೇ ಇದೆ. ದೇವನೊಬ್ಬನ ಶಕ್ತಿ ಇಲ್ಲದಿದ್ದಲ್ಲಿ ಈ ಜಗತ್ತು ಹುಟ್ಟಲು ಕಾರಣಕರ್ತರಾದ ಆದಿಮಾನವರನ್ನು ಸೃಷ್ಟಿಸಿದ್ದಾದರೂ ಯಾರು? ಅಥವಾ ಪುನರ್ಜನ್ಮವೇ ಇಲ್ಲದಿದ್ದಲ್ಲಿ ಜೀವಿಗಳ ಮರಣಾ ನಂತರ ಒಂದು ಹಂತದಲ್ಲಿ ವಿಶ್ವದಲ್ಲಿ ಮಾನವ ಜನನದ ಕ್ರಿಯೆಯೇ ಸ್ಥಗಿತಗೊಳ್ಳಬೇಕಾಗಿತ್ತು. ಆದರೆ ಪುನರಪಿ ಜನನಂ ಪುನರಪಿ ಮರಣಂ ಎಂಬಂತೆ ಪ್ರಪಂಚದಲ್ಲಿ ಅದು ಚಕ್ರದಂತೆ ಸುತ್ತುತ್ತಲೇ ಇರುತ್ತದೆ. ಈ ಕ್ರಿಯೆಯನ್ನು ನಿರಂತರವಾಗಿ ನಿಯಂತ್ರಿಸುವ ಶಕ್ತಿ ಆ ಸೃಷ್ಟಿಕರ್ತನೊಬ್ಬನದ್ದೇ ವಿನಾ ಇದರಲ್ಲಿ ನಾಸ್ತಿಕರು ಹೇಳುವಂತೆ ಮಾನವ ಪವಾಡವಾಗಲೀ, ಸ್ವಾಭಾವಿಕ ಬೆಳವಣಿಗೆಯಾಗಲೀ ಇಲ್ಲವೇ ಇಲ್ಲ. ಹಿಂದೆ ಶಾಪಗ್ರಸ್ತರಾದ ಋಷಿ ದೇವತೆಗಳೇ ತಮ್ಮ-ತಮ್ಮ ಶಾಪಕ್ಕನುಗುಣವಾಗಿ ವಿವಿಧ ಜನ್ಮಗಳನ್ನು ಪಡೆದು ಶಾಪ ವಿಮೋಚನೆಗೊಂಡ ಪುರಾಣ ಕಥೆಗಳು ಸಾಕಷ್ಟಿವೆ. ಹಾಗಿದ್ದಲ್ಲಿ ಪುನರ್ ಜನ್ಮವಿಲ್ಲದಿದ್ದರೆ ಇವುಗಳೆಲ್ಲವೂ ಸುಳ್ಳೇ? ಅಲ್ಲದೆ ಚಂದ್ರನಿಂದ ಹಿಡಿದು ಎಲ್ಲ ಗ್ರಹಲೋಕಗಳಿಗೂ ಲಗ್ಗೆ ಇಟ್ಟ ನಾಸ್ತಿಕ ಮಾನವರಿಗೆ ಪುನರ್ಜನ್ಮ ಇಲ್ಲವೆ ಇಲ್ಲ ಎಂದು ಸಾಬೀತು ಪಡಿಸಲು ಸಾಧ್ಯವೇ ಇಲ್ಲ. ಯಾಕೆಂದರೆ ಎಂದಿಗೆ ಈ ಪ್ರಪಂಚದ ಅಂತ್ಯವಾಗುವುದೋ ಅಂದಿನವರೆಗೆ ಇಲ್ಲಿ ಪುನರ್ ಜನ್ಮವೂ ನಿರಂತರ.

■ ಕುವೇಂಡ ಹಂಝುತುಲ್ಲಾ
ಸಂಪಾದಕರು,
ಕಿತ್ತಳೆನಾಡು ವಾರಪತ್ರಿಕೆ
ಬೆಂಗಳೂರು

ಬೋಗಸ್ ವಿಚಾರ



ಈ ಜನ್ಮದಲ್ಲಿ ಮನುಷ್ಯನ ಅಪರಾಧಗಳನ್ನು ತಡೆದು ಮುಂದಿನ ಜನ್ಮದಲ್ಲಿ ಉತ್ತಮ ಸ್ಥಾನಮಾನದ ಆಸೆಯಿಂದ ಒಳ್ಳೆಯ ಕೆಲಸ ಮಾಡುವುದಕ್ಕೆ ಪ್ರಚೋದನೆಯಾಗಲಿ ಎಂಬುದು ಪುನರ್ಜನ್ಮ ಸಿದ್ಧಾಂತದ ಹಿನ್ನೆಲೆಯಾಗಿರಬಹುದು.

ವ್ಯಕ್ತಿಯೊಬ್ಬನನ್ನು ಸಮ್ಮೋಹನಕ್ಕೊಳಪಡಿಸಿದಾಗ ಹಿಂದಿನ ಜನ್ಮದ ಬಗ್ಗೆ ವಿಚಿತ್ರ ಉತ್ತರಗಳನ್ನು ಹೇಳಿದ್ದನ್ನು ಕೇಳಿ ಅದರ ಸತ್ಯಾಸತ್ಯತೆಯನ್ನು ವಿಶ್ಲೇಷಿಸಿದಾಗ ಉತ್ತರಗಳು ಸತ್ಯವನ್ನು ಖಚಿತಪಡಿಸುವುದಿಲ್ಲ. ಅನೇಕ ಬಾರಿ ನಿದ್ರೆಯಲ್ಲಿ ಕಾಣುವ ಕನಸುಗಳು ಮನುಷ್ಯನನ್ನು ವಿಚಿತ್ರವಾಗಿ ಚಿಂತಿಸುವಂತೆ ಮಾಡುತ್ತವೆ. ಹಾಗೆ ನೋಡಿದರೆ ಪ್ರತಿದಿನ ಮನುಷ್ಯ ಮಲಗಿ ಎದ್ದಾಗ ಒಂದು ರೀತಿಯಲ್ಲಿ ಪುನರ್ಜನ್ಮ ಪಡೆದಂತಾಗಿರುತ್ತದೆ. ಕೆಲವು ಧಾರ್ಮಿಕ ಸ್ಥಳಗಳಿಗೆ ಸಂದರ್ಶಿಸಿದಾಗ ಪೂಜೆಗೆಂದು ಹೋದ ವ್ಯಕ್ತಿಗಳಲ್ಲಿ ವಿಶೇಷವಾಗಿ ದುರ್ಬಲ ಮನಸ್ಸಿನ ವ್ಯಕ್ತಿಗಳಿಗೆ ದೇವರು ಬರುವುದು, ದೆವ್ವ ಬಿಟ್ಟುಹೋಗುವುದು. ಆ ಮನುಷ್ಯ ವಿಚಿತ್ರವಾಗಿ ವರ್ತಿಸುವುದನ್ನು ಕಾಣುತ್ತೇವೆ. ಇವೆಲ್ಲ ಒಂದು ರೀತಿಯಲ್ಲಿ ಮನುಷ್ಯನ ವಿಕೃತ ಮನಸ್ಸಿನ ರೂಪವಾಗಿರುತ್ತವೆ. ಹಾಗೆಯೇ ಪುನರ್ಜನ್ಮದ ಪ್ರಕರಣಗಳೂ ಆಗಿರಬಹುದು.

ಆದರೂ ಪುನರ್ಜನ್ಮದ ಬಗ್ಗೆ ಖಚಿತ ವಿಶ್ಲೇಷಣೆ ನಡೆದು ನಿಖರ ಪುರಾವೆ ದೊರೆಯುವವರೆಗೆ ನನ್ನ ದೃಷ್ಟಿಯಲ್ಲಿ ಇದೊಂದು ಬೋಗಸ್ ವಿಚಾರ.

■ **ಎಸ್.ಎಸ್. ಸಾಲಿಮಠ**
ವಕೀಲರು ಹಾಗೂ ಗೌ.ಕಾನೂನು ಪ್ರಾಧ್ಯಾಪಕರು
'ಪೂಜಾ ನಿಲಯ' 115, (ಮಹಡಿ)
ಹೊಸಕೋರ್ಟ್ ಹಿಂಭಾಗ,
ದೇವರಾಜ ಅರಸ್ ಲೇಔಟ್, ದಾವಣಗೆರೆ.

ನಂಬಿಕೆಯ ಪ್ರಶ್ನೆ



ದೇವರು ಇದ್ದಾನೆ ಎಂದು ನಂಬಿದ ನಾವು, ಪುನರ್‌ಜನ್ಮವನ್ನು ನಂಬಬೇಕಾಗುತ್ತದೆ. ಆದರೆ ಪುನರ್‌ಜನ್ಮತಾಳಿ ಬಂದ ಜನ, ಹಿಂದೆ ನಾನು ಹೀಗಿದ್ದೆ, ಈಗ ಹೀಗೆ ಆಗಿದ್ದೇನೆ, ನನ್ನ ಜನ್ಮ ಜನ್ಮಾಂತರ ಹೀಗಿತ್ತು ಎಂದು ಅಧಿಕೃತವಾಗಿ ಹೇಳಿಲ್ಲ. ಹೇಳಬೇಕಾದ ಜ್ಞಾಪಕ ಶಕ್ತಿಯನ್ನು ದೇವರು ಕೊಟ್ಟಿರಲಾರ. ಅದಕ್ಕಾಗಿ ಹೇಳಲು ಸಾಧ್ಯವಾಗದಿರಬಹುದು. ದೇವರು ಅಥವಾ ಸೃಷ್ಟಿಕರ್ತ, ಬೇಕಂತಲೇ ಈ ಬಗ್ಗೆ ಜ್ಞಾಪಕ ಶಕ್ತಿ ಕೊಟ್ಟಿರಲಾರ. ಏಕೆಂದರೆ ದೇವರೂ ಕೂಡ ಪುನರ್ಜನ್ಮದಿಂದಲೇ ಬಂದಿರಬಹುದಾದ್ದರಿಂದ ಹಿಂದಿನ ಅನೇಕ ರಹಸ್ಯಗಳು ಈಗಿನ ಜನರಿಗೆ ಗೊತ್ತಾಗಬಾರದೆಂದು ಈ ರೀತಿ ಅದೊಂದು ವಿಚಾರದಲ್ಲಿ ಜ್ಞಾಪಕ ಶಕ್ತಿಯನ್ನು ತಡೆಹಿಡಿದಿರಲು ಸಾಧ್ಯ.

ಮರಣ ಹೊಂದಿದವನು, ಸ್ವರ್ಗ ಅಥವಾ ನರಕ ಈ ಎರಡರಲ್ಲಿ ಒಂದಕ್ಕೆ ಹೋಗುತ್ತಾನೆ ಎಂಬ ವಾಡಿಕೆ ಇದೆ. ಪುಣ್ಯಮಾಡಿದವನು ಸ್ವರ್ಗಕ್ಕೂ, ಪಾಪ ಮಾಡಿದವನು ನರಕಕ್ಕೂ ಹೋಗುತ್ತಾರೆ ಎಂದು ಹಿರಿಯರು ಈಗಲೂ ಹೇಳುವುದುಂಟು. ಇದನ್ನೂ ಕೆಲವರು ನಂಬುತ್ತಾರೆ. ಸ್ವರ್ಗದ ದಾರಿ ಕಾಣುವುದಕ್ಕಾಗಿ ಕಾಶಿ, ರಾಮೇಶ್ವರ, ತಿರುಪತಿ, ಧರ್ಮಸ್ಥಳ ಮುಂತಾದ ಪುಣ್ಯಸ್ಥಳಗಳಿಗೆ ಹೋಗಿ ತೀರ್ಥಸ್ನಾನ ಮಾಡಿ, ಅನ್ನ ಸಂತರ್ಪಣೆ ನಡೆಸಿ ಪುಣ್ಯ ಭಾಗಿಗಳಾಗಿ ಸ್ವರ್ಗದ ದಾರಿ ಸೇರುತ್ತಾರೆ. ಕಳ್ಳತನ, ಕೊಲೆ, ಹಿಂಸೆ ಮಾಡಿದವನು ನರಕಕ್ಕೆ ಹೋಗುತ್ತಾನೆ ಎನ್ನುತ್ತಾರೆ. ಸ್ವರ್ಗ ಹೇಗಿದೆ, ಇಲ್ಲಿಂದ ಹೋದವರು ಅಲ್ಲಿ ಯಾರು ಯಾರು ಇದ್ದಾರೆ, ಅಲ್ಲಿಯ ಸೌಲಭ್ಯಗಳೇನು ಎಂಬುದನ್ನು ಅಲ್ಲಿಂದ ಇಲ್ಲಿಗೆ ಬಂದು ತಿಳಿಸಿದವರಿಲ್ಲ.

ಮೇಲೆ ಹೇಳಿದ ಮಾತುಗಳೆಲ್ಲಾ ನಂಬಿಕೆಯನ್ನು ಅವಲಂಬಿಸಿದೆ. ಪುನರ್ಜನ್ಮ ಕೂಡ ನಂಬಿಕೆಯ ಮೇಲೆ ನಿಂತಿದೆ. ಪುನರ್ಜನ್ಮದಲ್ಲಿ ನಾನು ಏನಾಗಿ ಹುಟ್ಟಬಹುದು ಎಂದು ಆಲೋಚಿಸಿದರೆ, ನಾನು ಮನುಷ್ಯನಾಗಿ ಮುಂದೆಯೂ ಹುಟ್ಟಬೇಕೆಂಬ ಆಸೆ ನನ್ನದು. ಆ ರೀತಿ ಹುಟ್ಟಿದರೆ, ಈಗಿನಂತೆ ಸಾಗರದಲ್ಲೆ ಹುಟ್ಟಬೇಕು, ಇಲ್ಲಿಯ ಜನ ಮುಂಚಿನಿಂದಲೂ ನನ್ನನ್ನು ಪ್ರೀತಿಯಿಂದ ಕಂಡಿದ್ದಾರೆ. ನನ್ನನ್ನು ತಮ್ಮವನು ಎಂದು ಭಾವಿಸಿದ್ದಾರೆ.

■ **ಟಿ. ಮಹಾಬಲೇಶ್ವರ ಭಟ್ಟ**
73, 'ಸುದರ್ಶನ',
ಶ್ರೀ ಮಾರಿಕಾಂಬ ರಸ್ತೆ,
ಸಾಗರ - 577 401.

ಪುನರಪಿ ಜನನಂ....



ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನಿ ಪುನರಪಿ ಜಠರೇಶಯನಂ! ಎಂದು ಪುನರ್ಜನ್ಮದ ಕುರಿತ ಶಂಕರಾಚಾರ್ಯರ ವಿಶ್ಲೇಷಣೆ ಸತ್ಯವೆಂಬ ನಿರ್ಣಯಕ್ಕೆ ಬರುತ್ತಿದ್ದಂತೆ, ಜನ್ಮ ಭತಶ್ಯ ದೇಹಶ್ಯ ಪುನರಾಗಮ ಕುತಃವೆಂಬ ಮತ್ತೊಬ್ಬ ಮೇಧಾವಿಯ ತೀರ್ಮಾನ ದ್ವಂದ್ವಕ್ಕೀಡು ಮಾಡುತ್ತದೆ. ಈ ಪುನರ್ಜನ್ಮದ ಕುರಿತು ಅನಾದಿ ಕಾಲದಿಂದಲೂ ದ್ವಂದ್ವವೇ ಉಳಿದಿದೆ. ಜೈನ-ಬೌದ್ಧ ಧರ್ಮಗಳಲ್ಲಿ ಜನ್ಮ ಪುನರಾಗಮನದ ಬಗೆಗೆ ಸ್ಪಷ್ಟ ನಿರ್ಣಯವಿದ್ದರೂ ಅದನ್ನು ನಾನು ಸಾಂಕೇತಿಕವಾಗಿ, ಮುಂಬರುವ ಜನಾಂಗದ ಜೀವನ ಮಾರ್ಗದರ್ಶನದ ಪೂರ್ವಪಾಠವೆಂದೇ ಪರಿಗಣಿಸುತ್ತೇನೆ. ಅಂತೆಯೇ ಪಿ.ವಿ. ಕಾಣ್ಕೆಯವರ 'History of Dharmashashtra' ದಲ್ಲೂ ಇದೇ ದ್ವಂದ್ವವಿದೆ. ಸ್ಮೃತಿಯಲ್ಲಿ ಮಾನವ ಜೀವನ ಚಕ್ರದ ಪೂರ್ಣಪ್ರತಿಬಿಂಬವಿದ್ದರೂ ನನ್ನಲ್ಲಿನ್ನೂ- ಈ ಪುನರ್ಜನ್ಮದ ಕುರಿತು ದ್ವಂದ್ವಾಭಿಪ್ರಾಯವಿದೆಯೇ ವಿನಾ ಸ್ಪಷ್ಟ ನಿಲುವಿಲ್ಲ.

■ **ರಾಘವೇಂದ್ರ ಕುಲಕರ್ಣಿ**
ಕನ್ನಡ-ಸಂಸ್ಕೃತ ಪಂಡಿತರು
ರಾಜೇಂದ್ರನಗರ,
ಹಾವೇರಿ

ಪೂರ್ವಜನ್ಮದ ಪ್ರಭಾವ



ಒಬ್ಬ ಮನುಷ್ಯನ ಪ್ರಸ್ತುತ ಜೀವನ ಮತ್ತು ನಿಲುವುಗಳು ಅವನ ಪೂರ್ವಜನ್ಮದ ಸಂಸ್ಕಾರ ಮತ್ತು ಸಂಸ್ಕೃತಿಯ ಪ್ರಭಾವವೆಂದೇ ನನ್ನ

ಅಭಿಪ್ರಾಯ. ಒಂದೇ ಮನೆಯಲ್ಲಿ ಬೇರೆ ಬೇರೆ ಮನಸ್ಥಿತಿಯವರನ್ನು ಕಾಣಬಹುದು. ಅದು ಅವರ ಪೂರ್ವಜನ್ಮದ ಒಟ್ಟು ಜೀವನ ಕ್ರಮದ ತುಸು ಪ್ರಭಾವವೇ ಆಗಿರುತ್ತದೆ. ಅಂದರೆ, ಪುನರ್ಜನ್ಮವನ್ನು ನನಗೆ ತಿಳಿಯದಂತೆಯೇ ಒಪ್ಪಿಕೊಂಡುಬಿಡಬೇಕಾಗುತ್ತದೆ. ಆದರೂ ಪೂರ್ವಜನ್ಮದ ಯಥಾವತ್ತಾದ ಅನುಕರಣೆ ಈ ಜನ್ಮಕ್ಕಿರದಿದ್ದರೂ, ನಿಗೂಢ ನಿಸರ್ಗದ ಪಂಚ ಭೂತಗಳ ಆಸ್ವಾದನೆಯಲ್ಲಿ ಈ ಜನ್ಮದ ಚಕ್ರ ತಿರುಗುತ್ತಲೇ ಇರುತ್ತದೆ. ಅದೀಗ ವೈಜ್ಞಾನಿಕ ವಾಗಿಯೂ ಸ್ಪಷ್ಟಗೊಳ್ಳುತ್ತಲಿದೆ. ಮನುಷ್ಯನ ಮನಸ್ಸಿನಲ್ಲಿ ಅಗಾಧ ಚೇತನವೊಂದರ ಪರಿಪೂರ್ಣ ಸ್ಥಿತಿ ಸಮಾಧಿಯಾಗಿ ಕಳೆದ ನೆನಪುಗಳ ಮರುಕಳಿಕೆಗೆ ಪ್ರಯತ್ನಿಸಿದರೆ ಕಳೆದ ಜನ್ಮದ ಅನುಭವವಾಗುವುದೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅಂದರೆ, ಪುನರ್ಜನ್ಮದಲ್ಲಿ ನನಗೆ ನಂಬಿಕೆ ಸ್ಪಷ್ಟವಿದೆ.

■ **ಗಿರಿಜಾ ದುರ್ಗದಮಠ**
ಲೇಖಕಿ
ಶ್ರೀರಾಜರಾಜೇಶ್ವರಿ ಆರ್ಟ್ಸ್ ಮತ್ತು ಕಾಮರ್ಸ್
ಮಹಿಳಾ ಕಾಲೇಜ್
ರಾಣೆಬೆನ್ನೂರು

ಪುರೋಹಿತಶಾಹಿ ಸೋಗು!



ಪುನರ್ಜನ್ಮವೊಂದು ಪುರೋಹಿತಶಾಹಿ ಧೋರಣೆಯ ಪರಿಕಲ್ಪನೆಯಷ್ಟೆ. ಇದು ಜನಪರ ವಿಚಾರ ಅಂಶವನ್ನು ಧಿಕ್ಕರಿಸಿದಂತಾಗುತ್ತದೆ. ಪುನರ್ಜನ್ಮವು ಆತ್ಮ ಮತ್ತು ಪರಮಾತ್ಮನ ಕಲ್ಪನೆ. ಆಧ್ಯಾತ್ಮದ ತಳಹದಿಯಲ್ಲಿ ಹುಟ್ಟಿಕೊಂಡಿರುವುದು. ಆ ಆಧ್ಯಾತ್ಮವು ಇಹದ ಬದುಕನ್ನು ನಿರಾಕರಿಸಿ, ಪರದ ಬದುಕಿನ ಸ್ಪರ್ಶವನ್ನು ಪುಷ್ಟೀಕರಿಸುತ್ತದೆ. ಈ ಹಿನ್ನೆಲೆಯಲ್ಲಿ ಸ್ವರ್ಗನರಕಗಳು ಎಂಬ ಪಕ್ಕಾ ಢಾಂಬಿಕತೆಯ ವಿಚಾರ ಹೊರಹೊಮ್ಮುತ್ತದೆ. ಕನ್ನಡ ಸಾಹಿತ್ಯದಲ್ಲಿಯ ಬಂಡಾಯದ ಮುಂದಾಳತ್ವವಾದ ವಚನ ಚಳುವಳಿಯಲ್ಲೂ ಇದೇ ಜನ್ಮ ಕಡೆ ಎಂಬುದಿದೆ. ವೇದ-ಪುರಾಣಾದಿಗಳ ಹಿನ್ನೆಲೆಯ ಚರ್ಚೆಗೆ ಪುಷ್ಟಿಯಾದ ಪುನರ್ಜನ್ಮ ಅಲ್ಲಗಳೆಯುವ ಮಾತಾಗಿದೆ. ಸ್ಪಷ್ಟವಾಗಿ ಗೋಚರಿಸುವ ವೈಜ್ಞಾನಿಕ ದೃಷ್ಟಿಯಿಂದ ಪುನರ್ಜನ್ಮವೆಂಬುದು ಬರೀ ಡೋಂಗಿಯಾಗಿದೆ. ಪುನರ್ಜನ್ಮವೆಂಬುದು ಗುಲ್ಲು. ಒಂದು ಸಮುದಾಯದ ಈ ನಿಲುವನ್ನು ಒಪ್ಪಲಾಗುವುದಿಲ್ಲ.

ನನ್ನ ದೃಷ್ಟಿಯಲ್ಲಿ ಪುನರ್ಜನ್ಮವೆಂಬುದೇ ಇಲ್ಲ.

■ **ಶ್ರೀ ಶೈಲ ಹುದ್ದಾರ**
ಉಪನ್ಯಾಸಕರು ಹಾಗು ಸಾಹಿತಿಗಳು
ಶ್ರೀ ರಂ.ಜ.ವೀ.ಕಾಲೇಜು
ಶಿಗ್ಗಾಂವ.

ಕರ್ಮ ಸಿದ್ಧಾಂತ



ತನ್ನ ಅಪ್ರಬುದ್ಧ ವಯಸ್ಸಿನಲ್ಲಿ ಅಪೂರ್ವ ಪ್ರತಿಭೆಯನ್ನು ತೋರಿಸೋ ಅಚ್ಚರಿಯನ್ನು ಕಂಡಾಗ ಆ ಚಿಕ್ಕ ವಯಸ್ಸಿಗೆ ಅಷ್ಟು ಅರಿವು ಹೇಗೆ ಬಂದಿತು? ಅದು ಹಿಂದಿನ ಜನ್ಮದ ಕರ್ಮದ ಫಲವಿರಬೇಕೆಂದೆನಿಸುತ್ತದೆ. ಅಂದರೆ ಕರ್ಮ ಸಿದ್ಧಾಂತದ ವಿಚಾರ. ಉದಾ: ತನ್ನ ಚಿಕ್ಕ ವಯಸ್ಸಿನಲ್ಲಿ ಸಂಗೀತ ಶಿಖಾಮಣಿಗಳು ಗುರುತಿಸಲು ತಿಣುಕಾಡುವ ರಾಗಗಳನ್ನು ಸಲೀಸಾಗಿ ಬಿಡಿಸುವ ಹುಡುಗಿಯ ಬಗ್ಗೆ ಓದಿದ ನೆನಪಿದೆ. ಇವೆಲ್ಲಾ ಪುನರ್ಜನ್ಮಕ್ಕೆ ಪುಷ್ಟೀಕರಣ ನೀಡುವ ವಿಚಾರಗಳು. ಒಟ್ಟಿನಲ್ಲಿ ಪ್ರಾಯೋಗಿಕವಾಗಿ ನಮಗೆ ಪುರಾವೆಗಳಿಲ್ಲದಿದ್ದರೂ ಸೈದ್ಧಾಂತಿಕವಾಗಿ ತಳ್ಳಿಹಾಕದಂತಹ ವಿಚಾರ. ಆದರೆ ಪೂರ್ವಜನ್ಮದ ವಿವರಗಳನ್ನು ಹೇಳಿಕೊಂಡು ತಿರುಗಾಡುವುದು ಕೇವಲ ಪ್ರಚಾರಗಿಟ್ಟಿಸೋ ಉಪಾಯ. ಒಟ್ಟಿನಲ್ಲಿ ಪುನರ್ಜನ್ಮವಿದೆಯೆಂಬುದು ನಂಬಿಕೆಗೆ ಬಿಟ್ಟದ್ದು.

■ **ಸಹನಾ ಉಡುಪ**
ಪತ್ರಿಕೋದ್ಯಮದ ವಿದ್ಯಾರ್ಥಿನಿ
(ಎನ್.ಎಂ.ಕೆ.ಆರ್.ವಿ.ಕಾಲೇಜು)
ತ್ಯಾಗರಾಜನಗರ,
ಬೆಂಗಳೂರು - 28.

ಅವರವರ ಭಾವ



ಪಂಚೇಂದ್ರಿಯಗಳಿಗೆ ಈಗ ನಿಲುಕದ್ದು ಇಲ್ಲ ಎಂಬುದು ಸರಿಯಲ್ಲ. ಆತ್ಮದ ಬಗ್ಗೆ ಭಗವದ್ಗೀತೆಯಲ್ಲಿ 'ಆತ್ಮವನ್ನು ಶಸ್ತ್ರಗಳಿಂದ ಕತ್ತರಿಸಲಾಗಲೀ ಅಥವಾ ಬೆಂಕಿಯಿಂದ ಸುಡುವುದಕ್ಕಾಗಲೀ ಸಾಧ್ಯವಿಲ್ಲವೆಂದು ಶ್ರೀ ಕೃಷ್ಣ ಹೇಳಿದ್ದಾನೆ. ಇದನ್ನೇ ಬೃಹತ್‌ರೂಪದಲ್ಲಿ 'Matter is neither added nor reduced, but there is only a change' ಎಂದು ಆರ್ವಾಚೀನ ವಿಜ್ಞಾನಿಗಳ ಅಭಿಮತ. ಆದ್ದರಿಂದ ಪುನರ್ಜನ್ಮವೆಂಬುದು ನಾವು ಈ ಜನ್ಮದಲ್ಲಿ ಇರುವಂತಹ ರೂಪದಲ್ಲಿ ಅಥವಾ ರೂಪಾಂತರದಲ್ಲಿ ಆಗಬಹುದು. ಹಾಗಿದ್ದಲ್ಲಿ ನಮ್ಮ ವಿಜ್ಞಾನಿಗಳ ಮಾತು 'The change' ಅಥವಾ ನಿರಂತರವಾದ 'ಜೀವಾತ್ಮ' ಈ ವಿಚಾರ ಅವರವರ ಬುದ್ಧಿಯ ಎರಿಳಿತಗಳಿಗೆ ಹೊಂದಿಕೊಂಡು ಅರ್ಥೈಸಿಕೊಳ್ಳಬಹುದಾದ ಒಂದು ಚಿಂತನೆ.

■ **ವಿನಯಾ ಪ್ರಸಾದ್**
ಚಲನಚಿತ್ರ ನಟಿ
ಬೆಂಗಳೂರು



ಪ್ರಶ್ನೆ

ನಕ್ಕಿದ್ದಕ್ಕೇ
ಕೋತಿಯಂತಾಗುವ
ಹುಡುಗ
ಮುತ್ತಿಟ್ಟರೆ
ಕರಡಿಯಂತಾಗಲಾರನೆ?

– **ಚಿತ್ರಶೇಖರ ಕಂಠಿ**

ಪ್ರಳಯ ತಪ್ಪಿಸಲು ಅಳಿಯನಿಗೆ ಉಡುಗೊರೆ

ಪ್ರಳಯದ ಬಗೆಗಿನ ಭಯಂಕರ ಸುದ್ದಿ ಎಲ್ಲೆಲ್ಲೂ ಹಬ್ಬಿದೆ. ಎಲ್ಲರಿಗೂ ಗೊತ್ತಿರುವಂತೆ ರುದ್ರ ಪ್ರಳಯ ದೇವತೆ. ಅವನನ್ನು ಶಾಂತ ಮಾಡಿದರೆ ಪ್ರಳಯ ಸಂಭವಿಸದು. ಜೊತೆಗೆ ರುದ್ರನ ಮಡದಿ ಗೌರಿಯ ಶಿಫಾರಸ್ಸನ್ನು ಮಾಡಿಸಿದರೆ?

- ಇದು ಈ ಬಾರಿಯ ಗೌರಿ ಗಣೇಶ ಹಬ್ಬಕ್ಕೆ ಪರಮ ಹಾಕಿಕೊಂಡಿರುವ ಚಾಂಡಾಲ ಯೋಜನೆ !



''ಗುರುವೇ ಇದ್ದೀಯಾ?

ಬೆಳ್ಳಂ ಬೆಳಿಗ್ಗೆಯೇ ಪರಮನ ಧ್ವನಿ.

ಸುಖನಿದ್ರೆಯಲ್ಲಿ ಮುಳುಗಿ ಆಗ ತಾನೇ ಕಣ್ಣು ಬಿಟ್ಟಿದ್ದ ನಾನು ಬೆಚ್ಚಿದೆ.

ಪರಮ - ಎಂದರೆ ಪರಮೇಶಿ. ನಾವೆಲ್ಲಾ - ಭೋಜ, ಈರ, ಪರಮ, ನಾನು ಒಂದೇ ಊರಿನ ಹೈಕಳು. ಅಷ್ಟೇಕೆ ಒಂದೇ ಬೀದಿಯವರು-ಜೊತೆಯವರು. ಈ ಪರಮನಂತೂ ''ಪರಮ ಚಾಂಡಾಲ'', ಆ ಕಾಲಕ್ಕೇ ದಿನಕ್ಕೊಂದು ರಾದ್ಧಾಂತ ಎಬ್ಬಿಸುತ್ತಿದ್ದ. ಅವನ ಬೀದಿ ತರಲೆಗೆ ದಿನಾ ನಮ್ಮ ಬೆನ್ನು ಶಿಕ್ಷೆ ಅನುಭವಿಸುತ್ತಿತ್ತು.

ಅದರಿಂದಾದ ಒಂದು ಪ್ರಯೋಜನವೆಂದರೆ ಐವತ್ತು ವರ್ಷವಾದರೂ ಬೇರೆಯವರಿಗೆ ಬಂದಂತೆ ಯಾವುದೇ ಬೆನ್ನಿನ ತೊಂದರೆಯಿಲ್ಲದೆ ಇದ್ದೇವೆ. ನಮ್ಮ ಬೆನ್ನು ಅಷ್ಟು ಗಟ್ಟಿಮುಟ್ಟಾಗಿದೆ, ನೆಟ್ಟಗಿದೆ. ಆ ಕಾಲದಿಂದಲೂ ಪರಮನೆಂದರೆ ತರಲೆಯ ಪುನರ್ಜನ್ಮವೆಂದೇ ನನ್ನ ಭಾವನೆ.

''ಗುರುವೇ, ಈಗ ಎದ್ದ?''

ಕಾಫಿ ಹೀರುತ್ತಿದ್ದ ನಾನು ಬಲವಂತದ ನಗೆ ನಕ್ಕೆ. ಇನ್ನೇನು ಕಾದಿದೆಯೋ.........

''ಏನು ಪರಮ ಅಪರೂಪ?''

''ಇವತ್ತು ಆಫೀಸಿಗೆ ರಜ ಹೇಳು ಗುರುವೆ''

''ಅಪ್ಪಾ, ಮೊದ್ಲು ಈ ಗುರುವೇ ಅನ್ನೋ ಶಬ್ದಾನ ನಿಲ್ಸು, ಅದ್ನ ಕೇಳಿದ್ರೆ ಹೇಗೇಗೋ ಆಗುತ್ತೆ''

''ಓ್ಹ....ಓ್ಹ'' ನಕ್ಕ ಪರಮ. ಹೊರ ಬಂದ ಜಯ ಏನಾಯಿತೆಂದು ನನ್ನ ಕಡೆ ನೋಡಿದಳು.

''ಏನಿಲ್ಲ ಅತ್ಗೆ. ಇವನ್ನ ನಾನು ಗುರುವೇ ಅಂತ ಕರೀಬಾರ್ದಂತೆ, ಯಾಕೆ ಗೊತ್ತಾ?''

ನಿಜಕ್ಕೂ ಗಾಬರಿಯಾಯ್ತು. ಈ ''ಗುರುವೇ'' ಅನ್ನೋ ಶಬ್ದ ಪರಮನ ಬಾಯಿಂದ ಬರುವಾಗ ಮೊದಲು ಸಂತೋಷವಾಗಿತ್ತು. ನಿಜ. ಆದರೆ ಆನಂತರ ಅವನು ಮಾಡಿದ ತರಲೆಯಿಂದ ನನಗಾದ ಅವಮಾನ ನಷ್ಟ ಎಲ್ಲ ಒಂದು ದೊಡ್ಡ ಕಥೆ.

ನಾವು ಓದುವಾಗ ನಮ್ಮ ತರಗತಿಯವರಿಗಿಂತ ಐದೈದು ವರ್ಷ ದೊಡ್ಡ ಗಡವಾಗಳಾಗಿದ್ದೆವು. ಪರಮನ ದೂರದ ಸಂಬಂಧಿ ಪಾರೂ ಮೇಲೆ ಅವನಿಗೆ ಕಣ್ಣು. ತನ್ನ ಪ್ರೀತಿಯನ್ನೆಲ್ಲಾ ಅವಳಿಗೆ ತಿಳಿಸಬೇಕೆಂಬ ಕಾತರ.

ಆದರೆ ಅವನೋ ಬೃಹಸ್ಪತಿಯ ತುಂಡು.

ಪರಮ ಕನ್ನಡ ಬರೆದನೆಂದರೆ, ಅದರ ಶಬ್ದ ಅರ್ಥೈಸಲು "ಕಿಟ್ಟೆಲ್ಲರೂ" ವ್ಯಾಕರಣ ಅರ್ಥೈಸಲು "ಕೇಶಿರಾಜನೂ" ಮತ್ತೊಮ್ಮೆ ಹುಟ್ಟಿಬರಬೇಕೆಂದು ನಮ್ಮ ಕನ್ನಡ ಪಂಡಿತರ ಅಂಬೋಣ.

ಇಂತಹ ಪರಮ ನನಗೇ ಗುರು ಸ್ಥಾನ ಕೊಟ್ಟ-ಅವನ ಬೇಳೆ ಬೇಯಿಸಿಕೊಳ್ಳಲು.

"ಗುರುವೇ" ಎಂಬ ಶಬ್ದ ಕೇಳಿದಂತೆ ಬೆಲೂನಿನಂತೆ ನಾನು ಉಬ್ಬಿ ಪರಮ ಬರೆದಂತೆ ಪಾರೂ ಉರುಫ್ ಪಾರ್ವತಿಗೆ ಪ್ರೇಮ ಪತ್ರ ಬರೆದು ಕೊಡುತ್ತಿದ್ದೆ. ಈ ಪಾತಕಿ ಅದನ್ನು ಕಾಪಿ ಮಾಡುವ ಶ್ರಮವನ್ನು ಪಡದೆ ತನ್ನ ರುಜು ಹಾಕಿ ಪಾರೂಗೆ ಕೊಡುತ್ತಿದ್ದ, ಅವಳ ಕಣ್ಣಲ್ಲಿ ಆತ 'ಮಜನೂ'.

ಪಾಪಿ ನನಗಾದರೂ ಆಗ ಬುದ್ಧಿ ಬೇಡವೆ? ನಾನು ಒಳಗೇ ಪ್ರೀತಿಸುತ್ತಿದ್ದ ನಳಿನಿಯ ಬಗ್ಗೆ ಹೇಳಿದೆ. ಅದೂ ಇವನಿಗೆ ಮಾತ್ರ.

"ಅದಕ್ಯಾಕೆ ಯೋಚ್ನೆ ಮಾಡ್ತಿ ಗುರುವೆ, ನಾನು ರೆಡಿ ಮಾಡ್ತೀನಿ" ಎಂದಿದ್ದ. ಪಾರೂಗಾಗಿ ಅವನಿಗೆ ಬರೆದುಕೊಟ್ಟ ಒಂದು "Love Letter"ಗೆ ನನ್ನ ಹೆಸರು ಗುಮುಕಿ ನಳಿನಿಗೆ ಕೊಟ್ಟಿದ್ದ.

ನಳಿನಿಯಿಂದ - ಪ್ರಿನ್ಸಿಪಾಲರಿಗೆ, ಅಲ್ಲಿಂದ ನಮ್ಮಪ್ಪನಿಗೆ ಇದೆಲ್ಲ ತಿಳಿದು ರಾದ್ಧಾಂತವಾಗಿ ಅವರೆಲ್ಲಾ ತಿಂಗಳುಗಟ್ಟಲೇ ಉಗಿದಿದ್ದರು. ವಿದ್ಯಾಭ್ಯಾಸಕ್ಕೆ ಕೃಷ್ಣಾರ್ಪಣ. ಪಾರು ಹಠ ಹಿಡಿದು ಪರಮನನ್ನೇನೋ ಮದುವೆಯಾದಳು. ಆನಂತರ ಇವನ ಬೃಹಸ್ಪತಿ ಬುದ್ಧಿನೋಡಿ ಅವಳು, ಅವಳಪ್ಪ, ಅವರಮ್ಮ ಎಲ್ಲರೂ ನನ್ನನ್ನು ಮನೆಹಾಳನೆಂದು ಬಯ್ದರೂ, ಅವರೆಲ್ಲಾ ಅನ್ಯೋನ್ಯವಾಗಿದ್ದರು.

"ಅವ್ಳು ಹೀಗೆ ಮಾಡ್ಬೋದಾ ಗುರೂ" ಎಂದು ಪರಮ ಪೇಚಾಡಿದ್ದರೂ ನನಗೆ ಮೈಮೇಲೆ ಮುಳ್ಳುಗಳೆದ್ದಿತ್ತು. ಇದೆಲ್ಲಾ ನೆನಪಿಗೆ ಬಂದು ನಡುಗಿದೆ.

"ಬೇಡಾ ಪರಮ, ಯಾವತ್ತಾದ್ರೂ ನಿಧಾನವಾಗಿ ನಾನೇ ಹೇಳ್ತೀನಿ" ತಡೆದೆ.

"ಆಯ್ತು ಗುರುವೇ! ಆದ್ರೆ ಈಗ ನನ್ನ ವಿಷ್ಯ"

"ಆಯ್ತಪ್ಪ ನಿನ್ನ ಕೆಲ್ಸ ಏನು ಹೇಳು?"

"ಏನಿಲ್ಲಾ ಗುರುವೇ, ಇಷ್ಟಕ್ಕೂ ಪಂಚೆ, ಟವಲ್ಲು, ಚೆಡ್ಡಿ ಬಟ್ಟೆ, ಬನೀನು ತೊಗೋಬೇಕು"

ಚೆಡ್ಡಿ ಜೇಬಿನಿಂದ ಹಣದ ಕಂತೆ ತೆಗೆದ.

"ಅಷ್ಟಕ್ಕೆ ಯಾಕೋ ಇಷ್ಟು ಹಣ?"

"ಅದೇ ಗುರುವೇ, ಊರಲ್ಲಿ ಈ ವಾರ ಬಟ್ಟೆ ಅಂಗಡಿ ತೆಗೆಯೋಣಾಂತ"

"ಬರೀ ಟವಲ್ಲು, ಪಂಚೆ, ಬನೀನು, ಚೆಡ್ಡಿ ಬಟ್ಟೆ ಸಾಕೆ? ಬೇರೆ ಜವಳಿ ಬೇಡ್ವೆ?"

"ಇದೇನೂ ಪರ್ಮನೆಂಟಾಗಲ್ಲ, ಬರೀ ಹಬ್ಬದ ವರ್ಗೆ ಮಾತ್ರ"

"ಹೌದೋ ಪರಮ, ಇದು ಎಷ್ಟನೇ ಅವತಾರ ನಿಂದು?"

"ಯಾರು ಲೆಕ್ಕ ಇಟ್ಟವ್ರೆ, ಗುರುವೆ?"

ಆದರೂ ಆಶ್ಚರ್ಯ, ಆ ಸಣ್ಣ ಹಳ್ಳಿಗೆ ಇಷ್ಟೊಂದು ರೂಪಾಯಿ ಜವಳಿ ಯಾಕೆ? ಯಾವ ಹಬ್ಬಕ್ಕೆ? ತಲೆ ಕೆಡುತ್ತಿತ್ತು. ಪರಮನಿಂದ ಬಿಡುಗಡೆ ಹೊಂದಲು ಮೊದಲು ಅವನ ಕೆಲಸ ಮಾಡಿಕೊಡಬೇಕೆಂದು ಎದ್ದು ಹೊರಟೆ.

ಚಿಕ್ಕಪೇಟೆ, ಬಳೇಪೇಟೆ, ಆ ಪೇಟೆ ಈ ಪೇಟೆ ಎಲ್ಲಾ ಸುತ್ತಿ ಸಾಧ್ಯವಾದಷ್ಟು ಚೌಕಾಸಿ ಮಾಡಿ ವ್ಯಾಪಾರ ಮುಗಿಸಿದೆ. ಬರೀ ಪಂಚೆ ಟವಲ್ಲು, ಬನೀನು, ಚೆಡ್ಡಿ ಬಟ್ಟೆ ಮಾತ್ರ. ಎಲ್ಲವನ್ನು ಪ್ಯಾಕ್ ಮಾಡಿ ಮನೆಗೆ ತಂದು ಎಸೆದಿದ್ದಾಯ್ತು. ಪರಮನಿಗಿದ್ದುದು ಸಾಯಂಕಾಲದ ಬಸ್ಸು.

ಊಟಕ್ಕೆ ಕೂತಾಗ ಜಯ ಮೆಲ್ಲಗೆ ಮಾತು ತೆಗೆದಳು.

"ಇಷ್ಟೆಲ್ಲಾ ಬಟ್ಟೆ ಯಾವ ಹಬ್ಬಕ್ಕೆ?"

"ಏ... ಗೌರಿಗಣೇಶ ಬಂತಲ್ಲ ಅತ್ಗೆ"

ಅದಕ್ಕೂ, ಇವನು ಹೊತ್ತುತಂದಿರುವ ಪಂಚೆ, ಟವಲ್ಲಿಗೂ ಎತ್ತಣಿಂದೆತ್ತ ಸಂಬಂಧ?

"ಪರಮ, ಅದೇನು ಸರ್ಯಾಗಿ ಬಿಡ್ಸಿ ಹೇಳಪ್ಪ"

"ನೋಡು ಗುರುವೇ" ಎಲೆ ಸಮೇತ ಮತ್ತಷ್ಟು ಪಕ್ಕಕ್ಕೆ ಬಂದ.

"ಒಂದು ಹೊಸಾ ಪ್ಲಾನು ಹಾಕಿದ್ದೀನಿ, ಅದೇನಾದ್ರೂ ಸರಿಹೋದ್ರೆ ಮುಂದಿನ್ವಾರ ಬಟ್ಟೆಗೆ ಮತ್ತೆ ಬರ್ತೀನಿ"

ನಾನು, ಜಯ ಒಬ್ಬರನ್ನೊಬ್ಬರು ನೋಡಿಕೊಂಡೆವು, ಯಾವುದೂ ನಮ್ಮಿಬ್ಬರ ಸಣ್ಣ ಬುರುಡೆಗೆ ಅರ್ಥವಾಗಲಿಲ್ಲ.

"ಯಾಕೆ ಗುರುವೆ?" ನಕ್ಕ ಪರಮ ವಿವರಿಸಿದ.

ಮೊದಲೇ ಹೇಳಿದೆನಲ್ಲಾ, ಪರಮನದು ಪರಮ ಚಾಂಡಾಲ ತಲೆ, ಅವನ ಪ್ಲಾನ್ ಇದು :

ಹೋದ ವರ್ಷ ಹಬ್ಬಿತ್ತಲ್ಲ ಕಥೆ, ಅದೇ ಗೌರಿದೇವಿ ಚಟ್ಟದ ಮೇಲೆ ಬರ್ತಾಳೆ, ಅವಳ ಹಾಗೂ ತಮ್ಮ ತಮ್ಮ ಹೆಣ್ಣು ಮಕ್ಕಳ ಮುತ್ತೈದೆ ಭಾಗ್ಯಕ್ಕಾಗಿ ತವರಿನವರು ಹೆಣ್ಣು ಮಕ್ಕಳಿಗೆ ಸೀರೆಯುಡಿಸಬೇಕೆಂಬ ಕಥೆ. ಸೀರೆ ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರವಾದದ್ದು, ತನ್ನೂರಿನವರೂ ಸೀರೆಗಾಗಿ ದೂರದೂರಿಗೆ ಹೋಗಿದ್ದು - ಎಲ್ಲಾ ಪರಮನ ತಲೆಯಲ್ಲಿತ್ತು.

ತಾನೂ ಹೀಗೇ ಏನಾದರೂ ಮಾಡಿ ಹಣ ಮಾಡುವ ಯೋಚನೆ ಮಾಡಿದ, ದಿನವೆಲ್ಲಾ ಯೋಚಿಸಿದ. ಅವನ ತಲೆಗೆ ಬಂದದ್ದು ನಮಗ್ಯಾರಿಗೂ ಬರದಿದ್ದುದೇ ಆಶ್ಚರ್ಯ.

ಹೇಗಿದ್ದರೂ ಮತ್ತೆ ಗೌರಿಗಣೇಶ ಬಂದಿದೆ. ಈ ವರ್ಷ ಎಲ್ಲೆಲ್ಲೂ ಪ್ರಳಯದ ಮಾತು ಭಯಂಕರವಾಗಿ ಹಬ್ಬಿದ್ದು ಗೊತ್ತು. ಇದನ್ನೇ ಕ್ಯಾಷ್ ಮಾಡಿಕೊಳ್ಳಲು ತಯಾರಾದ. ನಮಗೆ ಗೊತ್ತಿರುವಂತೆ ರುದ್ರ ಪ್ರಳಯ ದೇವತೆ. ಅವನನ್ನು ಶಾಂತ ಮಾಡಿದರೆ ಪ್ರಳಯ ಸಂಭವಿಸದು. ಜೊತೆಗೆ ಮಡದಿ ಗೌರಿಯ ಶಿಫಾರಸ್ಸನ್ನು ಮಾಡಿಸಿದರೆ? ಎಂದೆಲ್ಲಾ ಕಥೆ ಕಟ್ಟಿ, ಈ ಗೌರಿ ಹಬ್ಬದಲ್ಲಿ ಅಳಿಯಂದಿರಿಗೆ - ಹೊಸಬರಲ್ಲ ಸ್ವಾಮಿ, ಹಳಬರು, ಉಡುಗೊರೆ ಕೊಡುವಂತೆ ಮಾಡಿ ಶಿವನನ್ನು ಬುಟ್ಟಿಗೆ ಹಾಕಿಕೊಳ್ಳುವುದು. ಹೇಗಿದ್ದರೂ ಶಿವ - ನಮ್ಮ ಹಿಂದೂಗಳ ಆರಾಧ್ಯದೈವ.

"ಅಲ್ಲಯ್ಯ ಜನ ಇದ್ನ ನಂಬ್ತಾರ?"

"ಅಯ್ಯೋ ಗುರುವೇ, ತಿರುಪತೀಲಿ ನಾಮ ಹಾಕಿಸ್ಕೊಳ್ಳೋರಿಗೆ ಬರವೆ?" ಮುಂದುವರಿದ.

"ಮೊದ್ಲು ನನ್ನ ತಂಗೀರ ಗಂಡಂದಿರಿಂದ್ಲೆ ಶುರುಮಾಡ್ತೀನಿ. ಈ ಕತೇನ ಸೊಗಸಾಗಿ, ಕನಸಾಯ್ತೂಂತ ಹೇಳಿದ್ರೆ ಸಾಕು, ಅವೇ ಊರೂರ್ಗೆ ಪುಕ್ಸಟ್ಟೆ ಪ್ರಚಾರ ಮಾಡ್ತವೆ."

ಭಲೇ ಎನ್ನುವಂತಾಯ್ತು ಪರಮನ ಮನೆಹಾಳು ಬುದ್ಧಿಗೆ. ನನ್ನ ಬಾಯಿ ಮುಚ್ಚಿಸಿದ್ದ. ಅದೇ ಹಳೇ ಬ್ಲಾಕ್ ಮೇಲ್ ತಂತ್ರ. ನಾನು ಯಾರಿಗೂ ಹೇಳಲಾಗಲಿಲ್ಲ.

ಮುಂದಿನ ನಾಟಕ ನೋಡಲು ಗೌರಿ-ಗಣೇಶನ ಹಬ್ಬದವರ್ಗೂ ಕಾಯ್ಬೇಕು. ಒಂದು ವೇಳೆ ನಿಮ್ಮ-ನಿಮ್ಮ ಅತ್ತೆಮಾವಂದ್ರು ಒಂದು ಸೆಟ್ ಬಟ್ಟೆ - ಅದೇ ಪಂಚೆ, ಟವಲ್ಲು, ಬನೀನು, ಚೆಡ್ಡಿ ಬಟ್ಟೆ ಕೊಟ್ರೆ ಬಾಯಿ ಮುಚ್ಚಿ ತಗೊಳ್ಳಿ, ಹಳೇ ಅಳಿಯಂದಿರನ್ನ ಕೇಳೋರು ಯಾರು?

ಈ ಕಥೇನ ಬಾಯಿ ಬಿಟ್ರೆ ಕೆಟ್ರಿ. ಕಾಲ ಬದಲಾಯ್ತಿದೆ. ಅತ್ತೆಗೊಂದು ಕಾಲ, ಅಳಿಯನಿಗೊಂದು ಕಾಲ, ಅದೂ ಪರಮನಂತಹವರಿಂದ.

ಪರಮನ ಬುದ್ಧಿ ಅರ್ಥವಾಯ್ತೆ? ನಾಮ ಹಾಕಿಸಿಕೊಳ್ಳೋರು "ಕ್ಯೂ"ನಲ್ಲಿ ನಿಂತಿರುವಾಗ ಪರಮನಂತಹವರಿಗೆ ಆಯಾಸವೆಲ್ಲಿಯದು ಅಲ್ವೆ?


■ ಡಾ. ಹೆಚ್.ಎಸ್. ವೆಂಕಟೇಶ್

ಅಮೇರಿಕಾ ದೇಶದ ಕ್ಯಾಲಿಫೋರ್ನಿಯಾದ ಬರ್ಲ್ಲೆಯಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜಿನಲ್ಲಿ ಶಿಖರ ನಿಷ್ಪತ್ತಿ ಕೇಂದ್ರ (Peak Performance Centre) ಎಂಬ ಸಂಸ್ಥೆ ಇದೆ. ಅಲ್ಲಿ ಪ್ರತಿಯೊಂದು ವೃತ್ತಿಯಲ್ಲಿ ಎದ್ದು ಕಾಣುವ ಸಾಧಕರನ್ನು ಗುರುತಿಸಿ ಒಟ್ಟಿಗೆ 1500 ವ್ಯಕ್ತಿಗಳ ಅಧ್ಯಯನ ಮಾಡಲಾಯಿತು. ಆ ಅಧ್ಯಯನದ ಫಲಶೃತಿ ಎಂದರೆ ಎಲ್ಲ ಸಾಧಕರಲ್ಲಿ ಹಲವಾರು ಸರ್ವೇ ಸಾಮಾನ್ಯ ಸಂಲಕ್ಷಣ (trait)ಗಳಿವೆ. ಅವೇನೂ ಜನ್ಮಜಾತ ಅಲ್ಲ. ಯಾರಾದರೂ ಅವುಗಳನ್ನು ಕಲಿತುಕೊಂಡು ಕಾರ್ಯಾನ್ವಿತರಾಗಬಹುದು.

ಶಿಖರ ಸಾಧನೆಯ ಸಪ್ತ ರಹಸ್ಯಗಳು

ನಾವು ಅನೇಕ ಸಲ ಕಂಡಿದ್ದೇವೆ. ಸರಿಸುಮಾರಾಗಿ ಒಂದೇ ಮಟ್ಟದ ಬೌದ್ಧಿಕ, ಮಾನಸಿಕ ಹಾಗೂ ಸಾಮಾಜಿಕ ಹಿನ್ನೆಲೆಯುಳ್ಳ ಗೆಳೆಯರಿಬ್ಬರು ಒಂದೇ ಗುರಿ ಇಟ್ಟುಕೊಂಡು ತಮ್ಮ ಕೆರಿಯರ್‌ಗಳನ್ನು ಶುರುಮಾಡುತ್ತಾರೆ. ನಿಗದಿತ ಕಾಲಾವಧಿಯಲ್ಲೇ ಒಬ್ಬ ತನ್ನ ಗುರಿಯ ಶಿಖರದ ಸನಿಹದಲ್ಲಿದ್ದರೆ, ಇನ್ನೊಬ್ಬ ಅಲ್ಲೋ, ಎಲ್ಲೋ, ಮಧ್ಯದಲ್ಲಿ ಸ್ಥಿರವಾಗಿ ಉಳಿದುಬಿಟ್ಟಿರುತ್ತಾನೆ. ಒಬ್ಬ ಇನ್ನೊಬ್ಬನಿಗಿಂತ ಅತಿ ಎತ್ತರದ ಸಾಧನೆಯನ್ನು ಹೇಗೆ ಮಾಡಿದ? ಅದಕ್ಕೆ ಕಾರಣ ಭಾಗ್ಯದ ಬಲವಾಗಲಿ, ಅವನು ಪಡೆದ ಸಂಬಂಧ (Connection)ಗಳ ಎಳೆದಾಟವಾಗಲಿ, ಇಲ್ಲವೆ ಕಾರ್ಯದಲ್ಲಿಯ ಅರ್ಪಣ ಭಾವವಾಗಲಿ ಅಲ್ಲ. ಅವರಿಬ್ಬರಲ್ಲಿಯ ಭೇದವೆಂದರೆ ಒಬ್ಬ ಶಿಖರ ಸಾಧಕನಾಗಿದ್ದ, ಇನ್ನೊಬ್ಬ ಅದಾಗಿರಲಿಲ್ಲ.

ಅಮೇರಿಕಾ ದೇಶದ ಕ್ಯಾಲಿಫೋರ್ನಿಯಾದ ಬರ್ಲ್ಲೆಯಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜಿನಲ್ಲಿ ಶಿಖರ ನಿಷ್ಪತ್ತಿ



ಕೇಂದ್ರ (Peak Performance Centre) ಎಂಬ ಸಂಸ್ಥೆ ಇದೆ. ಅಲ್ಲಿ ಪ್ರತಿಯೊಂದು ವೃತ್ತಿಯಲ್ಲಿ ಎದ್ದು ಕಾಣುವ ಸಾಧಕರನ್ನು ಗುರುತಿಸಿ ಒಟ್ಟಿಗೆ 1500 ವ್ಯಕ್ತಿಗಳ ಅಧ್ಯಯನ ಮಾಡಲಾಯಿತು. ಆ ಅಧ್ಯಯನದ ಫಲಶೃತಿ ಎಂದರೆ ಎಲ್ಲ ಸಾಧಕರಲ್ಲಿ ಹಲವಾರು ಸರ್ವೇ ಸಾಮಾನ್ಯ ಸಂಲಕ್ಷಣ (trait)ಗಳಿವೆ. ಅವೇನೂ ಜನ್ಮಜಾತ ಅಲ್ಲ. ಯಾರಾದರೂ ಅವುಗಳನ್ನು ಕಲಿತುಕೊಂಡು ಕಾರ್ಯಾನ್ವಿತರಾಗಬಹುದು.

ಅಂದಾಕ್ಷಣಕ್ಕೆ ಸಿತಾರ ನುಡಿಸಿದ ಪ್ರತಿಯೊಬ್ಬ ರವಿಶಂಕರ ಆಗುತ್ತಾನೆ, ಟೆನಿಸ್ ಆಡಿದ ಪ್ರತಿಯೊಬ್ಬ ಬೋರ್ಗ್ ಆಗುತ್ತಾನೆ, ಕಂಪನಿ ಶುರುಮಾಡಿದ ಪ್ರತಿಯೊಬ್ಬ ಅಂಬಾನಿ ಆಗುತ್ತಾನೆ ಎಂದಲ್ಲ. ಅದರ ಅರ್ಥವೇನೆಂದರೆ ನಮ್ಮಲ್ಲಿರುವ ದೈವದತ್ತ ಕೊಡುಗೆಗಳನ್ನು ಹೆಚ್ಚು ಹೆಚ್ಚು ಮಾಡುವುದನ್ನು ಪ್ರತಿಯೊಬ್ಬನೂ ಕಲಿಯಲು ಸಾಧ್ಯವಿದೆ. ಅವುಗಳನ್ನು ಅಂತರ್ಗತ ಮಾಡಿಕೊಂಡು ಮುಂದುವರಿಯಲು ಶಕ್ಯವಿದೆ. ಮೇಲೆ ಹೇಳಲಾದ ಸಂಶೋಧನೆಯನ್ನು ಆಧರಿಸಿ ಶಿಖರ ಸಾಧನೆಯತ್ತ ಸಾಗಲು 'ಸಪ್ತಪದಿ' ಗುರುತಿಸಲಾಗಿದೆ.

ಅಂದದ ಬಾಳನ್ನು ಅನುಸರಿಸುವುದು

1 ಉಚ್ಚ ಸಾಧಕರು ಅನಿವಾರ್ಯವಾಗಿ ಕಠಿಣ-ಪರಿಶ್ರಮಿಗಳು, ಒಂದು ಬಗೆಯ ಗೀಳು ಹಿಡಿದ ಜನರು, ತಮ್ಮ ಕಾರ್ಯಭಾರವನ್ನು ಮನೆಗೆ ತಂದು ಮಲಗುವವರೆಗೆ ಅದರಲ್ಲಿಯೇ ತೊಡಗಿರುತ್ತಾರೆ ಎಂಬ ಮಾತು ಅನೇಕ ಸಲ ಕೇಳಿ ಬರುತ್ತದೆ. ಮೇಲೆ ಉಲ್ಲೇಖಿಸಿದ ಸಂಶೋಧನೆಯ ಪ್ರಕಾರ, ಈ ಮಾತು ಸತ್ಯವಲ್ಲ. ಮೇಲೆ ವಿವರಿಸಿದ ಪ್ರಕಾರದ ಜನರು ಶಿಖರವನ್ನು ಬೇಗನೆ ತಲುಪುವ ಸಾಧ್ಯತೆ ಇದ್ದರೂ ಸಹ ಅವರು ಸಮತಲದಲ್ಲಿಯೇ ಉಳಿಯುವ ಇಲ್ಲವೆ ಕೆಳಪೊರೆಯಲ್ಲಿ ಇರಬಹುದಾದ ಪ್ರಸಂಗಗಳು ಅನೇಕ. ಅವರು ಕೇವಲ ಕೆಲಸದ ವ್ಯಸನಿಗಳಾಗಿ ಉಳಿದು ಬಿಡುತ್ತಾರೆಯೇ ವಿನಾ ಅದರ ಫಲಿತಾಂಶಗಳ ಬಗ್ಗೆ ಎಳ್ಳಷ್ಟೂ ಆಸಕ್ತಿ ಹೊಂದಿರುವುದಿಲ್ಲ.

ಇದಕ್ಕೆ ಪ್ರತಿಯಾಗಿ, ಉಚ್ಚ ಸಾಧಕರು ಕಠಿಣ ಪರಿಶ್ರಮಕ್ಕೆ ಸಿದ್ಧರಿರುವರು ನಿಜ-ಆದರೆ ಕರಾರುವಾಕ್ಕಾದ ಮಿತಿಗಳಿಗೆ ಒಳಪಟ್ಟು, ಅವರಿಗೆ ಕೆಲಸವೇ ಸರ್ವಸ್ವ ಆಗಿರುವುದಿಲ್ಲ. ವಿಶ್ರಾಂತಿ ಪಡೆಯುವುದು ಹೇಗೆ ಎಂಬುದು ಅವರಿಗೆ ತಿಳಿದಿರುತ್ತದೆ. ತಮ್ಮ ಕೆಲಸವನ್ನು ಕಛೇರಿಯಲ್ಲಿಯೇ ಉಳಿಸಿ ಹಿಂದಿರುಗುತ್ತಾರೆ. ಸ್ನೇಹಿತರನ್ನು ಹಾಗೂ ಕೌಟುಂಬಿಕ ಜೀವನವನ್ನು ಅಮೂಲ್ಯವೆಂದು ಅವರು ಭಾವಿಸುವರು. ಹಾಗೂ ತಮ್ಮ ಮಕ್ಕಳು, ಕುಟುಂಬ ಹಾಗೂ ಆತ್ಮೀಯರೊಂದಿಗೆ ಆರೋಗ್ಯಕರ ಪ್ರಮಾಣದ ಸಮಯವನ್ನು ಕಳೆಯುತ್ತಾರೆ, ಸುಖ-ದುಃಖಗಳಲ್ಲಿ ಬೆರೆಯುತ್ತಾರೆ.

ಕೆರಿಯರ್‌ನ್ನು ಆರಿಸಿಕೊಳ್ಳುವುದು

2 ತಾನು ಇಷ್ಟ ಪಡುವ ಕೆಲಸ ಪ್ರತಿಯೊಬ್ಬನಿಗೂ ದೊರೆಯದು, ನಿಜ. ಆದರೆ ತನ್ನ ಮನೋಧರ್ಮಕ್ಕೆ ಒಗ್ಗುವ ಕೆಲಸವನ್ನು ಪಡೆಯುವುದು ದುಸ್ತರವೇನಲ್ಲ. ತಾನು ನಿಜವಾಗಿ ಮೆಚ್ಚುವ ಕೆಲಸವನ್ನು ಮಾಡುವಲ್ಲಿ ಲಭಿಸುವ ಆಂತರಿಕ ತೃಪ್ತಿಗೆ ಮಹತ್ವ ಇರುತ್ತದೆಯೇ ವಿನಾ ಪದೋನ್ನತಿ, ಸಂಬಳದಲ್ಲಿ ಹೆಚ್ಚಳ, ಅಧಿಕಾರ ಇತ್ಯಾದಿ ಬಾಹ್ಯ ಪ್ರತಿಫಲಗಳಿಗಲ್ಲ. ಆದರೆ ಕೊನೆಯಲ್ಲಿ ಅನೇಕ ಸಲ ಈ ಎರಡೂ ಪ್ರಕಾರದ ಪ್ರತಿಫಲಗಳು ಅವರಿಗೆ ಲಭಿಸುತ್ತವೆ. ಯಾಕೆಂದರೆ, ತಾವು ಮಾಡುವ ಕೆಲಸದಲ್ಲಿ ಅವರಿಗೆ ಸಂತೋಷ ಇರುತ್ತದೆ. ಹೀಗಾಗಿ, ಅವರ ಕೆಲಸವು ಅಧಿಕವಾಗಿ ಚೆನ್ನಾಗಿ ಇರುವಂತೆ ಅದಕ್ಕೆ ದೊರೆಯುವ ಪ್ರತಿಫಲಗಳೂ ಸಹ ಅಧಿಕವಾಗಿರುತ್ತವೆ.

ಪೂರ್ವಾಭಿನಯ ಮಾಡುವುದು

3 ನಿಮಗೆ ಎದುರಾಗಿರುವ ಕಾರ್ಯಭಾರವು, ನಿರ್ದೇಶಕ ಮಂಡಳಿಯ ಸಭೆ ಆಗಿರಬಹುದು, ಇಲ್ಲವೆ ಸಾರ್ವಜನಿಕರನ್ನು ಎದುರಿಸುವುದಾಗಿರಬಹುದು, ಇಲ್ಲವೆ ಮಹತ್ವದ ಟೆನಿಸ್ ಪಂದ್ಯ ಆಗಿರಬಹುದು. ಅಂಥ ಯಾವುದೇ ಕಠಿಣ ಅಥವಾ ಮಹತ್ವದ ಸನ್ನಿವೇಶವನ್ನು ಉಚ್ಚ ಸಾಧಕರು ತಮ್ಮ ಐಚ್ಛಿಕ ಕ್ರಿಯೆಗಳ ಮೂಲಕ ತಮ್ಮ ಮನಸ್ಸಿನಲ್ಲಿ ಮೇಲಿಂದ ಮೇಲೆ ಸುಳಿಸುತ್ತಾರೆ. ಒಳ್ಳೆಯ ಆಟಗಾರರು ತಾವು ಎದುರಿಸಲಿರುವ ಪಂದ್ಯದಲ್ಲಿ ತಾವು ನೀಡಲಿರುವ ಎಸೆತ, ಹೊಡೆತ, ಅವುಗಳ ಇತಿಮಿತಿಗಳನ್ನು ಮಾನಸಿಕವಾಗಿ ಆಲೋಚಿಸಿ ಪೂರ್ವಾಭಿನಯ ಮಾಡಿ ನಿಜವಾದ ಸ್ಪರ್ಧೆಗೆ ಸಿದ್ಧರಾಗುತ್ತಾರೆ.

ಬದುಕಿನ ಮಹತ್ವದ ಘಟನೆಯೊಂದರ ಬಗ್ಗೆ ಎಲ್ಲರೂ ಹಗಲುಗನಸು ಕಾಣುತ್ತಾರೆ. ಆದರೆ, ಆ ಹಗಲುಗನಸು ಹಾಗೂ ಆ ಘಟನೆಯ ಪೂರ್ವಾಭಿನಯ ಮಾಡುವುದು-ಇವುಗಳಲ್ಲಿ ಮಹದಂತರ ಇರುತ್ತದೆ.

ಫಲಿತಾಂಶಗಳನ್ನು ಹುಡುಕಬೇಕು

4 ಅನೇಕ ಮಹತ್ವಾಕಾಂಕ್ಷಿ ಹಾಗೂ ಕಠಿಣ ಪರಿಶ್ರಮಿ ವ್ಯಕ್ತಿಗಳು ಪರಿಪೂರ್ಣತೆಯ ಗುಂಗಿನಲ್ಲಿ ಎಷ್ಟು ತೊಡಗಿಸಿಕೊಂಡಿರುತ್ತಾರೆಂದರೆ ಅವರು ಬಹಳ ಕಡಿಮೆ ಕೆಲಸ ಮಾಡಿ ತೋರಿಸುತ್ತಾರೆ. ಪರಿಪೂರ್ಣತೆಯನ್ನು ಪಡೆಯುವುದು ಉತ್ಕೃಷ್ಟ ನಿಜ. ಆದರೆ, ಅದಕ್ಕೆ ತಗಲುವ ಸಮಯ, ಕೊನೆಯಿಲ್ಲದೆ ಕ್ಷಣ ಕ್ಷಣದ ಸುಧಾರಣೆಯನ್ನು ಮಾಡುವ ವ್ಯವಧಾನ, ಇವುಗಳಿಗೆ ದೈನಂದಿನ ಬದುಕಿನ ರಭಸದ ಪೈಪೋಟಿಯಲ್ಲಿ ಅವಕಾಶ ತೀರ ಪರಿಮಿತ. ಉಚ್ಚ ಸಾಧಕರು ಪರಿಪೂರ್ಣತೆಯ ಕಡ್ಡಾಯದಿಂದ ಮುಕ್ತರು. ಅಂತೆಯೇ ಅವರು ತಮ್ಮ ಗುರಿ ಸಾಧಿಸುವಲ್ಲಿ ಸದಾ ಮುಂದೆ ಇರುತ್ತಾರೆ. ತಾವು ಮಾಡಿದ ತಪ್ಪುಗಳನ್ನು ಅವರು ವಿಫಲತೆ ಎಂದು ಭಾವಿಸುವುದಿಲ್ಲ. ಅದಕ್ಕೆ ಪ್ರತಿಯಾಗಿ, ಈ ತಪ್ಪುಗಳಿಂದ ಪಾಠವನ್ನು ಕಲಿಯುತ್ತಾರೆ. ಅದರಿಂದಾಗಿ, ಮುಂದಿನ ಸಲ ಅದಕ್ಕೂ ಚೆನ್ನಾಗಿ ಮಾಡಲು ಶಕ್ಯವಾಗುತ್ತದೆ.

ಆಪತ್ತಿಗೆ ಸಿದ್ಧವಾಗಿರುವುದು

5 ಅಧಿಕ ಜನರು ಸುಖ ವಲಯದಲ್ಲಿ ಇರುತ್ತಾರೆ, ಭದ್ರತೆಯನ್ನು ಆಯ್ದುಕೊಳ್ಳುತ್ತಾರೆ. ಜೀವನದಲ್ಲಿ ಅವಕಾಶಗಳನ್ನು ಹಾಗೂ ಅವು ಒಡ್ಡುವ ಆಪತ್ತುಗಳನ್ನು ತೆಗೆದುಕೊಳ್ಳುವುದರ ಬದಲಾಗಿ ಭದ್ರತೆಯನ್ನೇ, ಅದು ಮಧ್ಯಮ ಹಂತದ ಗುಣಮಟ್ಟದ್ದಾಗಿರಲಿ, ಇಲ್ಲವೇ ಬೇಜಾರೆ ಆಗಿರಲಿ, ಸ್ವೀಕರಿಸುತ್ತಾರೆ. ಹೆಚ್ಚಿನ ಹೊಣೆ ಹೊರುವುದು ಹಾಗೂ ಅದರ ಜೊತೆಯೇ ಬರುವ ಆಪತ್ತನ್ನು ಆಹ್ವಾನಿಸುವುದು ಇವುಗಳಿಗೆ ತಕ್ಕ ಮನೋಭಾವನ್ನು ಸಿದ್ಧ ಪಡಿಸಿಕೊಳ್ಳುತ್ತಿದ್ದಂತೆ, ಅಂಥ ಪರಿಸ್ಥಿತಿಗೆ ತಾನು ಒಗ್ಗಬಲ್ಲನೇ ಎಂದು ಸಂಶಯ ಪಡುವುದು-ಈ ಗೊಂದಲದಿಂದಾಗಿ ಬಹಳಷ್ಟು ಜನರು ಮಧ್ಯಮ ಹಂತದ ಗುಣಮಟ್ಟ (mediocrity)ದಲ್ಲಿ ಉಳಿಯುತ್ತಾರೆ. ಅವರು ಪುಕ್ಕರಲ್ಲ, ಆದರೆ ತಾನು ಕೈಗೊಂಡ

ಕಾರ್ಯವಿಫಲವಾದರೆ, ಸಂಭವಿಸುವುದಾದರೂ ಏನು? ಎಂಬುದನ್ನು ವಿಚಾರಿಸಲು ಅವರು ಪ್ರಯತ್ನಿಸುವುದಿಲ್ಲ, ಅಷ್ಟೇ. ಅದಕ್ಕೆ ಪ್ರತಿಯಾಗಿ, ಉಚ್ಚ ಸಾಧಕರು, ಒಂದು ವೇಳೆ ವಾಸ್ತವಿಕವಾಗಿ ತಾವು ಸೋತಿದ್ದರೂ ಸಹ, ಆ ಸನ್ನಿವೇಶದಿಂದ ತಾವು ಹೇಗೆ ಕಾಪಾಡಿಕೊಳ್ಳಬಲ್ಲೆವು, ಪರಿಸ್ಥಿತಿಗೆ ತಾವು ಹೇಗೆ ಹೊಂದಾಣಿಕೆ ಮಾಡಿಕೊಳ್ಳಬಲ್ಲೆವು ಎಂಬುದನ್ನು ಎಚ್ಚರಿಕೆಯಿಂದ ವಿಚಾರಿಸುವುದರಿಂದ, ಆಪತ್ತುಗಳನ್ನು ತೆಗೆದುಕೊಳ್ಳಬಲ್ಲರು. ನಿಕೃಷ್ಟ ಕೇಸಿನ ಸಿನಾರಿಯೋ ರಚಿಸುವ ಮೂಲಕ ವಿವೇಚನೆಯುಳ್ಳ ಆಯ್ಕೆ ಸಾಧ್ಯವಾಗುತ್ತದೆ. ಭಯದಿಂದ ನೀವು ಚಲನರಹಿತರಾದರೆ, ನಿಮಗೆ ಯಾವ ಆಯ್ಕೆಗಳು ಸಿಗಲಾರವು.

ನಿಮ್ಮ ಅಂತಸ್ಥದ ಅಂದಾಜು

6

ತಮಗೆ ತಮ್ಮ ಇತಿಮಿತಿ ತಿಳಿದಿದೆ ಎಂದು ಬಹಳ ಜನರು ಭಾವಿಸುವರು. "ನಮಗೆ ಗೊತ್ತಿದೆ" ಎಂಬುದರ ಬಹುಭಾಗವು ತಿಳುವಳಿಕೆಯೇ ಅಲ್ಲ. ಅದು ದೋಷಯುಕ್ತ ನಂಬಿಕೆ; ಈ ಸ್ವಯಂನ್ನು ಸೀಮಿತಗೊಳಿಸುವ ನಂಬಿಕೆಯೇ ಉಚ್ಚ ಮಟ್ಟದ ಸಾಧನೆಗೆ ಅತಿ ದೊಡ್ಡ ತಡೆ ಆಗಿರುವುದು.

ನಾಲ್ಕು ಮಿನಿಟಿನೊಳಗೆ ಒಂದು ಮೈಲು ಓಡುವುದು ಅಸಾಧ್ಯ ಎಂದು ಬಹಳ ದಿನಗಳವರೆಗೆ ನಂಬಲಾಗಿತ್ತು. ಅದಕ್ಕೆ ಶಾಸ್ತ್ರದ ಒಪ್ಪಿಗೆ ಸಹ ಇತ್ತು. ಆದರೆ 1954ರಲ್ಲಿ ರೋಜರ್ ಬಾನಿಸ್ಟರ್, ನಾಲ್ಕು ಮಿನಿಟಿನ ಬಂಧನವನ್ನು ಮುರಿದ. ಮುಂದೆ ಎರಡು ವರ್ಷಗಳಲ್ಲಿ ಹತ್ತು ಜನ ಆ ದಾಖಲೆಯನ್ನು ಮುಂದುವರಿಸಿದರು.

ಒಬ್ಬ ಮನುಷ್ಯ ಎಷ್ಟು ತೀವ್ರ ಓಡಬಲ್ಲನು? ಒಬ್ಬ ವ್ಯಕ್ತಿ ಎಷ್ಟು ಭಾರವನ್ನು ಎತ್ತಬಲ್ಲನು? ಅಥವಾ ಇನ್ನೊಬ್ಬನು ಒಂದು ಕೆಲಸವನ್ನು ಎಷ್ಟು ಚೆನ್ನಾಗಿ ಮಾಡಬಲ್ಲನು? ಎಂಬುದರ ಬಗ್ಗೆ ಮಿತಿಗಳೇ ಇಲ್ಲ ಎಂಬುದು ಇದರ ಅರ್ಥವಲ್ಲ. ಗಮನಿಸಬೇಕಾದ ಮುಖ್ಯ ಅಂಶವೆಂದರೆ, ನಮಗೆ ನಿಜವಾಗಿ ಸೀಮೆಗಳು ಏನಿವೆ? ಎಂಬ ಸಂಗತಿ ಅಪರೂಪವಾಗಿ ತಿಳಿದಿರುತ್ತದೆ. ಹೀಗಾಗಿ, ನಮ್ಮಲ್ಲಿ ಬಹಳ ಜನರು ಅನೇಕ ಸಲ, ತಮ್ಮ ವೈಯಕ್ತಿಕ ಮಿತಿಗಳನ್ನು, ತಾವು ಯಾವುದನ್ನು ವಾಸ್ತವವಾಗಿ ಸಾಧಿಸಲು ಶಕ್ಯವೋ ಅದಕ್ಕೂ ಕಡಿಮೆಯಾಗಿ ಇಡುತ್ತಾರೆ.

ಅದಕ್ಕೆ ಪ್ರತಿಯಾಗಿ, ಉಚ್ಚ ಸಾಧಕರು ಕೃತ್ರಿಮ ಅಡೆತಡೆಗಳನ್ನು ಕಡೆಗಣಿಸುವಲ್ಲಿ ಹೆಚ್ಚು ಸಮರ್ಥ ಇರುವರು. ಅದರ ಬದಲು ಅವರು ತಮ್ಮ ಮೇಲೆಯೇ-ತಮ್ಮ ಭಾವನೆಗಳು, ತಮ್ಮ ಕಾರ್ಯನಿರ್ವಹಣೆ ಹಾಗೂ ತಮ್ಮ ಪ್ರಯತ್ನದ ಆವೇಗ (momentum) ಇತ್ಯಾದಿಗಳ ಮೇಲೆ -ಏಕಾಗ್ರತೆ ವಹಿಸುತ್ತಾರೆ. ಆದ್ದರಿಂದ, ಶಿಖರ ಮಟ್ಟಗಳನ್ನು ತಲುಪಲು ಅವರು ಹೆಚ್ಚು ಮುಕ್ತರಾಗಿರುತ್ತಾರೆ.

ನಿಮ್ಮೊಂದಿಗೇ ಸ್ಪರ್ಧೆ

7

ಉಚ್ಚ ಸಾಧಕರು, ತಮ್ಮ ಪ್ರತಿಸ್ಪರ್ಧಿಗಳನ್ನು ಸೋಲಿಸುವ ಬದಲು ತಮ್ಮ ಹಿಂದಿನ ಪ್ರಯತ್ನಗಳನ್ನು ಹೆಚ್ಚುಗೊಳಿಸುವ ದಿಶೆಯಲ್ಲಿ ಉದ್ದೇಶಪೂರ್ವಕವಾಗಿ ನಾಭಿಗೂಡಿಸು(focus)ತ್ತಾರೆ. ವಾಸ್ತವದಲ್ಲಿ, ಪ್ರತಿಸ್ಪರ್ಧಿಯ ಅರ್ಹತೆಗಳ ಬಗ್ಗೆ ಪೇಚಾಡುವುದು ಆತ್ಮಘಾತಕವಾಗಿರುತ್ತದೆ.

ಉಚ್ಚ ಸಾಧಕರು ತಮ್ಮ ಸ್ವಂತದ ಮಾನಕ (standard)ಗಳಿಗೆ ಅನುಗುಣವಾಗಿ ಸಾಧ್ಯವಿರುವಷ್ಟು ಉತ್ಕೃಷ್ಟ ಕೆಲಸ ಮಾಡುವುದರಲ್ಲಿ ಆಸಕ್ತಿ ಹೊಂದಿರುವರು. ಆದರಿಂದಾಗಿ ಅವರು ಒಂಟಿಯಾಗಿ ಕೆಲಸ ಮಾಡುವ ಬದಲು ಟೀಮ್ ಆಟಗಾರರನ್ನು ಅನುಸರಿಸುತ್ತಾರೆ. ಕೆಲವು ಸಂಕೀರ್ಣ ಸಮಸ್ಯೆಗಳನ್ನು ಒಂಟಿ ವ್ಯಕ್ತಿಯ ಬದಲು ಗುಂಪುಗಳು ಪರಿಹರಿಸಬಲ್ಲವು ಎಂಬುದು ಅವರಿಗೆ ತಿಳಿದಿರುತ್ತದೆ. ಆದ್ದರಿಂದ, ಕೆಲಸದ ಒಂದು ಭಾಗವನ್ನು ಇತರರು ಮಾಡುವಂತೆ ಅವರು ಆಸಕ್ತರಾಗಿ ಆಗ್ರಹ ಮಾಡುತ್ತಾರೆ. ಒಂಟಿ ವ್ಯಕ್ತಿಗಳು ಎದುರಾಳಿಗಳ ಬಗ್ಗೆ ಅತಿಯಾಗಿ ಆತಂಕಗೊಂಡು, ಮಹತ್ವದ ಕೆಲಸವನ್ನಾಗಲಿ, ಇಲ್ಲವೆ ನಿರ್ಣಯ ಕೈಕೊಳ್ಳುವಂಥ ಕೆಲಸವನ್ನಾಗಲಿ ಅಧಿಕಾರ ನಿಯೋಜನೆ ಮಾಡುವುದಿಲ್ಲ. ಅದರಿಂದಾಗಿ ಅವರ ಕಾರ್ಯ-ನಿರ್ವಹಣೆ ಸೀಮಿತಗೊಳ್ಳುತ್ತದೆ. ಯಾಕೆಂದರೆ ಪ್ರತಿಯೊಂದನ್ನು ಸ್ವಯಂ ತಾನೇ ಮಾಡಬೇಕಾಗುತ್ತದೆ.

ಉಚ್ಚ ಸಾಧಕರ ಕೌಶಲ್ಯಗಳು ಇಂತಿವೆ: ತಮ್ಮ ಹುಟ್ಟು ಸಾಮರ್ಥ್ಯ(talent)ಗಳು ಹೆಚ್ಚು ಪ್ರಕಟವಾಗಲಿ, ಅಂತಸ್ಥವು ಸಂಪೂರ್ಣವಾಗಿ ಹೊರಬರಲಿ ಎಂಬ ಹೆಬ್ಬಯಕೆ ಇದ್ದರೆ ಅವಕಾಶಗಳನ್ನು ಹಿಡಿದುಕೊಂಡು ಉಪಯೋಗಿಸಲು ಕಲಿಯಬೇಕು.

"ಇನ್ನಷ್ಟು ಪರಿಶ್ರಮ ವಹಿಸು", "ಇಲ್ಲವೆ ಇನ್ನಷ್ಟು ಚೆನ್ನಾಗಿ ಯಾಕೆ ಪ್ರಯತ್ನಿಸುತ್ತಿಲ್ಲ" ಎಂದು ನಾವು ಹೇಳುವುದಿಲ್ಲ. ನಿಮ್ಮ ಮನಸ್ಸಿನ ರೂಢಿಗಳನ್ನು ಪರಿವರ್ತಿಸುವ ಹಾಗೂ ಕೆಲವು ಕೌಶಲಗಳನ್ನು ಸ್ವಾಧೀನಪಡಿಸಿಕೊಳ್ಳುವ ಶಕ್ತಿ ನಿಮ್ಮಲ್ಲಿದೆ. ನೀವು ಹಾಗೆ ಮಾಡಲು ಮುಂದುವರಿದರೆ, ನಿಮ್ಮ ನಿರ್ವಹಣೆಗೆ, ನಿಮ್ಮ ಉತ್ಪಾದಕತ್ವ ಹಾಗೂ ನಿಮ್ಮ ಇಡೀ ಜೀವನದ ಗುಣಮಟ್ಟ- ಇವುಗಳನ್ನು ಸುಧಾರಿಸಲು ಸಮರ್ಥರಿರುವಿರಿ, ಶಿಖರ ಸಾಧನೆಯನ್ನು ಪಡೆಯುವಿರಿ-ಇದು ಆ ಸಂಶೋಧನೆಯ ಸಾರ.

■ **ಬಸವರಾಜ ಪುರಾಣಿಕ**

ಉದ್ಯಮಶೀಲರಿಗೆ ಒಂದು ಕೋರ್ಸು

ಸ್ವಯಂ-ಉದ್ಯೋಗವನ್ನು ಕೈಗೊಳ್ಳುತ್ತಿರುವ ಜನರಿಗೆ, ಭಾರತೀಯ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ (Enterpreneurship Development Institute of India) "ಉದ್ಯಮಶೀಲತೆಯಲ್ಲಿ ಮುಕ್ತ ಕಲಿಕೆಯ ಕಾರ್ಯಕ್ರಮ" (Open Learning Programme in Enterpreneurship) ಎಂಬ 11 ತಿಂಗಳಿನ ಅಂಚೆಯ ಕೋರ್ಸನ್ನು ನೀಡುತ್ತಲಿದೆ.

ಪ್ರತಿಯೊಬ್ಬ ವಿದ್ಯಾರ್ಥಿಗೂ ಉದ್ಯಮವೊಂದನ್ನು ಸ್ಥಾಪಿಸುವಲ್ಲಿ ಸಲಹೆ (Counselling) ಒದಗಿಸಲಾಗುತ್ತದೆ. ಹಾಗೂ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವನ್ನು ಪಡೆಯುವಲ್ಲಿ ಪ್ರಯತ್ನಗಳನ್ನು ಸಹ ಮಾಡಲಾಗುತ್ತದೆ. ಪ್ರತಿ ವರ್ಷ ಜನವರಿ, ಏಪ್ರಿಲ್, ಜುಲೈ ಹಾಗೂ ಅಕ್ಟೋಬರ್ ತಿಂಗಳುಗಳಲ್ಲಿ ಪ್ರವೇಶಕ್ಕೆ ಅವಕಾಶವಿದೆ. ಕೋರ್ಸಿನ ಶುಲ್ಕ ರೂ.5000/-. ತಾಂತ್ರಿಕ ಹಾಗೂ ವಿಜ್ಞಾನಗಳ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ರೂ. 2500/- ಶಿಷ್ಯವೇತನವನ್ನು ಕೊಡಲಾಗುತ್ತದೆ. ಪದವೀಧರರು, ಸ್ನಾತಕೋತ್ತರ ಪದವೀಧರರು, ಡಿಪ್ಲೊಮಾ ಪಡೆದವರು ಹಾಗೂ ಪದವಿ ಇಲ್ಲದಿದ್ದರೂ ಮೂರು ವರ್ಷಗಳ ಅನುಭವ ಇರುವವರು ಪ್ರವೇಶಕ್ಕೆ ಅರ್ಹರು.

ವಿವರಗಳಿಗೆ ಸಂಪರ್ಕಿಸುವ ವಿಳಾಸ :

EDII 133, 11ನೇ 'ಎ' ಕ್ರಾಸ್, I ರೋಡ್, 2ನೇ ಘಟ್ಟ, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು - 560 086.

ಪುಟಾಣಿ ಹಿಟ್ಟಿನ ಬರ್ಫಿ

ಬೇಕಾಗುವ ಸಾಮಗ್ರಿಗಳು :



1 ಬಟ್ಟಲು ಸಕ್ಕರೆ, 1 ಬಟ್ಟಲು ಪುಟಾಣಿ ಹಿಟ್ಟು, 1 ಬಟ್ಟಲು ಶೇಂಗಾ ಪುಡಿ, ತುಪ್ಪ, ಏಲಕ್ಕಿಪುಡಿ ಗೋಡಂಬಿ ಚೂರುಗಳು, ಗಸಗಸೆ.

ಮಾಡುವ ವಿಧಾನ:

ಮೊದಲು ಸಕ್ಕರೆ ತೋಯುವಷ್ಟು ನೀರನ್ನು ಹಾಕಿ ಸಕ್ಕರೆ ಪಾಕ ತಯಾರಿಸಿಕೊಳ್ಳಿ. ಆನಂತರ ಕೆಳಗಿಳಿಸಿ. ಪಾಕದಲ್ಲಿ ಪುಟಾಣಿ ಹಿಟ್ಟು ಶೇಂಗಾಪುಡಿ, ಏಲಕ್ಕಿ ಪುಡಿ ಇವುಗಳನ್ನೆಲ್ಲಾ ಒಂದು ಮಾಡಿ ಸರಿಯಾಗಿ ಮಗುಚಿರಿ. ಒಂದು ಅಗಲವಾದ ತಟ್ಟೆಗೆ ತುಪ್ಪವನ್ನು ಸವರಿ ಈಗಾಗಲೇ ತಯಾರಿಸಿದ ಹೂರಣವನ್ನೆಲ್ಲ ತಟ್ಟೆಗೆ ಸುರಿಯಿರಿ. ಸ್ವಲ್ಪ ಆರಿದ ನಂತರ ಕೈಯಿಂದ ತಟ್ಟಿ. ಗೋಡಂಬಿ ಚೂರು ಮತ್ತು ಗಸಗಸೆಯನ್ನು ಸ್ವಲ್ಪ ತುಪ್ಪದಲ್ಲಿ ಹುರಿದು ಮೇಲೆ ತಟ್ಟಿರಿ. ಆನಂತರ ತಮಗೆ ಇಷ್ಟವಾದ ಆಕಾರದಲ್ಲಿ ಕತ್ತರಿಸಿರಿ. ಒಮ್ಮೆ ತಾವು ಮಾಡಿ ರುಚಿ ನೋಡಿರಿ.

– ರಾಜಶ್ರೀ ವಿನಾಯಕ ಗುಮಾಸ್ತೆ, ಕೊಪ್ಪಳ

ದೂದ್ ಫೇಡಾ

ಬೇಕಾಗುವ ಸಾಮಾನು :

1 ಲೀಟರ್ ಶುದ್ಧವಾದ ಹಾಲು, 3 ಟೀ ಸ್ಪೂನ್ ಸಕ್ಕರೆ, ಗೋಡಂಬಿ, 1 ಟೀ ಚಮಚ ಏಲಕ್ಕಿ, ಬೆಣ್ಣೆ ಅಥವಾ ತುಪ್ಪ.



ಮಾಡುವ ವಿಧಾನ :

ಹಾಲು ದಪ್ಪವಾಗಿ ಕೆನೆಗಟ್ಟುವ ತನಕ ಕಲಕಿಸುತ್ತಾ ಕಾಯಿಸಿ. ಆಮೇಲೆ ಬಿಸಿಯಾರಿಸಿ ತಂಪುಮಾಡಿ. ಬಾಣಲೆಯಲ್ಲಿ ಬೆಣ್ಣೆ ಅಥವಾ ತುಪ್ಪ ಕಾಯಿಸಿ ಅದಕ್ಕೆ ಹಾಲಿನ ಕೆನೆಯನ್ನು ಬೆರೆಸಿ. ಈಗ ಅದಕ್ಕೆ ಸಕ್ಕರೆ ಹಾಕಿ ಕಲೆಸಿ. ಇನ್ನೂ ಸ್ವಲ್ಪ ಕಾಲ ಕಲೆಸಿದ ನಂತರ ಕೆಳಗಿಳಿಸಿ. ಆ ಮೇಲೆ ಸಣ್ಣ ಉಂಡೆಗಳನ್ನು ತಯಾರಿಸಿ ಅವುಗಳ ಮೇಲೆ ಏಲಕ್ಕಿ ಹುಡಿಯನ್ನು ಸಿಂಪಡಿಸಿ. ಬಳಿಕ ಅವುಗಳೊಂದೊಂದರ ಮೇಲೆ ಒಂದು ಅಥವಾ 1/2 ಗೋಡಂಬಿಯನ್ನು ಒತ್ತಿ ಅತಿಥಿಗಳಿಗೆ ಕೊಡಿ.

ವೆಜಿಟೇರಿಯನ್ ಕೇಕ್

ಬೇಕಾಗುವ ಸಾಮಾನು :

1 ಕಪ್ ರವೆ, 1 ಕಪ್ ಸಕ್ಕರೆ (ಪೌಡರ್) 1 ಕಪ್ ಮೊಸರು, 1 ಚಿಟಿಕೆ ಸೋಡಾ ಪೌಡರ್, 4 ಟೀ ಚಮಚ ತುಪ್ಪ, 1/2 ಟೀ ಚಮಚ ವೆನಿಲ್ಲಾ, 1. ಟೀ ಚಮಚ ಏಲಕ್ಕಿ ಪುಡಿ, 10-15 ಒಣ ದ್ರಾಕ್ಷಿ ಗೋಡಂಬಿ.

ಮಾಡುವ ವಿಧಾನ :

ರವೆ ಸಕ್ಕರೆ ಮತ್ತು ಮೊಸರು ಇವುಗಳನ್ನು ಒಟ್ಟಿಗೆ ಸೇರಿಸಿ ಚೆನ್ನಾಗಿ ಕಲೆಸಿ, ಅದಕ್ಕೆ ಒಣ ದ್ರಾಕ್ಷಿ, ಗೋಡಂಬಿ ಏಲಕ್ಕಿ ವೆನಿಲ್ಲಾ ಮತ್ತು ಸೋಡಪೌಡರ್ ಇವುಗಳನ್ನು ಸೇರಿಸಿ ಮಿಶ್ರಮಾಡಿ ಚೆನ್ನಾಗಿ ಕಲಕಿರಿ. ಒಂದು ಪಾತ್ರೆಯೊಳಗೆ ತುಪ್ಪವನ್ನು ಹಾಕಿ ಕೇಕಿನ ಮಿಶ್ರಣವನ್ನು ಸುಡು ಒಲೆಯೊಳಗೆ (ಒವೆನ್) ಬೇಯಿಸಿ.

– ಬಿಂದು, ಶ್ರೀನಿವಾಸಪುರ

ಪುದೀನ ಸಾರು

ಬೇಕಾಗುವ ಸಾಮಗ್ರಿಗಳು:

20 ಎಸಳು ಪುದೀನ, 2 ಹಸಿ ಮೆಣಸಿನಕಾಯಿ, ಜೀರಿಗೆ, ಮೆಣಸಿನ ಪುಡಿ, ಬೆಲ್ಲ, ದಾಲ್ಚಿನ್ನಿ, ಉಪ್ಪು.

ಮಾಡುವ ವಿಧಾನ :

ಪುದೀನ ಸೊಪ್ಪನ್ನು ತೊಳೆದು ಸಣ್ಣದಾಗಿ ಹೆಚ್ಚಬೇಕು. ಉಪ್ಪನ್ನು ಬಿಟ್ಟು ಎಲ್ಲಾ ಸಾಮಾನು ಹಾಕಿ ರುಬ್ಬಬೇಕು. ಹೆಚ್ಚಿಟ್ಟ ಸೊಪ್ಪಿಗೆ ನೀರು ಹಾಕಿ ಒಲೆಯ ಮೇಲಿಟ್ಟು ಬೇಯಿಸಬೇಕು. ಬೆಂದ ನಂತರ ರುಬ್ಬಿರುವುದನ್ನು ಹಾಕಿ ಮತ್ತು ರುಚಿಗೆ ಬೇಕಾಗುವಷ್ಟು ಉಪ್ಪು ಹಾಕಿ ಕುದಿಸಬೇಕು. ಕುದಿದ ನಂತರ ತುಪ್ಪದಲ್ಲಿ ಒಗ್ಗರಣೆ ಕೊಡಿ. ಪುದೀನ ಸಾರು ರುಚಿ ನೋಡಿ.

ಮೆಂತೆ ಸೊಪ್ಪಿನ ಸಾರು

ಬೇಕಾಗುವ ಸಾಮಗ್ರಿಗಳು :

ಮೆಂತೆ ಸೊಪ್ಪು, ಕೊತ್ತಂಬರಿ ಸೊಪ್ಪು, ಕರಿಬೇವು, ಹಸಿಮೆಣಸಿನಕಾಯಿ ತೊಗರಿಬೇಳೆ, ಉಪ್ಪು.

ಮಾಡುವ ವಿಧಾನ :

ಬೇಳೆಯನ್ನು ಬೇಯಿಸಿಕೊಳ್ಳಿ, ಸಾಸಿವೆ ಒಗ್ಗರಣೆಯೊಂದಿಗೆ ಮೆಂತೆ ಸೊಪ್ಪನ್ನು ಹುರಿಯಿರಿ. ಬೆಂದಬೇಳೆಗೆ ಕೊತ್ತಂಬರಿ, ಹಸಿಮೆಣ್ಸು, ಕರಿಬೇವು ಹಾಕಿ ಇನ್ನೂ ಕುದಿಯಲು ಬಿಡಿ. ಅದಕ್ಕೆ ಮೆಂತೆ ಸೊಪ್ಪು ಹಾಕಿ ಕುದಿಸಿದ ನಂತರ ಅದಕ್ಕೆ ತುಪ್ಪದ ಒಗ್ಗರಣೆ ಕೊಡಿ.

ಈ ಸಾರು ಕುಡಿಯಲು ಬಲು ರುಚಿ.

– ತಾರಾ .ಎಸ್.ಎನ್., ಸಂಪೇಮನೆ.

ಪಡುವಲ ಬೀಜದ ದೋಸೆ



ಬೇಕಾಗುವ ಸಾಮಗ್ರಿ :

ಒಂದು ಬಟ್ಟಲು ಅಕ್ಕಿ, ಅರ್ಧ ಹೋಳು ತೆಂಗಿನತುರಿ, ಎರಡು ಹಿಡಿ ಪಡುವಲ ಬೀಜ, ಉಪ್ಪು, ಆರು ಕಾಳು ಮೆಣಸು.

ಮಾಡುವ ವಿಧಾನ :

ಅಕ್ಕಿಯನ್ನು ಎರಡು ತಾಸು ನೆನೆಸಿ, ಅದರೊಂದಿಗೆ ತೆಂಗಿನ ತುರಿ, ಮೆಣಸು, ಉಪ್ಪು ಸೇರಿಸಿ ನುಣ್ಣಗೆ ರುಬ್ಬಿ, ನಂತರ ಪಡುವಲ ಬೀಜ ಸೇರಿಸಿ ಇನ್ನೆರಡು ಸುತ್ತು ರುಬ್ಬಿ ತೆಗೆಯಿರಿ. ದೋಸೆಯನ್ನು ಹಾಕುವ ರೀತಿ ಬೇರೆ ದೋಸೆಯಂತೆಯೇ. ಈಗ ಪಡುವಲ ಬೀಜದ ದೋಸೆ ತಯಾರಿ.

– ಉಮೇಶ ಗೆದ್ದೆಪ್ಪನವರ, ರಬಕವಿ.

■ ಕೋ. ಚೆನ್ನಬಸಪ್ಪ

ನಿವೃತ್ತ ನ್ಯಾಯಾಧೀಶರು
10333, ಎಂಬರ್ ಕ್ಲಿನ್ ಡ್ರೈವ್
ಆಸ್ಟಿನ್ (ಟಿ.ಎಕ್ಸ್) - 78726
ಅಮೇರಿಕಾ



'ಬದುಕು' ಅಂಕಣಕಾರರಾದ ಕೋ.ಚೆನ್ನಬಸಪ್ಪನವರು ಈಗ ಅಮೆರಿಕೆಗೆ ತೆರಳಿದ್ದು ಅಲ್ಲಿಂದಲೇ ಈ ಅಂಕಣ ಬರೆಯುತ್ತಿದ್ದಾರೆ. ಅವರ ಮಾನವೀಯ ಮಿಡಿತಕ್ಕೆ ನಿಲುಕಿದ ಅಮೆರಿಕೆಯ ಘಟನೆಯೊಂದು ಇಲ್ಲಿದೆ.

ಹೃದಯ ಪರಿವರ್ತನೆ ಸಾಧ್ಯವೆ?

ಜಾಸ್ಪೆರ್, ಟೆಕ್ಸಸ್ ರಾಜ್ಯದ ಪೂರ್ವಗಡಿಗೆ ಹತ್ತಿರದ 7-8 ಸಾವಿರ ಜನಸಂಖ್ಯೆ ಗ್ರಾಮ. ಎರಡು ವಾರಗಳ ಕೆಳಗೆ ಅಲ್ಲೊಂದು ಭೀಕರ ಘಟನೆ ನಡೆಯಿತು. ಬೈರ್ಡ್ ಎಂಬ 49 ವರ್ಷದ ನೀಗ್ರೊ ಮನುಷ್ಯನನ್ನು ಜಾನ್ ಮಿಲಿಯಂ ಕಿಂಗ್ (23) ಷಾನ್ ಆಲನ್ ಬೆರ‍್ರಿ (23) ಮತ್ತು ಲಾರೆನ್ಸ್ ರಸಲ್ ಬ್ರೂವರ್ (31) ಎಂಬ ಮೂವರು ಬಿಳಿಯರು ಅಮಾನುಷ ರೀತಿಯಲ್ಲಿ ಹತ್ಯೆ ಮಾಡಿದರು. ಗುಂಡಿಕ್ಕಿ ಕೊಲ್ಲಲಿಲ್ಲ. ರುಂಡವನ್ನು ಕತ್ತರಿಸಿ ಸಾಯಿಸಲಿಲ್ಲ. ನದಿಯಲ್ಲಿ ನೂಕಿ ಮುಳುಗಿಸಲಿಲ್ಲ. ಕೊಲ್ಲುವುದರಲ್ಲಿ ಸಾಧಾರಣವಾಗಿ ಅನುಸರಿಸುವ ಈ 'ನಯವಾದ', 'ನಾಗರಿಕ' ವಿಧಾನಗಳನ್ನು ಅನುಸರಿಸಲಿಲ್ಲ. ಹಾಗಾದರೆ ಹೇಗೆ ಕೊಂದರು?

ಈ ಬಿಳಿಯರು ತಾವು ಓಡಿಸುತ್ತಿದ್ದ ಟ್ರಕ್ಕಿನ ಹಿಂದೆ ಆ ನೀಗ್ರೊ ಯುವಕನ ಕಾಲುಗಳನ್ನು ಹಗ್ಗದಿಂದ ಕಟ್ಟಿ ಎರಡುವರೆ ಮೈಲುಗಳ ದೂರ ಟ್ರಕ್ಕನ್ನು ರಭಸವಾಗಿ ಓಡಿಸಿಕೊಂಡು ಹೋದರು. ಆ ಕರಿಯನ ದೇಹ ಛಿದ್ರಛಿದ್ರವಾಗಿ ಹೋಯಿತು. ಅಷ್ಟು ಉದ್ದಕ್ಕೂ ಅವನ ದೇಹದ ತುಂಡಾದ ಭಾಗಗಳು, ಮಾಂಸ, ಮೂಳೆ, ರಕ್ತ..... ಬಿದ್ದಿದ್ದವು!! ಇಂಥ ಭೀಭತ್ಸ ಅಮಾನುಷ ಕೊಲೆಯಿಂದ ಇಡೀ ಉತ್ತರ ಅಮೇರಿಕಾ ಖಂಡ ತತ್ತರಿಸಿ ಹೋಯಿತು. ಅಧ್ಯಕ್ಷ ಬಿಲ್ ಕ್ಲಿಂಟನ್‌ರೇ ಈ ಅಮಾನುಷ ಕೃತ್ಯವನ್ನು ಕಟುಮಾತಿನಲ್ಲಿ ಖಂಡಿಸಿದರೆಂದ ಮೇಲೆ ಈ ಭೀಕರ ಕೃತ್ಯದ ಪರಿಣಾಮವನ್ನು ಊಹಿಸಬಹುದು.

ಇದಕ್ಕೇನು ಕಾರಣ? ಇನ್ನೇನೂ ಇಲ್ಲ. ಆ ಬೈರ್ಡ್ ಕರಿಯನೆಂಬುದೊಂದೇ ಕಾರಣ. ಆ ಮೂವರು ಬಿಳಿಯರನ್ನು ಶೀಘ್ರವಾಗಿಯೆ ಬಂಧಿಸಿ ಕೈದುಮಾಡಿ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸಿದ್ದಾರೆ. ಆದಷ್ಟು ಬೇಗನೆ ವಿಚಾರಣೆ ಆಗಿ ಬಹುಮಟ್ಟಿಗೆ ಶಿಕ್ಷೆ ಆದೀತು. ಯಾವುದಾದರೂ ಕಾರಣದಿಂದ ಶಿಕ್ಷೆಯಿಂದ ಪಾರಾಗಲೂ ಬಹುದು. ಕಾನೂನು ತನ್ನ ಅಂತಿಮ ಗುರಿ ತಲುಪೀತು. ಅದು ಸ್ವಾಭಾವಿಕ. ಅದು ಮುಖ್ಯವಲ್ಲ. ಈ ಘಟನೆಯ ಹಿಂದಿರುವ ಮನೋಭಾವ. ಈ ರೋಗಗ್ರಸ್ತ ಮನೋಭಾವಕ್ಕೆ ಏನಾದರೂ ಔಷಧಿ ಇದೆಯೇ ಎಂಬುದು ಅಮೇರಿಕೆಯ ಪ್ರಜೆಗಳನ್ನು ಕಾಡುತ್ತಿರುವ ಪ್ರಶ್ನೆ.

ಬೈರ್ಡ್‌ನ ಶವಸಂಸ್ಕಾರ ಆದ ಮೇಲೆ ಜಾಸ್ಪೆರ್‌ನಲ್ಲಿ ನ್ಯಾಯಾಲಯದ ಮುಂದೆ ಒಂದು ಸ್ನೇಹ ಮತ್ತು ಸೌಹಾರ್ದದ ಸಭೆಯನ್ನು ಏರ್ಪಡಿಸಿದರು. ಅಲ್ಲಿಗೆ ನಾಗರಿಕ ಹಕ್ಕುಗಳ ಪ್ರಸಿದ್ಧ ಮುಂದಾಳು ಜೆಸ್ಸಿ ಜಾಕ್ಸನ್ ಮುಂತಾದ ಮಹನೀಯರು ಬಂದಿದ್ದರು. ಒಂದು ಪ್ರಾರ್ಥನಾ ಸಭೆಯನ್ನೂ ಏರ್ಪಡಿಸಿದ್ದರು. 'ಜಾಸ್ಪೆರ್ ಪ್ರಜೆಗಳಲ್ಲಿ ಒಗ್ಗಟ್ಟು ಸೌಹಾರ್ದವನ್ನುಂಟು ಮಾಡಲು ನಾವು ಪ್ರಾರ್ಥಿಸುತ್ತೇವೆ' ಎಂದು ಸ್ಥಳೀಯ ಮುಖಂಡರು, ಪಾದ್ರಿಗಳು ಒಟ್ಟಾಗಿ ಪ್ರಾರ್ಥಿಸಿದರು. ಈ ಪ್ರಾರ್ಥನಾ ಮತ್ತು ಸದ್ಭಾವನಾ ಸಭೆಯಲ್ಲಿ ಕರಿಯರು ಬಿಳಿಯರು ಕೂಡಿಯೆ ಭಾಗವಹಿಸಿದ್ದರು. ಒಬ್ಬ ಬಿಳಿಯ ಮುಖಂಡ : ' ಈ ಘಟನೆ ಕೇವಲ ಮನೋವಿಕಾರದಿಂದ ಆದ ಘಟನೆ. ಇಂಥಾದ್ದು ಮುಂದೆ ಆಗದಂತೆ ತಡೆಯುವುದು ನಮ್ಮ ಗುರಿಯಾಗಬೇಕು' ಎಂದು ಹೇಳಿದ. ಭಾಗವಹಿಸಿದ್ದ ಒಬ್ಬ ಕರಿಯ 'ಇಂಥ ಹಿಂಸಾಕೃತ್ಯ ಆಗದಂತೆ ಮಾಡಲು ಇಲ್ಲಿ ಎಲ್ಲರೂ ಕೂಡಿ ಪ್ರಯತ್ನಿಸಬೇಕು' ಎಂದು ವಿನಂತಿಸಿದ. ಈ ಘಟನೆಯನ್ನು ಅಮೇರಿಕೆಯ ಸೆನೆಟ್ ಖಂಡಿಸಿ ಒಂದು ಗೊತ್ತುವಳಿಯನ್ನು ಮಂಜೂರು ಮಾಡಿತು. ಯಾವ ಚರ್ಚೆಯೂ ಇಲ್ಲದೆ ಅಂಗೀಕರಿಸಿದ ಈ ಗೊತ್ತುವಳಿಯಲ್ಲಿ, ಕೃತ್ಯವೆಸಗಿದವರನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಲ್ಲದೆ, ಈ ಘಟನೆಗೆ ಬೈರ್ಡ್ ಕುಟುಂಬದವರು ಜಾಸ್ಪೆರ್ ಪ್ರಜೆಗಳು ತೋರಿದ ಪ್ರತಿಕ್ರಿಯೆಯನ್ನು ಪ್ರಶಂಸಿಸಲಾಯಿತು. ಬೈರ್ಡ್ ಕುಟುಂಬದವರು ಅಧ್ಯಕ್ಷ ಕ್ಲಿಂಟನ್‌ರಿಗೆ, ಜೆಸ್ಸಿ ಜಾಕ್ಸನ್‌ರಿಗೆ, ಮತ್ತು ತಮ್ಮ ಸಂಕಟದಲ್ಲಿ ಭಾಗಿಯಾದವರಿಗೆ ಕೃತಜ್ಞತೆಯನ್ನು ಅರ್ಪಿಸಿದರು. ಇದೆಲ್ಲವೂ ಅರ್ಥವಾಗುವ ನಡತೆಯೆ.

ಆದರೆ ಈ ಘಟನೆಯ ಬಗ್ಗೆ ಬಿಳಿಯರಲ್ಲಿ ಕೆಲವರಾದರೂ-ಅಂಥವರು ಅತ್ಯಲ್ಪ, ಕೇವಲ ಶೇ 1 ರಿಂದ 10 ಜನರಿರಬಹುದೆಂದು ಭಾವಿಸಿದರೂ ಇದನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲವೆಂದು ಭಾವಿಸಿದ್ದಾರೆ. ಅಷ್ಟೇ ಅಲ್ಲ, ಕು ಕ್ಲಕ್ಸ್ ಕ್ಲಾನ್ (Ku Klux Klan) ಎಂಬ ಬಿಳಿಯರ ಉಗ್ರವಾದಿ ಸಂಘಟನೆ ಜೂನ್ 27 ರಂದು, ಆ ಆರೋಪಿಗಳನ್ನು ವಿಚಾರಣೆ ಮಾಡಲಿರುವ ನ್ಯಾಯಾಲಯದ ಮುಂದೆ ಪ್ರತಿಭಟನಾ ಸಮಾವೇಶ ನಡೆಸಲಿದೆ. ಕ್ಲಾನ್ ಯೋಜಿಸಿರುವ ಈ ಕ್ರಮವನ್ನು ಶ್ವೇತಭವನ ಖಂಡಿಸಿ ಒಂದು ಹೇಳಿಕೆಯನ್ನು ಪ್ರಕಟಿಸಿದೆ. ಈ ಉಗ್ರ ಬಿಳಿಯರ ಮುಖಂಡರು ತಮ್ಮ ಕೃತ್ಯವನ್ನು ಸಮರ್ಥಿಸುತ್ತಾ, 'ನಾವೇಕೆ ಅಲ್ಲಿ ಪ್ರತಿಭಟನೆ ಮಾಡುತ್ತಿದ್ದೇವೆ' ಎಂಬುದನ್ನು ಅರಿಯಬೇಕು ಎಂದಿದ್ದಾರೆ. ಕರಿಯನ ಮೇಲೆ ನಡೆದ ಈ ಕೃತ್ಯವನ್ನು ಉತ್ಪ್ರೇಕ್ಷಿಸಿ ಪ್ರಕಟಿಸುವ ಸುದ್ದಿ ಮಾಧ್ಯಮಗಳು, ಕರಿಯ ಬಿಳಿಯರ ಮೇಲೆ ಮಾಡುವ ದಾಳಿಯನ್ನೇಕೆ ಪ್ರಕಟಿಸುವುದಿಲ್ಲ? ಎಂದು ಪ್ರಶ್ನಿಸಿದ್ದಾರೆ.

ಕ್ಲಾರೆನ್ಸ್ ಪೇಜ್ ಎಂಬ ಒಬ್ಬ ಲೇಖಕ-ಕರಿಯ ಲೇಖಕ - ಈ ಬಗ್ಗೆ ಒಂದು ವಿಶೇಷ ಲೇಖನ ಬರೆದಿದ್ದಾನೆ. ದ್ವೇಷಾಪರಾಧ ಸಂಖ್ಯಾ ಕಾಯಿದೆ (Hate Crime Statistics Act 1990)ಯ ಕೆಳಗೆ ಪ್ರಕಟಿಸಿದ ಅಂಕಿ ಸಂಖ್ಯೆಯನ್ನು ಕೊಡುತ್ತಾ ಈ ಕಾಯಿದೆಯ ಕೆಳಗಡೆ ಪ್ರಕಟಿಸಿದ 8759 ಕೇಸುಗಳಲ್ಲಿ 5,396 ಜನಾಂಗೀಯ ದ್ವೇಷ ಭಾವನೆಯಿಂದ ನಡೆದಿವೆ. ಅವುಗಳಲ್ಲಿ 3674 ಕರಿಯರ ವಿರುದ್ಧದ ಕೇಸುಗಳೆಂದು 110 ಬಿಳಿಯರ ವಿರುದ್ಧ ನಡೆದ ಕೇಸುಗಳೆಂದು ಬಹಿರಂಗ ಪಡಿಸಿದ್ದಾನೆ. ಒಂದು ಕೇಸಿನಲ್ಲಿ ಕರಿಯನೊಬ್ಬನನ್ನು ವರ್ಜೀನಿಯಾ ರಾಜ್ಯದಲ್ಲಿ ಬಹಿರಂಗವಾಗಿ ಬೆಂಕಿಹಚ್ಚಿ ಕೊಂದಿದ್ದರು. ಆದರೂ ಆ ಇಬ್ಬರು ಆರೋಪಿಗಳನ್ನು ಈ ವಿಶೇಷ ಕಾಯಿದೆಯ ಕೆಳಗೆ ವಿಚಾರಣೆಗೆ ಗುರಿಪಡಿಸಲಿಲ್ಲ.

ಇಲ್ಲಿ ಪ್ರತಿದಿನವೂ ಮಕ್ಕಳು ಶಾಲೆಯಲ್ಲಿ 'ಸ್ವಾತಂತ್ರ್ಯ ಮತ್ತು ಸಮಾನತೆಯ' ಪ್ರತಿಜ್ಞೆಯನ್ನು (Liberty and Equality) ಕೈಗೊಳ್ಳುತ್ತಾರೆ.

ಅಮೇರಿಕೆಯ ಸ್ವಾತಂತ್ರ್ಯ ಘೋಷಣೆಯ ಪ್ರಥಮ ವಾಕ್ಯವೇ: 'ದೇವರು ಮಾನವರನ್ನೆಲ್ಲ ಸರಿಸಮಾನವಾಗಿ ಸೃಷ್ಟಿಸಿದ್ದಾನೆ' ಎಂಬ ಮಹಾ ಸತ್ಯವಾಕ್ಯದಿಂದ ಪ್ರಾರಂಭವಾಗುತ್ತದೆ. ನಮ್ಮ ವೇದೋಪನಿಷತ್ತಿನ 'ಮಮಾತ್ಮಾ ಸರ್ವ ಭೂತಾನಿ' 'ಆತ್ಮವತ ಸರ್ವ ಭೂತಾನಿ' ಎಂಬ ಸತ್ಯವಾಕ್ಯವನ್ನು ನಾವು ಜಪಿಸುತ್ತೇವೆ. ವಿವೇಕಾನಂದರ ಮಾತಿನಲ್ಲಿ 'ನಮ್ಮ ಇಂದಿನ ಧರ್ಮ ವೇದಗಳಲ್ಲಿ ಇಲ್ಲ ; ಉಪನಿಷತ್ತುಗಳಲ್ಲಿ ಇಲ್ಲ. ಅದು ನನ್ನನ್ನು ಮುಟ್ಟದಿರು; ಮುಟ್ಟದಿರು... ಎಂಬುದರಲ್ಲಿದೆ. ಅದು ಅಡುಗೆ ಮನೆಯ ಪಾತ್ರೆಯಲ್ಲಿದೆ...' ಎಂಬಂತೆ ಇಲ್ಲಿಯೂ ಸ್ವಾತಂತ್ರ್ಯ ಸಮಾನತೆ (Liberty and Equality) ಮಂತ್ರದ ಗುರಿಯೂ ಆಗಿದೆ.

ಜಾಸ್ಪರ್‌ನಲ್ಲಿ ಈ ಘಟನೆ ಆದ ದಿನವೇ ನಮ್ಮ ದೇಶದ, ನಮ್ಮ ರಾಜ್ಯದ, ನಮ್ಮ ಜಿಲ್ಲೆಯಲ್ಲಿ-ಮುಂಡರಗಿ ಎಂಬ ಗ್ರಾಮದಲ್ಲಿ-ಒಂದು ಘಟನೆ ನಡೆಯಿತೆಂದು ವರದಿಯಾಗಿತ್ತು. ಅದು ಎಷ್ಟು ನಿಜವೋ, ಎಷ್ಟು ಸುಳ್ಳೋ ಹೇಳಲಾರೆ. ನಮ್ಮ ದೇಶದಲ್ಲಿ ಎಸ್.ಟಿ/ಎಸ್.ಸಿ ದೌರ್ಜನ್ಯ ನಿಯಂತ್ರಣ ಕಾಯಿದೆಯನ್ನು ಮಂಜೂರು ಮಾಡಿದ ಮೇಲೆ ಅಂಥ ಹೀನ ಕೃತ್ಯಗಳನ್ನು ಮಾಡಲು ಹಿಂಜರಿಯುತ್ತಾರೆ. ಅವು ಬಹುಮಟ್ಟಿಗೆ ಕಡಿಮೆ ಆಗಿವೆ. ಆದರೆ ಗಮನಿಸಬೇಕಾದ ಒಂದು ಮುಖ್ಯ ಸಂಗತಿಯೆಂದರೆ ಈ ವರ್ಣಭೇದ ನೀತಿ, ಜಾತಿ ದ್ವೇಷ ಎಂಬುದು ಇಡೀ ಮಾನವ ಜನಾಂಗವನ್ನೇ ಆವರಿಸಿದೆ ಎಂಬುದು. ಅಮೇರಿಕೆಯಲ್ಲಿ ಬಿಳಿಯರು ಕರಿಯರ ಮೇಲೆ ದೌರ್ಜನ್ಯ ಮಾಡುತ್ತಿರಬಹುದು. ನಮ್ಮ ದೇಶದಲ್ಲಿ ಸವರ್ಣೀಯರು ದಲಿತರ ಮೇಲೆ ಮಾಡುತ್ತಿರಬಹುದು. ಅದಕ್ಕೆ ಪ್ರತೀಕಾರವಾಗಿ ಬಿಳಿಯರ ಮೇಲೆ ಕರಿಯರು, ಸವರ್ಣೀಯರ ಮೇಲೆ ದಲಿತರು ದೌರ್ಜನ್ಯ ಮಾಡುತ್ತಿರುವುದಂತೂ ನಿಜ. ಒಟ್ಟಿನ ಮೇಲೆ ಪಾಶ್ಚಾತ್ಯರಾಗಲಿ, ಪೌರ್ವಾತ್ಯರಾಗಲಿ, ಬಿಳಿಯರಾಗಲಿ, ಸವರ್ಣೀಯರಾಗಲಿ, ಕ್ರೈಸ್ತರಾಗಲಿ, ಹಿಂದೂಗಳಾಗಲಿ..... ಜಾತಿ, ಮತ, ದೇಶ, ಪ್ರಾಂತ್ಯಗಳ ಭೇದವಿಲ್ಲದೆ ದ್ವೇಷ ಎಂಬುದು ಎಲ್ಲ ಮಾನವರ ಹೃದಯದಲ್ಲೂ ಬೀಜ ರೂಪದಲ್ಲಾದರೂ ಮನೆ ಮಾಡಿರುವುದು ಸತ್ಯ ಸಂಗತಿ.

ಈಗ ಲೋಕದ ಮುಂದಿರುವ ಪ್ರಶ್ನೆ : ಈ ದ್ವೇಷ ಭಾವನೆಯನ್ನು ನಿವಾರಿಸುವ ಪರಿ ಯಾವುದು? ಮಾನವ ಚೇತನದ ಆಮೂಲಾಗ್ರ ಪರಿವರ್ತನೆ ಹೇಗೆ ಸಾಧ್ಯ? ಸ್ವಾಮಿ ವಿವೇಕಾನಂದರು ನೂರು ವರ್ಷಗಳ ಕೆಳಗೆ ಘೋಷಿಸಿದರು : 'ನಾವು ರಾಜಕೀಯ ಸುಧಾರಣೆ ಮಾಡಿ ನೋಡಿದ್ದೇವೆ. ಆರ್ಥಿಕ ಸುಧಾರಣೆ ಮಾಡಿದ್ದೇವೆ. ಸಾಮಾಜಿಕ ಸುಧಾರಣೆಯನ್ನೂ ಮಾಡಿದ್ದೇವೆ. ಆದರೆ ಇದ್ಯಾವುದರಿಂದಲೂ ಇಚ್ಛಿತ ಫಲಿತಾಂಶ ದೊರೆತಿಲ್ಲ. ಅದು ಮಾನವನ ಆತ್ಮ ಸಂಸ್ಕಾರದಿಂದ ಮಾತ್ರ ಸಾಧ್ಯ'.

ಹೌದು, ಆದರೆ ಅದು ಯಾರಿಂದ ಸಾಧ್ಯ ? ಹೇಗೆ ಸಾಧ್ಯ ? ಇದೇ ಬೃಹತ್ ಸಮಸ್ಯೆ. ■

ಹೀಗೆ ಮಾಡಿ ನೋಡಿ

- ತಾಮ್ರ ಮತ್ತು ಹಿತ್ತಾಳೆಯ ಪಾತ್ರೆಗಳನ್ನು ಸ್ವಲ್ಪ ನಿಂಬೆಹಣ್ಣಿನ ರಸ ಹಾಗೂ ಸ್ವಲ್ಪ ಬೂದಿಯ ಜೊತೆಗೆ ತಿಕ್ಕಿ ತೊಳೆದಲ್ಲಿ ಥಳ ಥಳ ಹೊಳೆಯುತ್ತವೆ.
- ಫೋಟೋ ಆಲ್ಬಮ್‌ಗಳು ಹಳೆಯದಾದಾಗ ಅದರಲ್ಲಿನ ಫೋಟೋಗಳು ಅದಕ್ಕೆ ಅಂಟಿಕೊಂಡಂತೆನಿಸಿ ಕಳಾಹೀನವಾಗಿರುವಂತೆ ತೋರುತ್ತವೆ. ಆಗ ಹತ್ತಿಯ ನೂಲನ್ನು ಪೆಟ್ರೋಲಿನಲ್ಲಿ ಅದ್ದಿ ಫೋಟೋಗಳನ್ನು ಒರೆಸಿ. ಆಗ ಮತ್ತೆ ಆ ಫೋಟೋಗಳು ಹೊಸಕಳೆಯನ್ನು ಪಡೆಯುತ್ತವೆ.
- ತುಕ್ಕುಹಿಡಿದ ನಟ್ಟು (nuts) ಹಾಗೂ ಬೋಲ್ಟ್‌ಗಳ ಮೇಲೆ ಕ್ಲಬ್ ಸೋಡವನ್ನು ಸುರಿದರೆ ಬಿಚ್ಚಲು ಸುಲಭವಾಗುತ್ತದೆ.
- ಒಣಗಿಹೋದ ಉಗುರುಬಣ್ಣಕ್ಕೆ (Nail polish) ಸ್ವಲ್ಪ ಟರ್ಪಂಟ್ ಆಯಿಲ್‌ನ್ನು ಬೆರೆಸಿಕೊಂಡು ಉಪಯೋಗಿಸಿದರೆ ಉತ್ತಮ.
- ಸೋಪು ನೀರು ಗಿಡಗಳಿಗೆ ಬೇರೆ ರಾಸಾಯನಿಕ ವಸ್ತುಗಳಿಗಿಂತಲೂ ಮಾರಕ.
- ಬೇಯಿಸಿದ ನಿಂಬೆಹಣ್ಣನ್ನು ಸಣ್ಣ ಅಲ್ಯುಮಿನಿಯಂ ಪಾತ್ರೆಯಲ್ಲಿಟ್ಟು ತಣ್ಣಗೆ ಮಾಡಿ. ತಣ್ಣಗೆ ಮಾಡಿದ ನಿಂಬೆರಸವನ್ನು ಗಿಡಗಳ ಮೇಲೆ ಚಿಮುಕಿಸಿ. ಇದೊಂದು ಒಳ್ಳೆ ಕ್ರಿಮಿನಾಶಕ.
- ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸುವ ಬದಲು ನಿಮ್ಮ ಗಿಡದ ಬುಡಕ್ಕೆ ಕೆಲವು ಎರೆಹುಳಗಳನ್ನು ತಂದು ಬಿಡಿ. ಅವುಗಳಿಂದ ಮಣ್ಣು ಹೆಚ್ಚು ಫಲವತ್ತಾಗುತ್ತದೆ.
- ಪ್ಯಾಂಟುಗಳಿಗೆ ಇಸ್ತ್ರಿ ಚೆನ್ನಾಗಿ ಕೂರಲು ಇಸ್ತ್ರಿ ಮಾಡುವ ಮುನ್ನ ಪ್ಯಾಂಟಿನ ಹಿಂಬದಿಯನ್ನು ಮೇಣದ ಬತ್ತಿಯಲ್ಲಿ ಉಜ್ಜಿ.
- ಅಡಿಗೆಮನೆಯ ಕೈ ಟವಲ್‌ಗಳು ಹೆಚ್ಚು ಕೊಳೆಯಾಗಿದ್ದರೆ ಬಿಸಿನೀರನ್ನು ಕುದಿಸಿ ಅದಕ್ಕೆ ಸ್ವಲ್ಪ ಸೋಪ್ ಪೌಡರ್ ಹಾಗೂ ವಾಶಿಂಗ್‌ಸೋಡ ಬೆರೆಸಿ. ಒಲೆಯಿಂದ ಕೆಳಗಿಳಿಸಿ. ಆ ನೀರಿಗೆ ಸ್ವಲ್ಪ ಕೊಬ್ಬನ್ನು (ಮೇಣದ ಬತ್ತಿ ತಯಾರಿಸಲು ಉಪಯೋಗಿಸುವ) ಬೆರೆಸಿ. ನಂತರ ಆ ಟವಲ್‌ಗಳನ್ನು ಅದಕ್ಕೆ ಹಾಕಿ ಮತ್ತೆ 30 ನಿಮಿಷ ಕುದಿಸಿ ತೊಳೆದರೆ ಸ್ವಚ್ಛವಾಗಿರುತ್ತದೆ.
- ಪನ್ನೀರು ಕೆಡದೆ ಇಡಲು ಪ್ಲಾಸ್ಟಿಕ್ ಕವರ್‌ನಲ್ಲಿ ಸುತ್ತಿ ಆ ಕವರ್‌ಗೆ ವಿನಿಗರ್‌ನ್ನು ಪೂಸಿ ಇಡಿ.
- ಶರ್ಟ್‌ಗಳ ಕಾಲರ್ ಅಥವಾ ಬಟ್ಟೆಗಳ ಮೇಲೆ ಲಿಪ್‌ಸ್ಟಿಕ್‌ನ ಕಲೆಯಿದ್ದರೆ ಗ್ಲೀಸರಿನ್‌ನಿಂದ ತಿಕ್ಕಿದರೆ ಕಲೆ ಹೋಗುತ್ತದೆ. ಈ ಕ್ರಿಯೆಯಲ್ಲಿ ಪೆಟ್ರೋಲಿಯಂ ಜೆಲ್ಲಿಯನ್ನು ಉಪಯೋಗಿಸಬಹುದು.
- ಶರ್ಟಿನ ಕಾಲರ್ ಹಾಗೂ ತೋಳಿನಲ್ಲಿರುವ ಕೊಳೆಯನ್ನು ತೆಗೆಯಲು ಕಷ್ಟವಾದಲ್ಲಿ ಆ ಜಾಗಕ್ಕೆ ಸ್ವಲ್ಪ ಟಾಲ್ಕಮ್ ಪೌಡರನ್ನು ತಿಕ್ಕಿ ಒಂದು ರಾತ್ರಿ ಬಿಡಿ. ಮಾರನೆ ದಿನ ಅದನ್ನು ತೊಳೆಯಿರಿ. ಆಗ ಕೊಳೆಯೆಲ್ಲಾ ಮಾಯವಾಗುತ್ತದೆ.
- ನಿಮ್ಮ ಹಿತ್ತಾಳೆಯ ವಸ್ತುಗಳನ್ನು ಹೆಚ್ಚು ಹೊಳೆಯುವಂತೆ ಮಾಡಬೇಕಾದರೆ ಅದನ್ನು ತೊಳೆಯುವ ಮೊದಲು ಎರಡು ಟೀ ಸ್ಪೂನ್ ವಿನಿಗರ್‌ಗೆ 1/2 ಸ್ಪೂನ್ ಕ್ಲೀನಿಂಗ್ ಪೌಡರ್‌ನ್ನು ಬೆರೆಸಿ ಆ ಮಿಶ್ರಣದಲ್ಲಿ ತಿಕ್ಕಿ. ನಂತರ ನೀರಿನಲ್ಲಿ ತೊಳೆದು ಒರೆಸಿ ನೋಡಿ.
- ನಿಮ್ಮ ಹೊಸಬಟ್ಟೆಗಳು ಬಣ್ಣ ಬಿಡುತ್ತಿದ್ದಲ್ಲಿ ನೀವು ಬಟ್ಟೆಯನ್ನು ನೆನೆ ಹಾಕುವ ಮೊದಲು ಆ ನೀರಿಗೆ ಮುಷ್ಟಿಯಷ್ಟು ಉಪ್ಪನ್ನು ಬೆರೆಸಿ. ನಂತರ ಅದ್ದಿದರೆ ಬಣ್ಣ ಬಿಡುವುದಿಲ್ಲ. ಹಾಗೆಯೇ 1 ಸ್ಪೂನ್‌ನಷ್ಟು ವಿನಿಗರ್‌ನ್ನು ಬೆರೆಸಿದರೂ ಇದೇ ರೀತಿಯ ಫಲಿತಾಂಶವನ್ನು ಪಡೆಯಬಹುದು. ■

ಬಣ್ಣದೊಂದಿಗೆ ಕಣ್ಣಿನ ಒಡನಾಟ

■ ಸುರೇಂದ್ರನಾಥ ಸಾತ್ವಿಕ್

ದಿನದ ಇಪ್ಪತ್ನಾಲ್ಕು ತಾಸೂ ಹಗಲಾದರೆ, ದಿನದ ಇಪ್ಪತ್ನಾಲ್ಕು ತಾಸೂ ರಾತ್ರಿಯಾದರೆ, ಸಮುದ್ರದ ನೀರೆಲ್ಲ ಸಿಹಿ ನೀರಾದರೆ ಮನುಷ್ಯನಿಗೆ ಹಸಿವೆಯೇ ಇರದಿರುತ್ತಿದ್ದರೆ.... ಹೀಗೆ 'ರೆ ರಾಜ್ಯ'ದ ವಿಸ್ತಾರ ಗಣಿತದ Infinity ಯ ತರಹ ವಿಸ್ತರಿಸುತ್ತಾ ಹೋಗಬಹುದು. ಈ ಒಂದೊಂದು 'ರೆ' ಯಿಂದಲೂ ಆಗಬಹುದಾದ ಪರಿಣಾಮ ಅನೇಕ. ಕಲ್ಪನೆಯ ವ್ಯವಹಾರಕ್ಕೆ ಕೊನೆ ಸಿಗಲಿಕ್ಕಿಲ್ಲ.

ಹೀಗೆ, ಅಕಸ್ಮಾತ್ ಮನುಷ್ಯನಿಗೆ ದೃಷ್ಟಿಸುವ ಅನುಕೂಲವೇ ಇರದಿರುತ್ತಿದ್ದರೆ.... ಕತ್ತಲು, ಬೆಳಕು, ವಿಶಾಲ ಸಮುದ್ರ, ಹಸಿರು ಕಾನನ, ಕರಿಮೋಡ, ರಂಗು ರಂಗಿನ ಹೂ, ಹಣ್ಣು, ಕಾಯಿಗಳು, ಪಶು ಪಕ್ಷಿಗಳು, ಆಕಾರ ವಿಕಾರಗಳು ಇವುಗಳೆಲ್ಲ ಏನಾಗುತ್ತಿದ್ದಿರಬಹುದು?

ಸೃಷ್ಟಿಯ ಅನೇಕ ಸಂಗತಿಗಳನ್ನು ಕಂಡು ಸವಿದಿರುವ ಮನುಷ್ಯನಿಗೆ ಈ ಕಲ್ಪನೆಯೇ ಭಯಾನಕ ವಿಚಿತ್ರ ಅಥವಾ ಒಂದು ಚೋದ್ಯ ಎನಿಸಬಹುದು.

ಸೃಷ್ಟಿಯ ಸೊಬಗನ್ನು ಸವಿಯಲು ಕಣ್ಣುಗಳು ಬೇಕು. ಆದರೆ ಸೊಬಗಿನ ಸೊಗಸಿರುವುದು ಸೃಷ್ಟಿಯಲ್ಲಿನ ಬಣ್ಣಗಳಲ್ಲಿ. ಬಣ್ಣ ಪ್ರಕೃತಿ ದತ್ತದ್ದಾಗಿರಲಿ, ಕೃತಕವಾದದ್ದಾಗಿರಲಿ, ಬಣ್ಣ ಬಣ್ಣವೆ. ಆದರ ಅನುಭವ ಮಾತ್ರ ಕಣ್ಣು ಬಣ್ಣಗಳ ನಂಟಿನ ಫಲ.

ಬಣ್ಣ ಕಣ್ಣಿನ ಮೂಲಕ ಮಾತ್ರ ಸಾಧ್ಯವಾಗುವ ಒಂದು ಅನುಭವ. ವಸ್ತುವೊಂದರ ಮೇಲೆ ಬಿದ್ದ ಬೆಳಕಿನ ಕಿರಣಗಳು ಅಲ್ಲಿಂದ ಹೊರಬಿದ್ದು, ಕಣ್ಣಿನ ಪಟಲದ ಮೇಲೆ ಬಿದ್ದಾಗ ಅಲ್ಲಿರುವ ವಿಶೇಷ ಕೋಶಗಳು, ಆ ಬಣ್ಣಗಳನ್ನು ಗ್ರಹಿಸಿ, ಆ ಕುರಿತ ಸಂದೇಶವನ್ನು ಮೆದುಳಿಗೆ ರವಾನಿಸುತ್ತವೆ. ಆಗ ಅವುಗಳ ಅನುಭವ ನಮಗಾಗುತ್ತದೆ.

ಮನುಷ್ಯನ ಬಣ್ಣಗಳೊಂದಿಗಿನ ನಂಟು ಇಂದು ನಿನ್ನೆಯದಲ್ಲ. ಅತಿ ಪುರಾತನ ದಿನಗಳಿಂದಲೂ ಅಲಂಕಾರ ಮುಂತಾದ ರೀತಿ, ರಿವಾಜುಗಳಲ್ಲಿ, ಬಣ್ಣಗಳ ಓಕುಳಿಯಲ್ಲಿ ಮೈಮರೆಸಿ ರಂಗಿನ ರಸದೌತಣ ನೀಡುವ ಕಾಮನ ಹಬ್ಬ, ಅಜಂತ ಎಲ್ಲೋರಗಳಂತಹ ಗುಹೆ, ಗುಡಿಗಳಲ್ಲಿ ಕಂಡು ಬರುವ ವರ್ಣ ಚಿತ್ರಗಳು, ಬಣ್ಣಗಳೊಂದಿಗಿನ ಸಂಬಂಧವನ್ನು ಬಹಳ ಹಿಂದಕ್ಕೆ ಕೊಂಡೊಯ್ಯುತ್ತವೆ.

ಭೂಮಿಯ ಬಣ್ಣ ಕಪ್ಪು, ಕಂದು, ಕೆಂಪು, ಹೀಗೆ ಬಗೆ ಬಗೆ. ಆಕಾಶ ಕಾಣುವುದು ನೀಲಿ. ಆಕಾಶ ಪರದೆಯ ಮೇಲೆ ಕಾಣುವ ಕಾಮನ ಬಿಲ್ಲು ಬಹುರಂಗಿ. ಹಸಿರು, ತಿಳಿಹಸಿರು ಮತ್ತು ಕಡು ಹಸಿರು ಸಸ್ಯರಾಶಿ, ಬಣ್ಣವಿಲ್ಲದ್ದು ಎಂದು ನಾವು ಹೇಳುವ ನೀರು, ಹೀಗೆ ಮನುಷ್ಯನ ಅಸ್ತಿತ್ವ ವಿವಿಧ ಬಣ್ಣಗಳ ಈ ಮೂಲ ವಸ್ತುಗಳೊಂದಿಗೆ.

ಹಾಗಾದರೆ ಈ ಬಣ್ಣವಾದರೂ ಏನು? ಹಗಲಿನಲ್ಲಿ ನಾವು ನೋಡುವ ಸೂರ್ಯನ ಬೆಳಕಿನಲ್ಲಿ ಮುಖ್ಯವಾಗಿ ಏಳು ಬಣ್ಣ ಘಟಕಗಳಿವೆ. ಅವೆಂದರೆ, ನೇರಳೆ, ನೀಲಿ, ಹಸಿರು, ಹಳದಿ, ಕಿತ್ತಳೆ, ಕೆಂಪು, ಊದ. ಅಂದರೆ ಸೂರ್ಯನ ಕಿರಣ ಬೇರೆ ಬೇರೆ ಅಲೆಯುದ್ದಗಳುಳ್ಳ ವಿದ್ಯುದಾಯಸ್ಕಾಂತೀಯ ವಿಕಿರಣಗಳ ಮಿಶ್ರಣ. ವಸ್ತುವೊಂದರ ಮೇಲೆ ಬಿದ್ದ ಎಲ್ಲ ಬೆಳಕನ್ನೂ ಅದರ ಮೇಲ್ಮೈ ಪ್ರತಿಫಲಿಸಿದರೆ ಅಥವಾ ಪೂರ್ಣವಾಗಿ ಸಾಗಗೊಟ್ಟರೆ, ಆಗ ಆ ವಸ್ತು ಬೆಳ್ಳಗೆ ಕಾಣಿಸುತ್ತದೆ. ಅಥವಾ ತನ್ನ ಮೇಲೆ ಬಿದ್ದ ಎಲ್ಲ ಬೆಳಕನ್ನು ಹೀರಿಕೊಂಡರೆ ಅಂತಹ ವಸ್ತು ಕಪ್ಪಾಗಿ ಕಾಣಿಸುತ್ತದೆ.

ಆದರೆ ವಸ್ತುವೊಂದು ತನ್ನ ಮೇಲೆ ಬಿದ್ದ ಬೆಳಕನ್ನು (ಕೆಲವು ಅಲೆಯುದ್ದಗಳನ್ನು) ಹೀರಿಕೊಂಡು ಉಳಿದಿದ್ದನ್ನು ಹೋಗಗೊಟ್ಟಲ್ಲಿ ಅಥವಾ ಪ್ರತಿಫಲಿಸಿದಲ್ಲಿ ಆಗ ಅಂಥ ವಸ್ತು ಬಣ್ಣವುಳ್ಳದ್ದಾಗಿ ಕಾಣಿಸುತ್ತದೆ. ಹೀರಲ್ಪಡದೆ ಪ್ರತಿಫಲನಗೊಂಡ ಅಥವಾ ಸಾಗಲ್ಪಟ್ಟ ಬೆಳಕಿನ ಉಳಿದ ಭಾಗ (ಉಳಿದ ಅಲೆಯುದ್ದಗಳು) ವಸ್ತುವಿನ ಬಣ್ಣವನ್ನು ನಿರ್ಧರಿಸುತ್ತದೆ.

ಬೆಳಕು ಎಲೆಕ್ಟ್ರಾನುಗಳ (Electron) ಕಂಪನದಿಂದ ಉಂಟಾದ ಅಲೆಗಳನ್ನು ಹೊಂದಿದ್ದು, ಆ ಅಲೆಗಳು ಪ್ರತಿಯಾಗಿ ಬೇರೆ ಎಲೆಕ್ಟ್ರಾನುಗಳನ್ನು ಕಂಪಿಸುವ ಶಕ್ತಿಯನ್ನು ಹೊಂದಿರುತ್ತವೆ. ವಸ್ತುವೊಂದರ ಮೇಲೆ ಬೀಳುವ ಬೆಳಕು ಆ ವಸ್ತುವಿನಲ್ಲಿಯ ಎಲೆಕ್ಟ್ರಾನುಗಳನ್ನು ಕಂಪಿಸುವ ಹಾಗೆ ಮಾಡುತ್ತದೆ. ಅದು ಕಂಪನವೂ ಆಗಬಹುದು ಅಥವಾ ಅನುರಣವೂ ಆಗಬಹುದು. ಈ ಕ್ರಿಯೆಯಲ್ಲಿ ಎಲೆಕ್ಟ್ರಾನುಗಳು ಭಾಗಶಃ ಬೆಳಕನ್ನು ಅನುರಣಿಸಲು ಹೀರಿಕೊಳ್ಳುತ್ತವೆ. ಉಪಯೋಗಿಸಲ್ಪಟ್ಟ ಅಥವಾ ಹೀರಿಕೊಳ್ಳದೆ ಬಿಟ್ಟ ಬೆಳಕಿನ ಭಾಗ ಆ ವಸ್ತುವಿನ ಬಣ್ಣವನ್ನು ನಿರ್ಧರಿಸುತ್ತದೆ.

ವಸ್ತುಗಳು ಪರಮಾಣುವಿನಿಂದ ಆಗಿರುತ್ತವೆ. ಅಸಂಖ್ಯ ಪರಮಾಣುಗಳು ವಸ್ತುವೊಂದರಲ್ಲಿ ವಿವಿಧ ರೀತಿಯ ಬಂಧಕಗಳ ಮೂಲಕ ಒಟ್ಟಾಗಿರುತ್ತವೆ. ಕೆಲವು ವಸ್ತುಗಳಲ್ಲಿ ಪರಮಾಣುಗಳು ಸಡಿಲವಾಗಿ ಬಂಧಿತವಾಗಿರುವ ಬಂಧಕಗಳನ್ನು ಹೊಂದಿರುತ್ತವೆ. ಈ ರೀತಿ ಸಡಿಲವಾಗಿ ಬಂಧಿಸಲ್ಪಟ್ಟಿರುವ ಎಲೆಕ್ಟ್ರಾನುಗಳನ್ನು ಹೊಂದಿರುವ ವಸ್ತುಗಳಿಗೆ ವರ್ಣದ್ರವ್ಯ ಹೊಂದಿರುವ ಬಣ್ಣಗಳೆಂದು ಹೇಳುತ್ತಾರೆ.

ಕೆಲವು ಲೋಹಗಳ ಹೊರ ಮೈಗಳು, ಬೇರೆ ಬೇರೆ ಬಣ್ಣಗಳಲ್ಲಿ ಹೊಳೆಯುವುದುಂಟು. ಕಾರಣ, ಆಯಾ ಲೋಹದ ಹೊರಮೈಗಳು ಬೆಳಕಿನ ನಿರ್ದಿಷ್ಟ ಅಲೆಯುದ್ದದ ಬೆಳಕಿನ ಅಲೆಗಳನ್ನು ಮಾತ್ರ ಹೀರಿಕೊಂಡು ಉಳಿದವನ್ನು ಹೊರಚೆಲ್ಲುತ್ತವೆ. ಹೀಗಾದಾಗ ಹೊರಬಿದ್ದ ಬೆಳಕಿನ ಅಲೆಗಳನ್ನು ಆಧರಿಸಿ ಬಣ್ಣ ಕಾಣಿಸುತ್ತದೆ.

ಬಣ್ಣಗಳ ಬಣ್ಣನೆ ಇಲ್ಲಿಗೆ ಸಾಕಾಗದು. ವೈದ್ಯನೊಬ್ಬನು ಅನೇಕ ಬಾರಿ ಮನುಷ್ಯನ ರೋಗಗಳ ಪತ್ತೆ ಹಚ್ಚುವುದು, ಮಾನವ ದೇಹದ ಜೀವ ರಾಸಾಯನಿಕ ಕ್ರಿಯೆಗಳಿಂದುಂಟಾಗುವ ಬಣ್ಣಗಳ ಬದಲಾವಣೆಗಳನ್ನು ಗುರುತಿಸುವುದರ ಮೂಲಕ. ಕೃಷಿಕನೊಬ್ಬ ತಾನು ಬೆಳೆದ ಫಸಲು ಯಾವ ಹಂತದಲ್ಲಿದೆ ಎಂದು ನಿರ್ಧರಿಸುವುದು, ಕಾಲ ಕಾಲಕ್ಕೆ ಆ ಬೆಳೆಗಳಲ್ಲಿ ಉಂಟಾಗುವ ಬಣ್ಣಗಳ ಬದಲಾವಣೆಗಳಿಂದ.

ಜೀವಿಗಳಲ್ಲಿ, ಅದರಲ್ಲೂ ಪ್ರಾಣಿಗಳಲ್ಲಿ ಕಂಡುಬರುವ ವಿವಿಧ ಬಣ್ಣಗಳು, ಅವುಗಳ ರೂಪ ರಚನೆ, ತಿರುವು ಮುರುವುಗಳು, ಆಹಾರ ವಿಹಾರಗಳ ಮೇಲೆ ನಿರ್ಧಾರವಾಗಿರುತ್ತವೆ. ಸಾಮಾನ್ಯವಾಗಿ ಪ್ರಾಣಿಗಳಲ್ಲಿ ಬಣ್ಣಗಳು ಎರಡು ಕಾರಣಗಳಿಂದ ಕಂಡುಬರುತ್ತವೆ. ಮೊದಲನೆಯದನ್ನು ರಾಸಾಯನಿಕ ವಿವರಣೆಯಿಂದ ಗುರುತಿಸಬಹುದು. ಜೀವಿಗಳಲ್ಲಿರುವ ಜೈವಿಕ ವರ್ಣದ್ರವ್ಯಗಳು ಬೆಳಕನ್ನು ಪ್ರತಿಫಲಿಸುವುದರ ಮೂಲಕ, ಪ್ರಸರಿಸುವ ಮೂಲಕ ಬಣ್ಣವನ್ನು ಸೂಸುತ್ತವೆ.

ಎರಡನೆಯದಾಗಿ, ಕೆಲವು ಪ್ರಾಣಿಗಳಲ್ಲಿರುವ ವಿಶೇಷ ಭೌತ ರಚನೆ ಅಂದರೆ ಅತಿ ಸೂಕ್ಷ್ಮ ಉಬ್ಬು ತಗ್ಗುಗಳು ಸೂಕ್ಷ್ಮವಾದ ಪಟ್ಟಿಗಳು, ಪದರ ಮುಂತಾದವುಗಳು ಮೂಲ ಬೆಳಕಿನ ಕಾರಣ

ಗಳನ್ನು ಬಣ್ಣಗಳನ್ನಾಗಿಸಿ ವಿಭಜಿಸುತ್ತವೆ.

ವರ್ಣದ್ರವ್ಯಗಳ (Pigments) ಇರುವಿಕೆಯಿಂದ ಉಂಟಾಗುವ ಬಣ್ಣ, ಅಂತಹ ವಸ್ತುವನ್ನು ಅರೆಯುವುದರಿಂದ, ಪುಡಿ ಮಾಡುವುದರಿಂದ, ಬದಲಾಗುವುದಿಲ್ಲ. ಆದರೆ ಭೌತ ರಚನೆಯ ಕಾರಣದಿಂದ ಕಾಣಿಸುವ ಬಣ್ಣ, ಮೇಲೆ ಹೇಳಿದಂತಹ ಭೌತ ಕ್ರಿಯೆಗಳಿಂದ ಬದಲಾವಣೆ ಹೊಂದುತ್ತದೆ. ಉದಾಹರಣೆಗಾಗಿ ಪಕ್ಷಿಯೊಂದರ ಪುಕ್ಕ ನೋಡಲು ನೀಲಿ, ಆದರೆ ಅದೇ ಪುಕ್ಕವನ್ನು ಕುಟ್ಟಿ ಪುಡಿಮಾಡಿದರೆ ಕಂಡು ಬರುವುದು ಕಪ್ಪು ಬಣ್ಣ. ಕಾರಣವೇನೆಂದರೆ ಈ ಹಕ್ಕಿಯ ರೆಕ್ಕೆಯಲ್ಲಿನ ಸೂಕ್ಷ್ಮ ಪದರಗಳು ವಿಶೇಷ ರೀತಿಯಲ್ಲಿ ಜೋಡಿಸಲ್ಪಟ್ಟಿದ್ದು ಅವು ಪುಕ್ಕಗಳ ಮೇಲೆ ಬಿದ್ದ ಬೆಳಕನ್ನು ಚದುರಿಸುತ್ತವೆ.

ನಿರ್ಜೀವ ವಸ್ತುಗಳಲ್ಲಿ ಕಂಡು ಬರುವ ಬಣ್ಣಗಳನ್ನು ಸಹಜವಾಗಿ, ಬೆಳಕಿನ ಸಂಪೂರ್ಣ ಪ್ರತಿಫಲನ, ಚದುರುವಿಕೆ, ವಕ್ರ ವಿಯೋಜನೆ (Diffraction) ಮುಂತಾದ ಭೌತ ನೀತಿಗಳಿಗನುಸಾರವಾಗಿ ವಿವರಿಸಬಹುದು. ಇವೇ ಭೌತ ನೀತಿಗಳಿಗನುಗುಣವಾಗಿ ಕೆಲವು ಪ್ರಾಣಿಗಳಲ್ಲಿಯೂ ಬಣ್ಣಗಳು ಕಂಡು ಬರುತ್ತವೆ.

ಕೆಲವು ಪ್ರಾಣಿಗಳು ಹಿಮ ಶುಭ್ರವಾಗಿ ಕಾಣುವುದುಂಟು. ಅವುಗಳ ಈ ಶ್ವೇತ ವರ್ಣಕ್ಕೆ ಕಾರಣ, ಆ ಪ್ರಾಣಿ ಅಥವಾ ಪಕ್ಷಿಗಳಲ್ಲಿ ಅತಿ ಸೂಕ್ಷ್ಮ ರಚನೆಗಳನ್ನು ಹೊಂದಿದ್ದು, ಅವುಗಳ ಮಧ್ಯೆ ಖಾಲಿ ಜಾಗವಿರುತ್ತದೆ. ಇದರಿಂದ ಸಂಪೂರ್ಣ ಪ್ರತಿಫಲನ ಉಂಟಾಗಿ, ಅಂತಹ ಪ್ರಾಣಿ ಅಥವಾ ಪಕ್ಷಿಗಳು ಬಿಳಿಯ ಬಣ್ಣವನ್ನು ಹೊಂದಿರುತ್ತವೆ.

ಇನ್ನು ಕೆಲವು ಪ್ರಾಣಿ ಪಕ್ಷಿಗಳ ಮೈಮೇಲೆ ಬಿದ್ದ ಬೆಳಕು, ಅವುಗಳಲ್ಲಿನ ಸೂಕ್ಷ್ಮ ಪದರಗಳ ಮೂಲಕ ಪ್ರತಿಫಲನಗೊಂಡು ಹೊರಬರುವುದುಂಟು. ಇಲ್ಲಿ ಒಂದು ಪದರ ಮತ್ತೊಂದು ಪದರಕ್ಕೆ ತಡೆಯಾಗಿ ವರ್ತಿಸಿ ಬೆಳಕಿನ ಕಿರಣವನ್ನು ಸಂಬಂಧಿತ ಬಣ್ಣವನ್ನಾಗಿ ವಿಂಗಡಿಸುತ್ತದೆ. ನವಿಲಿನ ಕಾಮನ ಬಿಲ್ಲಿನ ಬಣ್ಣವೂ ಈ ಕ್ರಿಯೆಯಿಂದಲೇ.

ಈಗಿನ ರಾಸಾಯನಿಕ ಬಣ್ಣಗಳು ಅಥವಾ ಕೃತಕ ಬಣ್ಣಗಳು ಮುಖ್ಯವಾಗಿ ಆ ವಸ್ತು ಯಾವ ರೀತಿಯ ವರ್ಣದ್ರವ್ಯವನ್ನು ಹೊಂದಿದೆ ಮತ್ತು ಆ ವರ್ಣದ್ರವ್ಯ ಬೆಳಕಿನ ಯಾವ ಅಲೆಯುದ್ದದ ಘಟಕಗಳನ್ನು ಹೀರಬಲ್ಲದು ಎನ್ನುವುದರ ಮೇಲೆ ಆಧರಿಸುತ್ತದೆ.

ಆದರೂ, ಬಣ್ಣಗಳ ಲೋಕ ವರ್ಣಮಯ, ರಂಜಕ, ರೋಚಕ, ಬಣ್ಣಿಸಲು ಸುಲಭವಲ್ಲ. ■

ಕತ್ತೆಗಳಿಗೆ ಬಂದ ಕಂಕಣ ಬಲ!

ಅದೊಂದು ಮದುವೆಯ ಸಂಭ್ರಮ. ಎಲ್ಲಾ ಸಾಮೂಹಿಕ ವಿವಾಹಗಳಲ್ಲಿ ಠಿಕಾಣಿ ಹೂಡುವಂತೆ ಇಲ್ಲೂ ಸಹ ರಾಜಕಾರಣಿಗಳು ಧಾರ್ಮಿಕ ಮುಖ್ಯಸ್ಥರು, ಶ್ರೀಮಂತರು ಅತ್ಯಂತ ಸಂಭ್ರಮದಿಂದ ಓಡಾಡುತ್ತಿದ್ದಾರೆ. ಎಲ್ಲರಲ್ಲೂ ಒಂದೇ ಕುತೂಹಲ. ಮದುವೆಯಾಗುವ ಜೋಡಿಗಳು ಹೇಗಿರಬಹುದು ಎಂದು ನೋಡುವ ತವಕ.

ನೆರೆದಿದ್ದ ಜನಸ್ತೋಮದಲ್ಲಿ ಕುತೂಹಲ ಇರಲು ಕಾರಣವಿಷ್ಟೇ : ಈ ಸಾಮೂಹಿಕ ವಿವಾಹ ಮನುಷ್ಯರದಾಗಿರಲಿಲ್ಲ. ವಿಚಿತ್ರವೆಂದರೆ ಮದುವೆ ನಡೆದದ್ದು ಕತ್ತೆಗಳದ್ದು. ಕತ್ತೆಗಳ ಮದುವೆಯನ್ನು ಮನುಷ್ಯರೇ ನೆರವೇರಿಸಿದರು. ಇಂತಹ ಒಂದು ವಿಚಿತ್ರ ಘಟನೆ ನಡೆದಿದ್ದು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ದೊಡ್ಡ ಪಟ್ಟಣವಾಗಿರುವ ಗಜೇಂದ್ರಗಢದಲ್ಲಿ.

ಈ ಮದುವೆಗೆ ಒಂದು ವಿಚಿತ್ರ ಹಿನ್ನೆಲೆ ಇದೆ. ಈ ಭಾಗದಲ್ಲಿ ಕಳೆದ ವರ್ಷ ಸರಿಯಾಗಿ ಮಳೆ ಆಗದೆ ಬೆಳೆ ನಾಶವಾಗಿ ಜನ ಬರಗಾಲದ ಬೇಗೆಯನ್ನು ಅನುಭವಿಸಿದರು. ಅಷ್ಟೇ ಅಲ್ಲದೆ ಕಳಪೆ ಬಿತ್ತನೆ ಬೀಜದಿಂದಾಗಿ ಬೆಳೆನಾಶವಾಗಿ ರೈತರು ನಲುಗಿ ಹೋದರು.

ಸರಿಯಾಗಿ ಮಳೆಯಾಗದಿದ್ದರೆ ಅದು ದೇವರ ಅವಕೃಪೆ, ಸಿಟ್ಟು ಎಂದು ನಂಬಿರುವ ಜನ ದೇವರನ್ನು ಸಂಪ್ರೀತಗೊಳಿಸಲು ಈ ರೀತಿಯ ಮೂಢನಂಬಿಕೆಗಳಿಗೆ ಒಳಗಾಗುತ್ತಾರೆ. ಇದರಲ್ಲಿ ಕೆಲವು ಪಟ್ಟ ಭದ್ರ ಹಿತಾಸಕ್ತಿಗಳು ಸಹ ಇರುತ್ತವೆ.

ಜನರು ಮಳೆಗಾಗಿ ದೇವರ ಹೆಸರಿನಲ್ಲಿ ಉಡಿ ತುಂಬುವುದು, ಕಪ್ಪೆಗಳ ಮದುವೆ, ಕತ್ತೆಗಳ ಮೆರವಣಿಗೆ ಮಾಡುವುದುಂಟು. ಇಷ್ಟೆಲ್ಲಾ ಆದರೂ ಮಳೆ ಬಾರದಿರುವಾಗ, ಕತ್ತೆಗಳ ಸಾಮೂಹಿಕ ವಿವಾಹ ಮಾಡಿ ಮೆರವಣಿಗೆ ಮಾಡಿದ ದಿನವೇ ಮಳೆ ಬರುವುದು ಎಂಬ ಯಾರದೋ ಮಾತನ್ನು ಎಲ್ಲರೂ ಬಲವಾಗಿ ನಂಬಿ ಅದನ್ನು ಜಾರಿಗೊಳಿಸಲು ನಿರ್ಧರಿಸಿದ್ದರಿಂದ ಕತ್ತೆಗಳಿಗೂ ಕಂಕಣ ಬಲ ಕೂಡಿ ಬಂದಿತು.

ಹೆಣ್ಣು-ಗಂಡಿನ ಕಡೆಯವರು ಯಾರೆಂದು ನಿಶ್ಚಯಿಸಲಾಯಿತು. ಗಜೇಂದ್ರಗಢ ಕೃಷಿ ಮಾರುಕಟ್ಟೆಯ ವರ್ತಕರು, ಹಮಾಲರು ಗಂಡಿನ ಕಡೆಯವರೆಂದು, ಪಕ್ಕದ ಗ್ರಾಮದವರು ಹೆಣ್ಣಿನ ಕಡೆಯವರೆಂದು ನಿಶ್ಚಯಿಸಲಾಯಿತು. ಮದುವೆಯನ್ನು ಅದ್ದೂರಿಯಾಗಿ ಮಾಡಲು ಹಾಗೂ ಸಾಮೂಹಿಕ ಭೋಜನ ವ್ಯವಸ್ಥೆಗೆ ತೀರ್ಮಾನ ತೆಗೆದುಕೊಳ್ಳಲಾಯಿತು.

ಮದುವೆಯ ಹಿಂದಿನ ದಿನ ಗಜೇಂದ್ರಗಢ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇರುವ ಕತ್ತೆಗಳನ್ನು ಒಂದೆಡೆ ಸೇರಿಸಲಾಯಿತು. ಮದುವೆ ದಿನದಂದು ಕತ್ತೆಗಳಿಗೆ ಸ್ನಾನ ಮಾಡಿಸಿ ಶೃಂಗರಿಸಿ ಮದುವೆ ಮಂಟಪಕ್ಕೆ ಕರೆತರಲಾಯಿತು. ಗಂಡು-ಹೆಣ್ಣು ಕತ್ತೆಗಳನ್ನು ಜೋಡಿಯಾಗಿ ನಿಲ್ಲಿಸಲಾಯಿತು. ಕತ್ತೆಗಳ ಕೊರಳಿಗೆ ಮನುಷ್ಯರೇ ಹಾರ ಹಾಕಿದರು. ಸಪ್ತಪದಿಯ ಸುತ್ತ ಕತ್ತೆಗಳನ್ನು ಸುತ್ತು ಹಾಕಿಸಿ ಪಟ್ಟಣದಲ್ಲಿ ಮೆರವಣಿಗೆ ಹೊರಡಿಸಿದರು.

ಭೋಜನ ವ್ಯವಸ್ಥೆ ಚೆನ್ನಾಗಿಯೇ ಇತ್ತು. ಮದುವೆಗೆ ಬಂದ ಸಾವಿರಾರು ಜನರು ಊಟದ ತಾಟಿನ ಕಡೆಗೊಮ್ಮೆ ಆಕಾಶದ ಕಡೆಗೊಮ್ಮೆ ನೋಡುತ್ತಿದ್ದರು.

ಮದುವೆ ಮುಗಿದ ನಂತರ ಜನರೆಲ್ಲ ತಮ್ಮ ತಮ್ಮ ಮನೆ ಸೇರಿಕೊಂಡರು. ಆಕಾಶ ಮಾತ್ರ ಕಪ್ಪು ಮೋಡಗಳಿಂದ ಆವೃತ್ತವಾಗಲೇ ಇಲ್ಲ. ಮಳೆ ಹನಿಯಲೂ ಇಲ್ಲ. ಇದರಿಂದಾಗಿ ಜನರು ನಿರಾಸೆಗೊಂಡರೂ ಕಣ್ಣುಗಳಲ್ಲಿ ಆಸೆಯೇನೂ ಕಮರಿ ಹೋಗಲಿಲ್ಲ. ಇಂತಹ ಮೌಢ್ಯ ಆಚರಣೆಯಿಂದಾಗಿ ಸುದ್ದಿ ಮಾಡುವ ರೈತರು ತಮ್ಮ ಪಂಪ್‌ಸೆಟ್ ಸುಟ್ಟು ಹೋಗುತ್ತಿರುವುದು ದೇವರ ಅವಕೃಪೆ ಎಂದು ತಿಳಿದು ದೇವರನ್ನು ಸಂತುಷ್ಟಗೊಳಿಸಲು ಇತ್ತೀಚೆಗೆ ಕುರಿಗಳನ್ನು ಬಲಿಕೊಡುವ ಹೋಮ ಮಾಡಿದ್ದರು.

ಇಂದಿನ ವೈಜ್ಞಾನಿಕಯುಗದಲ್ಲೂ ಮೌಢ್ಯ ಹೆಚ್ಚುತ್ತಿರುವುದು ಒಂದು ವಿಪರ್ಯಾಸವೇ ಸರಿ.

■ ಶಿಖರ



ಸಹಸ್ರನಾಮಗಳು

■ ಎಂ.ಆರ್. ವಿಶ್ವನಾಥರೆಡ್ಡಿ

'ತಿಪ್ಪೇಸ್ವಾಮಿ' ಎಂಬ ಹೆಸರಿನವರು ಚಿತ್ರದುರ್ಗದ ಕಡೆಯವರಿರಬೇಕು ಎಂದು ನೀವು ಊಹಿಸಿದರೆ ಆ ಊಹೆ ನೂರಕ್ಕೆ 99ರಷ್ಟು ಕರಾರುವಾಕ್ಕಾಗಿರುತ್ತದೆ. ಮುನಿಯಪ್ಪ ಎಂಬಾತ ಕೋಲಾರದ ಕಡೆಯವರಿರದೆ ಇನ್ಯಾವ ಕಡೆಯವರಾಗಲಿಕ್ಕೆ ಸಾಧ್ಯ?

ಮಿತ್ರರೊಬ್ಬರ ಗೃಹಪ್ರವೇಶ ಸಮಾರಂಭಕ್ಕೆ ಹೋಗಿದ್ದೆ. ಹೋಮ, ಪೂಜೆ ಎಲ್ಲ ಮುಗಿಯಿತು. ಮುಂದಿನ ಕಾರ್ಯಕ್ರಮ ಭರ್ಜರಿ ಊಟ ತಾನೆ? ಆದರೆ ನನ್ನ ಮಿತ್ರ ''ನರಿ ಇನ್ನೂ ಬಂದಿಲ್ಲ. ನರಿ ಬಂದ ತಕ್ಷಣವೇ ಊಟಕ್ಕೆ ಏಳೋಣ'' ಅಂದ. ಇದೇನಪ್ಪಾ ಗ್ರಹಚಾರ ಎಂದುಕೊಂಡೆ. ಏಕೆಂದರೆ ಕೆಲವರು ಗೃಹಪ್ರವೇಶ ಸಮಾರಂಭದಲ್ಲಿ ಗೃಹ ಶಾಂತಿಗಾಗಿ ಕುರಿ, ಕೋಳಿಗಳನ್ನು 'ಬಲಿ' ಕೊಡುವುದು ಕೇಳಿದ್ದೆ. ಆದರೆ ಈ ಮಿತ್ರ ಮಹಾಶಯ ನರಿಯ ಬಲಿಕೊಡುತ್ತಾನಲ್ಲಾ ಎಂದು ಆಶ್ಚರ್ಯದಿಂದ ಪ್ರಶ್ನಾರ್ಥಕವಾಗಿ ಆತನ ಕಡೆ ನೋಡುತ್ತಿದ್ದಂತೆ ''ಓಹೋ ನರಿ ಬಂದಾಯ್ತು ನರಿ ಬಂದಾಯ್ತು'' ಎಂದು ನನ್ನ ಮಿತ್ರ ಸಂತೋಷದಿಂದ ಕೂಗಿಕೊಂಡ. ಒಳಗೆ ಬಂದದ್ದು ಎರಡು ಕಾಲಿನ ನರೇಂದ್ರ ಎಂಬ ಹೆಸರಿನ ಮಾನವ ಪ್ರಾಣಿ. ನರೇಂದ್ರನು ನನ್ನ ಮಿತ್ರನ ಬಾಯಲ್ಲಿ

ನರಿಯಾಗಿದ್ದ. ಇಂತಹ ತಮಾಷೆಯ, ಕುತೂಹಲ ಕಾರಿ ಪ್ರಸಂಗಗಳು ಬೇರೆ ದೇಶಗಳಲ್ಲಿ ಸಿಗಲಾರ ವೆಂದೇ ನನ್ನ ಎಣಿಕೆ. ಭಾರತದಲ್ಲಿ ಆದರಲ್ಲೂ ಚೆಲುವ ಕನ್ನಡ ನಾಡಿನಲ್ಲಿನ ಹೆಸರುಗಳ ವಿವಿಧತೆ, ಅಡ್ಡ ಹೆಸರುಗಳ ರಂಜಕತೆ ಒಂದು ಸಂಶೋಧನಾ ಪ್ರಬಂಧಕ್ಕೆ ವಸ್ತುವಾಗಬಹುದೋ ಏನೋ.

ನಮ್ಮ ಜನ ಧಾರ್ಮಿಕರು, ದೈವಭೀರುಗಳು. ಜಾತಿಜಾತಿಗೂ ಕೆಲವು ಪ್ರಧಾನ ದೇವತೆಗಳು. ಇದರ ಜೊತೆಗೆ ''ಮನೆದೇವರು'' ಬೇರೆ. ಹೀಗಾಗಿ ದೇವರ ಹೆಸರೇ ಹುಲುಮಾನವನಿಗೂ. ಈ ಜಾತ್ಯಾತೀತ ದೇಶದಲ್ಲಿ ಕೆಲವೊಮ್ಮೆ ಹೆಸರಿನಿಂದಲೇ ಒಬ್ಬನ ಜಾತಿಯನ್ನು ಗುರುತಿಸಬಹುದು. ಹೆಸರಿನಿಂದಲೇ ಕೆಲವೊಮ್ಮೆ ಆ ವ್ಯಕ್ತಿ ಯಾವ ಜಿಲ್ಲೆಯವನು ಎಂಬುದನ್ನು ಕಂಡುಕೊಳ್ಳಬಹುದು. ಕೊಟ್ರಪ್ಪ ಎಂಬ ಮನುಷ್ಯ ನಿಮಗೆ ಪರಿಚಯವಾದ ಎಂದುಕೊಳ್ಳಿ, ಆಗ ''ನೀವು ಬಳ್ಳಾರಿ ಕಡೆಯವರೇ'' ಎಂದು ಖಂಡಿತವಾಗಿ ಕೇಳಿಯೇ ಕೇಳುತ್ತೀರಿ. ಹೌದೋ ಅಲ್ಲವೋ? 'ತಿಪ್ಪೇಸ್ವಾಮಿ' ಎಂಬ ಹೆಸರಿನವರು ಚಿತ್ರದುರ್ಗದ ಕಡೆಯವರಿರಬೇಕು ಎಂದು ನೀವು ಊಹಿಸಿದರೆ ಆ ಊಹೆ ನೂರಕ್ಕೆ 99ರಷ್ಟು ಕರಾರುವಾಕ್ಕಾಗಿರುತ್ತದೆ. ''ಮುನಿಯಪ್ಪ'' ಎಂಬಾತ ಕೋಲಾರದ ಕಡೆಯವರಿರದೆ ಇನ್ಯಾವ ಕಡೆಯವರಾಗಲಿಕ್ಕೆ ಸಾಧ್ಯ?

ಒಂದು ಹಳೇ ಜೋಕು. ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ ಐವರು ಹುಡುಗರು ನಿಮ್ಮ ಮುಂದೆ ಹೋಗುತ್ತಿದ್ದಾಗ ನೀವು ''ಕೊಟ್ರೇಶಿ'' ಎಂದು ಕೂಗಿದರೆ ಕನಿಷ್ಟ ಮೂರು ಹುಡುಗರ ತಲೆಗಳಾದರೂ ನಿಮ್ಮ ಕಡೆ ತಿರುಗುತ್ತವಂತೆ. ಕೊಟ್ಟೂರಿನ ತುಂಬ ಕೊಟ್ರಪ್ಪ, ಕೊಟ್ಟೂರಪ್ಪ, ಕೊಟ್ರಬಸಪ್ಪ, ಕೊಟ್ರಮ್ಮ, ಕೊಟ್ರ, ಕೊಟ್ರಿಗಳೇ ರಾರಾಜಿಸುತ್ತಾರೆ. ಇನ್ನು ಅಪ್ಪ, ಅಮ್ಮ, ಅಕ್ಕ ಎಂದು ಆ ಹೆಸರುಗಳಿಗೆ ಸೇರಿಸಿದರೆ ಕೊಟ್ರಪ್ಪ, ಕೊಟ್ರಮ್ಮ, ಕೊಟ್ರಕ್ಕ ಆಗಿ ಬಿಡುತ್ತಾರೆ. ಆ ಊರಿನ ಕೆಲವು ಮನೆಗಳಲ್ಲಿ ಗಂಡ ಕೊಟ್ರಪ್ಪನಾದರೆ ಹೆಂಡತಿ ಕೊಟ್ರಮ್ಮ, ಮಗ ಕೊಟ್ರೇಶಿಯಾದರೆ ಮಗಳು ಕೊಟ್ರಿ.

ಚಿತ್ರದುರ್ಗ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ರೆಡ್ಡಿ ಜನಾಂಗದವರು ಕಾಣಬರುತ್ತಾರೆ. ಅವರೆಲ್ಲರೂ 5-6 ಹೆಸರುಗಳಿಗೆ ಸೀಮಿತರಾಗಿದ್ದಾರೆ. ರಾಮರೆಡ್ಡಿ, ಕೃಷ್ಣಾರೆಡ್ಡಿ, ಗೋವಿಂದರೆಡ್ಡಿ, ನಾರಾಯಣರೆಡ್ಡಿ, ಹನುಮಂತರೆಡ್ಡಿ ಇತ್ಯಾದಿ. ಅವರ ಹೆಂಗಸರೆಲ್ಲ ರಾಮಕ್ಕ, ಕೃಷ್ಣಮ್ಮ, ಗೋವಿಂದಮ್ಮ, ನಾರಾಯಣಮ್ಮ, ಹನುಮಕ್ಕ ಇತ್ಯಾದಿ. ಒಂದೇ ಹಳ್ಳಿಯಲ್ಲಿ 20 ರಾಮರೆಡ್ಡಿಗರು 18 ನಾರಾಯಣರೆಡ್ಡಿಗರು ಇದ್ದರೆ ಅವರನ್ನು ಗುರುತಿಸುವುದಾದರೂ ಹೇಗೆ? ಇಂತಹ ಸಂದರ್ಭದಲ್ಲಿ ನೋಡಬಹುದು ನಮ್ಮ ಜನರ ಕಲ್ಪನಾಶಕ್ತಿಯನ್ನು, ವ್ಯಾವಹಾರಿಕ ಕುಶಲತೆಯನ್ನು ಮತ್ತು ಹಾಸ್ಯಪ್ರಜ್ಞೆಯನ್ನು. 20 ರಾಮರೆಡ್ಡಿಗಳಲ್ಲಿ ಗಣೆ ಬೊಂಬಿನಂತೆ ಬೆಳೆದಿರುವಾತ 'ಉದ್ದನ್ನ ರಾಮರೆಡ್ಡಿ', ಆತನಿಗೆ ತೀರ ವಿರುದ್ಧ ಎತ್ತರದಾತ 'ಗಿಡ್ಡ ರಾಮರೆಡ್ಡಿ'ಯಾದರೆ ಅತೀ ದಪ್ಪನಾಗಿರುವಾತ 'ದುಬ್ಬರಾಮರೆಡ್ಡಿ'ಯಾಗುತ್ತಾನೆ. ಹೀಗೆಯೇ 'ಕುಂಟರಾಮರೆಡ್ಡಿ', 'ಟೋಪಿರಾಮರೆಡ್ಡಿ', 'ಕುಲ್ಡರಾಮರೆಡ್ಡಿ', 'ಪೋಲಿಸ್ ರಾಮರೆಡ್ಡಿ', 'ಮೇಷ್ಟ್ರುರಾಮರೆಡ್ಡಿ'ಗಳು ಕಾಣಸಿಗುತ್ತಾರೆ. ಒಬ್ಬ 'ಕೆಂಚ ರಾಮರೆಡ್ಡಿ' ಸಹ ಇದ್ದಾರೆ. ಆತ ಕೆಂಪು ಬಣ್ಣದವನೋ, ಕೆಂಚು ಕೂದಲಿನವನೋ ಇರಬೇಕು ಎಂಬ ನಿಮ್ಮ ಎಣಿಕೆ ನೂರಕ್ಕೆ ನೂರರಷ್ಟು ತಪ್ಪು. ಸದರಿ ರಾಮರೆಡ್ಡಿ, ಕೆಂಚಮ್ಮ ಎಂಬಾಕೆಯನ್ನು 'ಇಟ್ಟುಕೊಂಡಿರುವ' ರಸಿಕ ಶಿಖಾಮಣಿ. ಆದ್ದರಿಂದ ಆತನಿಗೆ ಈ ಶ್ರೀನಾಮ.

ಒಂದು ಕಾಲೇಜಿನಲ್ಲಿ 3 ಜನ ಬಸವರಾಜರು ಉಪನ್ಯಾಸಕರಾಗಿದ್ದಾರೆ. ಅವರ ಅಧ್ಯಾಪಕ ಮಿತ್ರರು ಮೂವರಿಗೂ ಒಂದೊಂದು ಹೆಸರಿಟ್ಟು, ಗುರುತಿಸುವ ಸಮಸ್ಯೆಯನ್ನು ಪರಿಹರಿಸಿಕೊಂಡಿದ್ದಾರೆ. ಒಬ್ಬ ಬಸವರಾಜು ಎನ್.ಸಿ.ಸಿ. ಅಧಿಕಾರಿ ಸಹ. ಸರಿ ಆತ 'ಮೇಜರ್ ಬಸವರಾಜ'. ಇನ್ನೊಬ್ಬ ಬಸವರಾಜುವಿಗೆ ನಂದಿನಿ ಹಾಲಿನಲ್ಲಿ ವಿಶ್ವಾಸ ಇಲ್ಲದುದರಿಂದಲೋ ಏನೋ ಎಮ್ಮೆ ಸಾಕಿದ್ದಾರೆ. ಆತ 'ಎಮ್ಮೆ ಬಸವರಾಜ' ಆದ. ಮೂರನೆಯಾತ ಉಳಿದವರಿಗಿಂತ Sound Party. ಅದಕ್ಕಾಗಿ ಆತ ''ಬಿರ್ಲಾ ಬಸವರಾಜು''.

ನೋಡಿ ಹೇಗಿವೆ ಅಡ್ಡ ಹೆಸರುಗಳು!

ನಮ್ಮ ಮಿತ್ರರಲ್ಲಿ ಚಂದ್ರಶೇಖರಯ್ಯ ಎಂಬ ನಾಮಧೇಯದವರು ಬಹಳ. ಅವರಲ್ಲಿ ಬಹಳಷ್ಟು ಮಂದಿಗೆ ನಾವು ಇಂಗ್ಲಿಷ್ ಹೆಸರುಗಳನ್ನಿಟ್ಟು ಸುಲಭವಾಗಿ ಗುರುತಿಸುತ್ತಿದ್ದೇವೆ. H.M. ಚಂದ್ರಶೇಖರಯ್ಯ "How much' ಆದರೆ, S.M. ಚಂದ್ರಶೇಖರಯ್ಯನು "So much", ಇನ್ನು V.M.ಚಂದ್ರಶೇಖರಯ್ಯನು "Very much' ಹಾಗೂ T.M. ಚಂದ್ರಶೇಖರಯ್ಯನು "Too much". ಹೇಗಿದೆ ನಮ್ಮ ಪ್ರತಿಭೆ?!

ಆದರೆ ಇತ್ತೀಚಿನ ಪೀಳಿಗೆಯ ಜನ ತ್ವರಿತಗತಿಯಲ್ಲಿ ಬದಲಾಗುತ್ತಿದ್ದಾರೆ. ಆಧುನಿಕರಾಗುತ್ತಿದ್ದಂತೆ ಹೆಸರುಗಳಲ್ಲೂ ಕ್ರಾಂತಿಕಾರಿ ಬದಲಾವಣೆಗಳಾಗುತ್ತಿವೆ. ಈಗಿನ ಹುಡುಗರೆಲ್ಲ 'ಆಕಾಶ್' 'ತ್ರಿಶೂಲ್' 'ವಿಕ್ರಾಂತ್' ಇತ್ಯಾದಿ. ಇನ್ನು ಹುಡುಗಿಯರೆಲ್ಲ 'ವೈಷ್ಣವಿ', 'ಅರ್ಚನಾ' 'ಪೂಜಾ' ಇತ್ಯಾದಿ.

ನನ್ನ ಗುರುತಿನ ಒಬ್ಬ ಅಜ್ಜಿ ಇದ್ದಾರೆ. ಹೆಸರು ಹನುಮಕ್ಕ. ಆಕೆಯ ಮಕ್ಕಳೆಲ್ಲ ಬೆಂಗಳೂರು, ಮುಂಬಯಿ, ದೆಹಲಿ ಇತ್ಯಾದಿ ನಗರಗಳಲ್ಲಿದ್ದಾರೆ. ರಜಾದಿನಗಳಲ್ಲಿ ಅವರೆಲ್ಲ ತಮ್ಮ ತಮ್ಮ ಮಕ್ಕಳೊಂದಿಗೆ ಹನುಮಕ್ಕನ ಮನೆಗೆ ಬರುತ್ತಾರೆ, ಆಕೆಗೆ ಮೊಮ್ಮಕ್ಕಳನ್ನೆಲ್ಲಾ ಬಾಯಿತುಂಬ ಮಾತನಾಡಿಸಿ ಸುಖಿಸುವ ಆಸೆ. ಆದರೆ ಎಲ್ಲ ಹೆಸರುಗಳೂ ಚಿತ್ರವಿಚಿತ್ರ. ಜೊತೆಗೆ ಆ ಹೆಸರುಗಳನ್ನು ಹೇಳಲಿಕ್ಕೆ ನಾಲಿಗೆ ಸರಿಯಾಗಿ ತಿರುಗದು. ಆ ಮಕ್ಕಳೆಲ್ಲ ಪಿಂಕಿ, ಡಾಲಿ, ಗೋಲ್ಡಿ, ಬಂಟಿ, ವಿಕ್ಕಿ ಇತ್ಯಾದಿ. ಹನುಮಕ್ಕಜ್ಜಿಗೆ ಹತಾಶೆ. ಏನೋ ಕಳೆದುಕೊಂಡಂತಹ ಭಾವ. ಮಾನವೀಯ ಸಂಬಂಧಗಳಲ್ಲಿ ಇತ್ತೀಚೆಗೆ ಕಾಣಬರುತ್ತಿರುವ ಕೃತ್ರಿಮತೆ ಅಸಹಜತೆ, ಔಪಚಾರಿಕತೆ ಮುಂತಾದ ಗುಣಗಳಿಗೂ ಬದಲಾಗುತ್ತಿರುವ ಈ ಹೆಸರುಗಳಿಗೂ ನಿಕಟ ಸಂಬಂಧ ಇದೆ ಎಂದು ಅನ್ನಿಸುವುದಿಲ್ಲವೆ? ನಮ್ಮ ಪ್ರೀತಿಯ ತಿಪ್ಪೇಶಿ, ಕೊಟ್ರೇಶಿಗಳು, ಕಿಟ್ಟಿ, ನಾಣಿ ವೆಂಕಿಗಳು, ಸರಸು, ಲಚ್ಚಿ, ಶಾಂತಿಗಳು ಎಲ್ಲ ಕಾಲಕ್ಕೂ ನಮ್ಮ ಸಮಾಜದಿಂದ, ಜನ ಜೀವನದಿಂದ ದೂರ ಸರಿದು ಹೋಗುತ್ತಿದ್ದಾರೆ ಎಂದು ಭಾಸವಾಗುತ್ತಿಲ್ಲವೆ? ನಿಮಗೆ ಹೇಗೆ ಅನ್ನಿಸುತ್ತದೆ?

■

ಕಲಾ ಪ್ರೇಮಿ

ಕೊಂಡು ಕೊಂಡವ
ಬೆಲೆ ಬಾಳುವ ಅಪೂರ್ವ
ಬಣ್ಣದ ಭಿಕ್ಷುಕ ವೇಷದ ಚಿತ್ರ
ಮನೆ ಮುಂದೆ ಅನ್ನಕ್ಕಾಗಿ ನಿಂತ
ಜೀವಂತ ಭಿಕ್ಷುಕನನ್ನು
ಕತ್ತು ಹಿಡಿದು ಕದದಾಚೆ ನೂಕಿ
'ದರಿದ್ರ ಜನರು' ಎಂದ್ಹೇಳಿ
ಬಾಗಿಲು ಹಾಕಿಕೊಂಡ.

–ನಾಹೀರಾ ಕುಷ್ಟಗಿ

ಕುಲಗೆಟ್ಟರೂ ಸುಖಪಡದ ಉಪ್ಪು

■ ಡಾ.ಟಿ.ಕೆ. ತಾಪಸ್

ಜಗತ್ತಿನ ಎರಡನೆಯ ಅತಿ ದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರವಾದ 'ಮೇರಾ ಮಹಾನ್ ಭಾರತ'ದಲ್ಲಿ ಪ್ರಜಾ-ಸತ್ತೆ! ಎಂದು ನರಳುವ ಪ್ರಸಂಗಗಳಿಗೇನೂ ಕೊರತೆಯಿಲ್ಲ. ಆದುದರಿಂದಲೇ ಇರಬೇಕು 'ಬಡವರಿಂದ ತುಂಬಿ ತುಳುಕುವ ಸಮೃದ್ಧ ರಾಷ್ಟ್ರ' ಎಂಬ ವ್ಯಂಗ್ಯೋಕ್ತಿಗೆ ಅದು ಪಾತ್ರವಾದದ್ದು. ಕೇಂದ್ರ, ರಾಜ್ಯ ಸರಕಾರಗಳ ಹುಚ್ಚು ಹಾಗೂ ಅರೆಬೆಂದ ನಿರ್ಧಾರಗಳಿಂದ ಜನಸಾಮಾನ್ಯರ ಸಂಕಷ್ಟಗಳು ಹೆಚ್ಚುತ್ತಲಿವೆ. ಸರಕಾರಗಳ ಇಂಥ ನಿರ್ಧಾರಗಳ ವಿರುದ್ಧ ಜನಪ್ರತಿಭಟನೆ ಫಲ ನೀಡದಾದಾಗ ಅನಿವಾರ್ಯವಾಗಿ ನ್ಯಾಯಾಲಯಗಳ ಬಾಗಿಲು ತಟ್ಟುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಇಂಥದೊಂದು ತಾಜಾ ನಿದರ್ಶನ 'ಅಯೋಡಿನ್-ಉಪ್ಪಿನ ಪ್ರಕರಣ'. ಕೇಂದ್ರ ಸರಕಾರ ಉಪ್ಪಿಗೆ 'ಉಪ್ಪುಪ್ಪು' ಮಾಡಿ ಈಗ ಪೇಚಿಗೆ ಸಿಲುಕಿದ ಪ್ರಸಂಗ ರೋಚಕವಾಗಿದೆ.

1955ರಲ್ಲಿ ಆಹಾರ ಕಲಬೆರಕೆ ಪ್ರತಿಬಂಧ ನಿಯಮಗಳನ್ನು ರೂಪಿಸಿದ ಕೇಂದ್ರ ಸರಕಾರ ಆ ನಿಯಮಗಳ 44(ಜ) ಕಲಮನ್ನು ತಿದ್ದುಪಡಿ ಮಾಡುವುದರ ಮೂಲಕ ರಾಷ್ಟ್ರಾದ್ಯಂತ ಅಯೋಡಿನ್ ರಹಿತ ಉಪ್ಪಿನ ಉಪಯೋಗ, ಸಂಗ್ರಹ ಮತ್ತು ಮಾರಾಟಗಳನ್ನು ನಿಷೇಧಿಸಿತು. ದಿ. 27.11.1997ರ ಈ ತಿದ್ದುಪಡಿ ದಿ. 27.5.1998 ರಂದು ಜಾರಿಯಲ್ಲಿ ಬಂದಿತು.

ಧಾರವಾಡದ ವಯೋವೃದ್ಧ ಸ್ವಾತಂತ್ರ್ಯ ಹೋರಾಟಗಾರ ನರಸಿಂಹ ದಾಬಡೆಯವರು ಹುಬ್ಬಳ್ಳಿ ಮೆಡಿಕಲ್ ಅಸೋಶಿಯೇಶನ್‌ದ ತಜ್ಞರ ಅಭಿಪ್ರಾಯದ ಬೆಂಬಲ ಪಡೆದು ಈ ನಿಷೇಧದ ವಿರುದ್ಧ ಧ್ವನಿಯೆತ್ತಿ ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಯೋಧರ ಸಂಘ ಹಾಗೂ ಧಾರವಾಡ ಗಾಂಧಿ ಶಾಂತಿ ಪ್ರತಿಷ್ಠಾನಗಳ ಸಂಯುಕ್ತ ಆಶ್ರಯದಲ್ಲಿ ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಳ್ಳುವ ಸೂಚನೆ ನೀಡಿದ್ದಾರೆ. ಧಾರವಾಡದಲ್ಲಿ ದಿ. 5.7.98 ರಂದು ಗಾಂಧಿ ಶಾಂತಿ ಪ್ರತಿಷ್ಠಾನ, ಧಾರವಾಡ ಜಿಲ್ಲಾ ಸ್ವಾತಂತ್ರ್ಯಯೋಧರ ಸಂಘ, ಇಂಜಿನಿಯರರ ಸಂಘ, 'ಗುಬ್ಬಚ್ಚಿ ಪರಿವಾರ' ಮೊದಲಾದ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ವಿಚಾರ ಸಂಕಿರಣ ಏರ್ಪಟ್ಟಿತ್ತು. ಹಿಮಾಲಯದ ತಪ್ಪಲು ಪ್ರದೇಶದಲ್ಲಿ ತಲೆದೋರಿರುವ ಅಯೋಡಿನ್ ಕೊರತೆಯ ಕಾರಣ ಗಳಗಂಡ ರೋಗ ತೊಂದರೆ ಕೊಟ್ಟರೆ ಧಾರವಾಡ ಜಿಲ್ಲೆಯ ಜನ ಅಯೋಡಿನ್ ಉಪ್ಪು ತಿನ್ನುವ ಅಗತ್ಯವಿಲ್ಲ. ಆದುದರಿಂದ ಇಂಥ ಹುಚ್ಚು ಕಡ್ಡಾಯದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಲು ನಿರ್ಧರಿಸಲಾಯಿತು.

ಕೇಂದ್ರ, ರಾಜ್ಯ ಸರಕಾರಗಳ ಹುಚ್ಚು ಹಾಗೂ ಅರೆಬೆಂದ ನಿರ್ಧಾರಗಳಿಂದ ಜನಸಾಮಾನ್ಯರ ಸಂಕಷ್ಟಗಳು ಹೆಚ್ಚುತ್ತಲಿವೆ. ಸರಕಾರಗಳ ಇಂಥ ನಿರ್ಧಾರಗಳ ವಿರುದ್ಧ ಜನಪ್ರತಿಭಟನೆ ಫಲ ನೀಡದಾದಾಗ ಅನಿವಾರ್ಯವಾಗಿ ನ್ಯಾಯಾಲಯಗಳ ಬಾಗಿಲು ತಟ್ಟುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಇಂಥದೊಂದು ತಾಜಾ ನಿದರ್ಶನ 'ಅಯೋಡಿನ್-ಉಪ್ಪಿನ ಪ್ರಕರಣ'. ಕೇಂದ್ರ ಸರಕಾರ ಉಪ್ಪಿಗೆ 'ಉಪ್ಪುಪ್ಪು' ಮಾಡಿ ಈಗ ಪೇಚಿಗೆ ಸಿಲುಕಿದ ಪ್ರಸಂಗ ರೋಚಕವಾಗಿದೆ.

ಗೋಕಾಕದ ಡಾ.ಯುವರಾಜ ಕಾಮೋಜಿ ಎಂಬುವವರು ''ಮಹಾತ್ಮಾ ಗಾಂಧೀಜಿಗೆ ಅಯೋಡಿನ್‌ಯುಕ್ತ ಉಪ್ಪಿನ ಮಹತ್ವದ ಬಗ್ಗೆ ತಿಳಿದಿದ್ದರೆ ಅವರೆಂದೂ ಅಯೋಡಿನ್ ರಹಿತ ಉಪ್ಪನ್ನು ಉತ್ಪಾದನೆ ಮಾಡಲು ಬಿಡುತ್ತಿರಲಿಲ್ಲ'' ಎಂದು ಪ್ರತಿಕ್ರಿಯೆಯ ರೂಪದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆದರೆ ಫಲಪ್ರದ ಪ್ರತಿಭಟನೆ ಆಂಧ್ರಪ್ರದೇಶದಲ್ಲಿ ಜರುಗಿದೆ. ಅಲ್ಲಿಯ ಮಿತವ್ಯಯಕರ ಹಾಗೂ ಪರಿಣಾಮಕಾರಿ ಆರೋಗ್ಯರಕ್ಷಣೆಯ ಬಗೆಗಿನ ಸಾಮಾಜಿಕ ಸಂಘಟನೆಯು (People for Economical and Effective Medicare)ತನ್ನ ಅಧ್ಯಕ್ಷರಾದ ವೈದ್ಯ ಪಿ.ವಿ.ಆರ್. ಭಾಸ್ಕರ್‌ರಾಯರ ನೇತೃತ್ವದಲ್ಲಿ ಆ ರಾಜ್ಯದ ಗೌರವಾನ್ವಿತ ಉಚ್ಚ ನ್ಯಾಯಾಲಯದ ಮೊರೆ ಹೊಕ್ಕಿತು.

ಮೊಕದ್ದಮೆಯನ್ನು ದಾಖಲಿಸಿದ ಮೇಲೆ ಸಾಕಷ್ಟು ಕಾಲಾವಕಾಶವಿದ್ದಾಗ್ಯೂ ಪ್ರತಿವಾದಿಗಳು ತಮ್ಮ ಪ್ರತಿವಾದವನ್ನು ಮಂಡಿಸದಿದ್ದುದರಿಂದ ದಿ. 19.6.1998 ರಂದು ನ್ಯಾಯಾಲಯವು ಪ್ರಶ್ನಿತ ತಿದ್ದುಪಡಿಯ ಕಾರ್ಯಾಚರಣೆಗೆ ಮಧ್ಯಂತರ ತಡೆ ನೀಡಿ ಸಂಬಂಧಿತ ಸರಕಾರಗಳು ಮತ್ತು ಇಲಾಖೆಗಳಿಗೆ ತಡೆಯಾಜ್ಞೆಯನ್ನು ಏಕೆ ಕಾರ್ಯಗೊಳಿಸಬಾರದೆಂದು ಕಾರಣ ಕೇಳಿ ಸೂಚನೆ ನೀಡಿದ್ದಾಗಿ ವರದಿಯಾಗಿದೆ.

ಹಾಗೆ ನೋಡಿದರೆ, ಅಯೋಡಿನ್ ಹಾಗೂ ಉಪ್ಪು ಇವೆರಡೂ ಆರೋಗ್ಯಕ್ಕೆ ಲಾಭಕರವಾಗಿವೆಯೆಂಬುದು ತಜ್ಞರ ಅಭಿಪ್ರಾಯ. ಈಗ ಸಂಗ್ರಹವಾಗಿ ಇದನ್ನು ತಿಳಿಯೋಣ.

ಅಯೋಡಿನ್ ದೇಹರಚನೆಗೆ ತುಂಬ ಅಗತ್ಯ ಪದಾರ್ಥ. ನಮ್ಮ ದೇಹದಲ್ಲಿ ಕ್ಯಾಲ್ಸಿಯಂ ಮತ್ತು ಕೊಬ್ಬನ್ನು ಸಮರ್ಥವಾಗಿ ಬಳಸಿಕೊಳ್ಳಲು ಬೇಕಾದ ಅಯೋಡಿನ್ ಪ್ರಮಾಣ ಒಂದು ಔನ್ಸಿನ 0.0001 ರಷ್ಟು. ಶರೀರದಲ್ಲಿಯ ಅಯೋಡಿನ್ ಪ್ರಮಾಣವನ್ನು ಸೂಕ್ಷ್ಮದರ್ಶಕದಿಂದ ತಿಳಿಯಬಹುದು. ಉಸಿರು, ಚರ್ಮ, ಆಹಾರಗಳ ಮೂಲಕ ಅಯೋಡಿನ್ ದೇಹವನ್ನು ಸೇರಬಹುದು. ಸಮುದ್ರ ಪರಿಸರದ ಗಾಳಿಯಲ್ಲಿ ಕೊಳೆತ ಸಮುದ್ರ ಜೊಂಡಿನ ಕಾರಣ, ಅಯೋಡಿನ್ ಪ್ರಮಾಣ ಹೆಚ್ಚು. ಚರ್ಮದ ಮೇಲೆ ಅಯೋಡಿನ್ ಲೇಪಿಸಿಕೊಂಡ ಕೆಲ ನಿಮಿಷಗಳಲ್ಲಿಯೇ ಬಾಯಿಯಲ್ಲಿ ಬರುವ ಜೊಲ್ಲು ಅದು ರಕ್ತಪ್ರವಾಹಕ್ಕೆ ಸೇರಿರುವುದನ್ನು ಸೂಚಿಸುತ್ತದೆ. ನಾವು ಆಹಾರ ಸೇವಿಸುವಾಗ ಲವಣ ರೂಪದಲ್ಲಿ ಒದಗುವ ಹಲವಾರು ಖನಿಜಗಳಲ್ಲಿ ಅಯೋಡಿನ್ ಒಂದು. ಬಹಳಷ್ಟು ಎಲೆ ತರಕಾರಿ, ಆಡಿನ ಹಾಲು, ಕೋಳಿ ಮೊಟ್ಟೆ, ಟೊಮೆಟೋ, ಈರುಳ್ಳಿ, ಶುಂಠಿ, ಮೆಣಸು, ಕೊತ್ತಂಬರಿ, ಲವಂಗ, ಸಮುದ್ರದ ನೀರು, ಸಮುದ್ರ ಜೊಂಡು, ಸಮುದ್ರ ಜೀವಿಗಳು, ಇವುಗಳಲ್ಲಿ ಅದು ಲಭ್ಯ.

ಪ್ರಾಚೀನ ಮೆಕ್ಸಿಕೋದಲ್ಲಿ ಉಪ್ಪನ್ನೇ ದೇವರೆಂದು ಬಗೆದಿದ್ದರಂತೆ! ಬಹುಕಾಲದ ಹಿಂದೆ ಯುರೋಪ್‌ನಲ್ಲಿ ಕೆಲಸಕ್ಕೆ ಪ್ರತಿಫಲ ಉಪ್ಪಿನ

ರೂಪದಲ್ಲಿದ್ದಿತಂತೆ. ಇಂಗ್ಲೀಷಿನ Salary, ಲ್ಯಾಟಿನ್ ಭಾಷೆಯ Salarium (ಯೋಧರಿಗೆ ಕೊಡುವ ಉಪ್ಪು ಹಣ) ದಿಂದ ಸಿದ್ಧವಾಗಿದೆ. ನಮ್ಮ ದೇಹದಲ್ಲಿ ಸುಮಾರು 50 ಕ್ವಾರ್ಟ್‌ಗಳಷ್ಟು ನೀರಿದೆ. ಮಾಂಸದಲ್ಲಿ ಶೇಕಡಾ 75, ಯಕೃತ್ತಿನಲ್ಲಿ ಶೇ. 70, ಮಿದುಳಿನಲ್ಲಿ ಶೇ. 79, ಮೂತ್ರ ಕೋಶದಲ್ಲಿ ಶೇ. 83 ರಷ್ಟು, ಇದೆಲ್ಲವೂ ಉಪ್ಪು ನೀರೇ. ಬೇರೆ ಪ್ರಾಣಿಗಳನ್ನು ತಿಂದು ಜೀವಿಸುವ ಜೀವಿಗಳಿಗೆ ತಾವು ತಿನ್ನುವ ಪ್ರಾಣಿಗಳ ದೇಹದಿಂದಲೇ ಅಗತ್ಯವಾದ ಉಪ್ಪು ದೊರೆಯುತ್ತದೆ. ಮಾಂಸವನ್ನು ಬಿಟ್ಟು ಬೇರೇನನ್ನೂ ತಿನ್ನದ ಎಸ್ಕಿಮೋಗಳಿಗೆ ಉಪ್ಪಿನ ಅಗತ್ಯವೂ ಇಲ್ಲ; ಬಯಕೆ ಸಹ ಇಲ್ಲ. ಸಮುದ್ರದಿಂದ ದೂರವಿರುವ ಜನರಿಗೆ ಉಪ್ಪಿನ ಅಗತ್ಯ ಹೆಚ್ಚು. ಸಸ್ಯಗಳಿಂದ ಉಪ್ಪು ದೊರೆಯದ್ದರಿಂದ ಸಸ್ಯಾಹಾರಿಗಳಿಗೆ ಉಪ್ಪು ಅಗತ್ಯ. ಉಪ್ಪಿಲ್ಲದ ಊಟದಿಂದ ರಕ್ತದಲ್ಲಿಯ ಉಪ್ಪು ಕೊರತೆಯನ್ನು ಚರ್ಮದಲ್ಲಿಯ ಉಪ್ಪಿನ ದಾಸ್ತಾನಿನಿಂದ ರಕ್ತ ಪಡೆಯುತ್ತದೆ. ವಿಶೇಷವಾಗಿ ಮೂತ್ರಕೋಶಗಳ ಮೂಲಕ ಉಪ್ಪು ದೇಹದ ಹೊರಕ್ಕೆ ಹೋಗುವುದರಿಂದ ಈ ಅವಯವದ ಜಾಡ್ಯವಿದ್ದವರಿಗೆ ಉಪ್ಪಿಲ್ಲದ ಆಹಾರ ಕಡ್ಡಾಯ. ದೇಹದಿಂದ ಹೆಚ್ಚಿನ ಪೊಟ್ಯಾಶಿಯಂ ಹೊರಹಾಕಲು ಉಪ್ಪು ಅಗತ್ಯ. ಉಪ್ಪಿನೊಡನೆ ನೀರೂ ದೇಹದಿಂದ ಹೊರಹೋಗುವುದರಿಂದ ಉಪ್ಪು ತಿಂದವ ನೀರು ಕುಡಿಯಲೇ ಬೇಕು! ಅಡ್ರಿನಲ್ ಗ್ರಂಥಿಯನ್ನು ಉತ್ತೇಜಿಸುವ ಉಪ್ಪು ಭಾವನಾತ್ಮಕ ವ್ಯಾಪಾರಕ್ಕೆ ನೆರವಾಗುತ್ತದೆ.

ರಾಷ್ಟ್ರಾದ್ಯಂತ ಅಯೋಡಿನ್‌ಯುಕ್ತ ಉಪ್ಪು ಸೇವನೆ, ಸಂಗ್ರಹ, ಮಾರಾಟ ಇತ್ಯಾದಿಗಳನ್ನು ಕಡ್ಡಾಯ ಮಾಡಿದ್ದರ ಉದ್ದೇಶ ದೇಶದಲ್ಲಿ ಅಯೋಡಿನ್ ಕೊರತೆಯಿಂದ ಜನ ಬಳಲುತ್ತಿರುವರೆಂಬ ಊಹೆ. ಮಕ್ಕಳಲ್ಲಿ ಬುದ್ಧಿಮಾಂದ್ಯ, ಸರಣಿ ಗರ್ಭಪಾತಗಳು, ಸತ್ತು ಹುಟ್ಟುವ ಮಕ್ಕಳು, ಗಳಗಂಡಗಳು, ದೈಹಿಕ-ಮಾನಸಿಕ ದೌರ್ಬಲ್ಯ- ಇವೆಲ್ಲವುಗಳ ಕಾರಣ ಅಯೋಡಿನ್ ಕೊರತೆ. ಆದುದರಿಂದ ಅಯೋಡಿನ್-ಉಪ್ಪುಗಳ ಬಲವಂತದ ವಿವಾಹ ಯೋಜನೆಯ ಸಮರ್ಥನೆ!

ಆದರೆ ತಿದ್ದುಪಡಿಯ ವಿರೋಧಿಗಳಿಗೂ ತಮ್ಮ ಸಮರ್ಥನೆಗೆ ಬೇಕಷ್ಟು ವಿಷಯಗಳಿವೆ. ಅಯೋಡಿನ್ ಕೊರತೆಯ ಬಗೆಗಿನ ಅನ್ವೇಷಣೆಗಳು ಅಪೂರ್ಣವೂ, ಸಂಪೂರ್ಣ ಶಾಸ್ತ್ರೀಯವಲ್ಲದವೂ ಆಗಿವೆ. ಅಲ್ಲದೇ ಅಯೋಡಿನ್ ಕೊರತೆ ಭಾರತದಲ್ಲಿ ಸಾರ್ವತ್ರಿಕವಾಗಿಲ್ಲ. ಅಯೋಡಿನ್ ಸೇವನೆಯ ಲಾಭಗಳೂ ಸಂಶಯಾತೀತವಾಗಿ ಸಿದ್ಧವಾಗಿಲ್ಲ. ಅಯೋಡಿನ್ ಕೊರತೆಯಿಂದ ಕಂಡುಬರುವ ಲಕ್ಷಣಗಳು ಅಪೌಷ್ಟಿಕತೆಯಲ್ಲಿ ಕಂಡುಬರಬಹುದು. ಪ್ರೋಟೀನ್ ಮತ್ತು ಕಬ್ಬಿಣಾಂಶಗಳ ಕೊರತೆಯುಂಟಾಗಿರಬಹುದು. ದೇಹದಲ್ಲಿ ಅಯೋಡಿನ್ ಹೀರಿಕೊಳ್ಳಲು ಇವು ಅವಶ್ಯಕ. ಇವುಗಳ ಅಭಾವದಲ್ಲಿ ಉಪ್ಪಿನೊಡನೆ ಸೇವಿಸಿದ ಅಯೋಡಿನ್ ಮೂತ್ರದ ಮೂಲಕ ವಿಸರ್ಜಿತವಾಗಿ ಬಿಡುತ್ತದೆ. ಆಂಧ್ರ ಪ್ರದೇಶ ಮತ್ತು ಒರಿಸ್ಸಾದ ಗುಡ್ಡಗಾಡು ಜನರು ವರ್ಷದಲ್ಲಿ ಬಹುಭಾಗ ಅಂಬಲಿ, ಎಲೆಗಳು, ಹಣ್ಣಿನ ಓಟೆ ತಿಂದು ಜೀವಿಸುವ ದಾರುಣ ಪರಿಸ್ಥಿತಿ ಇದೆ. ಇದರ ನಿವಾರಣೆ ಅಯೋಡಿನ್ ಅಲ್ಲ.

ಜನತೆಯ ಮೇಲಿನ ವಾರ್ಷಿಕ ನಲವತ್ತು ಕೋಟಿ ರೂಪಾಯಿಗಳ ಹೊರೆ ಬಹುರಾಷ್ಟ್ರೀಯ ಕಂಪನಿಗಳನ್ನು ಸಂತುಷ್ಟಗೊಳಿಸಲು ಅಲ್ಲ ತಾನೇ?


ವ್ಯಕ್ತಿಗತ ಅಸ್ವಚ್ಛತೆ, ಸಾರ್ವಜನಿಕ ನೈರ್ಮಲ್ಯದ ಅಭಾವಗಳೂ ಗಳಗಂಡಗಳ ಕಾರಣವಾಗಿರಬಹುದು. ಬೆಳೆರೋಗನಾಶಕಗಳು, ಆಧುನಿಕ ಒಕ್ಕಲು ಪದ್ಧತಿಗಳೂ ಅಯೋಡಿನ್ ಕೊರತೆ ತಂದೊಡ್ಡಬಹುದು. ಅಲ್ಲದೆ ಉಪ್ಪಿನ ಜೊತೆಗೆ ಸೇವಿಸಿದ ಅಯೋಡಿನ್ ಕೆಲವರಿಗೆ ಮೈಗೊಗ್ಗದಿರಬಹುದು. ಇದು ಅನಾಹುತವನ್ನು ಆಹ್ವಾನಿಸಿದಂತಲ್ಲವೇ?

ಯಾವ ಭಾಗಗಳಲ್ಲಿ ಅಯೋಡಿನ್ ಕೊರತೆ ಕಂಡುಬಂದಿದೆಯೋ ಅಲ್ಲಿನ ಜನಗಳಿಗೆ ತಿಳುವಳಿಕೆ ನೀಡುವ, ಪೌಷ್ಟಿಕ ಆಹಾರ ಪೂರೈಸುವ, ಅಯೋಡಿನ್‌ಯುಕ್ತ ಉಪ್ಪು ಸೇವಿಸಲು ತಿಳಿಸುವ ಯೋಜನೆಗಳನ್ನು ಹಾಕಿಕೊಳ್ಳಬಹುದು. ಅದನ್ನು ಬಿಟ್ಟು, ಕೆಲವರು ಶೀತದಿಂದ ಬಳಲುತ್ತಿದ್ದಾರೆಂದು ದೇಶದಲ್ಲೆಲ್ಲ ಔಷಧಿ ಸೇವನೆ ಕಡ್ಡಾಯ ಮಾಡಿದರೆ? ಈ ಅಂಶಗಳನ್ನು ಕೇರಳ ಮತ್ತು ಇತರ ಕೆಲ ರಾಜ್ಯಗಳೂ ಬೆಂಬಲಿಸಿವೆಯೆಂದು ಹೇಳಲಾಗಿದೆ.

ರಾಷ್ಟ್ರಾದ್ಯಂತ ಹೊಸ ಬಗೆಯ ಉಪ್ಪಿನ ಉಪಯೋಗವನ್ನು ಕಡ್ಡಾಯಗೊಳಿಸಿದ್ದರಿಂದ ಉಪ್ಪಿನ ಬೆಲೆ ಕಿಲೋಗೆ ಒಂದೂವರೆ ರೂಪಾಯಿಗಳಿಂದ ಎಂಟು ರೂಪಾಯಿಗಳಿಗೇರಿದೆಯಂತೆ! ಚಿತ್ರದಲ್ಲಿ ಸಕ್ಕರೆ ಕಲ್ಪಿಸಿಕೊಳ್ಳುತ್ತಿದ್ದ ಕಡುಬಡವರು ಉಪ್ಪನ್ನೂ ಚಿತ್ರದಲ್ಲಿ ನೋಡುವಂತಾಯಿತೇ ? ಜನತೆಯ ಮೇಲಿನ ಈ ಅತಿರಿಕ್ತ ವಾರ್ಷಿಕ ನಲವತ್ತು ಕೋಟಿ ರೂಪಾಯಿಗಳ ಹೊರೆ ಬಹುರಾಷ್ಟ್ರೀಯ ಕಂಪನಿಗಳನ್ನು ಸಂತುಷ್ಟಗೊಳಿಸಲು ಅಲ್ಲ ತಾನೇ?

ಕಲಬೆರಕೆಯನ್ನು ತಡೆಯುವುದು ಆಹಾರ ಕಲಬೆರಕೆ ಪ್ರತಿಬಂಧಕ ಕಾನೂನಿನ ಉದ್ದೇಶವಾದರೆ, ಕಲಬೆರಕೆಯೆಂದರೇನೆಂದು ತಿಳಿಯುವುದು ಪ್ರಸ್ತುತವಾಗುತ್ತದೆ. ಯಾವುದೊಂದು ಪದಾರ್ಥಕ್ಕೆ ಇನ್ನೊಂದು ಪದಾರ್ಥದ ಸಲ್ಲದ ಮಿಶ್ರಣಮಾಡುವುದು 'ಕಲಬೆರಕೆ' ಎಂದಾದರೆ ನೈಸರ್ಗಿಕ ಉಪ್ಪಿಗೆ ಅಯೋಡಿನ್ ಸೇರಿಸುವುದನ್ನು ಹೇಗೆ ವರ್ಣಿಸಬಹುದು?

ಕುಲಗೆಟ್ಟರೂ ಸುಖಪಡದ ಉಪ್ಪು ನಮ್ಮನ್ನು ಗತಿಗೆಡಿಸಿದೆ! ಮತಿಗೆಡಿಸಿದೆ! ಒಪ್ಪುತ್ತೀರಿ ಅಲ್ಲವೇ? ■





ಚಿನ್ನಾರಿ

(ಮಕ್ಕಳ ಕವನಗಳು)

ಲೇ: **ಗುರುರಾಜ ಬೆಣಕಲ್**
ಪ್ರ: ಸಿಸು ಸಂಪದ, ನಂ. 1, ಸಪ್ನಾ 'ಬಿ'
ಅಪಾರ್ಟಮೆಂಟ್ಸ್, ಭವಾನಿನಗರ,
ಹುಬ್ಬಳ್ಳಿ - 580 023
ಮುದ್ರಣ: 1995, ಪುಟ: 64, ಬೆಲೆ: ರೂ. 25/-

ಶ್ರೀ ಗುರುರಾಜ ಬೆಣಕಲ್ ಅವರ ಮಕ್ಕಳ ಕವಿತೆಗಳನ್ನು ಈ ಮೊದಲೇ ಅಲ್ಲಲ್ಲಿ ಪತ್ರಿಕೆಗಳಲ್ಲಿ ಓದಿ ಮೆಚ್ಚಿಕೊಂಡಿದ್ದೆ. ಈಚೆಗೆ ಈ ಬಗೆಯ ಪದ್ಯ ರಚನೆಯಲ್ಲಿ ಹೆಚ್ಚಿನ ಲವಲವಿಕೆಯನ್ನು ಹಾಗೂ ಹೊಸತನವನ್ನು ವ್ಯಕ್ತಪಡಿಸುತ್ತಿರುವ ನಾಲ್ಕಾರು ಕವಿಗಳಲ್ಲಿ ಇವರೂ ಒಬ್ಬರೆಂದು ಗುರುತಿಸಿದ್ದೆ.... ಶ್ರೀ ಗುರುರಾಜ ಬೆಣಕಲ್ ತಮ್ಮ ಮೂರು ಸಂಕಲನಗಳಲ್ಲಿ ಬೆಳವಣಿಗೆಯ ಮೆಟ್ಟಿಲೇರುತ್ತ ಪ್ರಗತಿಪರ ಮನೋಧರ್ಮದಿಂದ ಮಕ್ಕಳ ಕಾವ್ಯಕ್ಕೆ ಹೊಸ ಕ್ಷಿತಿಜವೊಂದನ್ನು ಕಾಣಿಸುವ ಭರವಸೆ ಮೂಡಿಸಿದ್ದಾರೆ.

ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಯಶಸ್ಸು ಅವರದಾಗಲಿ ಎಂದು ಹಾರೈಸುತ್ತ ಪ್ರಾಥಮಿಕ ಹಂತದಲ್ಲಿಯೇ ಕನ್ನಡದ ಬಗ್ಗೆ ಪ್ರೀತಿಯನ್ನು ಹುಟ್ಟಿಸಲು ಇಂಥ ಪುಸ್ತಕಗಳು ಮಕ್ಕಳ ಕೈಯಲ್ಲಿರ ಬೇಕಾದ ಅವಶ್ಯಕತೆಯನ್ನು ನಮ್ಮ ಶಿಕ್ಷಣ ಇಲಾಖೆ ಬೇಗ ಅರಿತುಕೊಳ್ಳುವುದೆಂದು ಆಶಿಸುತ್ತೇನೆ.

('ಅನ್ನಜೇನು' ಮುನ್ನುಡಿಯಿಂದ)

■ **ಚೆನ್ನವೀರ ಕಣವಿ**



ತಾನು ಎಂಬ ತೊಡಕು

(ಕಥಾ ಸಂಕಲನ)

ಲೇ: **ಅನಸೂಯ ಸಿದ್ದರಾಮ**
ಪ್ರ: ಚೈತನ್ಯ ಪ್ರಕಾಶನ,
ಪಾಲ್ಸ್ ರೋಡ್,
ಗೋಕಾಕ - 591 307.
ಮುದ್ರಣ: 1996,
ಪುಟ: VI+ 197,
ಬೆಲೆ: ರೂ. 40/-

ಶ್ರೀಮತಿ ಅನಸೂಯಾ ಸಿದ್ಧರಾಮ ಅವರ ತಾನು ಎಂಬ ತೊಡಕು ಚೊಚ್ಚಲ ಕಥಾ ಸಂಕಲನದ ಬಗ್ಗೆ ಬರೆಯುವುದು ನನಗೆ ಸಂತಸದ ವಿಷಯವೇ. ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟ ವಾಗಿ ಆ ಮೂಲಕ ಓದುಗರ ಕಣ್ಣಿಗೆ ಬಿದ್ದಿರುವ, ಅವರ ಪ್ರತಿಕ್ರಿಯೆಗಳಿಗೆ ಅನುವು ಮಾಡಿ ಕೊಟ್ಟಿರುವ ಈ ಕಥೆಗಳು ಈಗ ಒಂದೇ ಕಡೆಯಲ್ಲಿ ದೊರೆಯುವಂತೆ ಆದದ್ದು ಮುಖ್ಯವಾದುದು. ಆ ಬಿಡಿ ಕಥೆಗಳಲ್ಲಿ ಕೇವಲ ಒಂದು ಕಥೆ ಮಾತ್ರ ಇರುತ್ತದೆ. ಓದುಗನಿಗೆ ಲೇಖಕನ ಜೀವನ ದೃಷ್ಟಿ, ಅನುಭವವನ್ನು ಕಥೆಯಾಗಿಸುವಲ್ಲಿ ಅವನ ಜಾಣ್ಮೆ, ಕಲಾವಂತಿಕೆ ಇತ್ಯಾದಿಗಳೆಲ್ಲದರ ಪರಿಚಯ ವಾಗುವುದು ಲೇಖಕನ ಹಲವು ಕಥೆಗಳು ಒಟ್ಟಿಗೇ ದೊರೆತಾಗ. ಈ ದೃಷ್ಟಿಯಲ್ಲಿ ನಾನು ಅನುಸೂಯಾ ಅವರ ಈ ಕಥಾ ಸಂಕಲನಕ್ಕೆ ಸ್ವಾಗತ ಕೋರುತ್ತೇನೆ.

■ **ನಾ. ಡಿಸೋಜ**



ಆಂತರ್ಯ

(ಕವನ ಸಂಕಲನ)

ಲೇ: **ಪ್ರಕಾಶ್ ಆರ್. ಕಮ್ಮಾರ್**
ಪ್ರ: ಮಂಜುನಾಥ ಪ್ರಕಾಶನ
ಬಿ.ಹೆಚ್. ರಸ್ತೆ
ಸಾಗರ - 577 401.
ಮುದ್ರಣ: 1997,
ಪುಟ: 82,
ಬೆಲೆ: ರೂ. 40/-

ಈಗಾಗಲೇ ನಾಡಿನ ಹಿರಿಯ ಕಿರಿಯ ಪತ್ರಿಕೆಗಳಲ್ಲಿ ಕವನಗಳನ್ನು ಪ್ರಕಟಿಸಿದ, ದೂರದರ್ಶನದಲ್ಲಿ ವಾಚಿಸಿ, ಅಖಿಲ ಭಾರತ 65ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸುಪ್ರಸಿದ್ಧ ಗಾಯಕರಿಂದ ಹಾಡಿಸಿ, ಚಿತ್ರಕಾರರು ಚಿತ್ರಿಸಿದ ಪ್ರಕಾಶ್ ಆರ್. ಕಮ್ಮಾರ್‌ರವರು 'ಆಂತರ್ಯ'ದ ಮೂಲಕ ತಮ್ಮ ಕವಿ ಹೃದಯದ ಆಂತರ್ಯವನ್ನು ಪ್ರಕಟಿಸಿದ್ದಾರೆ. ಇದೇ ಮೊದಲ ಪುಸ್ತಕ ಕವನ ಸಂಕಲನವಾದರೂ, ಅವರ ಕವನ ಲೇಖನಗಳನ್ನು ಬಹಳಷ್ಟು ಮಂದಿ ಮೆಚ್ಚಿ ಕೊಂಡಿದ್ದಾರೆ. ಹಿತ್ತಲಗಿಡ ಮದ್ದಲ್ಲವೆನ್ನುತ್ತಲೇ ಮುದ್ದಿಸುವ ವಾತ್ಸಲ್ಯ ವಯಸ್ಸಿನಲ್ಲಿ ಹಿರಿಯನಾದ ನನಗೆ, ಅವರು ದಕ್ಷ ಶಿಕ್ಷಕರು, ಸ್ವಯಂ ಸ್ಫೂರ್ತಿಯ ಕಾರ್ಯಕರ್ತರು. ಕಾವ್ಯಕ್ಷೇತ್ರದಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಗೆಜ್ಜೆ ಕಟ್ಟಿದರೂ ತಾಳ ತಪ್ಪಲಾರದು. ಭರವಸೆಯ ಮುನ್ನಡೆಗೆ ಈ ಸಂಕಲನವೇ ಸಾಕ್ಷಿ.

■ **ನೀ. ನಾ. ಮಧ್ಯಸ್ಥ**

ಹಂಗಿನರಮನೆಯ ಹೊರಗೆ

ಲೇ: **ಡಾ. ರಾಜಶೇಖರ ನೀರಮಾನ್ವಿ**
ಪ್ರ: ಲೋಹಿಯಾ ಪ್ರಕಾಶನ
'ಕ್ಷಿತಿಜ', ಕಪ್ಪಗಲ್ಲು ರಸ್ತೆ,
ಬಳ್ಳಾರಿ - 583 103.
ಮುದ್ರಣ: 1998,
ಪುಟ: VI+146
ಬೆಲೆ: ರೂ. 40/-

ಜೀವನದ ವೈಯಕ್ತಿಕ ಅನುಭವ, ಅನಿಸಿಕೆಗಳಿಗೆ ಅಕ್ಷರ ಮಾಧ್ಯಮದ ಅಭಿವ್ಯಕ್ತಿಯನ್ನು ಕೊಟ್ಟು ಸಾರ್ವತ್ರಿಕಗೊಳಿಸುವುದೇ ಸಾಹಿತ್ಯದ ಹೊಣೆ ಎಂದು ತಿಳಿದಿರುವವನು ನಾನು. ದೈನಂದಿನ ಜೀವನದಲ್ಲಿ ನಾವು ಸಾಧಿಸಬೇಕೆನ್ನುವುದನ್ನು, ಸಾಧಿಸಲಾಗದ್ದನ್ನು ಸಾಹಿತ್ಯದ ಮೂಲಕ ಸಹ ಜೀವಿಗಳೊಡನೆ ಹಂಚಿಕೊಳ್ಳುವ ಹಂಬಲ. ಅದೇ ಕಾರಣಕ್ಕಾಗಿ ಸಾಹಿತ್ಯದಲ್ಲಿ ಸಾಮಾಜಿಕ ಜವಾಬ್ದಾರಿ, ಜೀವನ ಮೌಲ್ಯಗಳ ಕಳಕಳಿ, ಮಂಥನ ಇದ್ದಾಗಲೇ ಅದಕ್ಕೊಂದು ಸಾರ್ಥಕತೆ.

ಇವೆಲ್ಲವುಗಳು ಎಷ್ಟರ ಮಟ್ಟಿಗೆ ನನ್ನ ಕತೆಗಳಲ್ಲಿ ಮೂಡಿ ಬಂದಿವೆಯೆನ್ನುವ ನಿರ್ಣಯ ಓದುಗರದು.

■ **ಡಾ. ರಾಜಶೇಖರ ನೀರಮಾನ್ವಿ**



ದೆವ್ವ
(ಹೀಗೊಂದು ಕದಲಿಕೆ)

ಲೇ: **ಶಿವಕುಮಾರ ಉಪ್ಪಿನ**
ಪ್ರ: ರಂಗಪರಿಕರ ಪ್ರಕಾಶನ
ಚೇತನ ಪ್ರಿಂಟರ್ಸ್,
ಶಹಾಪುರ - 585 223.
(ಕಲಬುರ್ಗಿ ಜಿಲ್ಲೆ)
ಮುದ್ರಣ: 1998,
ಪುಟ: X+30
ಬೆಲೆ: ರೂ. 25/-

ಇವನು ಈ ಶತಮಾನದ ಕೊನೆಯ ಹುಚ್ಚ. ಹಾಗಂತ ಭಾವಿಸಿದ್ದೇನೆ. ಹೆಸರು ಶಿವಕುಮಾರ ಉಪ್ಪಿನ. ಪತ್ರಿಕೋದ್ಯಮ, ಸಿನಿಮಾ ಹಾಗೂ ಕವಿತೆಗಳೊಂದಿಗೆ ಡಿಕ್ಕಿ ಹೊಡೆಯುತ್ತಿರುವ ಈ ಮಿತ್ರನಿಗೆ ಮೂರು ನೆಲೆಗಳಲ್ಲೂ ನೆಲೆಗೊಳ್ಳುವ ಚೈತನ್ಯವಿದೆ. ಶಿವಕುಮಾರನ ಕವಿತೆಗಳಲ್ಲಿ ಜೀವನ್ಮುಖತೆಯಿದೆ, ಜಾಣ್ಮೆಯಿದೆ ಮತ್ತು ಓದುಗನ ಅಂತರಂಗವನ್ನು ಬೆಚ್ಚಗೆ ಸ್ಪರ್ಶಿಸಿ ತಣ್ಣಗೆ ಉಳಿಯುವ ಸೌಜನ್ಯವಿದೆ. ಕವಿ ಸಂಕುಲಕ್ಕೆ ಇದೊಂದು ಸೇರ್ಪಡೆ.

Let's Welcome him.

■ **ರವಿ ಬೆಳಗೆರೆ**



ಒಗಟು ಬಿಡಿಸೊ ಬುದ್ಧಿ ಬೆಳೆಸೊ
(ಮಕ್ಕಳ ಒಗಟುಗಳು)


ಲೇ: **ಗುರುರಾಜ ಬೆಣಕಲ್**
ಪ್ರ: ಸಿಸು ಸಂಪದ, ನಂ. 1 ಸಪ್ನಾ 'ಬಿ'
ಅಪಾರ್ಟಮೆಂಟ್ಸ್, ಭವಾನಿನಗರ,
ಹುಬ್ಬಳ್ಳಿ - 580 023
ಮುದ್ರಣ: 1996,
ಪುಟ: II+28
ಬೆಲೆ: ರೂ. 10/-

ನನ್ನ ಪ್ರೀತಿಯ ಪುಟಾಣಿ ದೇವರುಗಳೇ,

ಇದೋ ಇಲ್ಲಿದೆ ನನ್ನ ಇನ್ನೊಂದು ಒಗಟಿನ ಗುಟುಕು. ನಿಮಗಾಗಿ ನಿಮ್ಮ ಮನರಂಜನೆ ಹಾಗೂ ಬುದ್ಧಿವಿಕಾಸಕ್ಕಾಗಿ. ಮಕ್ಕಳು ಇಂತಹ ಒಗಟುಗಳನ್ನು ಓದುವ ಕುರಿತು, ನಿಮ್ಮ ಪಾಲಕರು, ಕನ್ನಡದ ಹಿರಿಯ ಸಂಶೋಧಕರಾಗಿದ್ದ ಪೂಜ್ಯ ಶಂ.ಭಾ. ಜೋಶಿಯವರ ಈ ಮಾತುಗಳನ್ನು ಮನವರಿಕೆ ಮಾಡಿಕೊಳ್ಳಲೇಬೇಕು.

- ಒಗಟುಗಳು ಬಾಲಕರ ಸುಪ್ತ ಪ್ರತಿಭೆಯನ್ನು ಚೇತರಿಸುತ್ತವೆ.
- ಅವರ ಕಲ್ಪನಾ ಶಕ್ತಿ ಚಿತ್ರಕ ಶಕ್ತಿಗಳಿಗೆ ಚಾಲನೆ ಸಿಕ್ಕುತ್ತದೆ.
- ಅವರ ಸೂಕ್ಷ್ಮ ನಿರೀಕ್ಷಣಾ ಸಾಮರ್ಥ್ಯ ವಿಚಾರ ವಿಮರ್ಶಾಬುದ್ಧಿ ಬೆಳೆಯುತ್ತದೆ.
- ಸಾಹಿತ್ಯದ ನಿರಪೇಕ್ಷ ಆನಂದವನ್ನು ಅನುಭವಿಸುವ ಆರಂಭದ ಪಾಠಗಳು ದೊರೆಯುತ್ತವೆ.
- ಒಳ್ಳೆಯ ಭಾಷೆ, ಶೈಲಿ, ತೂಕದ ಮಾತು, ಪದೌಚಿತ್ಯ, ಶಬ್ದಾಲಂಕಾರಗಳ ಅರಿವು ಉಂಟಾಗುತ್ತದೆ.
- ನೇರವಾದ ಮಾತಿಗೆ ಮೀರಿದ ಸತ್ಯವು ಒಗಟಿನ ರೂಪು ತಾಳುತ್ತಿರುತ್ತದೆ. ಬಾಲ ಅಭಿಮನ್ಯುಗಳೇ, ಶುರು ಆಗಲಿ ಇನ್ನು ಒಗಟುಗಳ ಚಕ್ರವ್ಯೂಹವನ್ನು ಭೇದಿಸುವ ಕೆಲಸ ! ಸೋತಿರೋ, ಕೊನೆಯಲ್ಲಿ ಇದಕ್ಕೆ ಉತ್ತರಗಳು.

■ **ಗುರುರಾಜ ಬೆಣಕಲ್**





ಭದ್ರಾ ಮೇಲ್ದಂಡೆ ಯೋಜನೆ : ಮರೀಚಿಕೆಯೇ?

ಪ್ರಸಕ್ತ ಶತಮಾನದಲ್ಲಿ ಸುಮಾರು 56ಕ್ಕೂ ಹೆಚ್ಚು ಬಾರಿ ಬರ ಪೀಡಿತ ಪ್ರದೇಶವೆಂಬ ಖ್ಯಾತಿ ಪಡೆದ ಚಿತ್ರದುರ್ಗದಲ್ಲಿ ಈಗ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಕಳೆದ ಹತ್ತು ವರ್ಷಗಳಲ್ಲಿ ಕೇವಲ ಮೂರು ಬಾರಿ ಮಾತ್ರ ಅರೆ-ಬರೆ ಬೆಳೆ ಬೆಳೆದು ತಿಂದ ಈ ಜಿಲ್ಲೆಯ ರೈತ ಈಗ ನೀರಿಗಾಗಿ ಹಾಹಾಕಾರ ಪಡುತ್ತಿದ್ದಾನೆ. ಚಿತ್ರದುರ್ಗ ಜಿಲ್ಲೆಯ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಬಡಿದಾಡುವುದು ನಿತ್ಯ ದೃಶ್ಯವಾಗಿದೆ. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಬೆಳೆಯೂ ಇಲ್ಲ, ನೀರೂ ಇಲ್ಲ ಎಂಬಂತಹ ಪರಿಸ್ಥಿತಿ ನಿರ್ಮಾಣ ವಾಗಿದೆ.

ಜಿಲ್ಲೆ ಪುನರ್‌ವಿಂಗಡನೆಯಲ್ಲಿ ಹರಿಹರ ದಾವಣಗೆರೆಯಂತಹ ನೀರಾವರಿ ಪ್ರದೇಶಗಳನ್ನು ಕಳೆದುಕೊಂಡಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಈಗ ಉಳಿದಿರುವ ಎಲ್ಲಾ ತಾಲೂಕುಗಳು ಬರದ ಬಯಲು ಸೀಮೆಯಾಗಿ ಬಣಗುಡುತ್ತಿವೆ.


ಚಳಿ-ಮಳೆ-ಬೇಸಿಗೆ ಕಾಲಗಳ ಪರಿವೇ ಇಲ್ಲದೆ ಬರೀ ಬರಗಾಲವನ್ನೇ ಅನುಭವಿಸಿರುವ ಈ ಜಿಲ್ಲೆಯ ರೈತರಿಗೆ ರಾಜಕಾರಣಿಗಳು ಕಳೆದ 20 ವರ್ಷಗಳಿಂದ ಭದ್ರಾ ಮೇಲ್ದಂಡೆ ಎಂಬ ನೀರಾವರಿ ಯೋಜನೆಯ ಕನಸನ್ನು ಬಿತ್ತಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಪ್ರತಿ ಚುನಾವಣೆ ಯಲ್ಲೂ ಭದ್ರಾ ನೀರನ್ನು ಜಿಲ್ಲೆಗೆ ಹರಿಸುವುದಾಗಿ ಆಶ್ವಾಸನೆ ನೀಡುವ ರಾಜಕಾರಣಿಗಳು ಗೆದ್ದ ನಂತರ ಜಿಲ್ಲೆಯಿಂದಲೇ ಪರಾರಿ ಆಗುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ.

ಚಿತ್ರದುರ್ಗ ಜಿಲ್ಲೆ ಸೇರಿದಂತೆ ತುಮಕೂರಿನ ಶಿರಾ, ಪಾವಗಡ, ಹಾಗೂ ಬಳ್ಳಾರಿಯ ಕೆಲವು ತಾಲೂಕುಗಳಿಗೆ ಭದ್ರಾ ಮೇಲ್ದಂಡೆ ಯೋಜನೆ ಯ ಮೂಲಕ ನೀರೊದಗಿಸುವ ಕನಸನ್ನು ಜನರ ಮನಸ್ಸಿಗೆ ನಾಟುವಂತೆ ಹೇಳುತ್ತಾ ಬಂದಿರುವ ರಾಜಕೀಯ ನಾಯಕರು ಈವರೆಗೂ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಕಾರ್ಯವನ್ನು ಕೈಗೊಂಡಿಲ್ಲ.

ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಪ್ರಾಥಮಿಕ ಸಮೀಕ್ಷೆಯನ್ನೂ ನಡೆಸದ ರಾಜ್ಯ ಸರ್ಕಾರಕ್ಕೆ ಜಿಲ್ಲೆಯ ಯಾವೊಬ್ಬ ನಾಯಕನು ಈವರೆಗೂ ಯಾವುದೇ ಒತ್ತಡವನ್ನು ತಂದಿಲ್ಲ.

ಪ್ರಧಾನಿ ಗದ್ದುಗೆಗೇರಿದ್ದ ಮಣ್ಣಿನ ಮಗ ದೇವೇಗೌಡರು, ಹಿಂದೆ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರಕ್ಕಾಗಿ ಬಂದಾಗ ನಾಳೆ ಬೆಳಿಗ್ಗೆಯಿಂದಲೇ ಭದ್ರಾ ಮೇಲ್ದಂಡೆ ಯೋಜನೆಯ ಸಮೀಕ್ಷೆ ಕಾರ್ಯ ಆರಂಭವಾಗುತ್ತದೆ ಎಂಬಂತೆ ಆಶ್ವಾಸನೆ ನೀಡಿ ಹೋದರು. ಇದಾದ ನಂತರ ದೇವೇಗೌಡರು ಇತ್ತ ತಿರುಗಿಯೂ ನೋಡಿಲ್ಲ. ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಕಳೆದ ಇಪ್ಪತ್ತು ವರ್ಷಗಳಿಂದ ಭಾಷಣ ಮಾಡುತ್ತಿರುವ ರಾಜಕಾರಣಿಗಳು, ಬಯಲುಸೀಮೆಗೆ ಒದಗುವ ಬರ ಪರಿಹಾರದಲ್ಲಿ ಪಾಲು ತೆಗೆದುಕೊಂಡು ಸುಖ ನಿದ್ರೆ ಅನುಭವಿಸುತ್ತಿದ್ದಾರೆ.

ಶೃಂಗೇರಿ ಸಮೀಪ ಹುಟ್ಟುವ ಭದ್ರಾ ನದಿಗೆ ಮೂಡಿಗೆರೆಯ ಮಾಗುಂಡಿ ಬಳಿ ಅಣೆಕಟ್ಟನ್ನು ಕಟ್ಟಿ ಅಲ್ಲಿಂದ ಚಿತ್ರದುರ್ಗ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಯ ಎರಡು ತಾಲೂಕುಗಳಿಗೆ ನೀರುಣಿಸುವುದು ಈ ಹಿಂದಿನ ಯೋಜನೆಯ ಅಂಶ. ಭದ್ರಾ ಮೇಲ್ದಂಡೆ ಯೋಜನೆ ಸಾಕಾರ ಗೊಂಡರೆ ಪಶ್ಚಿಮ ಘಟ್ಟದ ಒಂದಿಷ್ಟು ಕಾಡು ಹಾಗೂ ಕಾಫಿ ತೋಟಗಳು ಮುಳುಗಿ ಹೋಗು ತ್ತವೆ ಎಂದು ಈಗಾಗಲೇ ಪರಿಸರವಾದಿಗಳು ಬೃಹತ್ ಕಲ್ಪನಾ ಕಥೆಯನ್ನು ಮುಂದಿಟ್ಟಿದ್ದಾರೆ.



ಮುಕ್ತ ವಿಚಾರ ವೇದಿಕೆಯ ಹೆಸರಲ್ಲಿ ಸಂಘಟಿತರಾದ ಸಮಾನ ಮನಸ್ಕರು ಬಂಜಗೆರೆ ಜಯಪ್ರಕಾಶ್ ನೇತೃತ್ವದಲ್ಲಿ ಹೋರಾಟ ರೂಪಿಸಲು ಅನುವಾದರು. ಭದ್ರಾ ಮೇಲ್ದಂಡೆ ಪ್ರದೇಶದ ಸಮೀಕ್ಷೆ ಕಾರ್ಯ ನಡೆಸಿದ ಈ ತಂಡ ದುರ್ಗದಲ್ಲಿ ಈ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿತು. ವಿವಿಧ ಪಕ್ಷದ ಧುರೀಣರನ್ನು, ಮಠಾಧಿಪತಿಗಳನ್ನು ಒಂದು ವೇದಿಕೆಗೆ ಸೇರಿಸಿದರು. ಆಗ ಎಚ್ಚೆತ್ತುಕೊಂಡ ಸರಕಾರ ಜನರ ಕಿಚ್ಚು ಹತ್ತಿಕ್ಕುವ ಸಲುವಾಗಿ ತುಂಗಾ ತಿರುವು ಎಂಬ ಮತ್ತೊಂದು ಭ್ರಮೆ ಬಿತ್ತಿತು.

ಬಯಲು ಸೀಮೆಯ ಬವಣೆ ಅರಿಯದ ರೇಡಿಯೋ ಕಾಲರ್ ಖ್ಯಾತಿಯ ಉಲ್ಲಾಸ ಕಾರಂತರು ಭದ್ರಾ ಮೇಲ್ದಂಡೆ ಯೋಜನೆಯ ಸಮೀಕ್ಷೆ ಕಾರ್ಯ ನಡೆಯುವ ಮುನ್ನ ಅದರಿಂದಾಗುವ ಹಾನಿಯ ಬಗ್ಗೆ ಕಾಗಕ್ಕ-ಗುಬ್ಬಕ್ಕನ ಕಥೆ ಹೆಣೆದರು. ಇದನ್ನು ಆಧರಿಸಿ ರಾಜ್ಯದ ಪ್ರಮುಖ ವಾರಪತ್ರಿಕೆಯೊಂದು ಅಂಕಿ-ಅಂಶಗಳ ಆಧಾರ ವಿಲ್ಲದೆ ಅವಾಸ್ತವಿಕ ಲೇಖನವೊಂದನ್ನು ಪ್ರಕಟಿಸಿತು. ಚಿತ್ರದುರ್ಗದ ಬಾಯಾರಿದ ರೈತರು ಈ ಲೇಖನ ನೋಡಿ ಕೆಂಡಮಂಡಲವಾದರು. ಬದುಕಿನಲ್ಲಿ ಬರವನ್ನೇ ಕಾಣದ ಪರಿಸರವಾದಿಗಳೆಂಬ ಸೋಗು ಹಾಕಿ ಬದುಕುತ್ತಿರುವ ಈ ಜನಕ್ಕೆ ಚರ್ಚಿಸಲು ಒಂದು ವಿಷಯ ಸೃಷ್ಟಿಸುವ ಸಲುವಾಗಿ 'ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನದಿಂದ ಹಾನಿ' ಎಂಬ ಕಥೆ ಹೆಣೆದರು. ಇಂತಹವರ ಹಿಡಿತದಲ್ಲಿಯೇ ಇರುವ ರಾಜ್ಯದ ಪ್ರಮುಖ ಪತ್ರಿಕೆಗಳು ಪರಿಸರವಾದಿಗಳ ಮಾತಿಗೆ ಅಬ್ಬರದ ಪ್ರಚಾರ ನೀಡಿದವು. ಶಾಶ್ವತ ಯೋಜನೆಯ ಬಗ್ಗೆ ಚಿಂತಿಸದ ಸರ್ಕಾರಕ್ಕೆ ಭದ್ರಾ ಮೇಲ್ದಂಡೆ ಯೋಜನೆ ಕುರಿತು ಎದ್ದ ಅಪಸ್ವರ ವರದಾನವಾಯಿತು. ಪರಿಸರಕ್ಕೆ ಹಾನಿ ತರುವ ಈ ಯೋಜನೆಯನ್ನು ಕೈಬಿಟ್ಟಿರುವುದಾಗಿ ಹೇಳಿ ಕೈ ತೊಳೆದುಕೊಂಡಿತು. ಈಗಲೂ ಜಿಲ್ಲೆಯ ಯಾವೊಬ್ಬ ರಾಜಕಾರಣಿಗಳೂ ಇದರ ವಿರುದ್ಧ ಸೊಲ್ಲೆತ್ತಲಿಲ್ಲ.

ಚಿತ್ರದುರ್ಗ ಸಂಸತ್ ಕ್ಷೇತ್ರದಿಂದ ಈ ಹಿಂದೆ ಆಯ್ಕೆ ಆಗಿ ಹೋದ ಕೋದಂಡರಾಮಯ್ಯ ಒಮ್ಮೆ ಸಂಸತ್‌ನಲ್ಲಿ ಈ ವಿಚಾರ ಪ್ರಸ್ತಾಪಿಸಿದರು. ಆಗ ಪ್ರಧಾನಿ ಆಗಿದ್ದ ದೇವೇಗೌಡರಿಂದ ಸಮೀಕ್ಷೆ ಕಾರ್ಯ ನಡೆಸುವ ಆಶ್ವಾಸನೆಯೂ ಸಿಕ್ಕಿತು. ಆಮೇಲೆ ಕೋದಂಡರಾಮಯ್ಯ ಸಹ ಹುಮ್ಮಸ್ಸು ಕಳೆದುಕೊಂಡರು. ಐ.ಕೆ. ಗುಜ್ರಾಲ್ ಪ್ರಧಾನಿಯಾದರು. ಭದ್ರಾ ಮೇಲ್ದಂಡೆ ಮತ್ತೆ ಮೂಲೆ

ಪರಿಸರಕ್ಕೆ ಧಕ್ಕೆ ತರದ ಪರ್ಯಾಯ ಯೋಜನೆ

ಚಿತ್ರದುರ್ಗ ಜಿಲ್ಲೆಗೆ ಬಂದೊದಗುತ್ತಿರುವ ಸತತ ಬರದಿಂದಾಗಿ ಅಲ್ಲಿನ ಅಂತರ್ಜಲ ಮಟ್ಟ ದಿನ ದಿನಕ್ಕೂ ಕ್ಷೀಣಿಸುತ್ತಿದೆ. ಪಶುಪಾಲನೆ ಹಾಗೂ ಇತರ ಗುಡಿ ಕೈಗಾರಿಕೆಗಳನ್ನು ವೃತ್ತಿಯಾಗಿಸಿಕೊಂಡಿರುವ ಲಕ್ಷಾಂತರ ಜನರಿಗೆ ಇನ್ನು ಕೆಲ ವರ್ಷಗಳ ನಂತರ ನೀರು ಸಿಗುವುದು ದುಸ್ತರವೆಂದು ಸಮೀಕ್ಷೆಯೊಂದು ಹೇಳುತ್ತದೆ.

ಈ ಹಿನ್ನೆಲೆಯಲ್ಲಿ ಚಿಂತಿಸತೊಡಗಿದ ಹೋರಾಟಗಾರ ಬಂಜಗೆರೆ ಜಯಪ್ರಕಾಶ್ ಜಿಲ್ಲೆಗೆ ಭದ್ರಾ ಮೇಲ್ದಂಡೆ ಯೋಜನೆಯನ್ನು ತರಲೇಬೇಕೆಂಬ ಭಗೀರಥ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಮುಕ್ತ ವಿಚಾರ ವೇದಿಕೆಯ ವತಿಯಿಂದ 'ಭದ್ರಾ ಮೇಲ್ದಂಡೆ' ಯೋಜನೆ ಪ್ರದೇಶದಲ್ಲಿ ಅಧ್ಯಯನ ಪ್ರವಾಸ ಕೈಗೊಂಡ ಈ ತಂಡ, ಮಧ್ಯ ಕರ್ನಾಟಕಕ್ಕೆ ನೀರು ಹರಿಸುವ ಅಭೂತಪೂರ್ವ ಯೋಜನೆಯನ್ನು ತಯಾರಿಸಿದ್ದ ತುಮಕೂರಿನ ನಿವೃತ್ತ ಇಂಜಿನಿಯರ್ ಪರಮಶಿವಯ್ಯನವರ ಬಳಿಯ ತಾಂತ್ರಿಕ ಮಾಹಿತಿಯ ಆಧಾರದ ಮೇಲೆ ಪರ್ಯಾಯ ಯೋಜನೆಯೊಂದನ್ನು ರೂಪಿಸಿದೆ.

ಅಧ್ಯಯನ ತಂಡದ ಪ್ರಕಾರ, ಭದ್ರಾ ಮೇಲ್ದಂಡೆಯ ಹಿಂದಿನ ಯೋಜನೆಯಂತೆ ಮಾಗುಂಡಿ ಬಳಿ ದೊಡ್ಡ ಅಣೆಕಟ್ಟು ಕಟ್ಟುವ ಬದಲು, ಭದ್ರಾ ಮೇಲ್ದಂಡೆಯ ಜಲಾಯನ ಪ್ರದೇಶದಲ್ಲಿರುವ ಸೋಮವಾಹಿನಿ, ತಡವೆ, ಹೆಬ್ಬೆ ಹಳ್ಳಗಳಿಗೆ ಪುಟ್ಟ ಅಡ್ಡಗಟ್ಟೆಗಳನ್ನು ಕಟ್ಟಿ 11 ಟಿಎಂಸಿ ನೀರು ಸಂಗ್ರಹಿಸುವುದು. ಎರಡನೆಯ ಹಂತದಲ್ಲಿ ಸೋಮವಾಹಿನಿ-ಭದ್ರಾ ಸಂಗಮದಲ್ಲಿ ಪುಟ್ಟ ಅಣೆಕಟ್ಟು ಕಟ್ಟಿ 19 ಟಿಎಂಸಿ ನೀರನ್ನು ಶೇಖರಿಸುವುದು. ನಂತರ, ಈ ಅಣೆಕಟ್ಟೆಗೆ ತುಂಗಾನದಿ ಜಲಾಯನದ ನಾಲ್ಕು ಕಡೆಯಿಂದ 70 ಟಿಎಂಸಿಯಷ್ಟು ನೀರನ್ನು ಲಿಫ್ಟ್ ಮಾಡಬೇಕು. ಈ ಮೂರು ಕಡೆ ಸುಮಾರು 100 ಟಿಎಂಸಿ ನೀರು ಸಂಗ್ರಹವಾಗಿ, ಪೂರ್ವದ ಬಯಲು ಸೀಮೆಗೆ ಯಾವ ವಿದ್ಯುತ್ ಬಳಕೆಯಿಲ್ಲದೆ ನೀರು ಹರಿಸಬಹುದು ಎನ್ನುತ್ತಾರೆ ನೀರಾವರಿ ತಜ್ಞ ಪರಮಶಿವಯ್ಯನವರು.

ಈ ಮಾಹಿತಿ ಆಧಾರದ ಮೇಲೆ ಅಧ್ಯಯನ ಪ್ರವಾಸ ನಡೆಸಿದ ಬಂಜಗೆರೆ ಜಯಪ್ರಕಾಶ್ ನೇತೃತ್ವದ ತಂಡ 'ಭದ್ರಾ ಮೇಲ್ದಂಡೆ' ಮುಳುಗಡೆ ಪ್ರದೇಶದ ಜನರೊಂದಿಗೆ ಯೋಜನೆ ಕುರಿತು ಮುಕ್ತ ಚರ್ಚೆ ನಡೆಸಿ ಬಂದಿದೆ. ಆ ಪ್ರದೇಶದ ಅನೇಕ ಜನ ಸಂಘಟನೆಗಳು ಬಯಲು ಸೀಮೆಗೆ ನೀರೊದಗುವುದಾದರೆ ಅಲ್ಪ ತ್ಯಾಗಕ್ಕೆ ಸಿದ್ಧವಿರುವುದಾಗಿ ಹೇಳಿದ್ದಾರೆ.

ಮುಳುಗಡೆಯ ಭಯದಿಂದ ಭದ್ರಾ ಮೇಲ್ದಂಡೆ ಯೋಜನೆಗೆ ವಿರೋಧ ವ್ಯಕ್ತ ಪಡಿಸುತ್ತಿದ್ದ ಮಾಗುಂಡಿ ಬಳಿಯ ಬಾಳೇಹೊಳೆ ಎಂಬ ಹಳ್ಳಿಯ ಜನ ಮುಕ್ತ ವಿಚಾರ ವೇದಿಕೆ ತಂಡದೊಂದಿಗೆ ಸ್ನೇಹಮಯ ಚರ್ಚೆ ನಡೆಸಿ ಉತ್ತಮ ಆತಿಥ್ಯ ನೀಡಿ ಬೀಳ್ಕೊಟ್ಟಿದ್ದಾರೆ. ಅವರೂ ಸಹ ಬಯಲು ಸೀಮೆಗೆ ನೀರು ತರುವ ಹೋರಾಟಕ್ಕೆ ಕೈ ಜೋಡಿಸುವುದಾಗಿ ಆಶ್ವಾಸನೆ ನೀಡಿದ್ದಾರೆ.

ಬಚಾವತ್ ತೀರ್ಪಿನ ಅನ್ವಯ ತುಂಗಾ ತಿರುವು ಯೋಜನೆ 2000ದ ಇಸವಿಯೊಳಗೆ ಸಿದ್ಧವಾಗಬೇಕು. ಆದರೆ, ಇದೇ ತೀರ್ಪಿನ ಆದೇಶದಂತೆ 2000ದ ಮೇ 5ರ ನಂತರ ರಾಜ್ಯವು 183 ಟಿಎಂಸಿ ನೀರನ್ನು ಬಳಸಬಹುದಾಗಿದೆ. ಹೀಗಾಗಿ ಭದ್ರಾದಿಂದ 30 ಟಿ ಎಂಸಿ ಹಾಗೂ ತುಂಗಾದಿಂದ 70 ಟಿ ಎಂಸಿ ನೀರನ್ನು ಬಳಸಿ ಹಾಲಿ ಅಚ್ಚುಕಟ್ಟುದಾರರಿಗೆ ತೊಂದರೆಯಾಗದಂತೆ ಮಧ್ಯ ಕರ್ನಾಟಕದ ಬಯಲು ಸೀಮೆಗೆ ನೀರೊದಗಿಸುವ ಶಾಶ್ವತ ಯೋಜನೆಯನ್ನು ರಾಜ್ಯ ಸರ್ಕಾರ ಕೈಗೆತ್ತಿಕೊಳ್ಳಬೇಕು ಎಂಬುದು ಮುಕ್ತ ವಿಚಾರ ವೇದಿಕೆಯವರ ವಾದ.

ಬರದ ನಾಡಾದ ಚಿತ್ರದುರ್ಗ ಜಿಲ್ಲೆಯ ಜನತೆಗೆ ನೀರುಣಿಸುವ ಭಗೀರಥ ಪ್ರಯತ್ನಕ್ಕೆ ಕೈಹಾಕಿರುವ ಜಯಪ್ರಕಾಶ್ ಈಗಾಗಲೇ ನೀರಾವರಿ ಹೋರಾಟ ಸಮಿತಿಯನ್ನು ರಚಿಸಿಕೊಂಡಿದ್ದಾರೆ. ಜಿಲ್ಲೆಯ ಎಲ್ಲಾ ಮಠಾಧೀಶರು, ಎಸ್. ನಿಜಲಿಂಗಪ್ಪನವರೂ ಸೇರಿದಂತೆ ಎಲ್ಲಾ ಜನ ಪ್ರತಿನಿಧಿಗಳನ್ನೊಳಗೊಂಡ ಈ ಸಮಿತಿಯ ತಾಲೂಕು, ಗ್ರಾಮ ಸಮಿತಿಗಳ ರಚನಾಕಾರ್ಯ ಭರದಿಂದ ಸಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ 'ಭದ್ರಾ ಮೇಲ್ದಂಡೆ' ಯೋಜನೆಯ ಅನುಷ್ಠಾನಕ್ಕೆ ತೀವ್ರ ರೂಪದ ಚಳವಳಿ ಆರಂಭವಾಗಲಿದೆ. ಇದು ಜನರ ಹೋರಾಟವಾಗಿ ಮಾರ್ಪಾಟಾದಾಗ ಮಾತ್ರ ಉದ್ದೇಶ ಸಫಲವಾಗುವುದು ಎಂದು ಹೇಳುವ ಜಯಪ್ರಕಾಶ್, ಆದಕ್ಕಾಗಿ ಜಿಲ್ಲೆಯ ಪ್ರತಿ ಹಳ್ಳಿಗೂ ತೆರಳಿ ರೈತರೊಂದಿಗೆ ಸಮಾಲೋಚಿಸುವ ಯೋಜನೆ ಹಮ್ಮಿಕೊಂಡಿದ್ದಾರೆ. ■

ಒಂದು ವೇಳೆ ತುಂಗಾ ತಿರುವು ಯೋಜನೆ ಅನುಷ್ಠಾನಗೊಂಡರೆ ಚಿಕ್ಕಮಗಳೂರಿನ ತರೀಕೆರೆ ತಾಲೂಕಿನ 30,350 ಎಕರೆ, ಕಡೂರು ತಾಲೂಕಿನ 12,400 ಎಕರೆ, ಹೊಸದುರ್ಗದ 19,200 ಎಕರೆ, ಚಿತ್ರದುರ್ಗ ತಾಲೂಕಿನ 65,400 ಎಕರೆ, ಚಳ್ಳಕೆರೆಯ 41,600 ಎಕರೆ, ಹಿರಿಯೂರಿನ 16,900 ಎಕರೆಗಳಿಗೆ ನೀರನ್ನು ಒದಗಿಸಬಹುದಾಗಿದೆ ಎಂದು ಸರ್ಕಾರದ ದಾಖಲೆಗಳು ವಿವರಿಸುತ್ತದೆ. ಈ ದಾಖಲೆಗಳಲ್ಲಿ ತೆನೆಯೆಷ್ಟು ಜೊಳ್ಳೆಷ್ಟೆಂಬುದು ನಂಬಲು ಅಸಾಧ್ಯವಾದ ಮಾತು.

ಸೇರಿತು. ಕೇಂದ್ರದಲ್ಲಿ ರಾಷ್ಟ್ರೀಯ ರಂಗ ಸರ್ಕಾರ ಅಧಿಕಾರ ಕಳೆದುಕೊಂಡ ನಂತರ ಕೋದಂಡ ರಾಮಯ್ಯ ಚಿತ್ರದುರ್ಗ ಸಂಸತ್ ಕ್ಷೇತ್ರದಿಂದ ಮತ್ತೊಮ್ಮೆ ಚುನಾವಣೆಗೆ ನಿಂತು ಸೋತರು. ಸೋತ ನಂತರ ಭದ್ರಾ ಮೇಲ್ದಂಡೆಯ ವಿಚಾರವಾಗಿ ಬೆಂಗಳೂರಿನಲ್ಲಿ ಧರಣಿ, ಪ್ರತಿಭಟನೆ ನಡೆಸಿದರು. ಇದೇ ಕಾವಿನಲ್ಲಿ ಚಿತ್ರದುರ್ಗ ಜಿಲ್ಲೆಯ ಜನರು 'ಭದ್ರಾ ಮೇಲ್ದಂಡೆ' ಅನುಷ್ಠಾನಕ್ಕೆ ಹೋರಾಡಲು ಮುಂದಾದರು.

ಮುಕ್ತ ವಿಚಾರ ವೇದಿಕೆಯ ಹೆಸರಲ್ಲಿ ಸಂಘಟಿತರಾದ ಸಮಾನ ಮನಸ್ಕರು ಕವಿ ಹಾಗೂ ಹೋರಾಟಗಾರ ಬಂಜಗೆರೆ ಜಯಪ್ರಕಾಶ್ ಅವರ ನೇತೃತ್ವದಲ್ಲಿ ಹೋರಾಟ ರೂಪಿಸಲು ಅನುವಾಯಿತು. ಭದ್ರಾ ಮೇಲ್ದಂಡೆ ಪ್ರದೇಶದ ಸಮೀಕ್ಷೆ ಕಾರ್ಯ ನಡೆಸಿದ ಈ ತಂಡ ದುರ್ಗದಲ್ಲಿ ಈ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿತು. ವಿವಿಧ ಪಕ್ಷದ ಧುರೀಣರನ್ನು, ಮಠಾಧಿಪತಿಗಳನ್ನು ಒಂದು ವೇದಿಕೆಗೆ ಸೇರಿಸಿ ಸರ್ಕಾರಕ್ಕೆ ಒತ್ತಡ ತರುವ ಕೆಲಸ ಆರಂಭಿಸಿದರೆ, ಈ ವೇಳೆಗೆ ಎಚ್ಚೆತ್ತ ರಾಜ್ಯಸರ್ಕಾರ ಜಿಲ್ಲೆಯ ಜನರ ಕಿಚ್ಚನ್ನು ಹತ್ತಿಕ್ಕುವ ಸಲುವಾಗಿ 'ತುಂಗಾ ತಿರುವು' ಎಂಬ ಅವಾಸ್ತವಿಕ ಹಾಗೂ ಅನುಷ್ಠಾನಕ್ಕೆ ಯೋಗ್ಯವಲ್ಲದ ಅರೆಬರೆ ಯೋಜನೆಯನ್ನು ತಯಾರಿಸಿ ಅದನ್ನು ಶೀಘ್ರವೇ ಜಾರಿಗೆ ತರುವುದಾಗಿ ಘೋಷಿಸಿತು.

ಭದ್ರಾ ಮೇಲ್ದಂಡೆ ಯೋಜನೆಗೆ ಕಾಫಿ ಪ್ಲಾಂಟರ್‌ಗಳು ಹಾಗೂ ಪರಿಸರವಾದಿಗಳ ವಿರೋಧವಿದೆ ಹಾಗೂ ಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆ ಇದೆಯೆಂಬ ಕಾರಣದಿಂದ ಈ ಯೋಜನೆಯ ಬದಲಾಗಿ ತುಂಗಾ ನದಿಯಿಂದ ನೀರನ್ನು ಎತ್ತಿ, ಆರುಕಡೆ ಎತ್ತರಕ್ಕೆ ಲಿಫ್ಟ್ ಮಾಡಿ ಚಿತ್ರದುರ್ಗ ಜಿಲ್ಲೆಗೆ ನೀರು ತರುವುದೇ 'ತುಂಗಾ ತಿರುವು' ಯೋಜನೆ. ತುಂಗಾ ತಿರುವು ಯೋಜನೆಯಿಂದ ಸುಮಾರು20 ಟಿ ಎಂಸಿ ನೀರು ಸಿಗುವುದು ಎಂದು ಅಂದಾಜು ಮಾಡಲಾಗಿದೆ. ಈ ನೀರು ಚಿತ್ರದುರ್ಗಕ್ಕೆ ಬರಬೇಕಾದರೆ ಹೊಸಪೇಟೆ ಬಳಿ ಇರುವ ವಿಜಯನಗರ ಕಾಲುವೆಯನ್ನು ಆಧುನೀಕರಿಸಿ ಅಲ್ಲಿ ಐದು ಟಿಎಂಸಿ ನೀರನ್ನು ಉಳಿಸಬೇಕು. ಭದ್ರಾ ಜಲಾಶಯ, ಗೊಂಡಿ ಅಣೆಕಟ್ಟು ಗಾಜನೂರು ಅಣೆಕಟ್ಟುಗಳನ್ನು ಆಧುನೀಕರಿಸುವುದರಿಂದ ಐದು ಟಿ ಎಂ ಸಿ ನೀರು ಹಾಗೂ ಬಚಾವತ್ ತೀರ್ಪಿನಂತೆ ಗೋದಾವರಿಯಿಂದ ಎಂಟು ಟಿಎಂಸಿ ನೀರನ್ನು ಆಂಧ್ರರಾಜ್ಯಕ್ಕೆ ಬಳಸಲು ಬಿಟ್ಟು ಬದಲಿಗೆ ತುಂಗಾದಿಂದ ಎಂಟು ಟಿಎಂಸಿ ನೀರನ್ನು ಬಳಸುವುದು. ಇದರೊಂದಿಗೆ ಕೆಲ ಸಣ್ಣ ಪುಟ್ಟ ನೀರಾವರಿ ಸ್ಕೀಮ್‌ಗಳನ್ನು ತುಂಗಾಭದ್ರಾ ಕಾಲುವೆಗೆ ಸೇರಿಸಿ ಅಲ್ಲಿ ಎರಡು ಟಿ ಎಂಸಿ ನೀರನ್ನು ಸಂಗ್ರಹಿಸುವುದು, ಹೀಗೆ ಒಟ್ಟು 20 ಟಿ ಎಂಸಿ ನೀರು ದೊರಕಿಸಿಕೊಂಡು ತುಂಗಾ ತಿರುವು ಯೋಜನೆಯನ್ನು ರೂಪಿಸಲಾಗಿದೆ.

ತುಂಗಾ ತಿರುವು ಯೋಜನೆಯ 20 ಟಿ ಎಂಸಿ ನೀರಿನಲ್ಲಿ 2,24,750 ಎಕರೆಗೆ ನೀರು ಒದಗಿಸುವುದಾಗಿ ಹೇಳಿರುವ ರಾಜ್ಯ ಸರ್ಕಾರದ ಅಂಕಿ ಅಂಶಗಳು ಚಿತ್ರದುರ್ಗ ಜಿಲ್ಲೆಯ ಜನರಿಗೆ ಮರುಳು ಮಾಡುವ ಸಲುವಾಗಿಯೇ ರೂಪಿತವಾದದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಆಧುನೀಕರಣ ಕೆಲಸದಿಂದ ಮಾತ್ರ 20 ಟಿ ಎಂಸಿ ನೀರು ಸಂಗ್ರಹವಾಗುವುದನ್ನು ಯಾರು ತಾನೆ ನಂಬುತ್ತಾರೆ. ಅದಲ್ಲದೆ ಈ ಯೋಜನೆಯ ಪ್ರಕಾರ ಸುಮಾರು ಆರುಕಡೆ ವಿದ್ಯುತ್ ಬಳಸಿ ನೀರನ್ನು ಮೇಲಕ್ಕೆ ಲಿಫ್ಟ್ ಮಾಡಬೇಕು. ಇದಕ್ಕಾಗಿ ಸುಮಾರು 203 ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಈ ವಿದ್ಯುತ್ ಯಾವುದೇ ಅಡೆತಡೆ ಇಲ್ಲದೆ ಅವಿರತವಾಗಿ ಸರಬರಾಜಾಗಬೇಕಾಗುತ್ತದೆ. ಈಗಾಗಲೇ ಸುಮಾರು 1000 ಮೆಗಾ ವ್ಯಾಟ್ ವಿದ್ಯುತ್ ಕೊರತೆ ಎದುರಿಸುತ್ತಿರುವ ರಾಜ್ಯ ಸರ್ಕಾರ ಈ ಯೋಜನೆಗೆ ಬೇಕಾದ ವಿದ್ಯುತ್ ಅನ್ನು ಎಲ್ಲಿಂದ ತರುತ್ತದೆ?

ಅರೆಬರೆಯ ತುಂಗಾ ತಿರುವು ಯೋಜನೆಯಿಂದ ತುಮಕೂರು ಜಿಲ್ಲೆಯ ಎರಡು ತಾಲೂಕುಗಳಿಗೆ ನೀರು ಹರಿಯುವುದಿಲ್ಲ. ಅಷ್ಟೇ ಏಕೆ? ಚಿತ್ರದುರ್ಗ ಜಿಲ್ಲೆಯ ಇನ್ನೂ ಕೆಲವು ಕಡೆ ಈ ತುಂಗಾ ತಿರುವಿನಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಚಿತ್ರದುರ್ಗ ಜಿಲ್ಲೆ ಮತ್ತು ಸುತ್ತಲಿನ ಶಿರಾ, ಕೂಡ್ಲಿಗಿ, ಈಗ ದಾವಣಗೆರೆಗೆ ಸೇರಿರುವ ಜಗಳೂರು ತಾಲೂಕುಗಳು ಸಂಪೂರ್ಣವಾಗಿ ನೀರಾವರಿ ಯೋಜನೆಗೆ ಒಳಪಡಬೇಕಾದರೆ ಭದ್ರಾ ಮೇಲ್ದಂಡೆ ಯೋಜನೆಯಿಂದ ಮಾತ್ರ ಸಾಧ್ಯ. ತುಂಗಾ ತಿರುವು ಯೋಜನೆಯ ಮತ್ತೊಂದು ಗೊಂದಲವೆಂದರೆ ಈ ಯೋಜನೆ ಬಚಾವತ್ ತೀರ್ಪಿನಂತೆ 2000ದ ಇಸವಿಯೊಳಗೆ ಮುಗಿಯಬೇಕು. ಇದು ಆ ವೇಳೆಗೆ ಮುಗಿಯುತ್ತದೆ ಎಂದು ಹೇಳುವ ರಾಜ್ಯ ಸರ್ಕಾರದ ಮಾತನ್ನು ನಂಬುವುದಾದರೂ ಹೇಗೆ? ರಾಜ್ಯ ಸರ್ಕಾರದ ಪ್ರಕಾರ ಇನ್ನೂ ಎರಡೂವರೆ ವರ್ಷಗಳಲ್ಲಿ ಮುಗಿಸಬೇಕಾಗುತ್ತದೆ. ಸರ್ಕಾರದ ಈ ಭರವಸೆ ಈಡೇರಿದರೆ ಒಂದು ಮಹಾ ಸಾಹಸವೇ ಆದೀತು. ಆದರೆ ಇದು ಚಿತ್ರದುರ್ಗ ಜಿಲ್ಲೆಯ ಜನರನ್ನು ಅಡ್ಡದಾರಿಗೆಳೆಯಲು ರೂಪಿತವಾದ ಯೋಜನೆ ಮಾತ್ರ ಆಗಿರುವುದರಿಂದ ನೀರಾವರಿ ಇಲಾಖೆಯಲ್ಲಿ ಕಡತಗಳ ಸಾಲಿನಲ್ಲಿ 'ತುಂಗಾ ತಿರುವು' ಯೋಜನೆ ಕೊಳೆಯುತ್ತಾ ಬಿದ್ದಿದೆ.

ಒಂದು ವೇಳೆ ತುಂಗಾ ತಿರುವು ಯೋಜನೆ ಅನುಷ್ಠಾನಗೊಂಡರೆ ಚಿಕ್ಕಮಗಳೂರಿನ ತರೀಕೆರೆ ತಾಲೂಕಿನ 30,350 ಎಕರೆ, ಕಡೂರು ತಾಲೂಕಿನ 12,400 ಎಕರೆ, ಹೊಸದುರ್ಗದ 19,200 ಎಕರೆ, ಚಿತ್ರದುರ್ಗ ತಾಲೂಕಿನ 65,400 ಎಕರೆ, ಚಳ್ಳಕೆರೆಯ 41,600 ಎಕರೆ, ಹಿರಿಯೂರಿನ 16,900 ಎಕರೆಗಳಿಗೆ ನೀರನ್ನು ಒದಗಿಸಬಹುದಾಗಿದೆ ಎಂದು ಸರ್ಕಾರದ ದಾಖಲೆಗಳು ವಿವರಿಸುತ್ತದೆ. ಈ ದಾಖಲೆಗಳಲ್ಲಿ ತೆನೆಯೆಷ್ಟು ಜೊಳ್ಳೆಷ್ಟೆಂಬುದು ನಂಬಲು ಅಸಾಧ್ಯವಾದ ಮಾತು.

■ ಮಲ್ಲಪ್ಪನಹಳ್ಳಿ ಮಹಲಿಂಗಯ್ಯ

ಕ್ವಿಜ್ - 13ರ ಸರಿಯುತ್ತರ : 1. ನವಕರ್ನಾಟಕ ಪ್ರಕಾಶನ 2. ಯು. ಎಂ. ಸುಧಾ 3. ಮಮತಾ ಬ್ಯಾನರ್ಜಿ 4. ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದ 5. ಅರಣ್ಯ ಒತ್ತುವರಿ

ಕ್ವಿಜ್ - 14

೧. 'ವಿಗಡ ವಿಕ್ರಮರಾಯ' ಕೃತಿಯನ್ನು ರಚಿಸಿದವರು ಯಾರು?

....

೨. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಈ ವಾಕ್ಯ ಯಾರನ್ನು ಉದ್ದೇಶಿಸಿದುದು ? ಯಾರು ಹೇಳಿದರು ? ಯಾವ ಕೃತಿ ?

....

೩. 'ಕರ್ನಾಟಕ ಏಕೀಕರಣ ಇತಿಹಾಸ' ಕೃತಿಯಲ್ಲಿರುವ ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಮಹನೀಯರ ರೇಖಾಚಿತ್ರಗಳನ್ನು ರಚಿಸಿದವರು ಯಾರು ?

....

೪. ಸಾವಿರ ಕಂಬದ ಬಸದಿ ಎಲ್ಲಿದೆ ?

....

೫. 'ವಿಶ್ವಕಥಾಕೋಶ' ದ ಸಂಪುಟಗಳು ಎಷ್ಟು ? ಪ್ರಧಾನ ಸಂಪಾದಕರು ಯಾರು ?

....

ಹೆಸರು..

ವಿಳಾಸ..

....

....

ಪಿನ್‌ಕೋಡ್.............................. ದೂರವಾಣಿ ....

ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ:

ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು - ೭೯.

ಕ್ವಿಜ್ - 13ರ ಬಹುಮಾನ ವಿಜೇತರು

ಪ್ರಥಮ ಬಹುಮಾನ
ರೂ. ೫೦೦-೦೦

ಎಚ್. ರವಿಕುಮಾರ್ S/o ಶ್ರೀ ಟಿ. ಹಾಲಪ್ಪ
ಅಜ್ಜಿಹಳ್ಳಿ ಪೋಸ್ಟ್, ಚನ್ನಗಿರಿ ತಾಲ್ಲೂಕು
ದಾವಣಗೆರೆ ಜಿಲ್ಲೆ - 577 213

ದ್ವಿತೀಯ ಬಹುಮಾನ
ರೂ. ೨೦೦-೦೦

ಕು. ಸೀಮಾ ಹೆಗಡೆ
D/o ಶ್ರೀ ಪರಮೇಶ್ವರ ಹೆಗಡೆ
ಕೆ. ಯು. ಟಿ. ಟಿ. ಇ. ಕೊಕ್ಕರ್ಣೆ
ಉಡುಪಿ ಜಿಲ್ಲೆ - 576 234

ಸಮಾಧಾನಕರ ಬಹುಮಾನ
ರೂ. ೧೦೦/-

ಬಿ. ಎಂ. ಬಸವರಾಜು C/o ಶ್ರೀ ಶಿವಶಂಕರ್
ಮನೆ ನಂ. 2137 (ಎ), 6ನೇ ಅಡ್ಡರಸ್ತೆ (ದಕ್ಷಿಣ)
ಕುವೆಂಪುನಗರ, ಚನ್ನಪಟ್ಟಣ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ - 571 501

ಬಸವರಾಜ್
ನಂ. 156, 2ನೇ ಮಹಡಿ, 3ನೇ ಮುಖ್ಯರಸ್ತೆ
2ನೇ ಘಟ್ಟ, ಮಂಜುನಾಥನಗರ
ಬೆಂಗಳೂರು - 560 010

ಕೆ. ಪಿ. ಮಂಜುನಾಥ
ಪ್ರಥಮ ಟಿ. ಸಿ. ಎಚ್. 'ಬಿ' ವಿಭಾಗ
ಶ್ರೀ ಸಿದ್ಧಾರ್ಥ ಶಿಕ್ಷಕರ ತರಬೇತಿ ಕೇಂದ್ರ
ಸಿದ್ಧಾರ್ಥನಗರ ಅಂಚೆ
ತುಮಕೂರು ಜಿಲ್ಲೆ - 572 107

ಕ್ವಿಜ್ 14ರಲ್ಲಿ ಭಾಗವಹಿಸುವಿರಾ?

- ★ ಇಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ★ ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ★ ಪ್ರಥಮ-ದ್ವಿತೀಯ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್ ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿಕೊಳ್ಳಲಾಗುವುದು.
- ★ ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ★ ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15-8-1998.**

ವಿಜೇತರಿಗೆ ರೂ 500, 200 ಮತ್ತು ತಲಾ 100 (ಮೂವರಿಗೆ) ರೂ ಬಹುಮಾನವನ್ನು ಪುಸ್ತಕ ಕೂಪನ್ ರೂಪದಲ್ಲಿ ನೀಡಲಾಗುವುದು.

ಜನರ ಹವ್ಯಾಸ ಬದಲಾಯಿಸಿದ ಶಿಲೀಂದ್ರ

ಹತ್ತೊಂಬತ್ತನೇ ಶತಮಾನದಲ್ಲಿ ಇಂಗ್ಲೆಂಡ್‌ನ ವಸಾಹತುವಾಗಿದ್ದ ಶ್ರೀಲಂಕಾವು ಕಾಫಿ ಬೆಳೆಯನ್ನು ಯಥೇಚ್ಛವಾಗಿ ಬೆಳೆಯುತ್ತಿತ್ತು. ಹೀಗಾಗಿ ಇಂಗ್ಲೆಂಡ್‌ಗೆ ಕಾಫಿಯನ್ನು ಶ್ರೀಲಂಕಾದಿಂದ ಆಮದು ಮಾಡಿಕೊಳ್ಳಲು ಸುಲಭ ಹಾಗೂ ಕಡಿಮೆ ದರದಲ್ಲಿ ದೊರೆಯುತ್ತಿತ್ತು. ಆದ್ದರಿಂದ ಇಂಗ್ಲೆಂಡ್ ದೇಶದ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಬೆಳಿಗ್ಗೆ 10.30ರ ವಿರಾಮದ ವೇಳೆಯಲ್ಲಿ ಕಾಫಿಯನ್ನು ಸೇವಿಸುತ್ತಿದ್ದರು. ಅದಕ್ಕೆ ಅವರು "COFEE BREAK' ಎಂದು ಕರೆಯುತ್ತಿದ್ದರು.

ಆದರೆ ಶ್ರೀಲಂಕಾದಲ್ಲಿ ಬೆಳೆದ ಕಾಫಿ ಬೆಳೆಗೆ 'ಹೆಮಿಲಿಯಾ ವಾಸ್ಟಟ್ರಿಕ್ಸ್' (Hemelia Vastatrix) ಎಂಬ ಶಿಲೀಂದ್ರದಿಂದ ರೋಗ ಬಂದಿತು. ಈ ರೋಗವು ತುಕ್ಕುರೋಗವೆಂದು ಆಗ ಕಂಡುಕೊಳ್ಳಲಾಯಿತು. ರೋಗದ ಹತೋಟಿಯಾಗದೆ ಎಲ್ಲಾ ಕಾಫಿ ತೋಟಗಳು ನಶಿಸತೊಡಗಿದವು, ಅಲ್ಲದೆ ನೆರೆಯ ದೇಶವಾದ ಭಾರತದ ಕಾಫಿ ತೋಟಗಳಿಗೂ ರೋಗ ಹರಡಿತು. ಆದ್ದರಿಂದ ಶ್ರೀಲಂಕಾದ ಕಾಫಿ ಬೆಳೆಗಾರರು ತುಕ್ಕು ರೋಗವನ್ನು ಹತೋಟಿ ಮಾಡಲು ಆಗದೆ ತಮ್ಮ ತೋಟಗಳಲ್ಲಿ 'ಟೀ' ಬೆಳೆಯನ್ನು ಬೆಳೆಯಲು ಪ್ರಾರಂಭಿಸಿದರು. ಶ್ರೀಲಂಕಾದಿಂದ ಕಡಿಮೆ ದರ ಹಾಗೂ ಸುಲಭವಾಗಿ ಆಮದು ಮಾಡಿಕೊಳ್ಳುತ್ತಿದ್ದ ಇಂಗ್ಲೆಂಡ್, ಈಗ ಬೇರೆ ದೇಶಗಳಿಂದ ಕಾಫಿಯನ್ನು ಆಮದು ಮಾಡಿಕೊಳ್ಳುವುದು ಆರ್ಥಿಕವಾಗಿ ಕಷ್ಟವೆನಿಸಿತು. ಇದರಿಂದಾಗಿ ಶ್ರೀಲಂಕಾದಿಂದ 'ಟೀ' ಪುಡಿಯನ್ನೇ ಆಮದು ಮಾಡಿಕೊಳ್ಳಲಾರಂಭಿಸಿತು. ಹೀಗಾಗಿ ಇಂಗ್ಲೆಂಡ್ ದೇಶದ ಜನರು ಕ್ರಮೇಣವಾಗಿ ಟೀ (TEA) ಕುಡಿಯುವುದನ್ನು ಅಭ್ಯಾಸ ಮಾಡಿಕೊಂಡರು. ಇದರ ಪರಿಣಾಮವಾಗಿ ಫ್ಯಾಕ್ಟರಿಗಳಲ್ಲಿ ವಿರಾಮದ ಸಮಯಕ್ಕೆ ಕರೆಯುತ್ತಿದ್ದ 'COFEE BREAK' ಎನ್ನುವುದು 'TEA BREAK' ಎಂದಾಯಿತು.

ಈ ಘಟನೆಗೆ ಮುಂಚೆ ಬ್ರೆಜಿಲ್ ದೇಶದಲ್ಲಿ ಕಾಫಿ ಬೆಳೆಯನ್ನು ಕಡಿಮೆ ಕ್ಷೇತ್ರದಲ್ಲಿ ಬೆಳೆಯಲಾಗುತ್ತಿತ್ತು. ಕಾಫಿ ಬೆಳೆಯನ್ನು ಯಥೇಚ್ಛವಾಗಿ ಬೆಳೆಯಲಾರಂಭಿಸಿ ಕ್ರಮೇಣ ಪ್ರಪಂಚದಲ್ಲಿಯೇ ಕಾಫಿ ಬೆಳೆಯುವ ಅಗ್ರಗಣ್ಯ ರಾಷ್ಟ್ರವಾಗಿ ಹೊರಹೊಮ್ಮಿತು. ಇದರಿಂದ ಆ ರಾಷ್ಟ್ರದ ಆರ್ಥಿಕ ಸ್ಥಿತಿ ಉತ್ತಮಗೊಂಡಿತು.

ಹೀಗೆ ಒಂದು ರಾಷ್ಟ್ರದ ಜನರ (ಇಂಗ್ಲೆಂಡ್) ಹವ್ಯಾಸ ಮತ್ತು ಅಭಿರುಚಿಯನ್ನು ಹಾಗೂ ಇನ್ನೊಂದು ರಾಷ್ಟ್ರದ ಆರ್ಥಿಕತೆ (ಬ್ರೆಜಿಲ್) ಬದಲಾಯಿಸುವಲ್ಲಿ ''ಹೆಮಿಲಿಯಾ ವಾಸ್ಟಟ್ರಿಕ್ಸ್'' ಶಿಲೀಂದ್ರ ನಿರ್ಣಾಯಕ ಪಾತ್ರ ವಹಿಸಿತು ಎಂದರೆ ಆಶ್ಚರ್ಯವಾಗಬಹುದಲ್ಲವೇ?


■ **ಸುರೇಶ ಡಿ. ಏಕಬೋಟೆ**

ಹುಬ್ಬಳ್ಳಿಯ ಡಾ.ಸುರೇಶ್ ಸಾಧನೆ

■ ಟಿ.ಕೆ.ಪಿ.

ಇದೇ ತಿಂಗಳು 8 ರಿಂದ 14ರ ವರೆಗೆ ನೆದರ್‌ಲ್ಯಾಂಡ್ ದೇಶದ ಅಮ್‌ಸ್ಟರ್‌ಡ್ಯಾಂದಲ್ಲಿ ಮಕ್ಕಳ ಚಿಕಿತ್ಸೆಗೆ ಸಂಬಂಧಿಸಿದ 22ನೇ ಅಂತರರಾಷ್ಟ್ರೀಯ ಸಮ್ಮೇಳನ ಜರುಗಲಿದೆ. ಈ ಸಮ್ಮೇಳನದಲ್ಲಿ ಮಂಡಿಸಲು ಭಾರತದಿಂದ ಸಲ್ಲಿಸಲ್ಪಟ್ಟವುಗಳಲ್ಲಿ ಕೇವಲ ಮೂರು ಪ್ರಬಂಧಗಳು ಸ್ವೀಕೃತವಾಗಿದ್ದು, ಅವುಗಳಲ್ಲಿ ಹುಬ್ಬಳ್ಳಿಯ ಖ್ಯಾತ ಮಕ್ಕಳ ಚಿಕಿತ್ಸಾ ಸಲಹೆಗಾರ ವೈದ್ಯರಾಗಿರುವ ಕೆ.ಎಮ್.ಪಿ.ಸುರೇಶರದೂ ಒಂದು ಎಂದು ತಿಳಿದಾಗ ಹೆಮ್ಮೆಯುಂಟಾಗುವುದು ಸಹಜ.

ಡಾ.ಸುರೇಶ್‌ರವರು ಕಳೆದ ಸುಮಾರು ಹದಿನೈದು ವರ್ಷಗಳಿಂದಲೂ ಮಹಾನಗರದ ಸಂಜೀವಿನಿ ಆಸ್ಪತ್ರೆಯಲ್ಲಿ ಮಕ್ಕಳ ಚಿಕಿತ್ಸಾ ಸಲಹೆಗಾರ ತಜ್ಞರಾಗಿ ಹಾಗೂ ನವಜಾತ ಶಿಶು ಚಿಕಿತ್ಸಾ ತಜ್ಞರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಹಾನಗರದ ಸಹಕಾರಿ ಆಸ್ಪತ್ರೆ ಮತ್ತು ವಿವೇಕಾನಂದ ಆಸ್ಪತ್ರೆಗಳಲ್ಲಿಯೂ ಸಹ ಅವರು ಗೌರವ ಮಕ್ಕಳ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಡಾ.ಆರ್.ಬಿ.ಪಾಟೀಲರ ಶುಶ್ರೂಷಾ ಗೃಹದಲ್ಲಿಯೂ ಸಂದರ್ಶಕ ತಜ್ಞರೆಂದು ಸೇವೆಯಲ್ಲಿದ್ದಾರೆ.



ನೆದರ್‌ಲ್ಯಾಂಡ್ ದೇಶದ ಅಮ್‌ಸ್ಟರ್‌ಡ್ಯಾಂದಲ್ಲಿ ಮಕ್ಕಳ ಚಿಕಿತ್ಸೆಗೆ ಸಂಬಂಧಿಸಿದ 22ನೇ ಅಂತರರಾಷ್ಟ್ರೀಯ ಸಮ್ಮೇಳನ ಜರುಗಲಿದೆ. ಈ ಸಮ್ಮೇಳನದಲ್ಲಿ ಮಂಡಿಸಲು ಭಾರತದಿಂದ ಸ್ವೀಕೃತವಾದ ಮೂರು ಪ್ರಬಂಧಗಳಲ್ಲಿ ಹುಬ್ಬಳ್ಳಿಯ ಖ್ಯಾತ ಮಕ್ಕಳ ವೈದ್ಯ ಕೆ.ಎಮ್.ಪಿ.ಸುರೇಶರದೂ ಒಂದು.

ಅವರ ಆಸ್ಥೆಯ ವಿಷಯಗಳೆಂದರೆ ನವಜಾತ ಶಿಶುವಿನ ಆರೋಗ್ಯ ರಕ್ಷಣೆ, ಮಕ್ಕಳ ಮೂರ್ಛೆ ರೋಗ, ಮಕ್ಕಳ ಜ್ವರ ಬಾಧೆ ಇತ್ಯಾದಿ. ಅವರು ವೈದ್ಯಕೀಯ ಕ್ಷೇತ್ರದಲ್ಲಿಯಂತೆ, ಭಾರತೀಯ ವೈದ್ಯಕೀಯ ಸಂಘ, ಭಾರತೀಯ ಮಕ್ಕಳ ತಜ್ಞರ ಸಂಸ್ಥೆಗಳ ಸ್ಥಳೀಯ ಹಾಗೂ ರಾಜ್ಯಮಟ್ಟದ ಬೌದ್ಧಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲೂ ತಮ್ಮನ್ನು ಅರ್ಥಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕದ ವೈದ್ಯಕೀಯ ಹಾಗೂ ಮಕ್ಕಳ ಸಂಘಟನೆಗಳಲ್ಲಿ ನೂರಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆ. ಈ ಕಾರಣ ಸುರೇಶ್‌ರು ತಮ್ಮ ಸಹೋದ್ಯೋಗಿಗಳಲ್ಲಿ ಹಾಗೂ ರೋಗಿಗಳಲ್ಲಿ ಅಪಾರ ಜನಪ್ರಿಯತೆ ಗಳಿಸಿದ್ದಾರೆ.

1996ರಲ್ಲಿ ಕೆಲಕಾಲ ಇಂಗ್ಲೆಂಡಿನಲ್ಲಿದ್ದು ಬಂದಿದ್ದಾರೆ ಡಾ.ಸುರೇಶ್. ಮಕ್ಕಳ ಚಿಕಿತ್ಸೆಗೆ ಸಂಬಂಧಿಸಿದಂತೆ ಅಲ್ಲಿ ಪಡೆದ ಅನುಭವ ಅವರನ್ನು ಇನ್ನೂ ಹೆಚ್ಚಿನ ಬೌದ್ಧಿಕ ಸಾಧನೆಗೆ ಪ್ರೇರೇಪಿಸಿತು.

ಭಾರತದಂಥ ಅಭಿವೃದ್ಧಿ ಪರ ದೇಶಗಳಲ್ಲಿ ಸಾರ್ವಜನಿಕ ಆರೋಗ್ಯ ನಿರ್ವಹಣೆಯಲ್ಲಿ ಪ್ರಮುಖ ಸಮಸ್ಯೆ : ವಿಷಮ ಶೀತ ಜ್ವರ. ವ್ಯಕ್ತಿಗತ ಸ್ವಚ್ಛತೆ, ಸಾರ್ವಜನಿಕ ನೈರ್ಮಲ್ಯ, ಸೂಕ್ತ ಕುಡಿಯುವ ನೀರು ಇವುಗಳ ಕೊರತೆ 'ಟೈಫೈಡ್' ಹಬ್ಬಲು ಮುಖ್ಯ ಕಾರಣಗಳು. ಒಂದು ಲಕ್ಷ ಜನಸಂಖ್ಯೆಯಲ್ಲಿ ಐದರಿಂದ ಹದಿನೈದರ ವಯಸ್ಸಿನ ಐದುನೂರು ಮಕ್ಕಳಿಗೆ ಈ ಜ್ವರ ಕಾಡುತ್ತದೆಂದು ವರದಿ. ಕಳೆದ ಒಂದೆರಡು ವರ್ಷಗಳಲ್ಲಿ, ಈ ಜ್ವರವನ್ನು ಹತೋಟಿಗೆ ತರಲು ಉಪಯೋಗಿಸುವ ಬಹಳಷ್ಟು ಸಾಮಾನ್ಯ ಔಷಧಿಗಳು ವಿಫಲವಾಗುತ್ತಿವೆ. ಇದು ರೋಗಾಣುಗಳು ಈ ಔಷಧಿಗಳಿಗೆ ಒಗ್ಗಿ ಹೋಗಿರುವುದನ್ನು ಸ್ಪಷ್ಟಗೊಳಿಸುತ್ತದೆ.

ಈ ಸಮಸ್ಯೆಯ ಬಗೆಗೆ ತಲೆಕೆಡಿಸಿಕೊಂಡ ಡಾ.ಸುರೇಶ್, ಕಳೆದ ವರ್ಷ ತಮ್ಮ ದೈನಂದಿನ ಕಾರ್ಯಕ್ಷೇತ್ರದಲ್ಲಿ 'ಟೈಫೈಡ್' ಜ್ವರ ಪೀಡಿತ 464 ಮಕ್ಕಳನ್ನು ಪರೀಕ್ಷಿಸಿ ಕೆಲವರಿಗೆ ಬೇರೆ ಬೇರೆ ಔಷಧಿಗಳನ್ನೂ, ಇನ್ನು ಕೆಲವರಿಗೆ ಇತ್ತೀಚಿನ ಔಷಧಿ ವರ್ಗದಲ್ಲಿಯ ಒಂದೇ ಔಷಧಿಯನ್ನು ಪ್ರಯೋಗಿಸಿ ಸಮೀಕ್ಷೆ ನಡೆಸಿದಾಗ ಒಂದೇ ಔಷಧ ಪ್ರಯೋಗಕ್ಕೊಳಗಾದ ಮಕ್ಕಳಲ್ಲಿ ಚಿಕಿತ್ಸೆ ಪರಿಣಾಮಕಾರಿಯಾದುದು ತಿಳಿಯಿತು. ಜ್ವರದ ಶೀಘ್ರ ಹತೋಟಿ, ಕಡಿಮೆ ಅವಧಿಯ ಆಸ್ಪತ್ರೆವಾಸ, ಚಿಕಿತ್ಸೆಯ ವೆಚ್ಚದಲ್ಲಿ ಉಳಿತಾಯ, ಕನಿಷ್ಠ ಪಾರ್ಶ್ವ ಪರಿಣಾಮಗಳು-ಇವು ಈ ಚಿಕಿತ್ಸಾ ಕ್ರಮದ ಲಾಭಗಳೆಂಬುದೂ ಸಿದ್ಧವಾಯಿತು. ಡಾ.ಸುರೇಶ್‌ರವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಲಿರುವ ಪ್ರಬಂಧವು ಈ ಸಮೀಕ್ಷೆಯನ್ನಾಧರಿಸಿದುದಾಗಿದೆ. ಯೋಜಿತ ಪರದೇಶ ಪ್ರವಾಸದಂಗವಾಗಿ ಅವರು ಇಂಗ್ಲೆಂಡನ್ನೊಳಗೊಂಡಂತೆ ಯುರೋಪಿನ ಇತರ ಕೆಲ ದೇಶಗಳಿಗೂ ಭೇಟಿ ನೀಡಲಿದ್ದಾರೆ.

ಹುಬ್ಬಳ್ಳಿಯ ನಿವೃತ್ತ ರೈಲ್ವೆ ಉದ್ಯೋಗಿ ಕೆ.ಎಮ್ ಪಂಡಿತಾರಾಧ್ಯರ ಕೊನೆಯ ಪುತ್ರರಾದ ಡಾ.ಸುರೇಶ್‌ರವರು ಹುಬ್ಬಳ್ಳಿಯ ಕೇಂದ್ರೀಯ ವಿದ್ಯಾಲಯದ ಮೇಧಾವಿ ವಿದ್ಯಾರ್ಥಿ. ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯದಿಂದ ವೈದ್ಯಕೀಯ ಪದವಿಯನ್ನು, ಬೆಳಗಾವಿಯ ಜವಾಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯದಿಂದ ಮಕ್ಕಳ ಚಿಕಿತ್ಸೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಅವರು ಸಂಪಾದಿಸಿದ್ದಾರೆ. ■

ಸಂವೇದನೆ

■ ಎಂ. ಎಸ್. ಮೂರ್ತಿ

ಕಂಡೂ ಕಾಣದ ಸೇವೆ

ನನ್ನ ಬಾಲ್ಯದಿಂದಲೂ ಆಪ್ತನಾದ ಒಬ್ಬ ಸ್ನೇಹಿತ ಯಾರಿಗೂ ಹೇಳದೆ ಒಂದು ಸಣ್ಣ ಬಡ ಹುಡುಗಿಯ ವಿದ್ಯಾಭ್ಯಾಸದ ಜವಾಬ್ದಾರಿ ವಹಿಸಿಕೊಂಡು ಸಹಾಯ ಮಾಡುತ್ತಿದ್ದ; ಅನೇಕ ವರ್ಷಗಳಿಂದಲೂ ಪರಿಚಯವಿದ್ದ ನನಗೂ ಈ ವಿಷಯವನ್ನು ಹೇಳಿರಲಿಲ್ಲ. ಅದಕ್ಕೆ ಕಾರಣ ನನಗೂ ಗೊತ್ತಿರಲಿಲ್ಲ.

ಒಂದು ದಿನ ಆತನ ಈ ಗುಟ್ಟು ಹೇಗೋ ಹೊರಬಿತ್ತು. ಆ ಗುಟ್ಟಿಗೆ ಕಾರಣ ಕೇಳಿದ್ದಕ್ಕೆ ಆತ ಹೇಳಿದ್ದು: 'ನಾವು ಅಶಕ್ತರಿಗೆ ಮಾಡುವ ಸಹಾಯ ಸಾಧ್ಯವಾದಷ್ಟೂ ಗುಟ್ಟಾಗಿರಬೇಕು. ಆ ಬಗ್ಗೆ ಇತರರಿಗೆ ತಿಳಿದಷ್ಟೂ ಸಹಾಯ ಮಾಡುವವನ ಅಹಂ ಹೆಚ್ಚುತ್ತದೆ. ನಮ್ಮ ಮಕ್ಕಳಿಗೆ ಮಾಡುವುದೆಲ್ಲವೂ ನಮ್ಮ ಜವಾಬ್ದಾರಿ ಎನ್ನುವಂತೆ ಮಾಡುತ್ತೇವೆ. ಹಾಗೆಯೇ ಇತರರಿಗೆ ನೀಡುವುದನ್ನು, ಸಹಾಯ ಮಾಡುವುದನ್ನು ನಮ್ಮ ಜವಾಬ್ದಾರಿ ಎಂದು ತಿಳಿದೇ ಮಾಡಬಹುದಲ್ಲವೇ?'. ಕೊನೆಯದಾಗಿ, 'ನಾನು, ನನ್ನ ಕುಟುಂಬವನ್ನು ಹೊರತುಪಡಿಸಿ, ಯಾವ ಪರಿಚಯವೂ ಇಲ್ಲದ ನಮ್ಮ ಸಮಾಜದ ಒಬ್ಬ ವ್ಯಕ್ತಿಗಾಗಿ, ನಾನು ಅಥವಾ ನನ್ನದು ಏನಾದರೂ ಉಪಯೋಗವಾಗಿದೆಯೇ ಎನ್ನುವುದು ನನ್ನ ಪ್ರಜ್ಞೆಗೇ ಹಾಕಿಕೊಂಡ ಪ್ರಶ್ನೆ. ಈ ನನ್ನ ಪ್ರಜ್ಞಾಪೂರ್ವಕ ಪ್ರಶ್ನೆಗೆ ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಉತ್ತರ ಕಂಡುಕೊಳ್ಳುವ ನನ್ನದೇ ಆದಂತಹ ರೀತಿ ಇದು. ಅಲ್ಲದೇ ಇಷ್ಟೆಲ್ಲವನ್ನು, ಎಲ್ಲರಿಗೂ ಹೇಳುವ ಆಸಕ್ತಿ ಅಗತ್ಯ ಮತ್ತು ವ್ಯವಧಾನ ನನ್ನಲ್ಲಿಲ್ಲ. ಸಹಾಯ ಪಡೆದವರ ತೃಪ್ತಿಯ ನಗುವಿನ ಹೊರತು ಯಾವ ಪ್ರತಿಫಲಾಪೇಕ್ಷೆಯೂ ನನಗಿಲ್ಲ. ಹಾಗಾಗಿ ಈ ಗುಟ್ಟು' ಎಂದು ಮೌನವಾದ.

ಬೆಂಗಳೂರು ಸೌತ್ ಎಂಡ್ ರಸ್ತೆಯಿಂದ ಕನಕಪುರಕ್ಕೆ ಹೋಗುವ ರಸ್ತೆಯ ತುಂಬಾ ನೆರಳು. ಸೌತ್ ಎಂಡ್ ಸರ್ಕಲ್ ದಾಟಿ ಈ ರಸ್ತೆಯ ಕಡೆಗೆ ನಡೆದರೆ ಒಂದು ಹಳ್ಳಿಯ ಮುಖ್ಯ ರಸ್ತೆಯಲ್ಲಿ ನಡೆದ ಅನುಭವವಾಗುತ್ತಿತ್ತು. ಸುಮಾರು ಹದಿನೈದು ವರ್ಷಗಳಿಂದ ನಾನು ಕಂಡ ರಸ್ತೆಯದು. ಈಚೆಗೆ ಏಳೆಂಟು ವರ್ಷಗಳ ಹಿಂದೆ ಆ ಕಡೆಗೆ ಸಾಗುವಾಗ ರಸ್ತೆಯ ಪಕ್ಕದಲ್ಲಿ ತುಂಬಾ ಹಳೆಯದಾದ ಕಲ್ಲು ಚಪ್ಪಡಿಗಳು ಅನಾಥವಾಗಿ ಬಿದ್ದಿದ್ದವು. ಆ ಜಾಗದಲ್ಲಿ ಏನೋ ಒಂದು ಕಟ್ಟಡವೋ ಕಲ್ಲುಮಂಟಪವೋ ಇದ್ದದ್ದು ಜ್ಞಾಪಕ.

ಒಂದು ಅಡಿ ಅಗಲದ, ಸುಮಾರು ಐದು ಅಡಿ ಎತ್ತರದ ಕಲ್ಲು ಚಪ್ಪಡಿಗಳು. ಎರಡು ಕಲ್ಲುಗಳನ್ನು ಮೂರ್ನಾಲ್ಕು ಅಡಿಗಳ ಅಂತರದಲ್ಲಿ ನೆಲದಲ್ಲಿ ಹೂತಿದ್ದು ಲಂಬವಾಗಿ ನಿಂತ ಆ ಎರಡು ಕಲ್ಲುಗಳ ಮೇಲೆ ಅಡ್ಡಲಾಗಿ ಇನ್ನೊಂದು ಕಲ್ಲನ್ನು ಇಟ್ಟಿದ್ದರು. ಇದನ್ನು ಯಾಕೆ ಮಾಡಿದ್ದರೋ ಗೊತ್ತಾಗದೇ ಮಕ್ಕಳು ಅದರ ಮೇಲೆ ಹತ್ತಿ ಆಡುತ್ತಿದ್ದುದನ್ನು ಒಂದೆರಡು ಬಾರಿ ಕಂಡು, ಅದಕ್ಕೇ ಇರಬೇಕೆಂದು ಸುಮ್ಮನಾಗಿದ್ದೆ. ನೋಡನೋಡುತ್ತಿದ್ದಂತೆ ಐದಾರು ವರ್ಷಗಳೇ ಕಳೆದು, ಆ ಕಲ್ಲು ಮಂಟಪವನ್ನೂ ಮರೆತಿದ್ದೆ. ಆನಂತರ ಕಲ್ಲಿನ ಅವಶೇಷ ನೋಡಿ ಈ ಎಲ್ಲವೂ ನೆನಪಾಯಿತು. ಆ ರಸ್ತೆಯಲ್ಲಿ ಸಾಗುವ ಜನರನ್ನು ಕೇಳಿ ವಿವರ ತಿಳಿಯುವ ಕುತೂಹಲವಾದರೂ, ಕೇಳುವುದು ಯಾರನ್ನು? ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುವವರು ಅಪರೂಪವಾಗಿರುವ ಈ ದಿನಗಳಲ್ಲಿ ಅದರಲ್ಲೂ ಈ ರಸ್ತೆಯಲ್ಲಿ ಜನಸಂದಣಿ ಹೆಚ್ಚಾಗಿದ್ದು, ಹೆಚ್ಚಿನ ಜನರು ಸಿನೆಮಾಗೋ, ಅಥವಾ ಕಾಲೇಜಿಗೋ ಹೋಗುವ ಆತುರದಲ್ಲಿರುವವರು. ಇಂತಹವರಿಂದ ನನ್ನ ಪ್ರಶ್ನೆಗಳಿಗೆ ಉತ್ತರ ಪಡೆಯುವುದು ಅಸಾಧ್ಯ. ಆದರೂ ಆ ರಸ್ತೆಯ ಕಡೆಗೆ ಹೋಗುವಾಗಲೆಲ್ಲಾ, ಕಲ್ಲು ಮಂಟಪ ಇದ್ದ ಜಾಗವನ್ನು ನೋಡುತ್ತಿದ್ದು, ಆ ಬಗ್ಗೆ ನನಗಿದ್ದ ಕುತೂಹಲ ಮಾತ್ರ ಕಡಿಮೆಯಾಗಿರಲಿಲ್ಲ. ಅನೇಕರನ್ನು ವಿಚಾರಿಸಿ, ಯಾರಿಂದಲೂ ಸರಿ ಉತ್ತರ ಸಿಗದೆ, ಕೊನೆಗೂ ಬೆಂಗಳೂರಿನ ಗ್ರಾಮಾಂತರ ಪ್ರದೇಶದಲ್ಲಿರುವ ಮುದುಕರೊಬ್ಬರಿಂದ ಈ ಬಗ್ಗೆ ಕೂಲಂಕಷ ವಿವರ ತಿಳಿಯಿತು.



ಕಲ್ಲು ಮಂಟಪ ಕಟ್ಟಿದ ಅನಾಮಿಕರು, ಕಾರಂತರಂತಹವರು, ಮತ್ತು ನನ್ನ ಸ್ನೇಹಿತನಂತಹವರು ಈಗಲೂ ಇದ್ದಾರೆ ಎಂಬ ಬಲವಾದ ವಿಶ್ವಾಸ ನನಗೆ. ಆದರೆ ಅವರು ಯಾರಿಗೂ ಕಾಣಿಸುವುದಿಲ್ಲ ; ಕಾಣಿಸಲೂಬಾರದು. ಅವರು ಕಾಣಿಸುವುದು ಅಶಕ್ತರಿಗೆ ಮಾತ್ರ.

...ಹಿಂದೆ ಬೆಂಗಳೂರಿನ ಸುತ್ತಮುತ್ತ ಹಳ್ಳಿಯ ಜನರು ತಾವು ಬೆಳೆದ ಹಣ್ಣು ತರಕಾರಿಗಳನ್ನು ಸಿಟಿ ಮಾರುಕಟ್ಟೆಗೆ ತಂದು ಮಾರುತ್ತಿದ್ದರು. ಅನುಕೂಲ ವಿದ್ದ ರೈತರು ಗಾಡಿ, ಬಸ್ಸುಗಳಲ್ಲಿ ತಾವು ಬೆಳೆದದ್ದನ್ನು ಸಾಗಿಸುವ ವ್ಯವಸ್ಥೆ ಮಾಡಿ ಕೊಳ್ಳುತ್ತಿದ್ದರು. ಬಡ ರೈತರಿಗೆ ಗಾಡಿಗಾಗಲೀ, ಬಸ್ಸಿಗಾಗಲೀ ಖರ್ಚು ಮಾಡುವಷ್ಟು ಶಕ್ತಿ ಇರಲಿಲ್ಲ. ಮತ್ತು ಈ ವ್ಯವಸ್ಥೆಯ ಮೂಲಕ ಸಾಗಿ ಸುವಷ್ಟು ಪ್ರಮಾಣದಲ್ಲಿ ಅವರು ಕೃಷಿಯನ್ನೂ ಮಾಡುತ್ತಿರಲಿಲ್ಲ. ಹಾಗಾಗಿ, ತಾವು ಬೆಳೆದ ಅಲ್ಪ ಪ್ರಮಾಣದ ಬೆಳೆಯನ್ನು ಬುಟ್ಟಿಗೆ ತುಂಬಿಸಿ ತಲೆ ಮೇಲೆ ಹೊತ್ತೇ ಮಾರುಕಟ್ಟೆಗೆ ಸಾಗಿಸುತ್ತಿದ್ದರು. ಹೀಗೆ ಹಣ್ಣು ತರಕಾರಿ ಸಾಗಿಸುವ ಇಂತಹ ರೈತರಲ್ಲದೆ ಇತರ ಕಾರಣಗಳಿಗೆ ನಗರಕ್ಕೆ ಬರುವ ಬಡ ಜನರು ತಲೆಯ ಮೇಲೆ ಭಾರ ಹೊತ್ತು ಮೈಲಿಗಟ್ಟಲೆ ನಡೆಯುತ್ತಿದ್ದರು. ಬಿಸಿಲುಗಾಲದಲ್ಲಿ ರಸ್ತೆಯ ಬದಿಗೆ ಭಾರ ಹೊತ್ತು ನಡೆದುಬರುವ ಈ ಜನರಿಗೆ ದಣಿವಾದಲ್ಲಿ ಭಾರ ಇಳಿಸಿ ಸ್ವಲ್ಪ ಹೊತ್ತು ದಣಿವಾರಿಸಿಕೊಳ್ಳುವುದಕ್ಕಾಗಿಯೇ ಅಲ್ಲಲ್ಲಿ ಇಂತಹ ಮೂರು ಕಲ್ಲಿನ ಕಟ್ಟಡಗಳನ್ನು ನಿಲ್ಲಿಸಿರುತ್ತಿದ್ದರು. ಸುಮಾರು ಮನುಷ್ಯನ ಎತ್ತರಕ್ಕಿರುವ ಈ ಕಲ್ಲಿನ ಮೇಲೆ, ತಲೆಯ ಮೇಲಿ ರುವ ಭಾರದ ಬುಟ್ಟಿಯನ್ನು ಯಾರ ಸಹಾಯವೂ ಇಲ್ಲದೆ ಇಳಿಸಿಕೊಳ್ಳಲು ಅನುಕೂಲವಾಗಿತ್ತು. ಭಾರ ಇಳಿಸಿದ ಈ ಜನರು, ನೆರಳಿನಲ್ಲಿ ಸುಧಾರಿಸಿಕೊಂಡು, ಎಲೆ - ಅಡಿಕೆ ಮೆದ್ದು, ಬೀಡಿ ಸೇದಿ ಮತ್ತೆ ತಮ್ಮ ಭಾರ ಹೊತ್ತು ಪ್ರಯಾಣ ಮುಂದುವರೆಸುತ್ತಿದ್ದರು. ಇಷ್ಟು ವಿಷಯ ಆ ಮುದುಕನಿಂದ ತಿಳಿಯಿತು.

ಈ ಸಣ್ಣ ಕಲ್ಲುಮಂಟಪ ಕುರಿತು ಯೋಚಿಸಿದಾಗ ಹಿಂದಿನ ಜನರ ಸೇವಾ ಮನೋಭಾವದ ಬಗ್ಗೆ ಹೆಮ್ಮೆ ಎನಿಸಿತು. ಅಂದಿನ ಸರಳ ಬದುಕಿನ ಜನರು ಮನುಷ್ಯನ ಬದುಕಿನ ಒಂದು ಸಣ್ಣ ವಿಷಯದ ಬಗ್ಗೆ ಕೂಡ ಸೂಕ್ಷ್ಮ ದೃಷ್ಟಿ ಯಿಂದ, ವಾಸ್ತವವಾಗಿ ಯೋಚಿಸಿ ಮಾಡುತ್ತಿದ್ದ ಇಂತಹ ಸೇವೆ ನಮಗೆ ಯಕಃಶ್ಚಿತ್ ಎನಿಸಬಹುದು. ಆದರೆ ಬಿಸಿಲಲ್ಲಿ ದೂರದಿಂದ ಭಾರಹೊತ್ತು ನಡೆದು ಬರುವುದು ಬಡರೈತನ ಅಂದಿನ ಬದುಕಿನ ಮುಖ್ಯ ಭಾಗವಾಗಿತ್ತು. ಭಾರ ಹೊತ್ತ ದಾರಿ ಬಲು ದೂರವಲ್ಲವೇ? ಸಾಗದ ಈ ದಾರಿಯಲ್ಲಿ ನಡೆಯುತ್ತಾ, ನಡೆಯುತ್ತಾ ಇನ್ನೇನು ಹತ್ತಿರ ಬಂದೇ ಬಿಟ್ಟಿತು 'ಕಲ್ಲುಮಂಟಪ' ಎನ್ನುವ ಸಂದರ್ಭದಲ್ಲಿ ಆ ಬಡವನಿಗೆ ಆ ಕಲ್ಲು ಇಲ್ಲ ಎನ್ನುವ ಆಲೋಚನೆ ಕಲ್ಪನೆಗೂ ಬರುವುದಿಲ್ಲ. ಕಲ್ಲುಮಂಟಪವಿಲ್ಲದೆ ತಾನೊಬ್ಬನೇ ತಲೆಯ ಮೇಲಿನ ಭಾರ ಇಳಿಸಿ, ವಿಶ್ರಾಂತಿ ಪಡೆದು, ಮತ್ತೆ ಹೊತ್ತು ಸಾಗುವ ಸಾಧ್ಯತೆಯಿಲ್ಲ ಎನ್ನುವ ವಾಸ್ತವದ ಅರಿವು ಅವನಿಗಿತ್ತು. ಅಲ್ಲಲ್ಲಿ ಸಿಗುವ ಕಲ್ಲು ಮಂಟಪಗಳ ನಿರೀಕ್ಷೆಯಲ್ಲಿ, ತಲೆಯ ಮೇಲಿನ ಭಾರ ಕಡಿಮೆಯಾದಂತೆ ಭ್ರಮಿಸುತ್ತಿದ್ದ. ಅಂತಹ ಕ್ಷಣದಲ್ಲಿ ಈ ಬಡ ಜನರು ಕಲ್ಲು ನಿಲ್ಲಿಸಿದವರನ್ನು ಅದೆಷ್ಟು ಹಾರೈಸಿರಬಹುದು. ಈ ರೀತಿಯ ಒಂದು ನೆರವು ಬಡ ಜನರಿಗೆ ಬೇಕಾಗಬಹುದೆಂಬ ಅಂದಾಜು ಮಾಡಿ ಕಾರ್ಯ ಗತಗೊಳಿಸಿದವರ ಬುದ್ಧಿವಂತಿಕೆ ಮತ್ತು ಸಾಮಾ ಜಿಕ ಕಳಕಳಿ ಪ್ರಶಂಸಾರ್ಹವಾದುದು. ಪ್ರತಿ ಫಲಾಪೇಕ್ಷೆ ಇಲ್ಲದ ಸಾರ್ವಜನಿಕ ಸೇವೆ ಈಗಲೂ ಅಲ್ಲಲ್ಲಿ ಮುಂದುವರಿದೇ ಇದೆಯೆಂಬ ನಂಬಿಕೆ ನನ್ನದು. ಹಕ್ಕಿ ಪ್ರಾಣಿಗಳಿಗೆ ಇಡುವ ನೀರಿನ ತೊಟ್ಟಿ ಕಟ್ಟಿಸಿದವರು, ಕಲ್ಲು ಮಂಟಪ ಕಟ್ಟಿಸಿದವರು, ನಮ್ಮ ಸಮಾಜದ ತೀರಾ ಸರಳವಾದ ಸೇವೆಯನ್ನು ಕೈಗೆತ್ತಿಗೊಂಡವರು; ಒಬ್ಬ ಕಡುಬಡವ ಕೂಡ ತನ್ನ ದೈನಂದಿನ ಬದುಕಿ ನಲ್ಲಿ ಸ್ವಲ್ಪ ಮಟ್ಟಿಗೆ ಸ್ವಾವಲಂಬಿಯಾಗಿ ನಡೆಯಲು ಅನುವು ಮಾಡಿಕೊಡುವ ಈ ಪರಂಪರೆ ಇಂದಿನ ದೊಡ್ಡ ದೊಡ್ಡ ಸೇವಾ ಸಂಸ್ಥೆಗಳಷ್ಟೇ ಪ್ರಮುಖ ವಾದುದು. ಅವಶ್ಯವಾದುದು.

'ಈಗ ಯಾರಿದ್ದಾರೆ ಹೇಳಿ, ಆ ಕಾಲ ಹೋಯ್ತು' ಎಂದು ಮಾತನಾಡುವ ಜನರ ಮಧ್ಯೆಯೇ ಶಿವರಾಮ ಕಾರಂತರು ಇದ್ದದ್ದು. ತಮ್ಮ ಗಳಿಕೆಯಲ್ಲಿ ಅಶಕ್ತರಿಗೆ, ಬಡವರಿಗೆ, ನಿರಂತರವಾಗಿ ಹಣ ಸಹಾಯ ಮಾಡುತ್ತಿದ್ದುದನ್ನು ಅವರು ಯಾರಿಗೂ ಹೇಳಿರಲಿಲ್ಲ.

ಕಲ್ಲು ಮಂಟಪ ಕಟ್ಟಿದ ಅನಾಮಿಕರು, ಕಾರಂತರಂತವರು ಮತ್ತು ನನ್ನ ಸ್ನೇಹಿತನಂತವರು ಈಗಲೂ ಇದ್ದಾರೆ ಎಂಬ ಬಲವಾದ ವಿಶ್ವಾಸ ನನಗೆ. ಆದರೆ ಅವರೆಲ್ಲ ಯಾರಿಗೂ ಕಾಣಿಸುವು ದಿಲ್ಲ; ಕಾಣಿಸಲೂಬಾರದು.

ಅವರು ಕಾಣಿಸುವುದು ಅಶಕ್ತರಿಗೆ ಮಾತ್ರ. ಅಂತಹವರು ಅಗತ್ಯವಿರುವವರಿಗೆ ಹೆಚ್ಚು ಕಾಣುವಂತಾಗಲಿ. ■

ಆಸೆ


ಆಸೆಯೆಂಬುದು ಪಾಶ
ಅಂದು ಸಾರಿದ ಬುದ್ಧ
ಆಸೆಯಿಂದಲೇ ಸಕಲೈಶ್ವರ್ಯ
ಎಂದು ರಾಜಕಾರಣಿ ಗೆದ್ದ

– ಮಹಾಲಿಂಗ ಯಾಳಗಿ

ಮನೆಯನ್ನು ಕಳ್ಳರಿಂದ ರಕ್ಷಿಸುವ ಉಪಾಯ

- ಅಪರಿಚಿತರು ಮನೆಗೆ ಬಂದಾಗ ಅವರು ಹೋಗುವವರೆಗೆ ಎಚ್ಚರಿಕೆಯಿಂದ ಇರಿ.
- ಮನೆಯಲ್ಲಿ ಒಬ್ಬರೇ ಇರುವಾಗ ಅಪರಿಚಿತರು ಬಂದರೆ ಅವರ ಪೂರ್ಣ ವಿವರ ತಿಳಿದುಕೊಂಡು ನಿಮಗೆ ಅವರ ಬಗ್ಗೆ ನಂಬಿಕೆ ಬಂದರೆ ಮಾತ್ರ ಒಳಗೆ ಬರಮಾಡಿಕೊಳ್ಳಿ.
- ರಾತ್ರಿ ಸಮಯದಲ್ಲಿ ಪರಿಚಿತರ ಧ್ವನಿಯಲ್ಲಿ ಯಾರಾದರೂ ಬಾಗಿಲು ಬಡಿದರೆ, ಅವರು ಪರಿಚಿತರೇ ಎಂಬುದನ್ನು ಖಾತ್ರಿ ಪಡಿಸಿಕೊಂಡು ಬಾಗಿಲು ತೆಗೆಯಿರಿ.
- ಮನೆಯ ಸುತ್ತಲೂ ಕಾಂಪೌಂಡ್ ಇದ್ದರೆ, ರಾತ್ರಿಯ ವೇಳೆ ಮಂದ ಬೆಳಕಿನ ವ್ಯವಸ್ಥೆ ಮಾಡಿರಿ. ಬೆಳಕಿದ್ದರೆ ಕಳ್ಳರು ಯಾರೂ ಮನೆಯ ಹತ್ತಿರ ಸುಳಿಯಲಾರರು.
- ಊರಿಗೆ ಹೋಗುವುದಿದ್ದರೆ ನಿಮಗೆ ಗೊತ್ತಿರುವ ನಂಬಿಕಸ್ಥರನ್ನು ಮನೆಯಲ್ಲಿ ಬಿಟ್ಟು ಹೋಗಿರಿ ಹಾಗೂ ಸಾಧ್ಯವಾದಷ್ಟು ಬೇಗನೆ ಊರಿಗೆ ಹಿಂತಿರುಗಲು ಪ್ರಯತ್ನಿಸಿ.
- ಊರಿಗೆ ಹೋದಾಗಲೂ ಹೊರಗಿನ ಲೈಟ್ ಉರಿಯುತ್ತಿರಲಿ ಮತ್ತು ಒಳಗಡೆಯೂ ಒಂದು ಕಡೆ ಬೆಳಕಿನ ವ್ಯವಸ್ಥೆ ಮಾಡಿದ್ದರೆ ಅನುಕೂಲ. ಇದರಿಂದ ಕಳ್ಳರಿಗೆ, ಮನೆಯಲ್ಲಿ ಯಾರೋ ಇದ್ದಾರೆ ಎಂಬ ಭಾವನೆ ಬಂದು ಹತ್ತಿರ ಸುಳಿಯಲಾರರು.
- ಪೋಲೀಸ್ ಠಾಣೆ, ಅಗ್ನಿ ಶಾಮಕದಳ ಮತ್ತು ಆಕಸ್ಮಿಕ ಸಂದರ್ಭಗಳಲ್ಲಿ ಸಹಾಯ ಮಾಡುವವರ ಫೋನ್ ನಂಬರುಗಳು ಫೋನಿನ ಹತ್ತಿರದಲ್ಲೇ ಕಾಣುವಂತೆ ಇಟ್ಟಿರಿ.
- ಮನೆಯ ಎಲ್ಲ ಬಾಗಿಲುಗಳಿಗೂ ಸುರಕ್ಷಿತ ಲಾಕರ್ ವ್ಯವಸ್ಥೆ ಇರಲಿ ಮತ್ತು ಕಿಟಕಿ ಬಾಗಿಲುಗಳು ಭದ್ರವಾಗಿರಲಿ.
- ಭದ್ರತೆಯ ಅವಶ್ಯಕತೆ ಹೆಚ್ಚಾಗಿರುವಲ್ಲಿ ಒಳ್ಳೆಯ ಜಾತಿಯ ನಾಯಿಗಳನ್ನು ಸಾಕಿರಿ. ನಾಯಿ ಬಹಳ ಸೂಕ್ಷ್ಮಗ್ರಾಹಿಗಳು. ದೂರದಿಂದಲೇ ಅಪರಿಚಿತರ ಸುಳಿವು ನೀಡಬಲ್ಲವು ಹಾಗೂ ಎಚ್ಚರಿಸಬಲ್ಲವು.

■ ಶಿವಕುಮಾರ ಎಸ್.ಪೂಜಾರ



ಸ್ನೇಹಕ್ಕೆ ಸ್ನೇಹ - ಪ್ರೀತಿಗೆ ಪ್ರೀತಿ ಇದು ಪತ್ರ ಮೈತ್ರಿ

ಅಮೆರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್, ಜಾನ್ ಕೆನಡಿ, ನೆಹರೂ ಮುಂತಾದ ಗಣ್ಯರು 'ಪತ್ರಮಿತ್ರ'ರಾಗಿದ್ದರೆಂದರೆ, ಈ ಹವ್ಯಾಸದ ವ್ಯಾಪ್ತಿ ಎಷ್ಟು ವಿಶಾಲವೆಂಬುದು ಅರಿವಾಗುತ್ತದೆ.

ನಾವಿಂದು, ನಾಗರಿಕತೆಯ ನಾಗಾಲೋಟಕ್ಕೆ ಸಿಲುಕಿ, ಭೌತಿಕ ಸುಖಗಳಿಗಷ್ಟೇ ಪ್ರಾಧಾನ್ಯ ನೀಡುತ್ತ ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು 'ಸ್ವಾರ್ಥ'ದ ದಳ್ಳುರಿಯಲ್ಲಿ ದಹಿಸಿ ಹೋಗುತ್ತಿದ್ದೇವೆ. ನಾವು ಮತ್ತೆ ಸಂಘಜೀವಿಯಾಗಿ, ವಿಶ್ವಬಂಧುತ್ವವನ್ನು ಸಾಧಿಸುವುದು ಎಂದಿಗಿಂತ ಇಂದು ಅವಶ್ಯವಾಗಿದೆ.

ಎಂತಹುದೇ ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲೂ, ಸಮಸ್ಯೆಗಳನ್ನು ತಿಳಿಯಾಗಿಸುವ ಅದ್ಭುತ ಶಕ್ತಿ 'ಸ್ನೇಹ'ದಲ್ಲಿದೆ. ಈ ರೀತಿಯ ಆತ್ಮೀಯತೆ ಮತ್ತು ಸ್ನೇಹವನ್ನು ವೃದ್ಧಿಸುವಲ್ಲಿ 'ಪತ್ರ ಮೈತ್ರಿ'ಯು ಒಂದು ಸೂಕ್ತವಾದ ಮಾಧ್ಯಮವಾಗಿದೆ. ಹೃದಯದ ಹೆಬ್ಬಾಗಿಲನ್ನು ತೆರೆದು, ಪ್ರೀತಿ ವಿಶ್ವಾಸ ಸ್ನೇಹ ಕರುಣೆಗಳನ್ನು ಪ್ರತಿಷ್ಠಾಪಿಸಲು 'ಪತ್ರಮೈತ್ರಿ' (Pen friendship) ಯು ತನ್ನದೇ ಆದ ಪ್ರಭಾವವನ್ನು ಬೀರುತ್ತದೆ.

ಎಂದೂ ನೋಡಿರದ, ಪರಿಚಯವೇ ಇರದ ಪ್ರತಿಭಾವಂತರನ್ನು, ಸಮಾನ-ಅಭಿರುಚಿಯುಳ್ಳವರನ್ನು 'ಪತ್ರ'ದ ಮುಖಾಂತರವೇ ಪರಿಚಯಿಸಿಕೊಂಡು ಮಿತ್ರರನ್ನಾಗಿ ಮಾಡಿಕೊಳ್ಳುವುದೇ ಪತ್ರ ಮೈತ್ರಿ. ಇದೊಂದು ವಿಶಿಷ್ಟವಾದ ಹವ್ಯಾಸ. ಆತ್ಮೀಯತೆಯೇ ಇದರ ಪ್ರಧಾನ ಲಕ್ಷಣ. ಪತ್ರ ಮೈತ್ರಿಯ ಹವ್ಯಾಸವು ಈಗಾಗಲೇ ಮುಂದುವರೆದ ದೇಶಗಳಲ್ಲಿ ದೊಡ್ಡ ಚಳುವಳಿಯ ರೂಪದಲ್ಲಿ ಪ್ರಚಲಿತವಾಗಿದೆ. ಅಲ್ಲಿ 'ಪತ್ರ ಮೈತ್ರಿ'ಯು ಒಂದು ಪ್ರತಿಷ್ಠೆಯ ಲಕ್ಷಣವಾಗಿ ರೂಪುಗೊಂಡಿದೆ.

ಅಮೆರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್, ಜಾನ್ ಕೆನಡಿ, ನೆಹರೂ ಮುಂತಾದ ಗಣ್ಯರು 'ಪತ್ರಮಿತ್ರ'ರಾಗಿದ್ದರೆಂದರೆ, ಈ ಹವ್ಯಾಸದ ವ್ಯಾಪ್ತಿ ಎಷ್ಟು ವಿಶಾಲವೆಂಬುದು ಅರಿವಾಗುತ್ತದೆ. ನಮ್ಮ ಕನ್ನಡ ನೆಲದವರೇ ಆದ ಹಾ.ಮಾ.ನಾಯಕ, ಶಿವರಾಮ ಕಾರಂತ, ದೊಡ್ಡರಂಗೇಗೌಡ, ನಟ ನರೇಂದ್ರಬಾಬು, ಶ್ರೀಧರ ಮುಂತಾದವರೂ ಈ ಹವ್ಯಾಸ ಬೆಳೆಸಿಕೊಂಡಿರುವುದು ಹೆಮ್ಮೆಯ ಸಂಗತಿ!

ಪತ್ರಮೈತ್ರಿಯ ಪರಿವ್ಯಾಪ್ತಿ ವಿಶಾಲವಾದುದು. ಇಲ್ಲಿ ಯಾವುದೇ ಒಂದು ಚೌಕಟ್ಟಿಲ್ಲ. ಮನಸ್ಸಿನ ಏಕಾಗ್ರತೆಯೇ, ಮೈತ್ರಿ ಜೀವಂತವಾಗಿರಲು ಸಹಕಾರಿ. ಈ ಸ್ನೇಹ ಎರಡು ಹೃದಯಗಳ ಭಾವನಾತ್ಮಕ ಸಮ್ಮಿಲನವಾಗಿದೆ. ಪರಸ್ಪರ ಆತ್ಮೀಯರಾಗಲು ಪತ್ರ ಬರಹ ಉತ್ತಮ ಸಾಧನವಾಗಿದ್ದು, ಪರಸ್ಪರ ಸಂಬಂಧವು ಊರ್ಜಿತವಾಗಬೇಕಾದರೆ ಪತ್ರದ ಒಕ್ಕಣೆಯೂ ಯೋಗ್ಯವಾಗಿರುವುದು ಅನಿವಾರ್ಯ! ಇಲ್ಲಿ ಜಾತಿ, ಅಂತಸ್ತು, ವಯಸ್ಸು, ಲಿಂಗಭೇದ ಗೌಣವಾಗಿ, ಪತ್ರಗಳ ಓಡಾಟದಿಂದ ಭಾವನಾತ್ಮಕ ಸಂಬಂಧವು ಬಿಗಿಗೊಳ್ಳುತ್ತದೆ. ಪರಸ್ಪರ ಲೋಪದೋಷಗಳನ್ನು ತಿದ್ದಿಕೊಳ್ಳುವಲ್ಲಿ ಈ ಹವ್ಯಾಸ ನೆರವಾಗುತ್ತದೆ.

'ಪತ್ರ'ಗಳು ಬರೆಯುವವರ ಮತ್ತು ವಿಳಾಸದಾರರ ನಡುವೆ ನಿರ್ಮಿಸಿದ ಭಾವಸೇತು. ಪತ್ರಬರಹ ವಿವಿಧ ರಸಗಳಿಂದೊಡಗೂಡಿ 'ಕಾವ್ಯ'ದ ಮಟ್ಟವನ್ನು ತಲುಪಬಹುದು. ಸಾಹಿತ್ಯಾಸಕ್ತರ ಜೊತೆಗೆ ಹೆಚ್ಚು ಹೆಚ್ಚು ಪತ್ರ ವ್ಯವಹಾರ ಮಾಡುವುದರಿಂದ ನಮ್ಮಲ್ಲಿಯೂ ಅಂತಹ ಆಸಕ್ತಿ ಹಾಗೂ ಅರಿವಿನ ಕಣಜ ನಿರ್ಮಾಣವಾಗುತ್ತದೆ.

ನಿಜ ಜೀವನದಲ್ಲಿ ಕಾಣದ ಸಂಬಂಧ, ಆತ್ಮೀಯತೆಯನ್ನು ಈ 'ಪತ್ರಮೈತ್ರಿ'ಯಲ್ಲಿ ಕಾಣಬಹುದಾಗಿದೆ. ಕೆಲವು ನಿಯತಕಾಲಿಕಗಳು ಈ ಹವ್ಯಾಸವನ್ನು ಬೆಳೆಸಲು 'ಬನ್ನಿ ಸ್ನೇಹಿತರಾಗೋಣ' 'ಸ್ನೇಹ ಸೇತು' 'Pen friend' 'ಹಲೋ ಫ್ರೆಂಡ್' ಎಂಬ ಅಂಕಣವನ್ನೇ ಮೀಸಲಾಗಿಟ್ಟು, ಪ್ರತಿ ಸಂಚಿಕೆಯಲ್ಲೂ ಕೆಲವು ವಿಳಾಸ, ಹವ್ಯಾಸ, ವಯಸ್ಸನ್ನು ಪ್ರಕಟಿಸಿ ಸ್ನೇಹ ವೃದ್ಧಿಗೆ ಕಾರಣವಾಗಿವೆ. ರಾಜ್ಯಮಟ್ಟದಲ್ಲಿ ಹಲವು ಮಿತ್ರರು ಸೇರಿ 'ಅಖಿಲ ಕರ್ನಾಟಕ ಪತ್ರಮಿತ್ರರ ವೇದಿಕೆ'ಯನ್ನು ನಡೆಸುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

■ ಪರಮೇಶ್ವರ ಎಸ್.ಕುದರಿ



ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ

ಸ್ತನಗಳ ಮೇಲೆ ಮೊಡವೆ

ನನ್ನ ಸ್ತನಗಳು ಬಹಳ ಮುಂದೆ ಬಂದಿವೆ ಹಾಗೂ ಸ್ತನಗಳ ಮೇಲೆ ತುಂಬಾ ಮೊಡವೆಗಳಿವೆ. ಇದು ಸಹಜವೇ? ಬಹಳ ದಪ್ಪಗಿರುವ ನಾನು ಒಬ್ಬ ಯುವಕನನ್ನು ಪ್ರೀತಿಸುತ್ತಿದ್ದೇನೆ. ಅವನು ಬಹಳ ತೆಳ್ಳಗಿದ್ದಾನೆ. ನನಗೆ ಇಪ್ಪತ್ತೆರಡು ವರ್ಷ. ಅವನಿಗೆ ಇಪ್ಪತ್ತು ವರ್ಷ. ಇದರಿಂದ ಮುಂದೆ ತೊಂದರೆ ಇದೆಯ?

-ಹುಡುಗಿ, ಊರಿಲ್ಲ

ಸಲಹೆ

ಕೆಲವರಿಗೆ ಹದಿ ಹರೆಯದಲ್ಲಿ ಮುಖದ ಮೇಲಾಗುವಂತೆ ಸ್ತನಗಳ ಮೇಲೆಯೂ ಮೊಡವೆಗಳಾಗುವುದುಂಟು. ಅದಕ್ಕಾಗಿ ಚಿಂತಿಸುವ ಕಾರಣವಿಲ್ಲ. ಬಿಗಿಯಾದ ಬಟ್ಟೆ ಧರಿಸಬೇಡಿ. ಕೊಬ್ಬಿನಾಂಶ ಅಧಿಕವಿರುವ ಆಹಾರವನ್ನು ಹೆಚ್ಚು ಸೇವಿಸಬೇಡಿ. ದಿನಕ್ಕೆರಡು ಬಾರಿ ಸ್ನಾನ ಮಾಡಿ. ನೀವು ಪ್ರೀತಿಸುವ ಹುಡುಗನನ್ನು ಮದುವೆಯಾಗಲು ದಪ್ಪಗಿರುವುದಾಗಲೀ, ತೆಳ್ಳಗಿರುವುದಾಗಲೀ ಮತ್ತು ವಯಸ್ಸಾಗಲೀ ಯಾವುದೂ ಅಡ್ಡಿಯಾಗುವುದಿಲ್ಲ. ಇದರಿಂದ ಯಾವುದೇ ತರಹದ ತೊಂದರೆಯಿಲ್ಲ. ಆದರೆ ನೀವು ಪ್ರೀತಿಸುತ್ತಿರುವ ಹುಡುಗನ ವಯಸ್ಸು 20 ವರ್ಷವೆಂದು ತಿಳಿಸಿದ್ದೀರಿ. ಕಾನೂನಿನ ಪ್ರಕಾರ ಗಂಡಿಗೆ ಮದುವೆಯ ವಯಸ್ಸು 21 ವರ್ಷವಾಗಿರಲೇಬೇಕು. ಆದ್ದರಿಂದ ಅವರಿಗೆ 21 ವರ್ಷ ತುಂಬಿದ ಮೇಲೆಯೇ ಮದುವೆಯಾಗಿ. ನೀವು ಬಹಳ ದಪ್ಪಗಿದ್ದರೆ ಪಥ್ಯ ಹಾಗೂ ವ್ಯಾಯಾಮದಿಂದ ಸಣ್ಣಗಾಗಲು ಪ್ರಯತ್ನಿಸಿ.

ಗುದದ್ವಾರದಿಂದ ಸ್ಖಲನ


ನಾನು ಪಿ. ಯು. ಸಿ ಕಲಿಯುತ್ತಿರುವ ಹುಡುಗ. ನನಗೆ ರಾತ್ರಿ ವೇಳೆ ಸ್ವಪ್ನ ಬೀಳುವುದುಂಟು. ಸ್ವಪ್ನದಲ್ಲಿ ಒಬ್ಬ ಹುಡುಗಿಯ ಜೊತೆ ಲೈಂಗಿಕ ಸಂಪರ್ಕ ಮಾಡುತ್ತೇನೆ. ಆಗ ನನ್ನ ಗುದದ್ವಾರದಿಂದ ಸ್ಖಲನವಾಗುತ್ತದೆ. ನಾನು ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿದ್ದರೂ ಆಕೆಯೊಂದಿಗೆ ಸಂಭೋಗ ಮಾಡಿಲ್ಲ. ಆದಾಗ್ಯೂ ಹೀಗೇಕೆ ಆಗುತ್ತಿದೆ? ಸೂಕ್ತ ಸಲಹೆಯೊಂದಿಗೆ ನನ್ನ ಮನಸ್ಸಿಗೆ ಶಾಂತಿ ನೀಡಿ.

-ಹೆಸರು, ಊರುಬೇಡ.

ಸಲಹೆ

ನಿಮ್ಮ ವಯಸ್ಸಿನ ಹುಡುಗರಿಗೆ ಸ್ವಪ್ನ ಸ್ಖಲನವಾಗುವುದು ಸ್ವಾಭಾವಿಕ. ಅದಕ್ಕಾಗಿ ಕೊರಗುವ ಕಾರಣವಿಲ್ಲ. ಆದರೆ ನೀವು ಗುದದ್ವಾರದಲ್ಲಿ ಸ್ಖಲನವಾಗುತ್ತದೆಂದು ತಿಳಿಸಿದ್ದೀರಿ. ಮೂತ್ರದ್ವಾರವೆಂದು ಬರೆಯುವ ಬದಲು ಗುದದ್ವಾರವೆಂದು ಗೊಂದಲದಲ್ಲಿ ಬರೆದಿದ್ದೀರೋ ಇಲ್ಲವೇ ನಿಜವಾಗಲೂ ಗುದದ್ವಾರದಲ್ಲಿಯೇ ಸ್ಖಲನವಾಗುತ್ತದೆಯೋ ಎನ್ನುವ ಬಗ್ಗೆ ಸಂದೇಹವಿದೆ. ಗುದದ್ವಾರದಲ್ಲಿಯೇ ಸ್ಖಲನವಾಗುತ್ತಿದ್ದರೆ, ಅದಕ್ಕೆ ಬೇರೆ ಯಾವುದೋ ಕಾರಣವಿರಬೇಕು. ನೀವು ವೈದ್ಯರನ್ನು ಕಂಡು ಪರೀಕ್ಷಿಸಿಕೊಳ್ಳುವುದು ಒಳ್ಳೆಯದು.

ವಯಸ್ಕರ ಸಂದೇಹ ಸಲಹೆ



ಹಸ್ತ ಮೈಥುನ ತಪ್ಪೇ ?

ನಾನು 21 ವರ್ಷದ ಯುವಕ. ದ್ವಿತಿಯ ಬಿ.ಎ. ಓದುತ್ತಿರುವೆ. ನನಗೆ 12ನೇ ವಯಸ್ಸಿನಿಂದ ಹಸ್ತಮೈಥುನ ಚಟ ಬೆಳೆದು ಬಂದಿದೆ. ದಿನಕ್ಕೆ ಒಮ್ಮೆಯಾದರೂ ಹಸ್ತಮೈಥುನ ಮಾಡಿಕೊಳ್ಳದಿದ್ದರೆ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ, ಓದಲೂ, ಕೆಲಸ ಮಾಡಲೂ ಆಗುವುದಿಲ್ಲ. ಈ ಅಭ್ಯಾಸದಿಂದ ನಿಶ್ಯಕ್ತನಾಗಿದ್ದೇನೆ. ಪರಿಹಾರ ಸೂಚಿಸಿ.

- ಶಿವರಾಜ್, ಊರುಬೇಡ.

ಸಲಹೆ

ಹಸ್ತಮೈಥುನದಿಂದ ಯಾವುದೇ ವಿಧವಾದ ತೊಂದರೆಯಿಲ್ಲ. ಅದಕ್ಕಾಗಿ ಯೋಚಿಸುವ ಅಗತ್ಯವಿಲ್ಲ. ಆದರೆ ಅದನ್ನೇ ಚಟವನ್ನಾಗಿ ಮಾಡಿಕೊಂಡರೆ ಬೇರೆ ವಿಷಯಗಳಲ್ಲಿ ಸಹಜವಾಗಿ ಆಸಕ್ತಿ ಕಡಿಮೆಯಾಗುತ್ತದೆ. ನೀವು ಇನ್ನೂ ವಿದ್ಯಾರ್ಥಿಯಾದುದರಿಂದ ಓದಿನ ಬಗ್ಗೆ ಹೆಚ್ಚು ಗಮನಕೊಡಿ. ಯಾವುದಾದರೊಂದು ಆರೋಗ್ಯಕರ ಹವ್ಯಾಸ ಬೆಳೆಸಿಕೊಳ್ಳಿ, ಹಸ್ತಮೈಥುನದಿಂದ ಖಂಡಿತ ನಿಶ್ಯಕ್ತಿ ಉಂಟಾಗುವುದಿಲ್ಲ. ಒಳ್ಳೆಯ ಆಹಾರ ಸೇವಿಸಿ, ಚಿಂತೆ ಮಾಡುವುದನ್ನು ಬಿಡಿ. ಸದಾ ಚಟುವಟಿಕೆಯಿಂದಿರಿ. ನಿಶ್ಯಕ್ತಿ ತನ್ನಿಂದ ತಾನೇ ದೂರವಾಗುತ್ತದೆ. ಅಷ್ಟಕ್ಕೂ ನಿಶ್ಯಕ್ತಿ ಕಡಿಮೆಯಾಗದಿದ್ದರೆ ವೈದ್ಯರನ್ನು ಭೇಟಿಯಾಗಿ.

ಚಿಕ್ಕ ಶಿಶ್ನದ ಸಮಸ್ಯೆ

ನನಗೆ 35 ವರ್ಷ ವಯಸ್ಸು. ನನ್ನ ಜನನೇಂದ್ರಿಯ ತುಂಬಾ ಚಿಕ್ಕದಿದೆ. 8-10 ವರ್ಷದ ಬಾಲಕನಿಗೆ ಇರುವಷ್ಟು ಚಿಕ್ಕದು. ನಾನು ಇದುವರೆಗೆ ಮದುವೆ ಮಾಡಿಕೊಂಡಿಲ್ಲ. ಈಗ ಮನೆಯವರು ಮದುವೆ ಮಾಡಲು ತಯಾರಿ ನಡೆಸಿದ್ದಾರೆ, ಕನ್ಯೆ ಫಿಕ್ಸ್ ಆಗಿಲ್ಲ. ಮದುವೆಯಾದರೆ ಮುಂದೆ ಹೇಗೋ ಎಂದು ಭಯವಾಗುತ್ತಿದೆ. ಈ ಮಧ್ಯೆ ನಾನು ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ. ಅವಳಿಗೂ ನನ್ನ ಶಿಶ್ನದ ವಿಷಯ ತಿಳಿದಿಲ್ಲ. ದಯವಿಟ್ಟು ಗುಣವಾಗಿಸುವ ಔಷಧೋಪಚಾರ ತಿಳಿಸಿ.

- ಹೆಸರು, ಊರು ಪ್ರಕಟಿಸಬೇಡಿ

ಸಲಹೆ

ಸ್ವಾಭಾವಿಕವಾಗಿ ಸಹಜ ಸ್ಥಿತಿಯಲ್ಲಿ ಎಲ್ಲರ ಶಿಶ್ನವೂ ಚಿಕ್ಕದಾಗಿಯೇ ಇರುತ್ತದೆ. ಲೈಂಗಿಕವಾಗಿ ಉದ್ರೇಕಗೊಂಡಾಗ ಮಾತ್ರ ಆ ಭಾಗಕ್ಕೆ ರಕ್ತಪರಿಚಲನೆ ಅಧಿಕವಾಗುವುದರಿಂದ ದೊಡ್ಡದಾಗುತ್ತದೆ. ಅದಕ್ಕಾಗಿ ಚಿಂತೆ ಮಾಡುವ ಕಾರಣವಿಲ್ಲ. ನಿಮಗೆ ಲೈಂಗಿಕವಾಗಿ ಉದ್ರೇಕಗೊಂಡಾಗಲೂ ಶಿಶ್ನ ಚಿಕ್ಕದಾಗಿಯೇ ಇದ್ದರೆ ಲೈಂಗಿಕ ತಜ್ಞರನ್ನು ಭೇಟಿಯಾಗಿ ಚಿಕಿತ್ಸೆ ಪಡೆದುಕೊಳ್ಳಿ.

ಮಕ್ಕಳಾಗಲು ಏನು ಮಾಡಬೇಕು?

ನಮ್ಮದು ಅಂತರ್‌ಜಾತೀಯ ವಿವಾಹ. ವಿವಾಹವಾಗಿ ಒಂದು ವರ್ಷ ಕಳೆದಿದೆ. ಕೆಲಸದ ನಿಮಿತ್ತ ಬೇರೆ ಊರಲ್ಲಿರುವ ನಮ್ಮವರು ನನ್ನನ್ನು

ತವರಿನಲ್ಲಿ ಬಿಟ್ಟಿದ್ದಾರೆ. ತಿಂಗಳಿಗೊಮ್ಮೆ ಬಂದು 8 ದಿನ ಇದ್ದು ಹೋಗುತ್ತಾರೆ. ಅವರು ಬಂದಾಗ ದಿನಕ್ಕೆ ನಾಲ್ಕು ಸಾರಿ ಲೈಂಗಿಕ ಕ್ರೀಡೆ ನಡೆಸುತ್ತೇವೆ. ನಾಲ್ಕು ದಿನಗಳಾಗುವುದರೊಳಗೆ ನನ್ನ ಶರೀರ ತುಂಬಾ ನೋವಾಗಿಬಿಡುತ್ತದೆ. ಅವರು ಯಾವಾಗ ಊರಿಗೆ ಹೋಗುತ್ತಾರೋ ಎನ್ನಿಸುತ್ತದೆ. ಋತು ಚಕ್ರ ಸರಿಯಾಗಿ ಆದರೂ ಕೆಳಹೊಟ್ಟೆ ತುಂಬಾ ನೋಯುತ್ತದೆ. ನನ್ನವರು ನನಗಿಂತ 10-12ವರ್ಷ ದೊಡ್ಡವರು. ನಾನು ಇನ್ನೂ ಗರ್ಭ ಧರಿಸಿಲ್ಲ. ಹಿಂದೆ ವಿವಾಹಪೂರ್ವದಲ್ಲಿ ನನ್ನವರ ಒತ್ತಾಯಕ್ಕೆ ಮಣಿದು ಲೈಂಗಿಕ ಸಂಪರ್ಕ ಮಾಡುತ್ತಿದ್ದೆ. ಆಗ ಹೆದರಿಕೆಯಿಂದ ಒಂದೂವರೆ ಪಾಕೆಟ್ ಗರ್ಭನಿರೋಧಕ ಮಾತ್ರೆ (ಮಾಲಾಡಿ) ತೆಗೆದುಕೊಂಡಿದ್ದೆ. ಅವುಗಳನ್ನು ಕ್ರಮಬದ್ಧವಾಗಿ ತೆಗೆದುಕೊಂಡಿಲ್ಲ. ನಾನು ಗರ್ಭಧರಿಸದಿರಲು ಇದೇ ಕಾರಣವೆ? ಶರೀರದಲ್ಲಿ ನೋವು ಏಕೆ ಬರುತ್ತದೆ? ಮಕ್ಕಳಾಗಲು ನಾವು ಕಾಮ ಕೇಳಿಯಲ್ಲಿ ಹೇಗೆ ಪಾಲ್ಗೊಳ್ಳಬೇಕು? ವೈದ್ಯರನ್ನು ಸಂಪರ್ಕಿಸಲು ನನಗೆ ತುಂಬಾ ನಾಚಿಕೆ. ಆದ್ದರಿಂದ ನೀವೇ ಪರಿಹಾರ ಸೂಚಿಸಿ.

- ಶೈಲಾ, ಮಂಡ್ಯ.

ಸಲಹೆ

ಮಾಲಾಡಿ ಮಾತ್ರೆ ಮುಂಚೆ ತೆಗೆದುಕೊಂಡಿದ್ದಕ್ಕೂ ಈಗ ನೀವು ಗರ್ಭಧರಿಸದೇ ಇರುವುದಕ್ಕೂ ಯಾವುದೇ ಸಂಬಂಧವಿಲ್ಲ. ಅದು ತಾತ್ಕಾಲಿಕ ಗರ್ಭ ನಿರೋಧಕವಾಗಿ ಮಾತ್ರ ಕೆಲಸ ಮಾಡುತ್ತದೆ. ನಿಮ್ಮ ಪತಿ ಬೇರೆ ಊರಿನಲ್ಲಿರುವುದರಿಂದ ಅವರು ನಿಮ್ಮಲ್ಲಿಗೆ ಬಂದಾಗ ನಿಮಗೆ Ovulation Period ಅಂದರೆ 'ಅಂಡಾಣು' ಬಿಡುಗಡೆ ಯಾಗಿರದಿದ್ದ ಪಕ್ಷದಲ್ಲಿ ಗರ್ಭಧರಿಸುವ ಸಾಧ್ಯತೆಯಿರುವುದಿಲ್ಲ. ನಿಮ್ಮ ಋತು ಚಕ್ರ ಕ್ರಮಬದ್ಧವಾಗಿದ್ದರೆ ಸಾಮಾನ್ಯವಾಗಿ ಮಧ್ಯದ ದಿನಗಳಲ್ಲಿ ಅಂದರೆ ಹದಿನಾಲ್ಕನೆಯ ದಿನ ಅಂಡಾಣು ಫಲಿತಗೊಳ್ಳುತ್ತದೆ. ಆ ಸಮಯದಲ್ಲಿ ನೀವು ಸಮಾಗಮ ಹೊಂದಿದ್ದರೆ ಗರ್ಭಧರಿಸುವ ಸಾಧ್ಯತೆ ಹೆಚ್ಚು. ಬಿಡುಗಡೆಯಾದ ಅಂಡಾಣು ಬರೀ 24 ಗಂಟೆಗಳ ಕಾಲ ಮಾತ್ರ ಇರುತ್ತದಾದ್ದರಿಂದ ನೀವು ಮುಟ್ಟಾದ 12ನೇ ದಿನದಿಂದ 18ನೇ ದಿನದವರೆಗೂ ಲೈಂಗಿಕ ಸಂಪರ್ಕ ಮಾಡಿದರೆ ಖಂಡಿತ ಗರ್ಭ ಧರಿಸುವಿರಿ. ಹಾಗೆ ಮಾಡಿದಾಗಲೂ ಗರ್ಭಧರಿಸದಿದ್ದರೆ ಸ್ತ್ರೀರೋಗ ತಜ್ಞರನ್ನು ಕಾಣುವುದೊಳ್ಳೆಯದು. ಇನ್ನು ಲೈಂಗಿಕ ಸಂಪರ್ಕದ ನಂತರ ಶರೀರದಲ್ಲಿ ನೋವು ಬಂದರೆ ಹಾಗೂ ಋತು ಸಮಯದಲ್ಲಿ ಕೆಳ ಹೊಟ್ಟೆ ನೋವು ಬಂದರೆ ವಿಶ್ರಾಂತಿ ತೆಗೆದುಕೊಳ್ಳಿ ಇಲ್ಲವೇ ಯಾವುದಾದರೂ ನೋವು ನಿವಾರಕ ಮಾತ್ರೆ ತೆಗೆದುಕೊಳ್ಳಿ.

ಸಲಿಂಗ ಕಾಮ ವಿಕೃತವೇ?

ನಾನೊಬ್ಬ ಸಲಿಂಗಕಾಮಿ. ನನಗೆ ಈಗ 48 ವರ್ಷ. ಸುಮಾರು 14ನೇ ವರ್ಷದಿಂದ ನನಗೆ ಹಸ್ತಮೈಥುನ ಚಟಬಿದ್ದಿತು. ಹಸ್ತಮೈಥುನದ ಜೊತೆಗೆ ಸ್ನೇಹಿತರ ಸಂಪರ್ಕದಿಂದ ಗುದಮೈಥುನ ಮಾಡಿಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡೆನು.

ಕೆಲವು ಸ್ನೇಹಿತರು ನನ್ನ ಗುದಮೈಥುನ ಮಾಡಿದರೆ ಇನ್ನೂ ಕೆಲವರು ಅದನ್ನು ಇಷ್ಟಪಡದೆ ಅವರ ಶಿಶ್ನವನ್ನು ನನ್ನ ಬಾಯಲ್ಲಿಟ್ಟು ಚೀಪು ಎನ್ನುತ್ತಿದ್ದರು. ಶಿಶ್ನ ಚೀಪುವ ಅಭ್ಯಾಸವಾಯಿತು. ಶಿಶ್ನ ಚೀಪುತ್ತಿದ್ದಾಗ ವೀರ್ಯವನ್ನು ಬಾಯಲ್ಲಿ ಬಿಡುತ್ತಿದ್ದರು ಮತ್ತು ಅದನ್ನು ಕುಡಿ ಎಂದು ಹೇಳುತ್ತಿದ್ದರು. ಹಾಗೆಯೆ ಮಾಡಲು ಪ್ರಾರಂಭಿಸಿದೆನು.

ಈ ಅಭ್ಯಾಸ ವಿಕೃತವೇ? ವೀರ್ಯವನ್ನು ಕುಡಿದರೆ ಅದರಿಂದ ಆರೋಗ್ಯಕ್ಕೆ ತೊಂದರೆ ಇದೆಯೇ? ಇದಕ್ಕೆ ಸೂಕ್ತ ಸಲಹೆ ಕೊಡಿ.

ಇನ್ನೊಂದು ವಿಷಯವನ್ನು ತಮ್ಮಲ್ಲಿ ಮುಚ್ಚುಮರೆಯಿಲ್ಲದೆ ಹೇಳಬಯಸುತ್ತೇನೆ. ನನಗೆ ಈಗ ಬೇಸರ ಬಂದಿದೆ. ಗುದಮೈಥುನವಾಗಲಿ ಶಿಶ್ನ ಚೀಪುವುದಾಗಲಿ ಇಷ್ಟವಿಲ್ಲ. ಆದರೆ ನನ್ನ ಹಳೆಯ ಸ್ನೇಹಿತರು, ನಾನು ಒಲ್ಲೆ ಎಂದರೂ ಸಹ ಬಲತ್ಕಾರವಾಗಿ ಎಳೆದುಕೊಂಡು ಹೋಗಿ ಒಂದು ಹೆಣ್ಣು ಸಿಕ್ಕಾಗ ಹೇಗೆ ಮಾಡುವರೋ ಹಾಗೆ ನನ್ನನ್ನು ಸಿಕ್ಕಾಪಟ್ಟೆ ಹಿಸುಕಿ ಗಲ್ಲಕಡಿದು, ಶಿಶ್ನವನ್ನು ಬಾಯಲ್ಲಿಟ್ಟು ವೀರ್ಯವನ್ನು ಬಿಡುವರು. ನನಗೆ ಸಾಕುಸಾಕಾಗಿ ಹೋಗುವುದು. ಏಕೆ ಈ ರೀತಿ ನನಗೆ ಅಭ್ಯಾಸವಾಗಿದೆ ಎಂದು ಬಹಳ ವ್ಯಥೆ ಪಡುತ್ತೇನೆ. ನನ್ನ ಸಂಪರ್ಕ ಮಾಡಿದಾಗ ಅವರು ಹೆಣ್ಣನೊಂದಿಗೆ ಸಂಭೋಗ ಮಾಡುವಾಗ ಹೇಗೆ ಮಾತನಾಡುವರೋ ಆ ರೀತಿ ಮಾತನಾಡುವರು. ಈ ಅಭ್ಯಾಸ ಪೂರ್ಣ ಬಿಡಲಿಕ್ಕೆ ನಿಮ್ಮ ಸಲಹೆ ಕೊಡುತ್ತೀರೆಂದು ನಂಬುವೆ.

- ಹೆಸರುಬೇಡ, ಊರು ಬೇಡ

ಸಲಹೆ

ಸಲಿಂಗಕಾಮ ಖಂಡಿತ ಒಳ್ಳೆಯದಲ್ಲ. ಇದರಿಂದ ನಿಮ್ಮ ದೇಹಕ್ಕೆ ಹಲವಾರು ರೋಗಗಳು ಲಗ್ಗೆಯಿಡಲು ನೀವೇ ದಾರಿ ತೆರೆದಿಟ್ಟಂತಾಗುತ್ತದೆ. ನಿಮಗೆ ಇಷ್ಟವಿಲ್ಲದಿದ್ದ ಮೇಲೆ ಗೆಳೆಯರ ಬಲವಂತಕ್ಕೆ ಕಟ್ಟು ಬಿದ್ದು ನಿಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನೇಕೆ ಹಾಳು ಮಾಡಿಕೊಳ್ಳುವಿರಿ? ಧೈರ್ಯವಾಗಿ 'ಅಂತಹ' ಗೆಳೆಯರನ್ನೆಲ್ಲಾ ಎದುರಿಸಿ ಅವರನ್ನು ದೂರವಿರಿಸಿ. ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳಿ, ಸಾಧ್ಯವಾಗದಿದ್ದರೆ ಮನೋವೈದ್ಯರನ್ನು ಭೇಟಿಯಾಗಿ ಅವರ ಮಾರ್ಗದರ್ಶನದಂತೆ ನಡೆಯಿರಿ.

ಹೊಸ ಅಂಕಣ ಏಕೆ ?

ಖ್ಯಾತ ಲೇಖಕಿ ಉಷಾ ನವರತ್ನರಾಮ್ ಅವರ 'ಆಪ್ತ ಸಮಾಲೋಚನೆ' ಅಂಕಣಕ್ಕೆ ಹರಿದು ಬರುವ ಪತ್ರಗಳ ಮಹಾಪೂರದಲ್ಲಿ ಅನೇಕ ಪತ್ರಗಳು ವೈದ್ಯಕೀಯ ಸಮಸ್ಯೆಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಹೆಚ್ಚಿನವರು ಲೈಂಗಿಕ ಸಮಸ್ಯೆಗಳನ್ನು ತೋಡಿಕೊಳ್ಳುತ್ತಿದ್ದಾರೆ. ಇಂಥ ಸಮಸ್ಯೆಗಳು 'ಆಪ್ತಸಮಾಲೋಚನೆ' ಅಂಕಣದ ವ್ಯಾಪ್ತಿಗೆ ಹೊರತಾದ್ದರಿಂದ ಈ ತನಕ ಈ ಬಗೆಯ ಪತ್ರಗಳನ್ನು ನಿರ್ಲಕ್ಷಿಸುತ್ತಿದ್ದೆವು. ಈ ಬಗೆಯ ವೈದ್ಯಕೀಯ ಸಮಸ್ಯೆಗಳ ಸಂಖ್ಯೆ ವಿಪರೀತ ಹೆಚ್ಚಾಗಿರುವುದನ್ನು ಗಮನಿಸಿ ಇದೀಗ ಓದುಗರ ಅಭಿಲಾಷೆಯಂತೆ "ವಯಸ್ಕರ ಸಂದೇಹ ಸಲಹೆ" ಅಂಕಣ ಆರಂಭಿಸುತ್ತಿದ್ದೇವೆ. ಮುಜುಗರದ ವಿಷಯಗಳನ್ನು ಹೇಳಲಾಗದೆ ಒಳಗೇ ಅದುಮಿಟ್ಟು ಕೊಂಡು ಕೊರಗುವವರಿಗೆ ಸರಿಯಾದ ಮಾಹಿತಿ-ಮಾರ್ಗದರ್ಶನ ನೀಡುವುದು ಈ ಅಂಕಣದ ಉದ್ದೇಶ. ಖ್ಯಾತ ವೈದ್ಯರಾದ ಡಾ. ವಸುಂಧರಾ ಭೂಪತಿಯವರು ಪ್ರತಿ ತಿಂಗಳು ಉತ್ತರಿಸುವ ಈ ವಿಭಾಗಕ್ಕೆ ನೀವು ಮುಕ್ತವಾಗಿ ಬರೆಯಬಹುದು. ಹೆಸರು, ವಿಳಾಸ ತಿಳಿಸುವ ಅಗತ್ಯವಿಲ್ಲ.

ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ 'ಆಪ್ತ ಸಮಾಲೋಚನೆ' ಹಾಗೂ ವೈದ್ಯಕೀಯ ಸಮಸ್ಯೆಗಳನ್ನು ಪರಿಹರಿಸುವ "ವಯಸ್ಕರ ಸಂದೇಹ ಸಲಹೆ" ಅಂಕಣಗಳನ್ನು ಪ್ರತಿ ತಿಂಗಳು ನಿಗದಿತ ಮಧ್ಯ ಪುಟಗಳಲ್ಲೇ ಪ್ರಕಟಿಸಲಾಗುವುದು. ಓದುಗರು ಈ ಪುಟಗಳಲ್ಲಿನ ಮಾಹಿತಿಯನ್ನು ಸಮಯಾನುಸಾರ ಬಳಸಿಕೊಳ್ಳಲು ಅನುವಾಗುವಂತೆ ಬಿಡಿಸಿಟ್ಟುಕೊಳ್ಳಬಹುದು.

ವಿಳಾಸ

ಸಂಪಾದಕರು, ('ವಯಸ್ಕರ ಸಂದೇಹ - ಸಲಹೆ' ವಿಭಾಗ) **ಬಿಸಿಲ ಬದುಕು,**
ಅಂಚೆ ಪೆಟ್ಟಿಗೆ : 7951 ಬಸವೇಶ್ವರನಗರ, ಬೆಂಗಳೂರು - 560 079.



ಆಪ್ತ ಸಮಾಲೋಚನೆ

■ ಉಷಾ ನವರತ್ನರಾಮ್

ಈ ಬಲೆಯಿಂದ ಪಾರುಗುವುದ್ಹೇಗೆ ?

ನಾನು ವಿವಾಹಿತ ಹಾಗೂ ನೌಕರಸ್ಥ. ನಮ್ಮ ಸುಖಮಯ ದಾಂಪತ್ಯ ಸಾಗುತ್ತಿತ್ತು. ಅಷ್ಟರಲ್ಲೇ ನನಗೆ ಪರ ಊರಿಗೆ ವರ್ಗಾವಣೆಯಾದ್ದರಿಂದ ಹೆಂಡತಿಯನ್ನು ನನ್ನ ತಂದೆ ತಾಯಿಯವರ ಬಳಿ ಬಿಟ್ಟುಹೋದೆ. ಆದರೆ ಈಗ ನಾನು ಕೆಲಸ ಮಾಡುತ್ತಿರುವ ಊರಿನಲ್ಲಿ ಒಬ್ಬಳು ಶ್ರೀಮಂತ ಹುಡುಗಿ ಪ್ರೀತಿಸುತ್ತಿದ್ದಾಳೆ. ಇದನ್ನು ತಿಳಿದ ನಾನು 'ವಿವಾಹಿತ' ಎಂದು ತಿಳಿಸಿದರೂ ಅವಳು ಮದುವೆಯಾಗುವುದಿದ್ದರೆ ನಿಮ್ಮನ್ನೇ ಎಂದು ಒತ್ತಾಯ ಮಾಡುತ್ತಿದ್ದಾಳೆ. ಇವಳ ಈ ಒತ್ತಾಯಕ್ಕೆ ಅವಳ ತಂದೆಯ ಬೆಂಬಲವಿದೆ. ನನ್ನ ಹೆಂಡತಿ ಈ ಸಂಬಂಧಕ್ಕೆ ಒಪ್ಪುವುದಿಲ್ಲ. ಈಗ ನನ್ನದು ಇಬ್ಬಂದಿ ಪರಿಸ್ಥಿತಿ. ಈ ಶ್ರೀಮಂತಳನ್ನು ಬಿಡುವ ಎಂದರೆ ಅವಳು ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೆದರಿಸುತ್ತಿದ್ದಾಳೆ ನಾನೇನು ಮಾಡಲಿ? ನಾನು ಈ ಬಲೆಯಿಂದ ಹೇಗೆ ತಪ್ಪಿಸಿಕೊಳ್ಳಲಿ?

-ಮೋಹನ್, ಊರು ಬೇಡ.

ಸಲಹೆ

ಅಗ್ನಿ ಸಾಕ್ಷಿಯಾಗಿ, ಗುರುಹಿರಿಯರ ಸಾಕ್ಷಿಯಾಗಿ ಕೈಹಿಡಿದ ಹೆಂಡತಿಯಿರುವಾಗ ನಿಮ್ಮನ್ನು ಬೇರೊಬ್ಬ ಶ್ರೀಮಂತ ಹುಡುಗಿ ಪ್ರೀತಿಸುತ್ತಿದ್ದಾಳೆ, ನೀವು ವಿವಾಹಿತರು ಎಂದು ತಿಳಿದು ಪ್ರೀತಿಸುತ್ತಿದ್ದಾಳೆ, ಎಂದು ಬರೆದಿರುವುದು ನೋಡಿದರೆ ನಿಮ್ಮ ಮನಸ್ಸು ನಿಮ್ಮ ಹಿಡಿತದಲ್ಲಿಲ್ಲ. ಅವಳಿಗೆ ಬುದ್ಧಿ ಹೇಳುವ ಬದಲು ಅವಳ ತಂದೆಯೇ ನಿಮ್ಮ ಸಂಬಂಧಕ್ಕೆ ಬೆಂಬಲಿಸುತ್ತಿರುವುದು ಅಕ್ಷಮ್ಯ - ಒಂದು ಹೆಣ್ಣಿನ ಬಾಳು ಹಾಳು ಮಾಡಿ ಅದರ ಮೇಲೆ ಬೇರೊಬ್ಬ ಹೆಣ್ಣು ಸೌಧ ಕಟ್ಟುವ ಯೋಜನೆಯಲ್ಲಿರುವುದು ಮಹತ್ತರ ಕೀಳು ಕೆಲಸ! ನಿಮ್ಮ ಹೆಂಡತಿಯ ನಿರ್ಧಾರ ಸರಿಯಾದುದು. ಒಂದು ವೇಳೆ ಅವಳೂ ಒಪ್ಪಿದ್ದಲ್ಲಿ ಕಾನೂನು ರೀತ್ಯಾ ವಿಚ್ಛೇದನ ಪಡೆದು ಈ ಶ್ರೀಮಂತ ಹುಡುಗಿಯನ್ನು ವಿವಾಹವಾಗಬಹುದು. ಆದಾಗ್ಯೂ ನಾಳೆ ಈ ಶ್ರೀಮಂತ ಹುಡುಗಿ ಮತ್ತೋರ್ವ ಪುರುಷನನ್ನು ಪ್ರೀತಿಸಿ ನಿಮ್ಮ ಕೈ ಬಿಡ ಬಹುದುಲ್ಲವೇ? ನಿಮ್ಮ ಪತ್ನಿಯು ಆತ್ಮಹತ್ಯೆ ಮಾಡಿಕೊಳ್ಳ ಬಹುದಲ್ಲವೇ? ಪ್ರೌಢ ಮನಸ್ಸಿನವರಾದ ನೀವೇ ಹೀಗೆ ಯೋಚಿಸಿ ಇಲ್ಲ ಸಲ್ಲದ ಇಬ್ಬಂದಿ ಸ್ಥಿತಿಯನ್ನು ಸೃಷ್ಟಿಸಿಕೊಂಡಿರುವಿರಿ. ಯಾವ ಹೆದರಿಕೆ, ಬೆದರಿಕೆಗೂ ಬಗ್ಗಬೇಡಿ. ಧರ್ಮಾನುಸಾರವಾಗಿ, ಮನಸ್ಸಾಕ್ಷಿಗೆ ಬಾಗಿ ಧರ್ಮಪತ್ನಿಯೊಂದಿಗೆ ಬಾಳುವುದು ಕಲಿಯಿರಿ. ಪರ ಊರಿಗೆ ವರ್ಗಾವಣೆಯಾದರೆ ಹೆಂಡತಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ - ಹೆಣ್ಣುಗಳ ಬದುಕಿನೊಂದಿಗೆ ಆಡುವುದನ್ನು ನಿಲ್ಲಿಸಿ. ಆ ಶ್ರೀಮಂತ ಹುಡುಗಿ, ಅವಳ ತಂದೆಗೆ ಬುದ್ಧಿಹೇಳಿ, ಅವರಿಂದ ದೂರವಾಗಿ ನಿಮ್ಮ ಕೈಹಿಡಿದವಳೊಂದಿಗೆ ಬಾಳು ನಡೆಸಲು, ಕಲಿಯಿರಿ. ಶ್ರೀಮಂತಳು ಎಂಬ ಒಂದೇ ಕಾರಣಕ್ಕಾಗಿ ನೀವು ಅವಳು ಹೇಳಿದಂತೆ ಕುಣಿಯಬೇಕಿಲ್ಲ. ಸುಖ, ಶಾಂತಿ, ಸಂತೋಷವನ್ನು ಶ್ರೀಮಂತಿಕೆ ತಂದುಕೊಡುವುದಿಲ್ಲ. ಅವಳು ಪ್ರೀತಿಸುತ್ತಾಳೆ ಎನ್ನುತ್ತೀರಿ. ಆದರೆ ನೀವು ಪ್ರೀತಿಸುತ್ತಿದ್ದೇನೆ ಎಂದು ಹೇಳದಿರುವುದು ನೋಡಿದರೆ ನೀವು ಅವಳ ಶ್ರೀಮಂತಿಕೆಯ ಕೈ ಬೊಂಬೆಯಾಗಿದ್ದೀರಿ ಎನಿಸುತ್ತದೆ. ತಪ್ಪಿದ ಹೆಜ್ಜೆ ಸರಿಪಡಿಸಿಕೊಂಡು ಪತ್ನಿಯೊಂದಿಗೆ ಬಾಳಲು ಕಲಿಯಿರಿ.

ಪ್ರೇಮ ವರ್ತುಲ

ನಾನೀಗ ದ್ವಿತೀಯ ಪಿಯುಸಿಗೆ ವಿದ್ಯಾಭ್ಯಾಸವನ್ನು ನಿಲ್ಲಿಸಿದ್ದೇನೆ. ನಾನು ಒಬ್ಬ ಯುವಕನೊಂದಿಗೆ ಪ್ರೀತಿಸುತ್ತಿದ್ದೆ. ಅವನು ಮುಸಲ್ಮಾನ ನಾನು ಹಿಂದೂ. ಇದುವರೆಗೂ ಪ್ರೀತಿಸುತ್ತಿದ್ದವನು ಕೆಲವು ದಿನಗಳಿಂದ ನನ್ನನ್ನು ಮರೆತುಬಿಡು ನಾನು ನಿನ್ನನ್ನು ಮದುವೆಯಾಗುವುದಿಲ್ಲ ಎಂದು ಪತ್ರದ ಮೂಲಕ ತಿಳಿಸಿದ್ದಾನೆ. ಆದರೆ ಅವನು ಒಳ್ಳೆಯವನು ಹೀಗೇಕೆ ಹೇಳಿದ ಅಂತಾ ಚಿಂತಿಸಿ ಚಿಂತಿಸಿ ವ್ಯಾಕುಲಗೊಂಡಿದ್ದೇನೆ. ಈ ಬೆಳವಣಿಗೆಯಿಂದ ನನಗೀಗ ಬದುಕಲೇ ಬೇಸರವಾಗಿದೆ. ಯಾವುದರಲ್ಲೂ ಆಸಕ್ತಿಯಿಲ್ಲ. ಅವನು ಸದ್ಯದಲ್ಲೇ "Foreign" ಗೆ ಹೋಗುವುದರಲ್ಲಿದ್ದಾನೆ. ಆದರೆ ನನಗೆ ಸದಾ ಅವನ ನೆನಪು ಕಾಡುತ್ತಿರುತ್ತದೆ. ಈ ಪ್ರೇಮ ವರ್ತುಲದಿಂದ ಹೊರ ಬರುವ ಬಗೆಯಾದರೂ ಹೇಗೆ? ತಿಳಿಸಿ.

- ಪ್ರೇಮಾ, ಊರುಬೇಡ

ಸಲಹೆ

ನನ್ನನ್ನು ಮರೆತು ಬಿಡು ನಾನು ನಿನ್ನನ್ನು ಮದುವೆಯಾಗುವುದಿಲ್ಲ ಎಂದು ಪತ್ರದ ಮೂಲಕ ತಿಳಿಸಿರುವ ನಿಮ್ಮ ಪ್ರಿಯಕರ ಹಾಗೇಕೆ ಹೇಳಿದನೆಂದು ಯೋಚಿಸಬೇಕಾಗಿಲ್ಲ. ಹಿಂದೂಧರ್ಮ ಇಸ್ಲಾಂ ಧರ್ಮ ಇವರೆಡಕ್ಕೂ ಸಾಕಷ್ಟು ಅಂತರವಿದೆ. ಮುಸಲ್ಮಾನರು ಅವರ ಧರ್ಮಕ್ಕನುಸಾರವಾಗಿ ಜಮಾತ್ ಏನು ಹೇಳುವುದೋ ಆ ರೀತಿ ನಡೆದುಕೊಳ್ಳಬೇಕಾಗುತ್ತದೆ. ಮದುವೆಯಾಗುವವಳು ಇಸ್ಲಾಂ ಧರ್ಮಕ್ಕೆ ಕನ್‌ವರ್ಟ್ ಆಗಬೇಕಾಗುತ್ತದೆ, ಇಲ್ಲದಿದ್ದಲ್ಲಿ ಬದುಕಿನಲ್ಲಿ ಅನೇಕ ವಿರೋಧಗಳನ್ನು ಎದುರಿಸಬೇಕಾಗುತ್ತದೆ. ಅವನು ವಿದೇಶಕ್ಕೆ ಹೋಗುವವನೆಂದು ತಿಳಿಸಿದ್ದೀರಿ. ಅವನು ಅಷ್ಟು ಸತ್ಯವಂತನಾಗಿ ನೇರವಾಗಿ ಮದುವೆಯಾಗುವುದಿಲ್ಲ ಎಂದು ತಿಳಿಸಿದ್ದರೂ, ನಿಮ್ಮ ನಿಲುವನ್ನು ಬಿಡದೆ ವ್ಯಥೆ ಪಡುವುದು ವ್ಯರ್ಥ. ಅವನನ್ನು ಮರೆಯಲು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಿ, ಬೇರೆ ಬೇರೆ ವಿಧಾನಗಳಲ್ಲಿ ನಿಮ್ಮನ್ನು ತೊಡಗಿಸಿ ಕೊಳ್ಳಿ, ಕಾಲ ಉರುಳಿದಂತೆ ನೆನಪು ಮಾಸುತ್ತದೆ.

ಗಂಡನನ್ನು ಬಿಟ್ಟು ಬದುಕಲಾರೆ

ನಾನು ೨೦ ವರ್ಷದ ಹುಡುಗಿ. ನಾನು ಶ್ರೀಮಂತರ ಮನೆಯಲ್ಲಿ ಹುಟ್ಟಿ ಸುಖವಾಗಿ ಬೆಳೆದವಳು. ತಂದೆ ತಾಯಿಗಳು ನನ್ನನ್ನು ನನ್ನ ಸೋದರ ಮಾವನಿಗೆ ಕೊಟ್ಟು ಲಗ್ನ ಮಾಡಬೇಕೆಂದಿದ್ದರು. ಅವನು ಸರಕಾರಿ ನೌಕರ. ಆದರೆ ಅವನು ಕೈ ಕೊಟ್ಟು ಬೇರೆ ಗಿಡ್ಡ ಹುಡುಗಿಯನ್ನು ಮದುವೆಯಾದ. ಆದುದರಿಂದ ನನ್ನನ್ನು ಬೇರೆ ಹುಡುಗನಿಗೆ ಖಾಸಗಿ ಶಾಲೆಯಲ್ಲಿ ಕೆಲಸ ಕೊಡಿಸಿ ಮದುವೆ ಮಾಡಿದರು. ಆದರೆ ವರ್ಷವಾದರೂ ಅವರಿಗೆ ಸಂಬಳವಿಲ್ಲ. ಅವರು ನೀವು ಮೋಸಮಾಡಿ ಮದುವೆ ಮಾಡಿದಿರಿ, ನಿನ್ನನ್ನು ಬಿಟ್ಟು ನಾನು ಇನ್ನೊಂದು ಮದುವೆಯಾಗಿ ಸುಖವಾಗಿ ಬಾಳುತ್ತೇನೆ ಎನ್ನುತ್ತಿದ್ದಾರೆ. ಆದರೆ ನನಗೆ ಈಗ ಭಯವಾಗುತ್ತಿದೆ. ಅವರು ಇನ್ನೊಂದು ಮದುವೆಯಾದರೆ ಮುಂದಿನ ನನ್ನ ಜೀವನದ ಗತಿ ಏನು? ನಾನು ಗಂಡನನ್ನು ಬಿಟ್ಟು ಬಾಳಲು ಆಗುವುದಿಲ್ಲ. ನನಗೆ ಬೇರೆ ಮಾರ್ಗವಿದ್ದರೆ ತಿಳಿಸಿ.

- ಶೈಲಾ, ಕೆ. ಹಳ್ಳಿ

ಸಲಹೆ

ತಾವೇ ಕೆಲಸ ಕೊಡಿಸಿ ನಿಮ್ಮನ್ನು ಅವರಿಗೆ ವಿವಾಹ ಮಾಡಿಕೊಟ್ಟ ಮೇಲೂ ವರ್ಷವಾದರೂ ಅವರಿಗೆ ಸಂಬಳವಿಲ್ಲ ಎಂದ ಮೇಲೆ ಏನೋ ಬಲವಾದ ಕಾರಣವಿರಲೇಬೇಕು. 'ನೀವು ಮೋಸ ಮಾಡಿದಿರಿ ಬೇರೆ ಮದುವೆಯಾಗುತ್ತೀನಿ' ಎಂದು ಬೆದರಿಕೆ ಹಾಕುವ ಗಂಡನೊಂದಿಗೆ ಸಂಸಾರ ಮಾಡುವ ಬದಲು ನೀವೇ ನಿಮ್ಮ ಬದುಕನ್ನು ರೂಪಿಸಿಕೊಳ್ಳಿ, ಒಲ್ಲದ ಗಂಡನಿಗೆ 'ಮೊಸರಲ್ಲಿ ಕಲ್ಲು' ಎನ್ನುವಂತೆ ದುಡಿದು ಹೆಂಡತಿಯನ್ನು ಸಾಕಲಾರದ ಗಂಡನಿಗೆ ನೀವೇಕೆ ಪರಿತಪಿಸಬೇಕು. ಇನ್ನೊಂದು ಮದುವೆಯಾಗುವುದು ಅಷ್ಟು ಸುಲಭವಲ್ಲ. ಕಾನೂನು ಬಾಹಿರವಾಗುತ್ತದೆ. ನಿಮ್ಮಿಂದ ವಿಚ್ಛೇದನ ಪಡೆದೇ ಮದುವೆಯಾಗಲು ಸಾಧ್ಯ. ವಿಚ್ಛೇದನ ಕೊಡಲು, ತೆಗೆದುಕೊಳ್ಳಲು ಸೂಕ್ತ ಕಾರಣವಿರಬೇಕು. ನನಗೆ ಕೆಲಸ ಕೊಡಿಸಿ ಹೆಣ್ಣು ಕೊಟ್ಟರು, ಸಂಬಳ ನನಗೆ ಬರಲಿಲ್ಲ ಎಂಬ ಕಾರಣಕ್ಕೆ ಯಾವ ನ್ಯಾಯಾ ಲಯವೂ ವಿಚ್ಛೇದನ ಕೊಡಲಾರದು.

ಆಪರೇಷನ್ ಯಾರು ಮಾಡಿಸಿಕೊಳ್ಳುವುದು?

ನಾನು ವಿವಾಹಿತ. ಸುಶಿಕ್ಷಿತ. ೩ ಮಕ್ಕಳಾಗಿವೆ. ಆದರೆ ನನ್ನ ಪತ್ನಿಗೆ ಇನ್ನೂ ಟ್ಯೂಬೆಕ್ಟಮಿ ಆಪರೇಷನ್ ಮಾಡಿಸಿಲ್ಲ. ೩ನೇ ಮಗು ಆದ ಮೇಲೆ ಇದೇ ಪ್ರಥಮ ಬಾರಿ ಮುಟ್ಟಾಗಿದೆ. ನನ್ನ ಸಮಸ್ಯೆ ಇಷ್ಟೆ.

ನಾನು ಆಪರೇಷನ್ ಮಾಡಿಸಿಕೊಳ್ಳುವ ವಿಷಯ ಹೆಂಡತಿಗೆ ಹೇಳಿದರೆ ಬೇಡ ಎನ್ನುತ್ತಾಳೆ. ನಾನು ಆಪರೇಷನ್ ಮಾಡಿಸಿಕೊಳ್ಳುವುದರಿಂದ ಮಾನಸಿಕ ದೈಹಿಕ ತೊಂದರೆಗಳಾಗುತ್ತವೆಯೇ? ಇದರಿಂದ ನನ್ನ ಹೆಂಡತಿಗೆ ಕೆಲ ತೊಂದರೆಗಳು ದೂರವಾಗುತ್ತವೆಯೆ? ನನ್ನ ಕಾಮ ಕ್ಷೀಣಿಸುವುದೇ? ಉದ್ರೇಕದ ಲೈಂಗಿಕ ಕ್ರಿಯೆಯಲ್ಲಿ ವೀರ್ಯ ಯೋನಿಯಲ್ಲಿ ಹೋಗುವ ಮೂಲಕ ಇಬ್ಬರು ನಿರುಮ್ಮಳವಾಗಿ ಸಂತೋಷಪಟ್ಟು ಲೈಂಗಿಕ ಕ್ರಿಯೆಯನ್ನು ಅಂತ್ಯಗೊಳಿಸುತ್ತೇವೆ. ನಾನು ಆಪರೇಷನ್ ಮಾಡಿಸಿಕೊಳ್ಳುವುದರಿಂದ ನನ್ನ ವೀರ್ಯವೆ ಹೊರಬರದ್ದರಿಂದ ನನಗೆ-ನನ್ನವಳಿಗೆ ಶಾಂತಿ ಹೇಗೆ ಸಿಗುತ್ತದೆ. ನನಗೆ ಆಪರೇಷನ್ ಮಾಡುವುದಾದರೆ ಚಿಕ್ಕ ಆಪರೇಷನ್ನೆ? ದೊಡ್ಡ ಆಪರೇಷನ್ನೆ? ನಾನು ಆಪರೇಷನ್ ಮಾಡಿಸಿಕೊಳ್ಳುವುದರಿಂದ ಅವಳಲ್ಲಿ (ಸಾಮಾನ್ಯವಾಗಿ ಸ್ತ್ರೀಯರಲ್ಲಿ) ಕೆಲ ಭಾವನೆಗಳು ನಿವಾರಣೆಯಾಗುತ್ತವೆಯೇ?

ನಾನು ಆಪರೇಷನ್ ಮಾಡಿಕೊಳ್ಳುವುದು ಉತ್ತಮವೂ ಅಥವಾ ನನ್ನ ಪತ್ನಿಯೊ? ದಯಮಾಡಿ ತಿಳಿಸಿ.

- ಮಹಾಬಲೇಶ್ವರ, ಊರು ಬೇಡ

ಸಲಹೆ

ಈಗ ವಿಜ್ಞಾನ, ವೈದ್ಯಕೀಯ ವಿಧಾನಗಳು ತುಂಬಾ ಮುಂದುವರೆದಿವೆ. ನಿಮ್ಮಲ್ಲಿ ಯಾರೊಬ್ಬರಾದರೂ ಮಾಡಿಸಿಕೊಳ್ಳಬಹುದು. ಅದನ್ನು ನೀವೇ ಚರ್ಚಿಸಿ ನಿರ್ಧರಿಸಿಕೊಳ್ಳಿ, ಯಾವ ನ್ಯೂನತೆಗಳೂ ಇರುವುದಿಲ್ಲ. ತಜ್ಞವೈದ್ಯರನ್ನು ಸಂಪರ್ಕಿಸಿ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳಬಹುದು.

ಆಟ ಮತ್ತು ಉದ್ದ

ನಾನು ೭ನೇ ತರಗತಿ ಹುಡುಗ. ಬಹಳ ಎತ್ತರ ಬೆಳೆದಿದ್ದೇನೆ. ಇದಕ್ಕೆ ನಾನು ಅತಿಯಾಗಿ ಆಟವಾಡುವುದೇ ಕಾರಣವೆಂದು ಹಿರಿಯರು ಹೇಳುತ್ತಾರೆ. ಎಲ್ಲಾ ಆಟಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದ ನಾನೀಗ ಆಟವಾಡುವುದನ್ನು ಕಡಿಮೆ ಮಾಡುತ್ತಿದ್ದೇನೆ. ಹೀಗೆ ಮಾಡುವುದು ಸರಿಯೇ? ಆಟವಾಡುವುದರಿಂದ ಉದ್ದ ಬೆಳೆಯುವುದು ನಿಜವೇ?

- ಅಕ್ಷಯ, ಕುಷ್ಟಗಿ.

ಸಲಹೆ

ನಿಮ್ಮ ಆಟಕ್ಕೂ ಎತ್ತರಕ್ಕೂ ಯಾವ ರೀತಿಯ ಸಂಬಂಧವೂ ಇಲ್ಲ. ನಿಮ್ಮ ಎತ್ತರ ಅನುವಂಶಿಕವಾಗಿರಬಹುದು. ಹಾರ್‌ಮೋನ್‌ಗಳ ವೈಪರೀತ್ಯ ವಿರಬಹುದು. ಎತ್ತರಕ್ಕೆ ತಕ್ಕಂತೆ ದೇಹದಾರ್ಢ್ಯವನ್ನು ಬೆಳೆಸಿಕೊಳ್ಳಿ, ತಜ್ಞ ವೈದ್ಯರನ್ನು ಸಂಪರ್ಕಿಸಿ. ಒಳ್ಳೆಯ ಜಿಮ್‌ಗೆ ಸೇರಿ ಅಲ್ಲಿ ವೈಜ್ಞಾನಿಕವಾಗಿ ದೇಹದ ಎಲ್ಲಾ ಭಾಗಗಳಿಗೂ ಮಾಂಸಖಂಡಗಳಿಗೂ ವ್ಯಾಯಾಮ ನೀಡಿ. ಅವರಿವರ ಮಾತು ಕೇಳಬೇಡಿ. ಆಟದಲ್ಲಿ ಮುಂದಿರುವುದೂ, ಎತ್ತರವಾಗಿ ಬೆಳೆಯುವುದೂ ಹೆಮ್ಮೆ ಪಡಬೇಕಾದ ವಿಷಯ.

ಬಿಳಿಸೆರಗು

೧೫ ವರ್ಷದ ಯುವತಿಯಾದ ನನಗೆ ಸ್ವಲ್ಪ ಪ್ರಮಾಣದಲ್ಲಿ ಬಿಳಿ ಸೆರಗು ಹೋಗುತ್ತದೆ. M.C ಆಗುವುದಕ್ಕೆ ೪-೫ ದಿನ ಮುಂಚೆ ಬಹಳ ಆಗುತ್ತದೆ. ವೈದ್ಯರಿಗೆ ತೋರಿಸಿದ್ದೇನೆ. ಒಬ್ಬರು ಏನೂ ಆಗುವುದಿಲ್ಲ ಎಂದರು. ಇನ್ನೊಬ್ಬರು ಗುಳಿಗೆ ಕೊಟ್ಟರು. ಬದಲಾವಣೆ ಕಂಡು ಬಂದಿಲ್ಲ. ನನಗೆ ತುಂಬಾ ಚಿಂತೆಯಾಗಿದೆ. ಏನು ಮಾಡಲಿ?

- ಹೆಸರು ಬೇಡ, ಗದಗ.

ಸಲಹೆ

ನೀವು ಸರಿಯಾದ ಸ್ತ್ರೀರೋಗ ತಜ್ಞರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯಬೇಕು. ಇದು ಇಂತಹುದೇ ಕಾರಣಕ್ಕಾಗಿ ಎಂದು ಅವರೇ ತೀರ್ಮಾನಿಸಿ ಚಿಕಿತ್ಸೆ ನೀಡಬೇಕು. ವೈದ್ಯರು ಹೇಳಿದಂತೆ ಔಷಧಿ ತೆಗೆದು ಕೊಳ್ಳಬೇಕು. ಮಧ್ಯೆ ನಿಲ್ಲಿಸುವುದು ಹಾಗೂ ಬೇರೆ ಬೇರೆ ಡಾಕ್ಟರುಗಳನ್ನು ಬದಲಾಯಿಸುವುದು ಮಾಡಬಾರದು. ಪುಷ್ಟಿಯಾದ, ಆರೋಗ್ಯಕರವಾದ ಆಹಾರ ಸೇವಿಸಿ. ಸಾಕಷ್ಟು ವ್ಯಾಯಾಮ ಮಾಡಿ, ಮನಸ್ಸನ್ನು ಉಲ್ಲಸಿತವಾಗಿಟ್ಟುಕೊಳ್ಳಿ.

ಕ್ರಿ.ಶ. 2000 ಕ್ಕೆ ಎಲ್ಲರಿಗೂ ಆರೋಗ್ಯ ಎಂಬ ಮರೀಚಿಕೆ

■ ಡಾ. ಎಚ್.ಎಸ್. ಮೋಹನ್

ಜಗತ್ತಿನ 134 ದೇಶಗಳು ವಿಶ್ವ ಆರೋಗ್ಯ ಸಂಸ್ಥೆಯ ಆಶ್ರಯದಲ್ಲಿ 1979ರಲ್ಲಿ ಒಂದು ಪ್ರಮುಖ ಘೋಷಣೆಗೆ ಸಹಿ ಹಾಕಿದವು. 'ಕ್ರಿ.ಶ. 2000 ಹೊತ್ತಿಗೆ ಎಲ್ಲರಿಗೂ ಆರೋಗ್ಯ' ಎಂಬ ಈ ಘೋಷಣೆಯ ವ್ಯಾಪ್ತಿಯಲ್ಲಿ ಭಾರತವೂ ಬರುತ್ತದೆ. ಈ ದಿಸೆಯಲ್ಲಿ 1985ರಲ್ಲಿ ಭಾರತ ಸಂಘಟಿಸಿದ 68ನೆಯ ವಿಶ್ವ ಆರೋಗ್ಯ ಸಮ್ಮೇಳನ ಒಂದು ಮೈಲಿಗಲ್ಲು. ಆದರೆ ಕಳೆದ 28-29 ವರ್ಷಗಳಲ್ಲಿ ಈ ದಿಸೆಯಲ್ಲಿ ಭಾರತದ ಪ್ರಯತ್ನ ಪ್ರಾಮಾಣಿಕವಾಗಿದೆಯೇ, ಸಫಲತೆ ಸಾಧಿಸಿದೆಯೇ? ಎಂಬ ಬಗ್ಗೆ ಸಿಂಹಾವಲೋಕನ ಮಾಡಲು ಕ್ರಿ.ಶ. 2000ಕ್ಕೆ ಕೇವಲ 1 1/2 ವರ್ಷ ಇರುವ ಈಗ ಸರಿಯಾದ ಕಾಲ. ಹಾಗೆಯೇ ಆರೋಗ್ಯ ವ್ಯವಸ್ಥೆಯ ಬಗ್ಗೆ ಇರುವ ಹಲವು ಸಮಸ್ಯೆಗಳನ್ನು ವಿಶ್ಲೇಷಿಸುವ ಅಗತ್ಯ ಈಗಿದೆ.

ಭಾರತ ಹಳ್ಳಿ ಪ್ರಧಾನ ದೇಶ. ಆದರೆ ಯಾವುದೇ ರಾಷ್ಟ್ರೀಯ ಸಮಸ್ಯೆಯನ್ನು ಕೇವಲ ಪಟ್ಟಣ ಅಥವಾ ನಗರಗಳ ದೃಷ್ಟಿ ಕೋನಗಳಿಂದ ನೋಡಲಾಗುತ್ತದೆ ಎಂಬುದು ಅಷ್ಟೆ ಸತ್ಯ ಹಾಗೂ ತೀರಾ ದುರದೃಷ್ಟಕರ. ಅದೂ ಆರೋಗ್ಯದಂತಹ ಸಮಸ್ಯೆಯಲ್ಲಿ ಈ ಭೇದ ಇನ್ನೂ ಹೆಚ್ಚು. ಬಡತನ, ಅಜ್ಞಾನ, ಅಂಧಶ್ರದ್ಧೆ, ಮೂಢನಂಬಿಕೆ, ಕಾಯಿಲೆಗಳ ಕೂಪದಲ್ಲಿ ಸಿಲುಕಿರುವ ಗ್ರಾಮೀಣ ಜನರು ಈ ವಿಚಾರದಲ್ಲಿ ತೀರಾ ಕೆಳಮಟ್ಟದಲ್ಲಿದ್ದಾರೆ. ಹಾಗೆಂದು ನಗರದಲ್ಲಿರುವವರೆಲ್ಲರ ಪರಿಸ್ಥಿತಿ ಉತ್ತಮವಿದೆ ಎಂದರ್ಥವಲ್ಲ. ನಗರದ ಕೊಳಚೆ ಪ್ರದೇಶದಲ್ಲಿರುವವರ ಸ್ಥಿತಿ ಹೀನಾಯ.

ಸ್ವಾತಂತ್ರ್ಯ ದೊರೆತು ಐದು ದಶಕಗಳ ನಂತರವೂ ಶೇಕಡಾ 45 ಜನತೆ ಬಡತನದ ರೇಖೆಯ ಕೆಳಗಿದ್ದು ಶೇಕಡಾ 20 ಜನರು ಮಾತ್ರ, ಆಧುನಿಕ ವೈದ್ಯಕೀಯದ ಉಪಯೋಗ ಪಡೆಯುತ್ತಿದ್ದಾರೆ. ಅತಿ ಕಡಿಮೆ ವೆಚ್ಚದಲ್ಲಿ ಗುಣವಾಗುವ ಕುಷ್ಠರೋಗ ಇನ್ನೂ ಎಷ್ಟೋ ಜನಾಂಗಗಳಲ್ಲಿ ಹಾಗೆಯೇ ಇವೆ. ಹೆಚ್ಚು ಖರ್ಚಿಲ್ಲದೆ ಬಾಯಿಂದಲೇ ಲವಣಾಂಶ ಮಿಶ್ರಿತ ದ್ರವವನ್ನು ಕೊಡುವ ವ್ಯವಸ್ಥೆ ಜನಪ್ರಿಯವಾಗಿದ್ದರೂ, ಸಾವಿರಾರು ಮಕ್ಕಳು ಭೇದಿಗೆ ಸಂಬಂಧ ಪಟ್ಟ ರೋಗಗಳಿಂದ ಸಾಯುತ್ತಿದ್ದಾರೆ. ಹೆಚ್ಚಿನ ಸಂದರ್ಭಗಳಲ್ಲಿ ಕೊಳಚೆ ನೀರಿನಿಂದ ಹರಡುವ ಈ ರೋಗದಿಂದ ಒಂದು ಲೆಕ್ಕದ ಪ್ರಕಾರ ಪ್ರತಿವರ್ಷ 15 ಲಕ್ಷ ಮಕ್ಕಳು ಇನ್ನಿಲ್ಲವಾಗುತ್ತಿದ್ದಾರೆ. ಪ್ರಪಂಚದ ಅರ್ಧದಷ್ಟು ಕ್ಷಯರೋಗಿಗಳು ಭಾರತದಲ್ಲಿದ್ದರೂ, ನಮ್ಮಲ್ಲಿ 1/3 ಭಾಗದಷ್ಟು ಅವರ ಔಷಧಿಯ ಅಗತ್ಯ ಮಾತ್ರ ಪೂರೈಕೆಯಾಗುತ್ತಿದೆ. ಆಯೋಡಿನ್‌ಯುಕ್ತ ಉಪ್ಪಿನ ಕೊರತೆಯಿಂದ, ಆರು ಕೋಟಿ ಜನರು ಥೈರ್ಯಾಡ್ ಗ್ರಂಥಿಗೆ ಸಂಬಂಧಿಸಿದ ಕುತ್ತಿಗೆಯಲ್ಲಿ ದಪ್ಪಗಡ್ಡೆ ಕಾಣಿಸಿಕೊಳ್ಳುವ 'ಗ್ಯಾಟರ್' ರೋಗಕ್ಕೆ ಬಲಿಯಾಗುತ್ತಿದ್ದಾರೆ.

ಹೀಗೆ ತೃತೀಯ ಜಗತ್ತಿನ ದೇಶಗಳನ್ನು ಕಾಡುತ್ತಿರುವ ಕಾಯಿಲೆಗಳಲ್ಲಿ ವಿವಿಧ ಸೋಂಕು ರೋಗಗಳು, ಜಂತುಗಳು ಮತ್ತು ಶ್ವಾಸಕೋಶದ ಕಾಯಿಲೆಗಳು ಪ್ರಮುಖವಾದವುಗಳು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಇದರಲ್ಲಿ ಶೇಕಡಾ 80ರಷ್ಟು ರೋಗಗಳನ್ನು ತಡೆಗಟ್ಟಬಹುದು.

ಒಂದು ಅಂದಾಜಿನ ಪ್ರಕಾರ 34 ಕೋಟಿ ಅಥವಾ ದೇಶದ ಜನಸಂಖ್ಯೆಯ 1/3 ಭಾಗಕ್ಕಿಂತಲೂ ಹೆಚ್ಚು ಜನರು ವೈದ್ಯರಲ್ಲಿ ಹೋಗಿಯೇ ಇಲ್ಲ. ಶೇಕಡಾ 24 ಜನರಿಗೆ ಸರಿಯಾದ ಚಿಕಿತ್ಸೆ ದೊರಕುತ್ತಿಲ್ಲ. ಈಗ ದೇಶದಲ್ಲಿ 6,000 ಸುಸಜ್ಜಿತ ಆಸ್ಪತ್ರೆಗಳು, 18,000 ಡಿಸ್ಪೆನ್ಸರಿಗಳು, 6,800 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 47,000 ಉಪಕೇಂದ್ರಗಳು, ಘಟಕಗಳು ಇವೆ. 14,000 ಸ್ಥಾನ ಹೊಂದಿರುವ 125 ವೈದ್ಯಕೀಯ ಕಾಲೇಜುಗಳಿವೆ. ಆಧುನಿಕ ಅಲೋಪತಿ ವಿಧಾನದಲ್ಲಿ ತರಬೇತಿ ಹೊಂದಿದ ವೈದ್ಯರುಗಳು ಸುಮಾರು 2 1/2 ಲಕ್ಷ ಮತ್ತು 4 1/2 ಲಕ್ಷದಷ್ಟು ವೈದ್ಯರುಗಳು ಆಯುರ್ವೇದ, ಯುನಾನಿ, ಸಿದ್ಧ, ಹೋಮಿಯೋಪತಿ ಮೊದಲಾದ ದೇಶೀಯ ವೈದ್ಯ ಪದ್ಧತಿಗಳಲ್ಲಿ ತರಬೇತಿ ಹೊಂದಿದ್ದರೆ, 1.48 ಲಕ್ಷ ದಾದಿಯರು, 78 ಸಾವಿರ ಉಪದಾದಿಯರು, 1.46 ಲಕ್ಷ ಮಿಡ್‌ವೈಫ್‌ಗಳು, 125 ಲಕ್ಷ ಔಷಧ ಶಾಸ್ತ್ರದಲ್ಲಿ ತರಬೇತಿ ಹೊಂದಿದ ತಜ್ಞರು, 90 ಸಾವಿರ ಆರೋಗ್ಯ ನಿರೀಕ್ಷಕರು, 45 ಸಾವಿರ ಆರೋಗ್ಯ ಸಹಾಯಕರು ಮತ್ತು ನೈರ್ಮಲ್ಯ ನಿರೀಕ್ಷಕರು ಇದ್ದಾರೆ. 6,90,000 ಆಸ್ಪತ್ರೆಯ ಹಾಸಿಗೆಗಳಿವೆ. ರಾಷ್ಟ್ರೀಯ ಸರಾಸರಿಯಂತೆ ಪ್ರತಿ 3 ಸಾವಿರ ಜನಸಂಖ್ಯೆಗೆ ಒಬ್ಬ ವೈದ್ಯರಿದ್ದರೂ, ಹಳ್ಳಿಗಳಲ್ಲಿ ಈ ಅಂಕಿ ಪ್ರತಿ 15 ಸಾವಿರ ಜನರಿಗೆ ಒಬ್ಬ ವೈದ್ಯರು! ಹೆಚ್ಚಿನ ಹಳ್ಳಿಗಾಡಿನ ಜನ 6,800 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 47 ಸಾವಿರ ಉಪಕೇಂದ್ರಗಳ ಉಪಯೋಗವನ್ನು ಮಾತ್ರ ಪಡೆಯುತ್ತಾರೆ. ವೈದ್ಯ: ಜನಸಂಖ್ಯೆಯ ಸರಾಸರಿ - ಉಳಿದ ದೇಶಗಳೊಡನೆ ಹೋಲಿಸಿ ನೋಡಿದರೆ ರಷ್ಯಾದಲ್ಲಿ ಪ್ರತಿ 250 ಜನರಿಗೆ ಒಬ್ಬ ವೈದ್ಯ. ಅಮೇರಿಕಾದಲ್ಲಿ 500 ಜನರಿಗೆ ಒಬ್ಬ ಇದ್ದಾರೆ. ಇಂಗ್ಲೆಂಡ್, ಸ್ವೀಡನ್, ಆಸ್ಟ್ರೇಲಿಯಾ ದೇಶಗಳಲ್ಲಿ 500 ರಿಂದ 1000 ಜನರಿಗೊಬ್ಬ ವೈದ್ಯರಿದ್ದಾರೆ. ಪ್ರತಿಯೊಬ್ಬನಿಗೆ ಔಷಧಕ್ಕಾಗಿ ಒಂದು ವರ್ಷದಲ್ಲಿ ಖರ್ಚು ಇಂಗ್ಲೆಂಡ್‌ನಲ್ಲಿ 1.9 ಸ್ಟರ್ಲಿಂಗುಗಳು ಮಾತ್ರ, ಅರ್ಜೆಂಟೈನಾದಲ್ಲಿ 18.5 ಡಾಲರ್, ಮೆಕ್ಸಿಕೋದಲ್ಲಿ 5.1 ಡಾಲರ್, ಜಪಾನ್‌ನಲ್ಲಿ 13 ಡಾಲರ್, ಬ್ರೆಜಿಲ್‌ನಲ್ಲಿ 9.9 ಡಾಲರ್.

ಅಗಾಧ ಜನಸಂಖ್ಯೆ

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಯಾವ ಅಡೆತಡೆಯೂ ಇಲ್ಲದೆ ಹೆಚ್ಚುತ್ತಿರುವ ಜನಸಂಖ್ಯೆ. ಇಂತಹುದೇ ಸಮಸ್ಯೆಯಿರುವ ಚೀನಾ ದೇಶ ಕಳೆದ 20-25 ವರ್ಷಗಳಲ್ಲಿ ಕಟ್ಟು ನಿಟ್ಟಿನ ಕುಟುಂಬ ಯೋಜನಾ ಕ್ರಮ ಕೈಗೊಂಡದ್ದರಿಂದ ಈಗ ಸಮಸ್ಯೆ ಹತೋಟಿಯಲ್ಲಿದೆ. ಧರ್ಮ, ಮತ, ಜಾತಿ, ನಂಬಿಕೆ, ಅಂಧಶ್ರದ್ಧೆ, ಅಜ್ಞಾನ ಹೀಗೆ ವಿವಿಧ ಕಾರಣಗಳಿಂದ ನಮ್ಮ ದೇಶದಲ್ಲಿ ಈ ಕಾರ್ಯ ಬಹಳಷ್ಟು ಹಿಂದುಳಿದಿದೆ. ಕೇವಲ ತಮ್ಮ ಸ್ವಾರ್ಥಕ್ಕೆ ಇರುವ ರಾಜಕಾರಣಿಗಳು, ಪುಢಾರಿಗಳು, ಚುನಾವಣೆಯಲ್ಲಿ ಮತದ ಗಮನವಿಟ್ಟುಕೊಂಡು ವರ್ತಿಸುವುದರಿಂದ ಸರಕಾರದಿಂದ ಈ ದಿಸೆಯಲ್ಲಿ ಎಷ್ಟು ಕೆಲಸ ನಡೆಯಬೇಕಿತ್ತೋ ಅಷ್ಟು ನಡೆದಿಲ್ಲ; ನಡೆಯುತ್ತಿಲ್ಲವೆಂಬುದು ವಾಸ್ತವ. ಹೀಗೆಯೇ ಪರಿಸ್ಥಿತಿ ಮುಂದುವರಿದರೆ ಇಸವಿ 2000ದ ಹೊತ್ತಿಗೆ ಜನಸಂಖ್ಯೆಯಲ್ಲಿ ಕೋಟಿಗಳ 'ಶತಕ'

ಬಾರಿಸಿ ಇನ್ನೂ ಮುನ್ನಡೆಯುತ್ತೇವೆ.(ಪ್ರಗತಿ ಎಂದು ಹೇಳಬೇಕೇ?) ಆಗ ಇದು ಉಳಿದ ಎಲ್ಲಾ ಸಮಸ್ಯೆಗಳಿಗೂ ಉದಾ : ನಿರುದ್ಯೋಗ, ಶಿಕ್ಷಣ, ಮೂಲಕಾರಣವಾಗಿ ಕೊನೆಯಿಲ್ಲದ ವಿಷವರ್ತುಲ ಏರ್ಪಡುತ್ತದೆ. ಆ ಅಧೋಗತಿಯಿಂದ ಮೇಲೇರದ ಸ್ಥಿತಿಗೆ ನಾವು ತಲುಪುತ್ತೇವೆ.

ಗಮನಿಸಬೇಕಾದ ವಿಚಾರ

ತೀರಾ ಗಮನಕೊಡಬೇಕಾದ ಇನ್ನೊಂದು ವಿಚಾರವೆಂದರೆ ಸ್ವಚ್ಛತೆ ಮತ್ತು ನೈರ್ಮಲ್ಯ. ಏಕೆಂದರೆ ಹಳ್ಳಿಗಳ ಶೇಕಡಾ 92 ಮನೆಗಳಲ್ಲಿ ಇನ್ನೂ ಕಕ್ಕಸುಗಳಿಲ್ಲ! 4 ಕೋಟಿ ಮನೆಗಳ ಮೂರನೆ ಒಂದು ಭಾಗದಷ್ಟು ಜನರು ಇನ್ನೂ ಭೌತಿಕವಾಗಿ ಮಲವನ್ನು ಎತ್ತಿಹಾಕುವ ನೈರ್ಮಲ್ಯ ವ್ಯವಸ್ಥೆ ಹೊಂದಿದ್ದಾರೆ. ಇದರಿಂದ ನೀರಿನ ಮೂಲವು ಕೆಡುತ್ತದೆ. ಸುಮಾರು 7 ಕೋಟಿ ಜನರು ಬಯಲಿನಲ್ಲಿಯೇ ಮಲವಿಸರ್ಜನೆ ಮಾಡುತ್ತಾರೆ. ಇದರಿಂದ ವಿವಿಧ ಜಂತುಗಳು, ಕ್ರಿಮಿಗಳು, ಉದ್ಭವವಾಗುತ್ತವೆ. ಇಷ್ಟೇ ಗಂಭೀರವಾದ ಇನ್ನೊಂದು ಸಮಸ್ಯೆಯೆಂದರೆ ಕುಡಿಯುವ ನೀರಿನ ವ್ಯವಸ್ಥೆ. ಅಂದಾಜಿನ ಪ್ರಕಾರ 16 ಕೋಟಿ ಜನಸಂಖ್ಯೆಯನ್ನು ಒಳಗೊಂಡಂತೆ 2 ಲಕ್ಷ ಹಳ್ಳಿಗಳಿಗೆ ಇನ್ನೂ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಆದ್ದರಿಂದ ರೋಗ ಮತ್ತು ಮರಣಗಳ ಅರ್ಧದಷ್ಟು, ನೀರಿಗೆ ಸಂಬಂಧಪಟ್ಟ ಕಾಯಿಲೆಗಳಿಂದಲೇ ಆಗುತ್ತಿವೆ ಎಂದರೆ ಏನೂ ಆಶ್ಚರ್ಯವಿಲ್ಲ. ಹೆಚ್ಚಿನ ಮಕ್ಕಳ ಮರಣಕ್ಕೆ ಕಾರಣ ಸರಿಯಾದ, ಸೂಕ್ತ ಆಹಾರ ದೊರಕದಿರುವುದು! ಜನಸಂಖ್ಯೆ ಶೇಕಡಾ 19ರಷ್ಟು ಮತ್ತು ತಾಯಿ ಮಕ್ಕಳ ಶೇಕಡಾ 40 ರಷ್ಟು ಜನರು ಸೂಕ್ತ ಆಹಾರವಿಲ್ಲದೆ ವಿವಿಧ ಕಾಯಿಲೆಗಳಿಂದ ನರಳುತ್ತಿದ್ದಾರೆ. ಹುಟ್ಟಿದ ಒಂದು ವರ್ಷದಲ್ಲಿ 1000 ಮಕ್ಕಳಲ್ಲಿ 85 ಮಕ್ಕಳು ನಗರಗಳಲ್ಲಿಯೂ 130 ಮಕ್ಕಳು ಹಳ್ಳಿಗಳಲ್ಲಿಯೂ ಮರಣ ಹೊಂದುತ್ತಾರೆ.

ಕುಟುಂಬ ಯೋಜನೆ ಮತ್ತು ಸಾಮಾನ್ಯ ನೈರ್ಮಲ್ಯ ಮುಂತಾದ ಪ್ರಗತಿಪರ ಕಾರ್ಯಕ್ರಮಗಳು ಫಲ ಕೊಡಬೇಕಾದರೆ - ಸಾಕ್ಷರತೆ ಅಥವಾ ಶೈಕ್ಷಣಿಕ ಮಟ್ಟ ಉತ್ತಮವಿರಬೇಕು. ಶೇಕಡಾ 65ಕ್ಕೂ ಹೆಚ್ಚು ಅನಕ್ಷರಸ್ಥರು - ಅವರಲ್ಲಿ ಶೇಕಡಾ 90 ಹೆಂಗಸರು ಮತ್ತು ಶೇಕಡಾ 75 ಗಂಡಸರು- ಯಾವುದೇ ಪ್ರಾಥಮಿಕ ಶಿಕ್ಷಣವನ್ನೂ ಹೊಂದದವರು ಇರುವ ನಮ್ಮ ದೇಶದಲ್ಲಿ ಸ್ವಚ್ಛತೆ, ನೈರ್ಮಲ್ಯ, ಆರೋಗ್ಯ ವ್ಯವಸ್ಥೆಯ ಮಟ್ಟವನ್ನು ಹೆಚ್ಚಿಸುವುದು ಅಸಾಧ್ಯವೇ ಸರಿ.

ಇಷ್ಟಲ್ಲದೆ, ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿದೆ. ಈಗ ಮೂರನೆ ಒಂದು ಭಾಗಕ್ಕಿಂತಲೂ ಅಧಿಕ ಜನರು 60 ವರ್ಷಕ್ಕೂ ಹೆಚ್ಚಿನವರು ಇದ್ದಾರೆ. ಈ ಶತಮಾನದ ಕೊನೆಗೆ ವಯಸ್ಸಾದವರ ಹೆಚ್ಚಳ ಶೇಕಡಾ 85 ರಷ್ಟಾದರೆ, ಉಳಿದ ಜನಸಂಖ್ಯೆಯ ಹೆಚ್ಚಳ ಕೇವಲ ಶೇಕಡಾ 49 ಮಾತ್ರ. ಇಷ್ಟು ಸಾಲದೆಂದು ನಮ್ಮಲ್ಲಿ 130 ಲಕ್ಷ ಅಂಧರಿದ್ದಾರೆ. ನಾಲ್ಕೂವರೆ ಕೋಟಿ ದೃಷ್ಟಿ ತೀರಾ ಕಡಿಮೆ ಇರುವವರಿದ್ದಾರೆ. ತೀವ್ರ ರೀತಿಯ ಮಾನಸಿಕ ಕಾಯಿಲೆಗೆ ತುತ್ತಾದವರು 1 ಕೋಟಿ 10 ಲಕ್ಷ ಇದ್ದಾರೆ. ಸುಮಾರು 2-3 ಕೋಟಿ ಜನರು ಸ್ಕೀಜೋಫ್ರೀನಿಯಾ, ನ್ಯೂರೋಸಿಸ್ ಮೊದಲಾದ ಕಾಯಿಲೆಯಿಂದ ಬಳಲುತ್ತಿದ್ದಾರೆ. ಕೇವಲ ನೂರರಷ್ಟು ಮಾತ್ರ ಮಾನಸಿಕ ಆರೋಗ್ಯ ಕಾರ್ಯಕರ್ತರು ಅವರನ್ನು ನೋಡಿಕೊಳ್ಳಲು ಇದ್ದಾರೆ. 6 ಕೋಟಿ ಜನರು ವಿವಿಧ ಭೌತಿಕ ಊನಗಳಿಂದ ಬಳಲುತ್ತಿದ್ದಾರೆ. ಪ್ರತಿವರ್ಷ 50 ಲಕ್ಷ ಜನ ಈ ಗುಂಪಿಗೆ ಸೇರುತ್ತಿದ್ದಾರೆ.

ನಿಧಾನವಾಗಿ ಹರಡುವ ಕ್ಷಯ, ಕುಷ್ಠ ರೋಗಗಳಲ್ಲದೆ, ಒಂದು ಕಾಲದಲ್ಲಿ ಸಂಪೂರ್ಣ ಹತೋಟಿಗೆ ಬಂದಿದ್ದ ಮಲೇರಿಯಾ ಮತ್ತೆ ತಲೆಯೆತ್ತಿದೆ. ಪಟ್ಟಣ ಪ್ರದೇಶಗಳಲ್ಲಿ ಲೈಂಗಿಕ ರೋಗಗಳು ಹೆಚ್ಚುತ್ತಿವೆ. ಹೃದಯ, ರಕ್ತನಾಳಗಳ ಕಾಯಿಲೆ ಮತ್ತು ಕ್ಯಾನ್ಸರ್ ತೀವ್ರ ಸಮಸ್ಯೆ ಒಡ್ಡುತ್ತಿವೆ. ಇತ್ತೀಚಿನ ಕಾಯಿಲೆಯಾದ ಏಡ್ಸ್ ಗಮನಾರ್ಹವಾಗಿ ಹೆಚ್ಚುತ್ತಿದ್ದು, ಇನ್ನೊಂದು ಗಂಭೀರ ಸಮಸ್ಯೆಯಾಗುವ ಸನ್ನಾಹದಲ್ಲಿದೆ. ಸರಿಯಾದ ಚುಚ್ಚುಮದ್ದಿನ ವ್ಯವಸ್ಥೆ ಇಲ್ಲದೆ, 50,000 ಮಕ್ಕಳು ಧನುರ್ವಾಯುವಿಗೂ 25,000 ಮಕ್ಕಲು ಗಂಟಲುಮಾರಿ (ಡಿಫ್ತಿರಿಯ)ಗೂ, 30 ಸಾವಿರ ಮಕ್ಕಳು ನಾಯಿಕೆಮ್ಮಿಗೂ ಬಲಿಯಾಗುತ್ತಿದ್ದಾರೆ. ಇದು ಆರೋಗ್ಯಕ್ಕೆ ಸಂಬಂಧಪಟ್ಟ ಸಮಸ್ಯೆಯ ಅಗಾಧತೆಯ ಒಂದು ಸ್ಥೂಲ ನೋಟ.

ಸರಕಾರದ ಪಾತ್ರ

ಆದರೆ ಇಂತಹ ಗಂಭೀರ ಹಾಗೂ ಭಯಾನಕ ಸಮಸ್ಯೆಗಳ ಸುಳಿಯನ್ನು ಬಿಡಿಸಲು ಸರಕಾರ ಏನೂ ಮಾಡಿದೆ, ಮಾಡುತ್ತಿದೆ. ಮಾಡಲಿದೆ? ಸರಕಾರದ ಕಾರ್ಯವೈಖರಿಯನ್ನು ನೋಡಿ. ಆರೋಗ್ಯದ ಖಾತೆ ರಾಜ್ಯ ಸರಕಾರಗಳ ವ್ಯಾಪ್ತಿಯಲ್ಲಿ ಬರುವುದಾದರೂ ಕೇಂದ್ರ ಸರಕಾರಕ್ಕೆ ಕೆಲವು ಪ್ರಮುಖ ಜವಾಬ್ದಾರಿಗಳಿವೆ. ಈ ವಿಷಯದಲ್ಲಿ ಯಾವುದೇ ರಾಷ್ಟ್ರೀಯ ಕಾರ್ಯಕ್ರಮಗಳೂ (ಆರೋಗ್ಯಕ್ಕೆ ಸಂಬಂಧಪಟ್ಟಂತೆ) ಕೇಂದ್ರದ ಕೂಸುಗಳೇ ಸರಿ. ಉದಾ : ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ. ಮಲೇರಿಯಾ ಹತೋಟಿ ಕ್ರಮ ಇತ್ಯಾದಿ. ಅಲ್ಲದೆ ಸಮಗ್ರ ದೇಶಕ್ಕೆ ಅನ್ವಯಿಸುವಂತೆ ರಾಷ್ಟ್ರೀಯ ನೀತಿಯನ್ನು ರೂಪಿಸಿ, ಅವುಗಳನ್ನು ರಾಜ್ಯಗಳು ಪಾಲಿಸುವಂತೆ ನೋಡಿಕೊಳ್ಳುವುದೂ ಕೇಂದ್ರದ ಜವಾಬ್ದಾರಿ. ಉದಾ:ಕುಟುಂಬ ಯೋಜನಾ ಕಾರ್ಯಕ್ರಮ. ಆದರೆ ಕೇಂದ್ರವೇ ಆಗಲಿ, ರಾಜ್ಯವೇ ಆಗಲಿ ಈಗಿರುವ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವಲ್ಲಿ, ಚುರುಕುಗೊಳಿಸುವಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿವೆಯೇ ಎಂದರೆ 'ನ' ಕಾರಾತ್ಮಕ ಉತ್ತರ ಸುಲಭವಾಗಿ ದೊರೆಯುತ್ತದೆ. ಉದಾ: ದೇಶದ ರಾಜಧಾನಿ ದೆಹಲಿಯಂತಹ ನಗರದಲ್ಲಿ ಅತೀ ಸುಸಜ್ಜಿತ, ಅತ್ಯಾಧುನಿಕ ಆಸ್ಪತ್ರೆ ಇದ್ದರೆ (ಭಾರತೀಯ ವೈದ್ಯ ವಿಜ್ಞಾನ ಸಂಸ್ಥೆ) ಅದು ನಮ್ಮ ಮಂತ್ರಿ ಮಹೋದಯರುಗಳಿಗೆ, ಭ್ರಷ್ಟ ರಾಜಕಾರಣಿಗಳಿಗೆ ಉಪಯೋಗವಾದೀತು. ಕೇರಳದಲ್ಲಿಯೋ, ಅಸ್ಸಾಂನಲ್ಲಿಯೋ - ಹಳ್ಳಿಗಾಡಿನಲ್ಲಿರುವ ಬಡ ಬೋರೇ ಗೌಡನಿಗೆ ಇದರ ಪ್ರಯೋಜನ ಹೇಗಾದೀತು? ಹಾಗೆಂದು ಅಂತಹ ಆಸ್ಪತ್ರೆ ಇರಬಾರದೆಂದಲ್ಲ. ಅವುಗಳ ಪ್ರಯೋಜನ ಸಾಮಾನ್ಯನಿಗೂ ದೊರಕುವಂತೆ ಪ್ರತಿ ರಾಜ್ಯದಲ್ಲಿ ಒಂದಾದರೂ ಅಂತಹ ಅತೀ ದೊಡ್ಡ ಆಸ್ಪತ್ರೆಯ ಅವಶ್ಯಕತೆ ಇದೆ. 'ಹಾಗಾದರೆ ರಾಜ್ಯದಲ್ಲಿ ಉತ್ತಮ ಸರಕಾರಿ ಆಸ್ಪತ್ರೆಗಳಿಲ್ಲವೇ' ಎಂದು ನೀವು ಹುಬ್ಬೇರಿಸಬಹುದು. ಏನೂ ಬೇಡ, ನಮ್ಮ ಬೆಂಗಳೂರಿನ ವಿಕ್ಟೋರಿಯಾ, ಬೋರಿಂಗ್, ಮೈಸೂರಿನ ಕೆ.ಆರ್. ಆಸ್ಪತ್ರೆಗಳನ್ನು ನೋಡಿ, ಬಹಳ ಉತ್ತಮವಾಗಿವೆ ಅಲ್ಲವೇ?

ಇದು ಒಂದು ರೀತಿಯಾದರೆ, ಇನ್ನೊಂದು

ವೇದನೆ

ಭಾವನೆಗಳು ಬಯಲಲ್ಲಿ
ಬೆತ್ತಲೆಯಾಗಿ ಕುಣಿಯುವಾಗ
ನನ್ನ ಮನಸ್ಸು, ಮುನಿಸಿಕೊಂಡು
ತನ್ನೊಳಗೆ ತಾನು
ಕತ್ತಲೆಯಾಗಿ ಸುಮ್ಮನಿತ್ತು.

-ಮರುಳಸಿದ್ದಪ್ಪ ದೊಡ್ಡಮನಿ

ರೀತಿ ಎಂದರೆ - ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಘಟಕಗಳ ದುರವಸ್ಥೆ. ಪ್ರತಿ 80 ಸಾವಿರದಿಂದ 1 ಲಕ್ಷದ 20 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ (ಪಿ.ಎಚ್.ಸಿ) ಮತ್ತು ಅದರಡಿ ಹಲವು ಘಟಕಗಳಿರಬೇಕೆಂದು - ಕೇಂದ್ರದ ನೀತಿ ಯಾದರೂ ಈ ಏರುತ್ತಿರುವ ಜನಸಂಖ್ಯೆಯಿಂದ ಈ ಕೇಂದ್ರಗಳು, ಘಟಕಗಳು ತಮ್ಮ ಅರ್ಥ ಕಳೆದುಕೊಂಡಿವೆ. ''ವೈದ್ಯರು ಹಳ್ಳಿಗೆ ಹೋಗುತ್ತಿಲ್ಲ. ಹಳ್ಳಿಗಳಿಗೆ ಹೋಗಬೇಕು, ಜನಸೇವೆ ಮಾಡಬೇಕು'' ಎಂದು ಕರೆಕೊಡುವ ಕುರೂಪಿ ರಾಜಕಾರಣಿಗಳು, ಭ್ರಷ್ಟ ಮಂತ್ರಿಗಳು, ತಾವು ಮಾತ್ರ ಒಮ್ಮೆ ಆಯ್ಕೆಯಾಗಿ ಬಂದರೆ, ತಮ್ಮ ಊರಿನ ಮುಖ ನೋಡದೆ, ಬೆಂಗಳೂರಿನಲ್ಲೇ (ಅಥವಾ ರಾಜಧಾನಿಯಲ್ಲೇ) ಠಿಕಾಣಿ ಹೂಡುತ್ತಾರೆ. ಅಲ್ಲಿಯೇ ಮನೆ ಕಟ್ಟುತ್ತಾರೆ. ಅದಿರಲಿ, ಹಳ್ಳಿಗಾಡುಗಳಲ್ಲಿರುವ ಈ ಪ್ರಾಥಮಿಕ ಆರೋಗ್ಯ ಕೇಂದ್ರ, ಘಟಕಗಳಲ್ಲಿ ಏನೇನು ವ್ಯವಸ್ಥೆ ಇವೆ, ಅವುಗಳನ್ನು ಹೇಗೆ ಉತ್ತಮ ಗೊಳಿಸಬಹುದು ಎಂಬುದರ ಬಗ್ಗೆ ಇವರಿಗೆ ತಲೆಕೆಡಿಸಿಕೊಳ್ಳಲು ಪುರುಸೊತ್ತಿಲ್ಲ. ವೈದ್ಯರು ಗಳಿಗೆ, ಸಿಬ್ಬಂದಿಗಳಿಗೆ ಸರಿಯಾದ ನೀರಿನ ವ್ಯವಸ್ಥೆ ಇರುವ ವಸತಿ ಸೌಕರ್ಯ ಇಲ್ಲ. ಈ ಆಸ್ಪತ್ರೆಗಳಿಗೆ ಸಾಕಾಗುವಷ್ಟು ಔಷಧಗಳ ಪೂರೈಕೆ ಎಲ್ಲಿದೆ? ಎಷ್ಟೋ ಆಸ್ಪತ್ರೆಗಳಿಗೆ ಇಡೀ ವರ್ಷಕ್ಕೆ ಮಂಜೂರಾಗುವ ಔಷಧಿಗಳು 2 ತಿಂಗಳಿಗೂ ಸಾಕಾಗುವುದಿಲ್ಲ. ಇನ್ನು ಈಗಾಗಲೇ ಇರುವ ಯಂತ್ರೋಪಕರಣಗಳು ಉಪಯೋಗವಾಗದೆ ಮೂಲೆಯಲ್ಲಿ ಬಿದ್ದಿರುತ್ತವೆ. 'ರಿಪೇರಿಯಲ್ಲಿದೆ' ಎಂಬ ಹಣೆ ಪಟ್ಟಿ ಹಚ್ಚಿಕೊಂಡ ಎಕ್ಸರೇ ಉಪಕರಣ ಎಷ್ಟು ಆಸ್ಪತ್ರೆಗಳಲ್ಲಿ ಇಲ್ಲ. 'ಆರೋಗ್ಯ'ದ ತಾಣವಾಗಬೇಕಾಗಿರುವ ಆಸ್ಪತ್ರೆಗಳು ಸರಿಯಾದ ನೀರಿನ ಪೂರೈಕೆ ಇಲ್ಲದೆ, (ಇದ್ದ ಪಂಪ್‌ಸೆಟ್ ಸರಿಯಿರುವುದಿಲ್ಲ. ಸರಿಮಾಡಲು ಕ್ರಮವನ್ನೂ ಕೈಗೊಳ್ಳುವುದಿಲ್ಲ) ಕಸಕಡ್ಡಿಗಳಿಂದ ತುಂಬಿ ಕೊಳೆತುನಾರುತ್ತಿದೆ. ಮಂತ್ರಿಗಳು ಅಧಿಕಾರಿಗಳು ಭೇಟಿ ಕೊಡುವಾಗ ಮಾತ್ರ ಇವು ಸ್ವಚ್ಛಗೊಂಡು ಬೇರೆಯೇ ಒಂದು ಅಭಿಪ್ರಾಯ ಮೂಡಿಸುತ್ತದೆ.

ಏಕೆ ಹೀಗೆ? ಈ ದಿಸೆಯಲ್ಲಿ ನಾವು ಒಂದು ಅತಿ ಮುಖ್ಯ ಸತ್ಯವನ್ನೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಸರಕಾರದ ಬೊಕ್ಕಸಕ್ಕೆ ಏನೂ ಲಾಭದಾಯಕವಲ್ಲದ ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳಿಗೆ ನಮ್ಮ ಯಾವುದೇ ಬಜೆಟ್‌ನ ಶೇಕಡಾ ಎಷ್ಟು ವಿನಿಯೋಗವಾಗುತ್ತಿದೆ? ಜನತೆಗೆ ಸಮಾಜಕ್ಕೆ ಅತಿ ಅಗತ್ಯವಾದ ಈ ಎರಡೂ ಬಾಬ್ತುಗಳೂ ಅತೀವ್ರ ನಿರ್ಲಕ್ಷ್ಯಕ್ಕೆ ಒಳಗಾಗಿವೆ ಎಂಬುದು ಪ್ರಖರ ಸತ್ಯ. ಇನ್ನೊಂದು ವಿಚಾರವೆಂದರೆ, ಇದರಲ್ಲಿಯೂ ನಡೆಯುವ ಮಲತಾಯಿ ಧೋರಣೆ. ಯಾವ ಭಾಗ ಅಥವಾ ಪ್ರಾಂತ್ಯದ ರಾಜಕಾರಣಿಗಳು ಸರಕಾರದ ವಲಯದಲ್ಲಿ ಅತಿ ಪ್ರಭಾವಿತರಾಗಿದ್ದಾರೋ, ಅಥವಾ ಅಧಿಕಾರದಲ್ಲಿರುವ ಮಂತ್ರಿ ಮಹೋದಯರುಗಳ ಜಾತಿಗೆ, ಊರಿಗೆ ಸೇರಿರುವ ಪ್ರಾಂತ್ಯ ಅಥವಾ ವಿಭಾಗ ಸರಕಾರದ ಹೆಚ್ಚಿನ ಹಣವನ್ನು ಕಬಳಿಸುವುದರಲ್ಲಿ ಮುಂದಾಗುತ್ತವೆ. ಉಳಿದ ಭಾಗದ ಜನತೆಯನ್ನು ಮೂಕಪ್ರೇಕ್ಷಕರನ್ನಾಗಿ ಮಾಡುತ್ತವೆ. ಇಂತಹ ಅನ್ಯಾಯವನ್ನು ತಡೆಗಟ್ಟಲು ಜನತೆ ಮುಂದಾ ಗಬೇಕು. ರಾಜಕಾರಣಿಗಳನ್ನು ಪ್ರಶ್ನಿಸುವ ಮಟ್ಟಕ್ಕೆ ತಲುಪಬೇಕು. ಹಾಗಾದಾಗ ಮಾತ್ರ ಎಲ್ಲ ಭಾಗಗಳಿಗೂ ಸರಿಯಾದ ವಿತರಣೆಯಾದೀತು.

ಈ ದಿಸೆಯಲ್ಲಿ ಗಮನಿಸಬೇಕಾದ ಇನ್ನೊಂದು ಅಂಶ ಎಂದರೆ ಅಣಬೆಯಂತೆ ಹೆಚ್ಚುತ್ತಿರುವ ವೈದ್ಯಕೀಯ ಕಾಲೇಜುಗಳು. ಅಧಿಕಾರದಲ್ಲಿರುವ ಸರಕಾರ ತನ್ನ ಪಕ್ಷಕ್ಕೆ ಹಣ ಸುರಿಯುತ್ತಾರೆ ಎಂಬ ಒಂದೇ ಕಾರಣದಿಂದ ವಿವಿಧ ಜಾತಿ, ಜನಾಂಗಗಳನ್ನು ಪ್ರಚೋದಿಸಿ, ಏನೂ ಸೌಕರ್ಯವಿಲ್ಲದ, ಆಸ್ಪತ್ರೆಯನ್ನೇ ಹೊಂದಿರದ ಸರಿಯಾದ ಕಟ್ಟಡ, ಪ್ರಯೋಗ ಶಾಲೆ ಏನೂ ಇರದ ಸಂಸ್ಥೆಗಳಿಗೆ, ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಕಾಲೇಜು ಸ್ಥಾಪಿಸಲು ಅನುಮತಿ ಕೊಡುತ್ತಿರುವುದು. ಇಂತಹ ಕಾಲೇಜುಗಳಲ್ಲಿ ಲಕ್ಷಗಟ್ಟಲೆ ಸುರಿದು 'ಡಾಕ್ಟರ್' ಹಣೆ ಪಟ್ಟಿ ಪಡೆದವರು ಹಳ್ಳಿಗೆ ಹೋಗಿ ನೆಲೆಸಿ, ಅಲ್ಲಿಯ ಜನರ ಸೇವೆಗೈಯುತ್ತಾರೆ ಎಂಬುದು ಕೇವಲ ಕನಸು. ಇವರೆಲ್ಲ ನಗರಗಳಲ್ಲಿ ಪಟ್ಟಣಗಳಲ್ಲಿ ಷಾಪ್, ನರ್ಸಿಂಗ್ ಹೋಂಗಳನ್ನು ತೆರೆದು ಆರೋಗ್ಯ ವ್ಯವಸ್ಥೆಗೂ 'ಪಂಚತಾರಾ' ಪದ್ಧತಿ ತರುವಲ್ಲಿ ಮಹತ್ತರ ಸೇವೆಗೈಯುತ್ತಾರೆ, ಸೇವೆಗೈದಿದ್ದಾರೆ.

ಅಸಮರ್ಪಕ ಔಷಧ ನೀತಿ

ಔಷಧ ನೀತಿಯ ಬಗ್ಗೆ ಹೇಳುವುದಾದರೆ ಈಗಿರುವ ರಾಷ್ಟ್ರೀಯ ಔಷಧ ನೀತಿ ತೀರಾ ಅಸಮರ್ಪಕ. ಈ ನೀತಿ ಬೃಹತ್ ಬಂಡವಾಳ ಹೊಂದಿರುವ ಬಹುರಾಷ್ಟ್ರೀಯ ಔಷಧ ಸಂಸ್ಥೆಗಳು ನಮ್ಮ ಇಡೀ ಔಷಧ ಉದ್ಯಮವನ್ನೇ ಆಳುವಂತೆ ಮಾಡಿದೆ. ಈ ವಿದೇಶೀ ಸಂಸ್ಥೆಗಳು ಶೇಕಡಾ 80ಕ್ಕಿಂತಲೂ ಹೆಚ್ಚು ಭಾರತದಲ್ಲಿ ಔಷಧಗಳನ್ನು ತಯಾರಿಸುತ್ತಿವೆ. ಅಂತೆಯೇ ನಮ್ಮ ಸಂಸ್ಥೆಗಳ ಜೊತೆ ಪೈಪೋಟಿ ನಡೆಸಿ, ತಮ್ಮ ಖಜಾನೆ ತುಂಬಿಸಿಕೊಳ್ಳುತ್ತಿವೆ. ಬಡವರ ರಕ್ತವನ್ನು ಹೀರುತ್ತಿವೆ. ಈ ದಿಸೆಯಲ್ಲಿ ಹದಿನೈದು ವರ್ಷಗಳ ಹಿಂದೆ ನೇಮಕವಾದ ಹಾಥಿ ಆಯೋಗದ ಶಿಫಾರಸುಗಳು ಗಮನಾರ್ಹ. ಎಲ್ಲಾ ಬಹು ರಾಷ್ಟ್ರೀಯ ಸಂಸ್ಥೆಗಳನ್ನು ರಾಷ್ಟ್ರೀಕರಿಸಬೇಕು ರಾಷ್ಟ್ರೀಯ ಔಷಧ ಪ್ರಾಧಿಕಾರ ಸ್ಥಾಪಿಸಬೇಕು, ಆದ್ಯತೆಯ ಆಧಾರದ ಮೇಲೆ ಜೀವವುಳಿಸುವ 116 ಔಷಧಗಳನ್ನು ತಯಾರಿಸಬೇಕು. ಈಗಿರುವ ಔಷಧಗಳ ವ್ಯಾಪಾರೀ ನಾಮಕರಣವನ್ನು ನಿಲ್ಲಿಸುವುದು, ಅವುಗಳ ಮೂಲ ಹೆಸರಿನಿಂದಲೇ ಕರೆಯುವುದು, ಅಸಾಧುವಾದ ಔಷಧ ಮಿಶ್ರಣ ವನ್ನು ನಿಲ್ಲಿಸುವುದು, ಔಷಧದ ಗುಣಮಟ್ಟವನ್ನು ಉತ್ತಮ ಮಟ್ಟದಲ್ಲಿ ಕಾಯ್ದುಕೊಳ್ಳುವುದು ಎಂಬ ಈ ಆಯೋಗದ ಅತೀ ಉತ್ತಮ ಸಲಹೆಗಳು, ನಮ್ಮ 'ಬ್ಯೂರೋಕ್ರಸಿ'ಗೆ ಹೆದರಿ ಕಸದ ಬುಟ್ಟಿ ಸೇರಿರಬೇಕು. ಹೀಗಾಗಿ ಲಕ್ಷಗಟ್ಟಲೆ ಜನ ಸೂಕ್ತ ಸಮಯದಲ್ಲಿ ಜೀವರಕ್ಷಕ ಔಷಧಿಗಳ ಕೊರತೆಯಿಂದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಈ ಎಲ್ಲ ಸಮಸ್ಯೆಗಳ ತೊಂದರೆಗಳ ಮಧ್ಯೆ ಸಿಕ್ಕಿ ನರಳುತ್ತಿರುವ 'ನಮ್ಮ ಆರೋಗ್ಯ ವ್ಯವಸ್ಥೆ' ಇವುಗಳ ಸುಳಿಯಿಂದ ಹೊರಬರಲು 80ರ ದಶಕದಲ್ಲಿ ಗಂಭೀರವಾದ ಪ್ರಯತ್ನ ನಡೆಸಬೇಕಿತ್ತು. ಅಂತಹ ಪ್ರಯತ್ನದ ಕೊರತೆಯಿಂದ ಕ್ರಿ.ಶ. 2000ಕ್ಕೆ ಕೇವಲ 1 1/2 ವರ್ಷವಿರುವಾಗ ಈ ಸಮಸ್ಯೆಗಳು ಭೂತಾಕಾರ ತಾಳಿದ್ದು ''ಕ್ರಿ.ಶ. 2000ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ'' ಎಂಬ ಧ್ಯೇಯ ಅಥವಾ ಘೋಷಣೆ ಭಾರತದ ಪಾಲಿಗೆ ಎಷ್ಟೋ ರಾಜಕೀಯ ಸ್ಲೋಗನ್ನುಗಳಂತೆ, ಮತ್ತೊಂದು ಹಳಸಲು ಸ್ಲೋಗನ್ ಆಗಿ ಮಾರ್ಪಟ್ಟಿದೆ. ■

ಹಳಿ

ನೀನು ಹಳಿಯ ಮೇಲೆ ನಡೆ
ಇನ್ನೊಬ್ಬರ ಹಳಿಯ ಬೇಡೆಂದ
ಗೆಳೆಯ ತಾನೆ
ಹಳಿ ತಪ್ಪಲು ಕಾರಣ

-ಕಮಲಾ ಈಶ್ವರ ಎಲ್ಲೋಡು

BSRB - 1998
ಬ್ಯಾಂಕ್ ಪರೀಕ್ಷೆ ಉತ್ತೀರ್ಣರಾಗುವುದು ಹೇಗೆ?

ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿಯವರು ಜುಲೈ ತಿಂಗಳಿನಲ್ಲಿ ಅರ್ಜಿಗಳನ್ನು ಕರೆದಿದ್ದು ಸ್ಪರ್ಧಾತ್ಮಕ ಪರೀಕ್ಷೆಯನ್ನು ಏರ್ಪಡಿಸಿದ್ದಾರೆ. ಈ ಮೂಲೋದ್ದೇಶದಿಂದ ಪರೀಕ್ಷೆಯಲ್ಲಿ ಭಾಗವಹಿಸುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಈ ವಿಶೇಷ ಲೇಖನ.

ಟಿ.ಎಂ.ಎಸ್. ವಾಗೀಶ
ಸಹಾಯಕ ವ್ಯವಸ್ಥಾಪಕರು, ಭಾರತೀಯ ಸ್ಟೇಟ್ ಬ್ಯಾಂಕ್, ಕೃಷಿ ಅಭಿವೃದ್ಧಿ ಶಾಖೆ
ಬಳ್ಳಾರಿ - 583 101.

ಬ್ಯಾಂಕ್ ಉದ್ಯೋಗ ಇಂದು ಬಹಳಷ್ಟು ಯುವಕ-ಯುವತಿಯರಿಗೆ ಆಕರ್ಷಕ ಸಂಬಳ ತರುವ, ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚಿಸುವ, ಸೇವೆ ಮಾಡಲು ಒಳ್ಳೆಯ ಸದಾವಕಾಶ. ಈ ಪರೀಕ್ಷೆಗಳು ವರ್ಷಕ್ಕೆ ಎರಡರಿಂದ ಮೂರು ಸಲ ನಡೆಯುತ್ತವೆ. ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ದರ್ಜೆ (ಶೇಕಡಾ 60 ಅಂಕ), ಪಿ.ಯು.ಸಿ.ಯಲ್ಲಿ ದ್ವಿತೀಯ ದರ್ಜೆ (ಶೇಕಡಾ 50 ಅಂಕ) ಪದವಿಯಲ್ಲಿ ಸಾಮಾನ್ಯ ದರ್ಜೆ (ಶೇಕಡಾ 35 ಅಂಕ) ಪಡೆದ 18 ರಿಂದ 28ರ ವಯಸ್ಸಿನವರು ಈ ಪರೀಕ್ಷೆಗಳಿಗೆ ಹಾಜರಾಗಬಹುದು. ಮಾಜಿ ಸೈನಿಕರಿಗೆ, ಅಂಗವಿಕಲರಿಗೆ ವಯಸ್ಸಿನ ಮಿತಿಯಲ್ಲಿ ವಿನಾಯಿತಿ ಇದೆ.

ಶಾಲಾ-ಕಾಲೇಜುಗಳ ಪರೀಕ್ಷೆಗಿಂತ ಈ ಬ್ಯಾಂಕ್ ಪರೀಕ್ಷೆ ವಿಭಿನ್ನ. ಇಲ್ಲಿ ಬರೀ ಉತ್ತೀರ್ಣರಾಗುವುದಕ್ಕಿಂತ, ನಿಗದಿತ ಅವಧಿಯಲ್ಲಿ ಹೆಚ್ಚು ಸರಿ ಉತ್ತರ ಗುರುತಿಸಿ, ಅತಿ ಹೆಚ್ಚು ಅಂಕ ಗಳಿಸುವುದು ಮುಖ್ಯ. ನೀವು ಅವಸರದಲ್ಲಿ ತಪ್ಪು ಉತ್ತರ ನೀಡಿದರೆ, ದಂಡ ತೆರಬೇಕು. ಒಂದು ತಪ್ಪಿಗೆ ಸರಿ ಉತ್ತರದ ಅಂಕ ಕಳೆಯುವರು.

ನಮ್ಮ ದೇಶದಲ್ಲಿ ಸರಕಾರಿ ಸ್ವಾಮ್ಯದ 28 ಬ್ಯಾಂಕ್‌ಗಳಿಗೆ ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿಯು ಪ್ರಮುಖ ಪತ್ರಿಕೆಗಳಲ್ಲಿ ಈ ಬಗ್ಗೆ ಪ್ರಕಟಣೆ ಹೊರಡಿಸಿ, ಸೂಕ್ತ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ತಿಳಿಸುವರು. ಪ್ರತಿ ವರ್ಷವೂ ಇಂತಹ ಅಭ್ಯರ್ಥಿಗಳ ಸಂಖ್ಯೆ ಲಕ್ಷ ದಾಟುತ್ತಿದೆ. ಮುಂಬಯಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್‌ನವರು ಪ್ರಶ್ನೆ ಪತ್ರಿಕೆ ತಯಾರಿಸುವರು. ಕಾಲ ಕಾಲಕ್ಕೆ ಈ ಪ್ರಶ್ನೆ ಪತ್ರಿಕೆಗಳು ಮಾರ್ಪಾಟಾಗುತ್ತಿದ್ದು, ಆಬ್‌ಜೆಕ್ಟೀವ್‌ಟೈಪ್ ಮತ್ತು ಡಿಸ್ಕ್ರಿಪ್ಟೀವ್ ಟೈಪ್ ಪರೀಕ್ಷೆಯನ್ನು ಒಳಗೊಂಡಿದೆ.

ವಿಶೇಷ ಸೂಚನೆ :

ಪ್ರತಿ ಅಭ್ಯರ್ಥಿಗೆ ರಾಜ್ಯ ಭಾಷೆಯಾದ ಕನ್ನಡ, ಓದಲು, ಬರೆಯಲು, ಮಾತನಾಡಲು ಬರಬೇಕು. ಅಭ್ಯರ್ಥಿಯು ಆಬ್‌ಜೆಕ್ಟೀವ್ ಟೈಪ್ ಪ್ರಶ್ನೆ ಪತ್ರಿಕೆ ಇಂಗ್ಲೀಷಿನಲ್ಲಿಯೂ, ಡಿಸ್ಕ್ರಿಪ್ಟೀವ್ ಪ್ರಶ್ನೆ ಪತ್ರಿಕೆ ಕನ್ನಡದಲ್ಲಿ ಕಡ್ಡಾಯವಾಗಿ ಉತ್ತರಿಸಬೇಕು. ಈ ಬದಲಾವಣೆಯನ್ನು ಅಭ್ಯರ್ಥಿಗಳು ಗಮನಿಸಬೇಕು.

ಉತ್ತರಿಸುವ ವಿಧಾನ

ಸರಿ ಉತ್ತರ ಪೆನ್ಸಿಲ್‌ನಿಂದ ಅಂಕಣ ಪೂರ್ತಿ ತುಂಬಬೇಕು

○ ○ ○ ● ○

ಉತ್ತರ ಬದಲಿಸುವುದಿದ್ದರೆ "X'ಹಾಕಿ ಸರಿ ಉತ್ತರ ಅಂಕ ತುಂಬಬೇಕು.

ನಿಗದಿತ ಅರ್ಜಿಫಾರಂ, ಪರೀಕ್ಷಾಶುಲ್ಕ, ಜಾತಿ ಪ್ರಮಾಣ ಪತ್ರ (ಅವಶ್ಯಕ ಅಭ್ಯರ್ಥಿಗಳಿಂದ ಮಾತ್ರ), ಭಾವಚಿತ್ರ ಅಂಟಿಸಿ, ಕಾರ್ಯದರ್ಶಿ, ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-52. ವಿಳಾಸಕ್ಕೆ ಕಳುಹಿಸಬೇಕು. ಪರೀಕ್ಷೆಯು 20 ಜಿಲ್ಲಾ ಕೇಂದ್ರಗಳಲ್ಲಿ ನಡೆಯುತ್ತಿದ್ದು, ಪರಿಶಿಷ್ಟಜಾತಿ ಮತ್ತು ಪಂಗಡಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ಬೆಂಗಳೂರು, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ದಾವಣಗೆರೆ, ಧಾರವಾಡ, ಗುಲ್ಬರ್ಗಾ, ಹುಬ್ಬಳ್ಳಿ, ಮಂಗಳೂರು, ಮೈಸೂರಿನಲ್ಲಿ ಉಚಿತವಾಗಿ ನೀಡಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು, ಟೈಪಿಂಗ್ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. 6 ತಿಂಗಳ ಪ್ರೊಬೇಷನರಿ ಅವಧಿ ಮುಗಿದ ನಂತರ ಉದ್ಯೋಗ ಖಾಯಂ ಮಾಡಲಾಗುವುದು. ಕಂಪ್ಯೂಟರ್ ಜ್ಞಾನಕ್ಕೆ ಆದ್ಯತೆ ಉಂಟು.

ಪರೀಕ್ಷಾ ವಿಧಾನ

ಕ್ಲರ್ಕ್/ಟೈಪಿಸ್ಟ್/ಸ್ಟೆನೋಗ್ರಾಫರ್ ಪರೀಕ್ಷೆಗಳಿಗೆ ಎರಡು ವಿಧದ ಪ್ರಶ್ನೆ ಪತ್ರಿಕೆ ಇರುವುದು. ಮೊದಲನೆಯದು ಆಬ್‌ಜೆಕ್ಟೀವ್ ಮಾದರಿ ಹಾಗೂ ಎರಡನೆಯದು ಡಿಸ್ಕ್ರಿಪ್ಟೀವ್ ಮಾದರಿ. (ಕನ್ನಡದಲ್ಲಿಯೇ ಉತ್ತರಿಸಬೇಕು)

ಪ್ರತಿ ನಾಲ್ಕು ತಪ್ಪುಗಳಿಗೆ ಒಂದು ಅಂಕ ಕಳೆಯಲಾಗುವುದು. ಹೆಚ್ಚು ಪ್ರಶ್ನೆಗಳನ್ನು ಕಡಿಮೆ

ಪರೀಕ್ಷೆ Objective Paper	ನಿಗದಿತ ಸಮಯ	ಪ್ರಶ್ನೆಗಳು	ಗರಿಷ್ಠ ಅಂಕ
1. Test of Reasoning (TORA)	30 ನಿಮಿಷ	50	80
2. Test of English - Language (TOEL)	25 ನಿಮಿಷ	50	ಪಾಸ್ ಅಂಕ
3. Test of Numerical ability (TONA)	25 ನಿಮಿಷ	50	80
4. Test of Clerical Aptitude (TOCA)	15 ನಿಮಿಷ	50	40
	95 ನಿಮಿಷ		
5. Descrptive Paper (ಕನ್ನಡದಲ್ಲಿ ಬರೆಯಬೇಕು)	45 ನಿಮಿಷ	4 (4 ಪ್ರಶ್ನೆಗಳಲ್ಲಿ 3 ಉತ್ತರಿಸಬೇಕು)	40

ಸಮಯದಲ್ಲಿ ಉತ್ತರಿಸಲು ಅಭ್ಯರ್ಥಿಗಳು ಯತ್ನಿಸಬೇಕು. Numerical ability ಪ್ರಶ್ನೆಗಳಿಗೆ 1.6 ಅಂಕಗಳಿದ್ದು Clerical aptitude ಪ್ರಶ್ನೆಗಳಿಗೆ 0.8 ಅಂಕ ಇರುತ್ತದೆ. ಅದಕ್ಕಾಗಿ ಈ ಭಾಗದಲ್ಲಿ ಹೆಚ್ಚು ಅಂಕ ಗಳಿಸಿದರೆ, ಯಶಸ್ಸು ದೊರಕುತ್ತದೆ.

Test of Reasoning

Verbal Questions	15
Non - Verbal	25
Analogies	5
Classification	5
	50 ಪ್ರಶ್ನೆಗಳು

(a)

VERBAL
- Analogy Questions
- Series
- Same class
- Coding & Decoding test
- Direction Test

(b)

Apple, Banana, Orange, Candle, Mango

(ಉತ್ತರ : Candle ಹೊರತುಪಡಿಸಿ ಬೇರೆ ಎಲ್ಲವೂ ಹಣ್ಣುಗಳು)

Ans : CANDLE

Age Test

Raju is taller than Jyothi Anand is taller than Prakash but not as tall as Jyothi, Suman is taller than Raju, who among them is the shortest?

ಉತ್ತರ :

1. Raju > Jyothi
2. Anand > Prakash
3. Anand < Jyothi
4. Suman > Raju

ಸರಿಯಾದ ಉತ್ತರ : Prakash

ಪ್ರತಿ ಅಭ್ಯರ್ಥಿಯ ಮಾನಸಿಕ ಸಾಮರ್ಥ್ಯ ತಿಳಿಯಲು ಈ ಪರೀಕ್ಷೆ. ಇದನ್ನು ಕನ್ನಡದಲ್ಲಿ ವಿವೇಚನಾ ಸಾಮರ್ಥ್ಯ ಅಥವಾ ಮಾನಸಿಕ ಸಾಮರ್ಥ್ಯ ಪರೀಕ್ಷೆ ಎನ್ನುವರು. ಮೊಟ್ಟಮೊದಲು ಜರ್ಮನಿಯಲ್ಲಿ, ಹಿಟ್ಲರ್ ಸೈನ್ಯ ಭರ್ತಿ ಮಾಡುವಾಗ ಸೈನಿಕರಿಗೆ ಈ ಪರೀಕ್ಷೆ ಬಳಸಿದ್ದರಂತೆ. ಇಂದು ಪ್ರತಿಯೊಂದು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ, ಅಭ್ಯರ್ಥಿಗಳ ಮೇಧಾಶಕ್ತಿಯ ಪರೀಕ್ಷೆಗೆ ಇದನ್ನು ಮಾನದಂಡವಾಗಿ ಪರಿಗಣಿಸುವರು. ಕಸರತ್ತು ನೀಡುವ ಪ್ರಶ್ನೆಗಳಿರುತ್ತವೆ. ಆಲ್ಫ್ರೆಡ್ ಬಿನೆಟ್ (1857-1911) ಮನಶಾಸ್ತ್ರಜ್ಞ, ಮಾನವರ ಮೇಧಾಶಕ್ತಿಯ ಬಗ್ಗೆ ಹೆಚ್ಚು ಸಂಶೋಧನೆ ನಡೆಸಿದ. Patience Puzzle ತಯಾರು ಮಾಡಿ, ಮೇಧಾಶಕ್ತಿ ಅಳೆಯುತ್ತಿದ್ದ. ಹೆಚ್ಚು ಅರ್ಥವಾಗದ ಪಕ್ಷದಲ್ಲಿ ಊಹೆ ಮಾಡಿ ಉತ್ತರಿಸದೇ ಇರುವುದು ಒಳ್ಳೆಯದು.

NON VERBAL

1) Series
- Movement
- ClockWise
- Anti clock wise

2) Analogies
- Regard to class relation
- Regard to Numbers
- Regard to position
- Regard to Movement
- Regard to Structure

3) Classification
- Similarities
- Position or rotation
- Sets type
- Pairs type
- Shape

Analogy Test

ಉದಾ :

Foot is related to "man' in the same way as "Hoof' is related to ?

ಉತ್ತರ : Horse

Same Class Test

ಉದಾ : Find odd-man out.

Non Verbal Test Series Test


ಈ ಪ್ರಶ್ನೆಗಳಲ್ಲಿ ಪ್ರಶ್ನೆಯ ಚಿತ್ರ 1ನೆ ಚಿತ್ರದಿಂದ 2ನೆ ಯ ಚಿತ್ರಕ್ಕೆ, 2 ರಿಂದ 3ಕ್ಕೆ, 3 ರಿಂದ 4ಕ್ಕೆ, 4 ರಿಂದ 5 ಕ್ಕೆ ಚಿತ್ರ ಯಾವ ರೀತಿ ಬದಲಾಗುತ್ತಿದೆ ಎಂಬುದು ಗಮನಿಸಿ, 6ನೆಯ ಚಿತ್ರ ಊಹಿಸಿ ಅದನ್ನು ಉತ್ತರದ ಚಿತ್ರದಲ್ಲಿ ಗುರುತಿಸಬೇಕು.

Analogies Test

ಈ ಪ್ರಶ್ನೆಗಳಲ್ಲಿ, ಪ್ರಶ್ನೆಯ ಚಿತ್ರದಲ್ಲಿ 1ನೆಯ ಚಿತ್ರಕ್ಕೆ 2ನೆಯ ಚಿತ್ರಕ್ಕೆ ಇರುವ ಸಂಬಂಧದ ಆಧಾರವಾಗಿ, 3 ಮತ್ತು 4ನೆಯ ಚಿತ್ರದ ಸಂಬಂಧ ಇರುವುದು.

Classification Test

ಈ ಪ್ರಶ್ನೆಗಳಲ್ಲಿ 5 ಚಿತ್ರಗಳಿರುತ್ತದೆ. 5 ಚಿತ್ರಗಳಲ್ಲಿ 4 ಚಿತ್ರಗಳು ಒಂದೇ ಗುಂಪಿಗೆ ಸೇರಿದ್ದು, ಒಂದು ಚಿತ್ರ ಮಾತ್ರ ವಿಭಿನ್ನವಾಗಿರುತ್ತದೆ. ವಿಭಿನ್ನ ಚಿತ್ರದ ಸಂಖ್ಯೆ ಗುರುತಿಸಬೇಕು.



Coding & Decoding test

If DBMDVUUB is Calcutta, How will you write BOMBAY.

D	=	C	ಅಕ್ಷರದ ಮುಂದಿನ ಅಕ್ಷರ
B		A	ಅಕ್ಷರದ ಮುಂದಿನ ಅಕ್ಷರ
M		L	ಅಕ್ಷರದ ಮುಂದಿನ ಅಕ್ಷರ
D		C	ಅಕ್ಷರದ ಮುಂದಿನ ಅಕ್ಷರ
V		U	ಅಕ್ಷರದ ಮುಂದಿನ ಅಕ್ಷರ
U		T	ಅಕ್ಷರದ ಮುಂದಿನ ಅಕ್ಷರ
U		T	ಅಕ್ಷರದ ಮುಂದಿನ ಅಕ್ಷರ
B		A	ಅಕ್ಷರದ ಮುಂದಿನ ಅಕ್ಷರ

ಹಾಗೆಯೇ

BOMBAY ಅನ್ನು

CPNCB ZCode ಮಾಡಬಹುದು.

ಇಂಗ್ಲೀಷ್ ವರ್ಣಮಾಲೆಯ 26 ಅಕ್ಷರಗಳನ್ನು ಬರೆದು ಅವುಗಳ ಸಂಖ್ಯೆ ಮುಂದುವರಿಕೆ ಕ್ರಮ, ಹಿಂಬರೆಯುವಿಕೆ ಕ್ರಮ ಅಭ್ಯಾಸ ಮಾಡಿದರೆ ಕೆಲ ಪ್ರಶ್ನೆಗಳು ಸುಲಭವಾಗಿ ಉತ್ತರಿಸಬಹುದು.

1	2	3	4	5	6	7	8	9
A	B	C	D	E	F	G	H	I
10	11	12	13	14	15	16	17	18
J	K	L	M	N	O	P	Q	R
19	20	21	22	23	24	25	26	
S	T	U	V	W	X	Y	Z	

Relation Test

Ex: Pointing to a person, a man said to a women; "His mother is the daughter of your Father'. How was the women related to the peron's Father.

ಈ ಸಂಭಾಷಣೆ ಗಂಡು-ಹೆಣ್ಣಿನ ಮಧ್ಯದ ಸಂಭಾಷಣೆ, ಕೈತೋರಿಸುತ್ತಿದ್ದ ವ್ಯಕ್ತಿಯ ತಾಯಿ, ಹೆಣ್ಣಿನ ತಂದೆಯ ಮಗಳು, ಅಂದರೆ ತೋರಿಸುತ್ತಿದ್ದ ವ್ಯಕ್ತಿಗೆ ಹೆಣ್ಣು ತಂಗಿ ಆಗುತ್ತಾಳೆ. ಸರಿ ಉತ್ತರ: ಸಿಸ್ಟರ್.

Test of Numerical ability

ಅಂಕಗಣಿತ ಜ್ಞಾನ, ಕೂಡುವುದು, ಕಳೆಯುವುದು, ಲಘುತಮ ಸಾಮಾನ್ಯ ಅಪವರ್ತನ (L.C.M) ಮತ್ತು ಮಹತ್ತರ ತಮ ಸಾಮಾನ್ಯ ಅಪವರ್ತನ (HCF) ಬಗ್ಗೆ, ಶೇಕಡಾ, ಲಾಭಾಂಶಗಳ ಬಗ್ಗೆ 50 ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆಗಳು ಉತ್ತರಿಸುವಾಗ BODMAS Rule ತಪ್ಪದೇ ಅನುಸರಿಸಬೇಕು.

B	=	Bracket
O	=	of
D	=	Division
M	=	Multiplication
A	=	Addition &
S	=	Substraction

ಇದೇ ವಿಧಾನ ಅನುಸರಿಸಿ 'ಗಣಿತ ಪ್ರಶ್ನೆ ಷಾರ್ಟ್ ಕಟ್ ವಿಧಾನದಿಂದ ಉತ್ತರಿಸಬೇಕು.

Test of English Language

ಈ ಪ್ರಶ್ನೆಗಳು ನಾಲ್ಕು ವಿಧಗಳಿಂದ ಕೂಡಿರುತ್ತವೆ.

(a) Spotting the errors
(b) Antonyms & Symonyms
(c) Prepostion & Selecting appropriate words
(d) Jumbled sentences.

ಇಂಗ್ಲೀಷ್ ವ್ಯಾಕರಣದ ಸಾಮಾನ್ಯ ಜ್ಞಾನ ಸಾಕು.
ಪರೀಕ್ಷೆಯಲ್ಲಿ ಉತ್ತೀರ್ಣ ಅಂಕ ಬಂದರೆ ಸಾಕು.

Paper II - Descriptive Paper

(ಕನ್ನಡದಲ್ಲಿ ಮಾತ್ರ)

ಅಭ್ಯರ್ಥಿಯ ಆಲೋಚನಾ ಸಾಮರ್ಥ್ಯ, ವಿಮರ್ಶಾತ್ಮಕ ವಿಶ್ಲೇಷಣಾ ಶಕ್ತಿ, ಭಾವ ವ್ಯಕ್ತೀಕರಣ ತಿಳಿಯಲು ಉದ್ದೇಶಿಸಿ ಈ ಪರೀಕ್ಷೆ ನಡೆಸುವರು. ಈ ಪತ್ರಿಕೆಯಲ್ಲಿ 4 ವಿಷಯ ನೀಡಿ, 3 ವಿಷಯಗಳ ಬಗ್ಗೆ ಸಣ್ಣಪ್ರಬಂಧ ಬರೆಯಬೇಕು. 45 ನಿಮಿಷ ಅವಧಿಯೊಳಗೆ, ನೀಡಿದ ಉತ್ತರ ಪತ್ರಿಕೆಯ ಅಂಕಣದೊಳಗೆ ಬರೆಯಬೇಕು. ಈ

ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿಯವರು ಅರ್ಹ ಅಭ್ಯರ್ಥಿಗಳಿಂದ 27 ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಖಾಲಿ ಹುದ್ದೆಗಳಿಗೆ ಅರ್ಜಿಯನ್ನು ಕರೆದಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು 31.07.1998ರ ಸಂಜೆ 5.00 ಗಂಟೆಯವರೆಗೆ ವಿಸ್ತರಿಸಲಾಗಿದೆ.

ಪ್ರಶ್ನೆ ಪತ್ರಿಕೆ **ಕನ್ನಡದಲ್ಲಿ ಕಡ್ಡಾಯವಾಗಿ ಉತ್ತರಿಸಬೇಕು.** ಗಳನ್ನು ಸ್ಪಷ್ಟ ಭಾಷೆ, ನೇರ ಅಭಿಪ್ರಾಯ, ವಿಷಯದ ಪ್ರತಿಪಾದನೆಗೆ ಹೆಚ್ಚು ಆದ್ಯತೆ. ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳು, ಬ್ಯಾಂಕಿಂಗ್ ಬಗ್ಗೆ, ಸಂದರ್ಭವೊಂದರ ಊಹೆ ಮಾಡಿಕೊಂಡು 150 ಪದಗಳಿಗೆ ಮೀರದಂತೆ ಬರೆಯಬೇಕು. ತಿದ್ದುವುದು, ಬರೆದು ಹೊಡೆದು ಹಾಕುವುದು ಮಾಡಬಾರದು. ಅಂದವಾದ ಬರವಣಿಗೆಗೆ, ವಿಷಯದ ಪ್ರತಿಪಾದನೆಗೆ, ಅಭಿಪ್ರಾಯ ವ್ಯಕ್ತ ಪಡಿಸುವ ವಿಧಾನಕ್ಕೆ ಮಹತ್ವ ನೀಡಬೇಕು.

Test of Clerical Aptitude

ಈ ವಿಭಾಗದಲ್ಲಿ 50 ಪ್ರಶ್ನೆಗಳಿದ್ದು ಇಲ್ಲಿ ಅಭ್ಯರ್ಥಿಗಳು ಹೆಚ್ಚು ಅಂಕ ಗಳಿಸಲು ಸಾಧ್ಯವಿದೆ. ಈ ಪರೀಕ್ಷೆಯ ಉದ್ದೇಶ, ಅಭ್ಯರ್ಥಿಯ ಅವ

ಬ್ಯಾಂಕ್ ಪರೀಕ್ಷೆ ಯಶಸ್ವಿಗೆ ಹತ್ತು ಸೂತ್ರಗಳು

- ಆಸಕ್ತ ಅಭ್ಯರ್ಥಿಗಳು ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿಯ ಪ್ರಕಟಣೆಗೆ ಕಾಯದೆ, ನಿರಂತರ ಅಭ್ಯಾಸ ಮಾಡಬೇಕು.
- ಮಾದರಿ ಪ್ರಶ್ನೆ ಪತ್ರಿಕೆಗಳು, ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳನ್ನು ನಿಗದಿತ ಸಮಯದಲ್ಲಿ ಮಾಡುವ ಅಭ್ಯಾಸ ಮಾಡಬೇಕು.
- ನಿರಂತರ ಅಭ್ಯಾಸ, ಅಲ್ಲೊಂದು, ಇಲ್ಲೊಂದು ಪ್ರಶ್ನೆ ಉತ್ತರಿಸುವ ಅಭ್ಯಾಸ ಅವಶ್ಯಕ.
- ಪರೀಕ್ಷೆಗೆ ತಯಾರಿ ಮಾಡುವಾಗ, ಅರ್ಥವಾಗದ ಪ್ರಶ್ನೆಗಳು, ಉತ್ತರಿಸುವ ಸರಳವಿಧಾನ, ಮಾಡಿದ ತಪ್ಪುಗಳ ಸರಿಪಡಿಸುವ ಕ್ರಿಯೆ-ಮೂರು ಘಟ್ಟಗಳಲ್ಲಿ ತಯಾರಿ ನಡೆಸಬೇಕು.
- ಮುಂದಿನ ದಿನಗಳಲ್ಲಿ ಮಾರ್ಗದರ್ಶನಕ್ಕೆ ಉತ್ತರಿಸಬೇಕಾದ ಪ್ರಶ್ನೆಗಳನ್ನು ಪುಸ್ತಕವೊಂದರಲ್ಲಿ ಮಾಡಿದರೆ ಅನುಕೂಲ.
- ಧನಾತ್ಮಕ ಆಲೋಚನೆ, ಪ್ರತಿದಿನ ಅಭ್ಯಾಸದಿಂದ ಯಶಸ್ಸು ಕಟ್ಟಿಟ್ಟ ಬುತ್ತಿ. ಶ್ರದ್ಧೆ, ಅಭ್ಯಾಸ, ಉತ್ತರಗಳ ಪುನರ್ ಪರಿಶೀಲನೆಯ ಫಲದಿಂದ ಪರೀಕ್ಷೆಯಲ್ಲಿ ಯಶಸ್ಸು ಸಿಗುವುದು.
- ಸುಲಭದ ಪ್ರಶ್ನೆಗಳು ಮೊದಲು ಉತ್ತರಿಸಿ, ಕಷ್ಟದ ಪ್ರಶ್ನೆಗಳನ್ನು ಆಲೋಚಿಸಿ ನಂತರ ಉತ್ತರಿಸಬಹುದು.
- ಅನಾವಶ್ಯಕ ಗಾಬರಿ, ಭಯಬೇಡ. ಉತ್ತಮವಾಗಿ ಬರೆಯುವ ಆತ್ಮ ವಿಶ್ವಾಸ, ಖಚಿತತೆ ಬೇಕು.
- ಶೀಘ್ರ ನಿರ್ಧಾರ, ಸಮಯ ಪಾಲನೆ, ಸರಿ ಉತ್ತರ ಕಂಡು ಹಿಡಿದು ಸರಿಯಾಗಿ ಉತ್ತರದ ಅಂಕಣದಲ್ಲಿ ಪೆನ್ಸಿಲ್ ಮುಖಾಂತರ ಸೂಚನೆಯಂತೆ ಗುರುತು ಮಾಡುವುದು.
- ಪರೀಕ್ಷೆ ಹಾಲ್‌ನಲ್ಲಿ ಅನಾವಶ್ಯಕ ಮಾತುಕತೆ, ಸಮಯ ವ್ಯರ್ಥಮಾಡದೆ, ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಶ್ನೆ ಉತ್ತರಿಸಿ, ಉಳಿದ ಸಮಯವನ್ನು ಪುನರ್ ಬಳಕೆ ಮಾಡುವುದರ ಮೂಲಕ ಕಷ್ಟದ ಪ್ರಶ್ನೆಗಳಿಗೆ ಉಪಯೋಗಿಸಿಕೊಳ್ಳಬೇಕು.

ಗಾಹನೆ ಶಕ್ತಿ, ಗ್ರಹಣ ಶಕ್ತಿ, ಕಣ್ಣಿನ ಚುರುಕುತನ ಪರೀಕ್ಷೆ. 15 ನಿಮಿಷದೊಳಗೆ, 50 ಪ್ರಶ್ನೆಗಳನ್ನು ಉತ್ತರಿಸಬೇಕು. ಒಂದು ವಿಳಾಸದ ಪ್ರಶ್ನೆಯಾಗಿದ್ದು, ಹೆಸರು, ಮನೆ ನಂ, ರಸ್ತೆ, ಊರು, ಅಂಚೆ ಪೆಟ್ಟಿಗೆ ಸಂಖ್ಯೆ ಮತ್ತು ಪಿನ್‌ಕೋಡ್ ನೀಡಿರುತ್ತಾರೆ. ಉತ್ತರ ಎ ಬಿ ಸಿ ಡಿ ಇ ಐದು ಉತ್ತರಗಳಲ್ಲಿ ಸರಿಯಾದ ಉತ್ತರ ಗುರುತಿಸಬೇಕು. ಆದಷ್ಟು ಉತ್ತರ ಹುಡುಕುವಾಗ, ಇ ಡಿ ಸಿ ಬಿ ಎ ಬಲಗಡೆಯಿಂದ ಉತ್ತರ ಹುಡುಕಿದರೆ ಬೇಗ ಉತ್ತರಿಸಬಹುದು. ಇಡೀ ಪ್ರಶ್ನೆಗಳನ್ನು ಮೂರು ಭಾಗಗಳಾಗಿ ಮಾಡಿ 15, 15, 20 ಪ್ರಶ್ನೆಗಳಂತೆ ಆಯ್ದು ಉತ್ತರಿಸಿದರೆ ಹೆಚ್ಚು ಉತ್ತರಿಸಲು ಸಾಧ್ಯ.

ಅಭ್ಯಾಸಕ್ಕಿಂತ ಮಿಗಿಲಾದ ಸಾಧನೆಯಿಲ್ಲ. ಗುರಿ ತಲುಪುವ ಆತ್ಮ ವಿಶ್ವಾಸವಿದ್ದರೆ, ಬ್ಯಾಂಕ್ ನೌಕರಿ ನಿಮಗೆ ಗ್ಯಾರಂಟಿ. ಪ್ರಯತ್ನಿಸಿದರೆ ಫಲ ನಿಜ ತಾನೆ? ■

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅವಕಾಶ

ಮೆಟ್ರಿಕ್ ಹಾಗೂ ಪಿ.ಯು.ಸಿ. ಪರೀಕ್ಷೆಗಳಲ್ಲಿ ಉತ್ತಮ ಅಂಕ ಅಂದರೆ ಶೇ.60ರ ಮೇಲ್ಪಟ್ಟು ಪಡೆದಲ್ಲಿ ರಾಜ್ಯದ ಬ್ಯಾಂಕಿಂಗ್ ನೇಮಕಾತಿ ಮಂಡಳಿಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸ್ಪರ್ಧಿಸಿ ಯಶ ಗಳಿಸಬಹುದು.

ಈ ಪರೀಕ್ಷೆಯು ರಾಜ್ಯದ ಹಲವಾರು ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ನಡೆಯುತ್ತದೆ. ಸಾಮಾನ್ಯವಾಗಿ ಇದು ವರ್ಷದಲ್ಲಿ ಕನಿಷ್ಠ ಒಂದು ಬಾರಿಯಾದರೂ ನಡೆಯುತ್ತದೆ. ಬ್ಯಾಂಕಿಂಗ್ ಸೇವಾ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯನ್ನು 28 ವರ್ಷಗಳಿಗೆ ನಿಗದಿಪಡಿಸಿದೆ. ಅಂದರೆ ಗುಮಾಸ್ತ ಹಾಗೂ ಟೈಪಿಂಗ್ ಕ್ಲಾರ್ಕ್ ಹುದ್ದೆಗಳಿಗೆ ಈ ಅರ್ಹತೆ ಹಾಗೂ ವಯೋಮಿತಿ ಅನ್ವಯಿಸುತ್ತದೆ.

95 ನಿಮಿಷಗಳ ಅವಧಿಯ ಈ ಪರೀಕ್ಷೆಯು ಗಣಿತ ಹಾಗೂ ಸಾಮಾನ್ಯ ಇಂಗ್ಲೀಷ್ ಇತ್ಯಾದಿ 4 ಪರೀಕ್ಷೆಗಳನ್ನು ಹೊಂದಿದ್ದು ಇದರಲ್ಲಿ ರೀಜನಿಂಗ್ ಹಾಗೂ ನ್ಯೂಮರಿಕಲ್ ಎಂಬೆರಡು ಟೆಸ್ಟ್‌ಗಳೂ ಒಳಗೊಂಡಿವೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸುವವರು ಸಂದರ್ಶನಕ್ಕೆ ಅರ್ಹರಾಗುತ್ತಾರೆ. ಈ ಸಂದರ್ಶನ ಕೂಡ 'ಜನರಲ್ ನಾಲೇಡ್ಜ್'ಗೆ ಹೆಚ್ಚು ಸಂಬಂಧಿಸಿದೆ. ಇದರಲ್ಲಿ ಅಭ್ಯರ್ಥಿಗಳು ಹೆಚ್ಚು ಗಮನ ಹರಿಸಿದಲ್ಲಿ ಸುಲಭವಾಗಿ ಉತ್ತಮ ಸಂಬಳದ ಬ್ಯಾಂಕ್ ಕ್ಲಾರ್ಕ್‌ನ ಕೆಲಸವನ್ನು ಪಡೆಯಲು ಶಕ್ಯವಿದೆ.

ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಈ ಪರೀಕ್ಷೆಯನ್ನು ಕಟ್ಟಿದರೆ ಅವರಿಗೆ ಪರಿಣಿತರಿಂದ ತರಬೇತಿ ಹಾಗೂ ಸಿದ್ಧತಾ ಸಾಮಗ್ರಿಯೂ ದೊರೆಯುತ್ತದೆ.

ಕರ್ನಾಟಕ ರಾಜ್ಯದ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಕೇಂದ್ರವು ಬೆಂಗಳೂರಿನಲ್ಲಿದೆ. ಇದು ಆಯಾ ರಾಷ್ಟ್ರೀಯ ಬ್ಯಾಂಕುಗಳು ಹಾಗೂ ರಾಷ್ಟ್ರೀಯ ಬ್ಯಾಂಕುಗಳ ಮೂಲಕ ನಡೆಯುವ ಗ್ರಾಮೀಣ ಬ್ಯಾಂಕುಗಳಿಗೆ ಬೇಕಾಗಿರುವ ಅಭ್ಯರ್ಥಿಗಳನ್ನು ನೇಮಕ ಮಾಡುತ್ತದೆ.

ಕರ್ನಾಟಕ ರಾಜ್ಯದಲ್ಲಿ ಈ ಸ್ಪರ್ಧೆಗೆ ಅರ್ಹರಾಗುವವರು ಸಾಮಾನ್ಯ ಕನ್ನಡದ ಜ್ಞಾನವನ್ನು ಹೊಂದಿರುವುದು ಅವಶ್ಯಕ. ನೇಮಕಾತಿಯು ಸಂಪೂರ್ಣವಾಗಿ ಕಂಪ್ಯೂಟರೀಕರಣಕ್ಕೊಳಪಟ್ಟಿರುವುದರಿಂದ ಯಾವುದೇ ರೀತಿಯ ಆತಂಕ ಇರಬೇಕಾದುದಿಲ್ಲ. ಇಂತಹ ಸಂದರ್ಭಗಳಲ್ಲಿ 'ಲಕ್'ನ್ನು ನೆಚ್ಚಿಕೊಳ್ಳುವುದಕ್ಕಿಂತ 'ಸತತ ಶ್ರಮ' ನೆಚ್ಚಿಕೊಂಡರೆ ಉತ್ತಮ.

ಇನ್ನು ಮಹಾರಾಷ್ಟ್ರದ ಬ್ಯಾಂಕಿಂಗ್ ಸೇವಾ ನೇಮಕಾತಿ ಸಹ ಕೆಲ ಮಟ್ಟಿಗೆ ಕರ್ನಾಟಕದ ಅಭ್ಯರ್ಥಿಗಳಿಗೆ ಅನುಕೂಲ ಒದಗಿಸುತ್ತದೆ. ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ತಮ್ಮ 'ಅರ್ಹತೆ'ಯನ್ನು ಇಲ್ಲಿಯೂ ಪ್ರದರ್ಶಿಸಿ ಕೆಲಸ ಗಿಟ್ಟಿಸಬಹುದಾಗಿದೆ.

ಬ್ಯಾಂಕಿಂಗ್ ಸೇವಾ ಸಿಬ್ಬಂದಿ ನೇಮಕಾತಿ ಕುರಿತಂತೆ ಕೆಲವು ಪ್ರಕಾಶನಗಳು ಪುಸ್ತಿಕೆಗಳನ್ನು ಮಾರಾಟ ಮಾಡುತ್ತವೆ. ಇವುಗಳಲ್ಲಿ ಪರೀಕ್ಷೆಗೆ ಬರಬಹುದಾದ ಅಂದರೆ ಸಂಭವನೀಯ ಪ್ರಶ್ನೆಪತ್ರಿಕೆಗಳನ್ನು ಉತ್ತರಗಳೊಂದಿಗೆ ನೀಡಲಾಗಿರುತ್ತದೆ. ಇವುಗಳನ್ನು 'ರೆಫರ್' ಮಾಡುವುದು ಕೂಡ ಅಭ್ಯರ್ಥಿಗಳಿಗೆ ವರದಾನವಾಗುವ ಒಂದು ಅಂಶ.

ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕು ಕೂಡ ತನ್ನ ಶಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತದೆ. ಇಲ್ಲಿ ಮುಖ್ಯವಾಗಿ ಕೃಷಿ ಹಾಗೂ ವಿಜ್ಞಾನದ ಪದವೀಧರರು ಹೆಚ್ಚು ಪರಿಗಣಿತರಾಗುತ್ತಾರೆ. ಈ ನೇಮಕಾತಿಗಳು ಕಡಿಮೆ ಪ್ರಮಾಣದಲ್ಲಿದ್ದರೂ ಸಹ ಅರ್ಹತೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳನ್ನು ಮುಖ್ಯವಾಗಿ ಪರಿಗಣಿಸಲಾಗುತ್ತದೆ. ಈ ಬ್ಯಾಂಕುಗಳಲ್ಲಿ ವಯೋಮಿತಿ ಮಾತ್ರ ಕನಿಷ್ಠ 21ರಿಂದ ಗರಿಷ್ಠ 28 ವರ್ಷಗಳವರೆಗೆ ಇರುತ್ತದೆ. ■

ನೌಕಾದಳ ಸೇರಲು ಅವಕಾಶ

ಭಾರತೀಯ ನೌಕಾದಳವು ಟೆಕ್ನಿಕಲ್ ಪದವೀಧರರು ಹಾಗೂ ಸ್ನಾತಕೋತ್ತರ ಪದವೀಧರರಿಗೆ ಶಾರ್ಟ್ ಸರ್ವಿಸ್ ಕಮೀಷನಡ್ ಆಫೀಸರ್ಸ್ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

- ಅವಿವಾಹಿತ ಪುರುಷ/ಮಹಿಳಾ ಅಭ್ಯರ್ಥಿಗಳು
- 2 ಜನವರಿ 74 ಹಾಗೂ 1 ಜುಲೈ 79ರೊಳಗೆ ಜನಿಸಿದವರಾಗಿರಬೇಕು.

ವಿದ್ಯಾರ್ಹತೆ

- ಇಂಜಿನಿಯರಿಂಗ್ ಪದವಿಯನ್ನು ಈ ಕೆಳಗಿನ ವಿಷಯಗಳಲ್ಲಿ ಪಡೆದಿರಬೇಕು. ಕಂಪ್ಯೂಟರ್ ಸೈನ್ಸ್, ಕಂಪ್ಯೂಟರ್ ಇಂಜಿನಿಯರಿಂಗ್, ಏರೋನಾಟಿಕಲ್/ಎವಿಯಾನಿಕ್ಸ್, ಇನ್ಸ್ಟ್ರುಮೆಂಟೇಷನ್ ಅಂಡ್ ಕಂಟ್ರೋಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್, ಮರೈನ್ ಇಂಜಿನಿಯರಿಂಗ್ ಹಾಗೂ ಇಂಡಸ್ಟ್ರಿಯಲ್ ಅಂಡ್ ಪ್ರೊಡಕ್ಷನ್. ಅಥವಾ
- ಸ್ನಾತಕೋತ್ತರ ಪದವಿಯನ್ನು ಕಂಪ್ಯೂಟರ್ ಸೈನ್ಸ್, ಕಂಪ್ಯೂಟರ್ ಇಂಜಿನಿಯರಿಂಗ್, ಕಂಪ್ಯೂಟರ್ ಅಪ್ಲಿಕೇಷನ್ಸ್, ಕಂಪ್ಯೂಟರ್ ಮ್ಯಾನೇಜ್‌ಮೆಂಟ್ ಈ ವಿಷಯದಲ್ಲಿ ಪಡೆದಿರಬೇಕು.

ದೈಹಿಕ ಅರ್ಹತೆ

- ಪುರುಷರು, ಎತ್ತರ 157 ಸೆಂ.ಮೀ ಇದ್ದು ಅದಕ್ಕೆ ತಕ್ಕ ತೂಕವನ್ನು ಹೊಂದಿರಬೇಕು.
- ಮಹಿಳೆಯರು ಎತ್ತರ 148 ಸೆಂ.ಮೀ ಹೊಂದಿದ್ದು ಅದಕ್ಕೆ ತಕ್ಕ ತೂಕವನ್ನು ಹೊಂದಿರಬೇಕು.
- ದೃಷ್ಟಿ ದೋಷವಿರಬಾರದು.

ಅಂತಿಮ ವರ್ಷದ ಪರೀಕ್ಷೆಯಲ್ಲಿ ಕುಳಿತಿದ್ದು ಫಲಿತಾಂಶವನ್ನು ಕಾಯುತ್ತಿರುವ ಅಭ್ಯರ್ಥಿಗಳೂ ಅರ್ಜಿಯನ್ನು ಹಾಕಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು 1998 ಆಗಸ್ಟ್ 5 ರೊಳಗೆ

ಡೈರೆಕ್ಟೋರೇಟ್ ಆಫ್ ಮ್ಯಾನ್‌ಪವರ್ ಪ್ಲಾನಿಂಗ್ ಅಂಡ್ ರಿಕ್ರೂಟ್‌ಮೆಂಟ್
ನಾವಲ್ ಹೆಡ್‌ಕ್ವಾರ್ಟರ್ಸ್, ರೂಮ್ ನಂ 204, 'ಸಿ' ವಿಂಗ್, ಸೇನಾ ಭವನ,
ನವದೆಹಲಿ - 110 011.
ಇವರಿಗೆ ಕಳುಹಿಸಬೇಕು.

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-7

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

ವಿಶೇಷಣಗಳು

(ಹಿಂದಿನ ಸಂಚಿಕೆಯಿಂದ)

ಜಾನ್ : ಜಾನಕಿ ಈಗ ನಾವು ಏನು ಕಲಿಯುವುದು?

ಜಾನಕಿ : ನೀ - ಹೇಳಿದ್ದಂಗ ಅಂದರ -Adjective.

ಜಾನ್ : Good girl. ನೀನು ಹೇಳಿದ್ದು ಸರಿ. ಈಗ ನಾನು ಹೇಳಿದನಲ್ಲ "Good girl" ಅಂತ. ಇದರಲ್ಲಿ girl ಇದು Noun- ನಾಮಪದ. ಹಾಗಾದರ good ಇದು ಯಾವ Parts of Speech?

ಜಾನಕಿ : ಬಹುಶಃ ಇದ ವಿಶೇಷಣ, ಯಾಕಂದರ ಹುಡುಗಿ ಹೇಗೆ ಅನ್ನುವುದನ್ನು ಹೇಳ್ತದಲ್ಲ!

ಜಾನ್ : You are intelligent. ಸರಿ. ವಿಶೇಷಣ ಅಂದರ 'ವ್ಯಕ್ತಿ ಪ್ರಾಣಿ, ಸ್ಥಳ, ವಸ್ತು, ಮುಂತಾದ ನಾಮಪದಗಳನ್ನು ವರ್ಣಿಸುವ ಶಬ್ದಕ್ಕೆ ವಿಶೇಷಣ ಎನ್ನುವರು. ಇಂಗ್ಲಿಷದಾಗ ಹೇಳ್ತೇನಿ 'A word **used with noun** to describe or point out the person, animal, place, thing, idea etc.'

ಜಾನಕಿ : ಅಂದ್ರ ನಾಮಪದಕ್ಕೆ ವಿಶೇಷ ಅರ್ಥವನ್ನು ಹಚ್ಚಿ ಹೇಳಿದ್ದಂಗ ಆತಲ್ಲ!

ಜಾನ್ : Right. ಕೆಲವು ಉದಾಹರಣೆಗಳನ್ನು ಹೇಳ್ತೇನೆ, ಬರೆದು ಇಟ್ಟುಕೊ.

i) Janaki is a **clever** girl
ii) Janaki will learn English in a **few** days.
iii) Janaki has **ten** fingers.
iv) Janaki has brought **these** books.

ಜಾನಕಿ : ಹಂಗಾದರ ವಿಶೇಷಣದಾಗ ಎಷ್ಟು ವಿಧಗಳಿವೆ?

ಜಾನ್ : ಸಾಮಾನ್ಯವಾಗಿ ಐದು ಅಂತ ಹೇಳ್ತಾರ.

I) Adjective of Quality - (Descriptive Adjective) **ಗುಣವಾಚಕ**

This shows the kind of quality of a person, or thing....ನಾಮಪದದ ಗುಣವನ್ನು ಎತ್ತಿ ತೋರಿಸುತ್ತದೆ. ಉದಾ:

i) Harishandra was an **honest** man.
ii) Bangalore is a **large** city.
iii) Janaki is a **beautiful** girl.

ಜಾನಕಿ : ಏನೊ! ಜಾನಕಿನ್ನ ಬಿಟ್ಟರ ಬೇರೆ ಹೇಳಾಕ ಆಗುವುದಿಲ್ಲಾ!

ಜಾನ್ : ಈ ರೀತಿ ಹೇಳಿದರ ನೆನಪು ಉಳಿಯುವುದು. ನೋಡು, ನಿನ್ನ ಮುಖ ಹೆಂಗ ಕೆಂಪಾತು. ನೀ ಮರೆಯುವುದಿಲ್ಲ..... ಮುಂದ.

II) Adjectives of Quantity - ಪ್ರಮಾಣ ವಾಚಕ

It shows how much of a thing (Noun) is meant, - ಅಂದ್ರ, ಇದು ಪ್ರಮಾಣವನ್ನು ತೋರಿಸುವುದು. ಉದಾ.

i) Janaki ate **some** rice
ii) You have very **little** patience.
iii) Dharma did not ask **half** of the empire.

ಜಾನಕಿ : ಜಾನಕಿ ಅಕ್ಕಿ ತಿಂತಾಳೇನು?

ಜಾನಕಿ : ಇಲ್ಲ. ಸಾಮಾನ್ಯವಾಗಿ ಅನ್ನ- ಅನ್ನುವುದಕ್ಕೂ rice ಅಂತಾ ಹೇಳ್ತಾರ. ಇನ್ನ 3ನೇ ನಮೂನೆ.

III) Adjective of Number ಅಥವಾ **Numerical Adjective - ಸಂಖ್ಯಾ ವಾಚಕ ವಿಶೇಷಣ**

It shows how many persons, things, ideas are meant, ಉದಾ-

i) Janaki has **two** eyes like lotus.
ii) **Most** boys and **some** girls like Cricket.
iii) Every **second** Saturday is holiday.

ಜಾನಕಿ : **ಸಂಖ್ಯಾವಾಚಕ** ವಿಶೇಷಣದಲ್ಲಿ Some (girls) ಬಂತು ಮತ್ತು **ಗಾತ್ರ ವಾಚಕ**ದಲ್ಲಿ Some (rice) ಬಂತು. ಇದು ಹ್ಯಾಂಗ್?

ಜಾನ್ : ಸರಿಯಾಗಿ ಕೇಳಿದಿ - ಇಂತಹ ಕೆಲವು ಶಬ್ದಗಳನ್ನ (ವಿಶೇಷಣಗಳನ್ನು)**Adjective of Quality** ಮತ್ತು **Numerical Adjective** ಎರಡೂ ಕಡೆ ಉಪಯೋಗಿಸುವರು. ಸಂದರ್ಭನೋಡಿ ತಿಳಿಯಬೇಕು. ಉದಾ.

ಪ್ರಮಾಣವಾಚಕ	**ಸಂಖ್ಯಾವಾಚಕ**
some rice	some boys
any rice	any fruit

(ನಿಷೇಧಾರ್ಥಕ ವಾಕ್ಯದಲ್ಲಿ any ಉಪಯೋಗಿಸುವರು)

ಉದಾ.: I do not eat **any** rice. Are there **any** fruit?

III) Numerical Adjective ದಲ್ಲಿ ಉಪವಿಭಾಗಗಳು ಮೂರು

i) ಖಚಿತ ಸಂಖ್ಯಾವಾಚಕ - One, two, third, Fourth (Definite Numeral Adjectives)

ii) ಅನಿರ್ದಿಷ್ಟ ಸಂಖ್ಯಾವಾಚಕ - some, many, any (Indefinite Numeral Adjectives)

iii) ವಿಂಗಡಿತ ಸಂಖ್ಯಾವಾಚಕ -Each, Every, Either or (Distributive Numeral Adjectives)

ಉದಾ.: i) He brought only **one** lemon.
ii) He brought **some** lemons.
iii) **Each** boy was in uniform.

IV) ಪ್ರಶ್ನಾರ್ಥಕ ವಿಶೇಷಣಗಳು (Interrogative Adjectives) Interrogative pronouns are used with nouns. to ask questions - ಪ್ರಶ್ನೆ ಕೇಳುವಾಗ ನಾಮಪದದ ಜೊತೆ ಪ್ರಶ್ನಾರ್ಥಕ ಸರ್ವನಾಮ ಉಪಯೋಗಿಸುವರು.
ಉದಾ.: i) Which school do you go?
ii) Whose book is this?

ಜಾನಕಿ : ಜಾನ್, ನಿನ್ನ ಗಾಡಿ ಓಡ್ತಾ ಇರೋದನ್ನ ನೋಡಿದರ, ನೀ ಕಲಿಸುವ ಹಂಗ ಕಾಣುವುದಿಲ್ಲ. Goods ಗಾಡಿ ಹಂಗ ಹೋಗ್ತಾ ಇದ್ದಿ. ಒಂದ ರೀತಿಯಾಗಿ....

ಜಾನ್ : Sorry ಜಾನಕಿ, Sorry. ನೀ ಸುಮ್ಮನೆ ಇದ್ದಿ, ಅದಕ್ಕ

ಜಾನಕಿ : ನಿನ್ನ ಉತ್ಸಾಹಕ ಭಂಗ ಬರಬಾರದಂತ......

ಜಾನ್ : ಜಾನಕಿ, Which way you are thinking, ಇಲ್ಲಿ ವಿಶೇಷಣ ಯಾವುದು?

ಜಾನಕಿ : Which, ಇದು ಪ್ರಶ್ನಾರ್ಥಕ ವಿಶೇಷಣ.

ಜಾನ್ : ಸರಿ. ಕೊನೆಯದು

V) ನಿದರ್ಶಕ ವಿಶೇಷಣ (Demonstrative Adjective) This adjective points out which person or thing is meant.
ಉದಾ -This, that, these, such etc.
i) **This** boy is very irregular.
ii) **Such** things are of no use.
iii) **This** year mangoes are not available.
iv) **Those** bandits must be punished.

ಜಾನಕಿ : ಜಾನ್, ಒಂದು problem, ಏನಂದರ fool ಇದು Noun, ಹೌದ ?

ಜಾನ್ : ಹೌದು.

ಜಾನಕಿ : ಹಾಗಾದರ Foolish.

ಜಾನ್ : ಇದು Adjective, ನೀನು ಹೇಳುವುದು ಸರಿ. ಶಬ್ದಗಳ ರೂಪಾಂತರ ಮಾಡುವುದು ಸಹಜ. Noun ದಿಂದ Adjective ಅಥವಾ Verb ದಿಂದ Adjective ಬದಲಾವಣೆ ಮಾಡ ಬಹುದು.

ಜಾನಕಿ : ನಿಲ್ಲಪಾ, ಉದಾಹರಣೆ ಹೇಳ್ತಾ ಹೋಗು.

ಜಾನ್ :

Noun	Adjective
Fool	Foolish
Shame	Shameless
Gold	Golden
Hope	Hopeful

ಮತ್ತೇ ಇದೇ ರೀತಿ ಕ್ರಿಯಾಪದಗಳನ್ನು ವಿಶೇಷಣಕ್ಕೆ ರೂಪಾಂತರಿಸುವುದು.

Verb	Adjective
Talk	Talkative

ಜಾನಕಿ : Just like ಜಾನ್!

ಜಾನ್ : Nice. You are **courageous** girl.

ಜಾನಕಿ : Courageous ಇದರ Noun - Courage, ಹೌದಲ್ಲೊ?

ಕೊನೆಯ ಹನಿ

ಜಾನ್ : ಕೆಲವು Noun ಹೇಳ್ತೇನಿ. Adjective ಪದ ಹೇಳು.
i) Ease ii) Time iii) Cost iv) Child v) Friend.

ಜಾನಕಿ : i) Easy (ii) Timely iii) Costly iv) Childish v) Friendly.

ಜಾನಕಿ : ನೀನು ಹೇಳಿದ್ದು ಸರಿ, Sweet fruit, ಮತ್ತು Sweetest ಹೀಗೆ ಹೇಳ್ತಾರಲ್ಲ.

ಜಾನ್ : ಹೌದು. ನೀ ಹೇಳಿದ್ದು ಸರಿ. ವಿಶೇಷಣಗಳನ್ನು ತುಲನಾತ್ಮಕವಾಗಿ ಅಭ್ಯಾಸ ಮುಂದಿನ ಸಲ ಮಾಡೋಣ.

ಶಬ್ದ ಸಂಪತ್ತು

(A) ಪ್ರತಿ ಶಬ್ದಕ್ಕೆ ೫ ಅರ್ಥಕೊಟ್ಟಿದ್ದು, ಶಬ್ದದ ಸಮಾನಾರ್ಥಪದ ಹುಡುಕಿ, ನಂತರ ಉತ್ತರ ನೋಡಿ.

a. Atrophy - ಅ. ಕೃಶರೋಗ ಬ. ಹೊಂದಿಕೊಂಡು ಕ.ನಾಶವಾಗು ಡ. ತೀವ್ರ ಬದಲಾವಣೆ ಈ. ಅನಾಹುತ

b. Capillary - ಅ.ರಕ್ತವಾಹಿನಿ ಬ. ತುದಿ ಕ.ತಲೆಗೆ ಸಂಬಂಧಿಸಿದ ಡ.ಕೇಶ ಈ.ಕುಗ್ಗಿದ

c. Timbre - ಅ.ವಾದ್ಯದ ತಂತಿ ಬ.ಸಂಗೀತದ ಗುಣ ಕ. ಕಟ್ಟಿಗೆ ಡ. ಎಚ್ಚರಿಕೆ ಈ. ಅನಿರ್ದಿಷ್ಟ

d. Ascetic - ಅ. ವಿರಕ್ತ ಬ.ಸಂಸಾರೊಂದಿಗ ಕ.ಜಲೋದರ ಡ.ಪರ್ವತಾ ರೋಹಿ ಈ.ಜಲವಾಸಿ

e. Unmitigated - ಅ. ಅಶುದ್ಧ ಬ.ಕುಗ್ಗಿಸದಿರು ಕ.ಪರಿಶುದ್ಧ ಡ.ಪ್ರಾಮಾಣಿಕ ಈ.ಅಪ್ರಾಮಾಣಿಕ

f. Germinate - ಅ.ಅಂಕುರಿಸು ಬ.ರೋಗಾಣುಹರಡು ಕ. ಸೂಜಿ ಮದ್ದು ಚುಚ್ಚು ಡ.ರೋಗ ಈ. ತೀವ್ರ ಮುಕ್ತಾಯ

ಉತ್ತರಗಳು:
a. ಅ b.ಅ c. ಬ d. ಅ e. ಬ f. ಅ

(B) ವಿರುದ್ಧಾರ್ಥಪದ ಹುಡುಕಿ, ನಂತರ ಉತ್ತರ ನೋಡಿ.

a. Abandon - ಅ. ತ್ಯಜಿಸು ಬ. ಬಿಟ್ಟು ಕೊಡು ಕ. ಸ್ವೀಕರಿಸು ಡ. ವಾದ್ಯ ಈ. ಹೆಚ್ಚಿಸು.

b. Ability - ಅ. ಶಕ್ತಿ ಬ. ಪರಿಣತ ಕ. ದೌರ್ಬಲ್ಯ ಡ. ಸಾಮರ್ಥ್ಯ ಈ. ಭ್ರಾಂತಿ.

ಉತ್ತರ :
a.ಕ. b.ಡ

- ಸಮಾನಾರ್ಥಪದ - Synonyms
- ವಿರುದ್ಧಾರ್ಥಪದ - Antonyms

ಕೆ.ಪಿ.ಎಸ್.ಸಿ. - ವಿವಿಧ ಉದ್ಯೋಗಾವಕಾಶಗಳು

ಕರ್ನಾಟಕ ಲೋಕಸೇವಾ ಆಯೋಗದ ಅರ್ಜಿ ನಮೂನೆ 1ರಲ್ಲಿ (ಪರಿಷ್ಕೃತ) ಈ ಕೆಳಗೆ ನಮೂದಿಸಿರುವ ವಿವಿಧ ವರ್ಗದ ಹುದ್ದೆಗಳಿಗೆ ದಿನಾಂಕ 17.08.1998ರೊಳಗೆ ಕರ್ನಾಟಕ ಲೋಕಸೇವಾ ಆಯೋಗದ ಕಚೇರಿಗಳಿಗೆ ತಲುಪುವಂತೆ ದ್ವಿಪ್ರತಿಯಲ್ಲಿ ಎಲ್ಲಾ ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಅರ್ಹ ಅಭ್ಯರ್ಥಿಗಳಿಂದ ಆಹ್ವಾನಿಸಲಾಗಿದೆ.

ಪ್ರತ್ರಾಂಕಿತ : 'ಎ' ಗುಂಪಿನ ಹುದ್ದೆಗಳು

1. ಸಹಾಯಕ ವೈಮಾನಿಕ ಮೈಂಟೆನನ್ಸ್ ಇಂಜಿನಿಯರ್ - 01 ಹುದ್ದೆ
2. ಹೋಮಿಯೋಪತಿ ಪ್ರಾಧ್ಯಾಪಕರು - 04 ಹುದ್ದೆಗಳು
3. ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು - 10 ಹುದ್ದೆಗಳು
4. ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು (ಬ್ಯಾಕ್‌ಲಾಗ್) - 01 ಹುದ್ದೆ

ವಿದ್ಯಾರ್ಹತೆ:

1. ಕ್ರ.ಸಂ. 1 ರಲ್ಲಿನ ಹುದ್ದೆಗೆ ಚಾಲ್ತಿಯಲ್ಲಿರುವ ಏರ್‌ಕ್ರಾಫ್ಟ್ ಮೈಂಟೆನನ್ಸ್ ಇಂಜನಿಯರ್ ಲೈಸನ್ಸನ್ನು ಪ್ರವರ್ಗ 'ಎ' 'ಸಿ' ಮತ್ತು 'ಎಕ್ಸ್' ನಲ್ಲಿ ಹೊಂದಿರತಕ್ಕದ್ದು.
2. ಕ್ರ.ಸಂ. 2 ರಲ್ಲಿನ ಹುದ್ದೆಗೆ ಅಂಗೀಕೃತ ವಿಶ್ವ ವಿದ್ಯಾಲಯದ ಹೋಮಿಯೋಪತಿ ಪದವಿ ಅಥವಾ ಹೋಮಿಯೋಪತಿಕ್ ಶಿಕ್ಷಣ ಪರೀಕ್ಷಕರ ಮಂಡಳಿಯವರಿಂದ ಪಡೆದ ಬಿಹೆಚ್‌ಎಂಎಸ್/ಜಿಸಿಇಹೆಚ್ ವಿದ್ಯಾರ್ಹತೆ ಹೊಂದಿದ್ದು ಜೊತೆಗೆ ಮಾನ್ಯತೆ ಪಡೆದಿರುವ ಹೋಮಿಯೋಪತಿಕ್ ಕಾಲೇಜಿನಲ್ಲಿ ಹತ್ತು ವರ್ಷದ ಬೋಧನಾ ಅನುಭವ ಅಗತ್ಯ.
3. ಕ್ರ ಸಂ. 3 ರಲ್ಲಿನ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ತೋಟಗಾರಿಕೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಕನಿಷ್ಠ ದ್ವಿತೀಯ ದರ್ಜೆಯಲ್ಲಿ ಪಾಸಾಗಿರಬೇಕು.
4. ಕ್ರ.ಸಂ. 4 ರಲ್ಲಿನ ಹುದ್ದೆಗೆ ಎಂ. ಎಫ್. ಎಸ್.ಸಿ. ಅಥವಾ ಯಾವುದೇ ಅಂಗೀಕೃತ ಕೃಷಿ ವಿಶ್ವ ವಿದ್ಯಾಲಯದಿಂದ ಪಡೆದ ತತ್ಸಮಾನ ವಿದ್ಯಾರ್ಹತೆ.

ಪತ್ರಾಂಕಿತ 'ಬಿ' ಗುಂಪಿನ ಹುದ್ದೆಗಳು

5. ರಬ್ಬರ್ ಟೆಕ್ನಾಲಜಿ ಉಪನ್ಯಾಸಕರು (ಬ್ಯಾಕ್‌ಲಾಗ್) - 01 ಹುದ್ದೆ
6. ಪ್ಲಾಸ್ಟಿಕ್ ಟೆಕ್ನಾಲಜಿ ಉಪನ್ಯಾಸಕರು (ಬ್ಯಾಕ್‌ಲಾಗ್) - 01 ಹುದ್ದೆ
7. ಹೀಟ್ ಪವರ್ ಟೆಕ್ನಾಲಜಿ ಉಪನ್ಯಾಸಕರು (ಬ್ಯಾಕ್‌ಲಾಗ್) - 01 ಹುದ್ದೆ
8. ಜೂನಿಯರ್ ಪ್ರೋಗ್ರಾಮರ್ (ಬ್ಯಾಕ್‌ಲಾಗ್) - 02 ಹುದ್ದೆ
9. ಸಹಾಯಕ ಇಂಜಿನಿಯರ್‌ಗಳು - 15 ಹುದ್ದೆಗಳು
10. ಹೋಮಿಯೋಪತಿ ವೈದ್ಯಕೀಯ ಕಾಲೇಜು ಉಪನ್ಯಾಸಕರು (ಬ್ಯಾಕ್‌ಲಾಗ್) - 02 ಹುದ್ದೆಗಳು
11. ಔಷಧ ಪರಿವೀಕ್ಷಕರು - 15 ಹುದ್ದೆಗಳು
12. ಹೋಮಿಯೋಪತಿ ಇಲಾಖೆಯಲ್ಲಿ ಉಪನ್ಯಾಸಕರು (ಯುನಾನಿ) (ಬ್ಯಾಕ್‌ಲಾಗ್) - 03 ಹುದ್ದೆಗಳು
13. ಕನ್ಸೋಲ್ ಆಪರೇಟರ್ಸ್ (ಬ್ಯಾಕ್‌ಲಾಗ್) - 02 ಹುದ್ದೆಗಳು
14. ಕಮರ್ಷಿಯಲ್ ಆರ್ಟ್ಸ್ ಉಪನ್ಯಾಸಕರು (ಬ್ಯಾಕ್‌ಲಾಗ್)-01 ಹುದ್ದೆ

ವಿದ್ಯಾರ್ಹತೆ:

5. ಕ್ರ.ಸಂ. 5ರಲ್ಲಿನ ಹುದ್ದೆಗಳಿಗೆ ರಬ್ಬರ್ ತಂತ್ರಜ್ಞಾನದಲ್ಲಿ ಪ್ರಥಮದರ್ಜೆಯ ಇಂಜಿನಿಯರಿಂಗ್ ಸ್ನಾತಕ ಪದವಿ. ಅಖಿಲ ಭಾರತ ಪರೀಕ್ಷೆಗಳಲ್ಲಿ (ಜಿಎಟಿಇ) ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಅರ್ಹತೆ ಪಡೆದಿರಬೇಕು.
6. ಕ್ರ.ಸಂ. 6 ರಲ್ಲಿನ ಹುದ್ದೆಗಳಿಗೆ ಪ್ಲಾಸ್ಟಿಕ್ ಟೆಕ್ನಾಲಜಿಯಲ್ಲಿ ಪ್ರಥಮ ದರ್ಜೆಯ ಇಂಜಿನಿಯರಿಂಗ್ ಸ್ನಾತಕ ಪದವಿ. ಜಿ.ಎ.ಟಿ.ಇ. ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಅರ್ಹತೆ ಹೊಂದಿರಬೇಕು.
7. ಕ್ರ.ಸಂ. 7 ರಲ್ಲಿನ ಹುದ್ದೆಗಳಿಗೆ ಹೀಟ್ ಪವರ್ ಟೆಕ್ನಾಲಜಿಯಲ್ಲಿ ಪ್ರಥಮ ದರ್ಜೆಯ ಇಂಜಿನಿಯರಿಂಗ್ ಸ್ನಾತಕ ಪದವಿ. ಜಿ.ಎ.ಟಿ.ಇ. ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಅರ್ಹತೆ ಪಡೆದಿರಬೇಕು.
8. ಕ್ರ.ಸಂ. 8 ರಲ್ಲಿನ ಹುದ್ದೆಗೆ ಕಂಪ್ಯೂಟರ್ ಸೈನ್ಸ್‌ನಲ್ಲಿ ಇಂಜಿನಿಯರಿಂಗ್ ಅಥವಾ ತತ್ಸಮಾನ ವಿದ್ಯಾರ್ಹತೆ. ಕೆ.ಪಿ.ಎಸ್.ಸಿ. ನಡೆಸುವ ಬಿ ದರ್ಜೆಯ ಪ್ರೋಗ್ರಾಮರ್ಸ್ ಆಪ್ಟಿಟ್ಯೂಡ್ ಟೆಸ್ಟನ್ನು ಪಾಸು ಮಾಡಿರಬೇಕು. ಯಾವುದಾದರೂ ಉತ್ತಮ ಕಂಪನಿಯಲ್ಲಿ ಒಂದು ವರ್ಷದ ಕಾಲ ಕಂಪ್ಯೂಟರ್ ಪ್ರೋಗ್ರಾಮರ್ ಆಗಿ ಕೆಲಸ ಮಾಡಿರುವ ಅನುಭವ ಅತ್ಯಗತ್ಯ.
9. ಕ್ರ.ಸಂ. 9 ರಲ್ಲಿನ ಹುದ್ದೆಗೆ ಸಿವಿಲ್ ಇಂಜಿನಿಯರಿಂಗ್ ಬಿ.ಇ/ಬಿ.ಟೆಕ್ ಪದವಿ.
10. ಕ್ರ.ಸಂ. 10 ರಲ್ಲಿನ ಹುದ್ದೆಗಳಿಗೆ ಮಾನ್ಯತೆ ಹೊಂದಿದ ವಿಶ್ವ ವಿದ್ಯಾಲಯದ ಹೋಮಿಯೋಪತಿ ಪದವಿ ಅಥವಾ ಬಿ.ಹೆಚ್.ಎಂ.ಎಸ್, ಜಿ.ಸಿ.ಇ.ಹೆಚ್. ಅಥವಾ ಎಲ್.ಸಿ. ಇ.ಹೆಚ್. ವಿದ್ಯಾರ್ಹತೆ ಅಥವಾ ನಾಲ್ಕು ವರ್ಷಗಳ ಅವಧಿಯ ಹೋಮಿಯೋಪತಿಕ್ ಡಿಪ್ಲೊಮೊ.
11. ಕ್ರ.ಸಂ. 11 ರಲ್ಲಿನ ಹುದ್ದೆಗಳಿಗೆ ಫಾರ್ಮಸಿ ಶಿಕ್ಷಣದಲ್ಲಿ ಪದವಿ, ಔಷಧದ ತಯಾರಿಕೆಯಲ್ಲಿ ಮೂರುವರ್ಷದ ಅನುಭವ.
12. ಕ್ರ.ಸಂ. 12ರಲ್ಲಿನ ಹುದ್ದೆಗಳಿಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯುನಾನಿ ವಿಷಯದಲ್ಲಿ ಪದವಿ ಅಥವಾ ನಾಲ್ಕು ವರ್ಷದ ಯುನಾನಿ ಡಿಪ್ಲೊಮಾ.
13. ಕ್ರ.ಸಂ. 13ರಲ್ಲಿನ ಹುದ್ದೆಗಳಿಗೆ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಕೆ.ಪಿ.ಎಸ್.ಸಿ ನಡೆಸುವ 'ಬಿ' ದರ್ಜೆಯ ಕನ್ಸೋಲ್ ಆಪರೇಟರ್ಸ್ ಆಪ್ಟಿಟ್ಯೂಡ್ ಟೆಸ್ಟ್ ಪಾಸಾಗಿರಬೇಕು. ಜೊತೆಗೆ ಯಾವುದಾದರೂ ಕಂಪನಿಯಲ್ಲಿ ಕಂಪ್ಯೂಟರ್ ಕನ್ಸೋಲ್ ಆಗಿ 2 ವರ್ಷ ಕೆಲಸ ಮಾಡಿದ ಅನುಭವವಿರಬೇಕು.
14. ಕ್ರ.ಸಂ. 14ರಲ್ಲಿನ ಹುದ್ದೆಗಳಿಗೆ ಕಮರ್ಷಿಯಲ್ ಆರ್ಟ್ಸ್ ಡಿಪ್ಲೊಮೊವನ್ನು ಎರಡನೇ ದರ್ಜೆಯಲ್ಲಿ ಪಾಸಾಗಿರಬೇಕು. ಜೊತೆಗೆ ಮೇಲಿನ ವಿಷಯವನ್ನು ಬೋಧಿಸುವ 5 ವರ್ಷದ ಅನುಭವ ಅಥವಾ ಮೂರುವರ್ಷದ ವೃತ್ತಿ ಅನುಭವ.

ಅಪತ್ರಾಂಕಿತ 'ಸಿ' ಹುದ್ದೆಗಳು	
15. ಏರೋಮಾಡಲಿಂಗ್ ಇನ್ಸ್‌ಟ್ರಕ್ಟರ್ (ಬ್ಯಾಕ್‌ಲಾಗ್)	- 01 ಹುದ್ದೆ
16. ಷಿಪ್ ಮಾಡೆಲಿಂಗ್ ಇನ್ಸ್‌ಟ್ರಕ್ಟರ್ (ಬ್ಯಾಕ್‌ಲಾಗ್)	- 01 ಹುದ್ದೆ
17. ಫಿಸಿಯೋಥೆರಪಿಸ್ಟ್ (ಜನರಲ್)	- 13 ಹುದ್ದೆಗಳು
18. ಜೂನಿಯರ್ ಕೆಮಿಸ್ಟ್	- 16 ಹುದ್ದೆಗಳು
19. ಫಿಸಿಯೋಥೆರಪಿಸ್ಟ್ (ಕುಷ್ಠರೋಗ)	- 24 ಹುದ್ದೆಗಳು
20. ಡೆಂಟಲ್ ಮೆಕ್ಯಾನಿಕ್	- 05 ಹುದ್ದೆಗಳು
21. ಡಯಟಿಷಿಯನ್ಸ್	- 03 ಹುದ್ದೆಗಳು
22. ರೇಖಕರು	- 20 ಹುದ್ದೆಗಳು
23. ಸೋಷಿಯಲ್ ವರ್ಕರ್ಸ್	- 04 ಹುದ್ದೆಗಳು
24. ಸಿಸ್ಟಂ ಅನಾಲಿಸ್ಟ್ (ಬ್ಯಾಕ್‌ಲಾಗ್)	- 02+03 ಹುದ್ದೆಗಳು
25. ಬೆರಳಚ್ಚು ಮತ್ತು ಶೀಘ್ರಲಿಪಿ (ಇಂಗ್ಲಿಷ್)ಯಲ್ಲಿ ಸಹಾಯಕ ಉಪನ್ಯಾಸಕರು (ಬ್ಯಾಕ್‌ಲಾಗ್)	- 02 ಹುದ್ದೆಗಳು
26. ಕಿರಿಯ ಅಭಿಯಂತರರು	- 30 ಹುದ್ದೆಗಳು
27. ಕಿರಿಯ ಅಭಿಯಂತರರು (ವಿದ್ಯುತ್)	- 03 ಹುದ್ದೆಗಳು
28. ಕಮರ್ಷಿಯಲ್ ಪ್ರಾಕ್ಟೀಸ್(ಕನ್ನಡ) ಸಹಾಯಕ ಉಪನ್ಯಾಸಕರು (ಬ್ಯಾಕ್‌ಲಾಗ್)	- 01 ಹುದ್ದೆ
29. ನಗರ ಯೋಜನಾ ಪರ್ಯವೀಕ್ಷಕರು	- 15 ಹುದ್ದೆಗಳು
30. ಕಿರಿಯ ರಸಾಯನತಜ್ಞರು	- 14 ಹುದ್ದೆಗಳು

ವಿದ್ಯಾರ್ಹತೆ:

15. ಕ್ರ.ಸಂ. 15ರಲ್ಲಿನ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ ಅಥವಾ ಏರ್‌ವಿಂಗ್‌ನ 'ಸಿ' ಸರ್ಟಿಫಿಕೇಟ್ ಹೊಂದಿದ ಎಕ್ಸ್-ಕೆಡೆಟ್. ಜೊತೆಗೆ 1 ವರ್ಷದ ಕಾಲ ಟೀಚರ್ / ಇನ್ಸ್‌ಟ್ರಕ್ಟರ್ ಆಗಿ ಏರೋಮಾಡಲಿಂಗ್‌ನಲ್ಲಿ ಕಾರ್ಯ ನಿರ್ವಹಿಸಿದ ಅನುಭವ. ಉತ್ತಮವಾಗಿ ಇಂಗ್ಲಿಷ್ ಬರೆಯಲು ಹಾಗು ಮಾತನಾಡಲು ಬರಬೇಕು.
16. ಕ್ರ.ಸಂ. 16ರಲ್ಲಿನ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ. ಷಿಫ್‌ಮಾಡೆಲ್ಸ್‌ಗಳಲ್ಲಿ ಉಪಯೋಗಿಸುವ ಇಂಜಿನ್‌ಗಳ ಬಗ್ಗೆ ಜ್ಞಾನವಿರಬೇಕು. ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಪ್ರಭುತ್ವ ಪಡೆದಿರಬೇಕು. ITI ಡಿಪ್ಲೊಮಾ ಕಾರ್ಪೆಂಟರಿ ಡ್ರಾಯಿಂಗ್ ಪಡೆದವರಿಗೆ ಅದರಲ್ಲೂ ವಿಶೇಷವಾಗಿ ಷಿಫ್ ಮಾಡೆಲಿಂಗ್‌ನಲ್ಲಿ ಪ್ರಾಯೋಗಿಕ ಅನುಭವವಿದ್ದವರಿಗೆ ಆದ್ಯತೆ.
17. ಕ್ರ.ಸಂ. 17ರಲ್ಲಿನ ಹುದ್ದೆಗಳಿಗೆ ಪಿ.ಯು.ಸಿ (ವಿಜ್ಞಾನ) ಅಥವಾ ತತ್ಸಮಾನ ವಿದ್ಯಾರ್ಹತೆ, ಫಿಸಿಯೋಥೆರಪಿ ವಿಷಯದ ಡಿಪ್ಲೊಮೋ ಹೊಂದಿರಬೇಕು.
18. ಕ್ರ.ಸಂ. 18ರಲ್ಲಿನ ಹುದ್ದೆಗಳಿಗೆ ರಸಾಯನಶಾಸ್ತ್ರದಲ್ಲಿ ಸ್ನಾತಕ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ.
19. ಕ್ರ.ಸಂ. 19ರಲ್ಲಿನ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯ ಜೊತೆಗೆ ಜಿ.ಎಮ್.ಎಲ್.ಎಫ್. ವರ್ಧಾ, ಸಿ.ಎಮ್. ಸಿ. ವೆಲ್ಲೂರು, ಸಿ.ಎಲ್.ಟಿ.ಆರ್.ಐ. ಮದ್ರಾಸ್ ಈ ಸಂಸ್ಥೆಗಳಿಂದ ಫಿಸಿಯೋಥೆರಪಿ ಕೋರ್ಸಿನ ಸರ್ಟಿಫಿಕೇಟ್ ಪಡೆದಿರಬೇಕು.
20. ಕ್ರ.ಸಂ. 20 ರಲ್ಲಿನ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯ ಜೊತೆಗೆ ಡೆಂಟಲ್ ಮೆಕ್ಯಾನಿಕ್ ಸರ್ಟಿಫಿಕೇಟ್ ಪಡೆದಿರಬೇಕು.
21. ಕ್ರ.ಸಂ. 21 ರಲ್ಲಿನ ಹುದ್ದೆಗಳಿಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಹೋಮ್‌ಸೈನ್ಸ್‌ನಲ್ಲಿ ಪದವಿ, ನ್ಯೂಟ್ರಿಷಿಯನ್ ಅಂಡ್ ಡಯಟಿಷಿಯನ್ ವಿಷಯದಲ್ಲಿ ಡಿಪ್ಲೊಮಾ ಪಡೆದವರಿಗೆ ಆದ್ಯತೆ.
22. ಕ್ರ.ಸಂ. 22ರಲ್ಲಿನ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ.ಅಥವಾ ತತ್ಸಮಾನ ವಿದ್ಯಾರ್ಹತೆಯ ಜೊತೆಗೆ ಯಾವುದಾದರೂ ಪಾಲಿಟೆಕ್ನಿಕ್‌ನಿಂದ ಡ್ರಾಫ್ಟ್‌ಮ್ಯಾನ್‌ಶಿಪ್ (ಸಿವಿಲ್)ಸರ್ಟಿಫಿಕೇಟ್.
23. ಕ್ರ.ಸಂ. 23ರಲ್ಲಿನ ಹುದ್ದೆಗಳಿಗೆ ಸಮಾಜಶಾಸ್ತ್ರದಲ್ಲಿ ಪದವಿ ಜೊತೆಗೆ ಸಮಾಜಸೇವೆಯಲ್ಲಿ ಅನುಭವವಿದ್ದರೆ ಆದ್ಯತೆ.
24. ಕ್ರ.ಸಂ. 24ರಲ್ಲಿನ ಹುದ್ದೆಗಳಿಗೆ ವಿಜ್ಞಾನದಲ್ಲಿ ಸ್ನಾತಕ ಪದವಿ ಜೊತೆಗೆ ಕಂಪ್ಯೂಟರ್ ಸಿಸ್ಟಂ ಅನಾಲಿಸ್ಟ್, ಪ್ರೋಗ್ರಾಮರ್ ಕೋರ್ಸಿನ ಪ್ರಮಾಣಪತ್ರವನ್ನು ಹೊಂದಿರಬೇಕು.
25. ಕ್ರ.ಸಂ. 25ರಲ್ಲಿನ ಹುದ್ದೆಗಳಿಗೆ ದ್ವಿತೀಯ ದರ್ಜೆ ವಾಣಿಜ್ಯ ಸ್ನಾತಕ ಪದವಿ. ಜೊತೆಗೆ ಇಂಗ್ಲಿಷ್ ಸೀನಿಯರ್ ಶೀಘ್ರಲಿಪಿ ಹಾಗೂ ಬೆರಳಚ್ಚು ವಿದ್ಯಾರ್ಹತೆ ಅಥವಾ ಕಮರ್ಷಿಯಲ್‌ಪ್ರಾಕ್ಟೀಸ್ (ಇಂಗ್ಲಿಷ್) ಡಿಪ್ಲೊಮಾ ಹೊಂದಿರಬೇಕು.
26. ಕ್ರ.ಸಂ. 26ರಲ್ಲಿನ ಹುದ್ದೆಗಳಿಗೆ ಸಿವಿಲ್ ಇಂಜಿನಿಯರಿಂಗ್ ಡಿಪ್ಲೊಮೊ ಪಾಸಾಗಿರಬೇಕು.
27. ಕ್ರ.ಸಂ. 27ರಲ್ಲಿನ ಹುದ್ದೆಗಳಿಗೆ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಡಿಪ್ಲೊಮೊ ಹೊಂದಿರಬೇಕು.
28. ಕ್ರ.ಸಂ. 28ರಲ್ಲಿನ ಹುದ್ದೆಗಳಿಗೆ ದ್ವಿತೀಯ ದರ್ಜೆ ವಾಣಿಜ್ಯ ಸ್ನಾತಕ ಪದವಿ ಜೊತೆಗೆ ಕನ್ನಡ ಸೀನಿಯರ್ ಶೀಘ್ರಲಿಪಿ ಹಾಗೂ ಬೆರಳಚ್ಚು ವಿದ್ಯಾರ್ಹತೆ ಅಥವಾ ಕಮರ್ಷಿಯಲ್ ಪ್ರಾಕ್ಟೀಸ್ (ಕನ್ನಡ) ಡಿಪ್ಲೊಮೊ ಪಡೆದಿರಬೇಕು.
29. ಕ್ರ.ಸಂ. 29ರಲ್ಲಿನ ಹುದ್ದೆಗಳಿಗೆ. ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮೊ ಅಥವಾ ತತ್ಸಮಾನ ವಿದ್ಯಾರ್ಹತೆ.
30. ಕ್ರ.ಸಂ. 30ರಲ್ಲಿನ ಹುದ್ದೆಗಳಿಗೆ ಫಾರ್ಮಸಿ ಶಿಕ್ಷಣದಲ್ಲಿ ಪದವಿ. ಔಷಧಗಳು ಮತ್ತು ಕಾಂತಿವರ್ಧಕಗಳ ವಿಶ್ಲೇಷಣಾ ಕಾರ್ಯದಲ್ಲಿ ಅನುಭವವಿರುವವರಿಗೆ ಆದ್ಯತೆ.

ಸೂಚನೆ:

ಸರ್ಕಾರಿ ನಿಯಮದಂತೆ ಎಸ್‌ಸಿ/ಎಸ್.ಟಿ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇರುತ್ತದೆ. ಗ್ರಾಮೀಣ ಅಭ್ಯರ್ಥಿಗಳಿಗೆ ಕೃಪಾಂಕವಿರುತ್ತದೆ.

ಎಲ್ಲಾ ಅವಶ್ಯಕ ಮಾಹಿತಿಗಳನ್ನು ತುಂಬಿದ ಅರ್ಜಿಯು 17-08-1997ರೊಳಗೆ **ಕರ್ನಾಟಕ ಲೋಕಸೇವಾ ಆಯೋಗ, ಪಾರ್ಕ್‌ಹೌಸ್, ಬೆಂಗಳೂರು - 560 001.** ಇವರನ್ನು ತಲುಪಬೇಕು. ನೇರವಾಗಿ ಅರ್ಜಿಗಳನ್ನು ಸಲ್ಲಿಸಬಯಸುವವರು ನಿಗದಿತ ಕೊನೆ ದಿನಾಂಕದೊಳಗೆ ಕಾರ್ಯದರ್ಶಿ, ಕೆ.ಪಿ.ಎಸ್.ಸಿ. ಬೆಂಗಳೂರು ಅಥವಾ ಸಹಾಯಕ ಕಾರ್ಯದರ್ಶಿ ಪ್ರಾಂತೀಯ ಕಚೇರಿ ಮೈಸೂರು, ಬೆಳಗಾವಿ, ಗುಲ್ಬರ್ಗಾ ಕಚೇರಿಗಳಿಗೂ ಸಲ್ಲಿಸಬಹುದು. ■

ಅಣ್ಣಾಮಲೈ ವಿಶ್ವವಿದ್ಯಾಲಯವು 1998-99ರ ಶೈಕ್ಷಣಿಕ ವರ್ಷಕ್ಕೆ ಮುಕ್ತ ವಿಶ್ವವಿದ್ಯಾಲಯದ ಪದ್ಧತಿಯಡಿಯಲ್ಲಿ ವ್ಯಾಸಂಗ ಮಾಡಲಿಚ್ಛಿಸುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಈ ಕೆಳಗಿನ ಕೋರ್ಸುಗಳನ್ನು ವ್ಯಾಸಂಗ ಮಾಡಲು ಯಾವುದೇ ಪೂರ್ವ ವಿದ್ಯಾರ್ಹತೆಯನ್ನು ಹೊಂದಿರಬೇಕಾಗಿಲ್ಲ.

1. ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸುಗಳು

ಎಂ.ಎ ಪದವಿ (ಎರಡು ವರ್ಷ)

ಇತಿಹಾಸ, ಸಮಾಜಶಾಸ್ತ್ರ ಅರ್ಥಶಾಸ್ತ್ರ ತಮಿಳು, ಇಂಗ್ಲೀಷ್, ಪಬ್ಲಿಕ್ ಅಡ್ಮಿನಿಸ್ಟ್ರೇಷನ್, ಪಾಪುಲೇಷನ್ ಸ್ಟಡೀಸ್.

ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಬೇಕು.

ಅರ್ಜಿಗಳನ್ನು ಪಡೆಯುವ ಬಗೆ :

ಅರ್ಜಿ ಫಾರಂ ಹಾಗೂ ಪ್ರಾಸ್ಪೆಕ್ಟಸ್(ವಿವರ ಪಟ್ಟಿ)ನ್ನು 50 ರೂಪಾಯಿಗಳ ಕ್ರಾಸ್ಡ್ ಡಿಮ್ಯಾಂಡ್ ಡ್ರಾಫ್ಟ್‌ನ್ನು ಡೈರೆಕ್ಟರ್, ಡಿ.ಡಿ.ಇ. ಅಣ್ಣಾಮಲೈ ಯೂನಿವರ್ಸಿಟಿ, ಇವರ ಹೆಸರಿನಲ್ಲಿ ಪಡೆದು ಸ್ವ ವಿಳಾಸದ ಲಕೋಟೆಗೆ ಸಾಕಷ್ಟು ಅಂಚೆ ಚೀಟಿ ಹಚ್ಚಿ ದಿ ಸ್ಪೆಷಲ್ ಆಫೀಸರ್, ಓಪನ್ ಯೂನಿವರ್ಸಿಟಿ ಸಿಸ್ಟಮ್, ಡೈರಕ್ಟೊರೇಟ್ ಆಫ್ ಡಿಸ್ಟ್ಯಾಂಸ್ ಎಜುಕೇಷನ್, ಅಣ್ಣಾಮಲೈ ಯೂನಿವರ್ಸಿಟಿ, ಅಣ್ಣಾಮಲೈನಗರ - 608 002. ಇವರಿಗೆ ಕಳುಹಿಸಿ

ಗಳಾಗಿದ್ದು ಮುಕ್ತ ವಿಶ್ವವಿದ್ಯಾಲಯ ಪದ್ಧತಿ ಹಾಗೂ ರೆಗ್ಯುಲರ್ ಪದ್ಧತಿಗಳೆರಡಕ್ಕೂ ಅನ್ವಯ ವಾಗುತ್ತದೆ.

ಅರ್ಹತೆ :

ರೆಗ್ಯುಲರ್ ಪದ್ಧತಿ ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಪಾಸುಮಾಡಿರ ಬೇಕು. ಬಿ.ಸಿ.ಎ ಕೋರ್ಸಿಗೆ ಪಿ.ಯು.ಸಿಯಲ್ಲಿ ಮ್ಯಾಥೆಮೆಟಿಕ್ಸ್ ಅಥವಾ ಕಂಪ್ಯೂಟರ್ ಸೈನ್ಸ್ ವಿಷಯವನ್ನು ಅಭ್ಯಸಿಸಿರಬೇಕು.

ಮುಕ್ತ ವಿಶ್ವವಿದ್ಯಾಲಯದ ಪದ್ಧತಿಯಲ್ಲಿ ಅಭ್ಯರ್ಥಿಗಳು 1 ಜುಲೈ 1998ಕ್ಕೆ 18 ವರ್ಷವನ್ನು ಪೂರೈಸಿರಬೇಕು.

ಅಣ್ಣಾಮಲೈ ವಿ.ವಿ., ಪಿ.ಜಿ ಹಾಗೂ ಡಿಗ್ರಿ ಕೋರ್ಸುಗಳಿಗೆ ಅರ್ಜಿ ಆಹ್ವಾನ

ಎಂ.ಕಾಂ. ಕೋ-ಆಪರೇಟಿವ್ ಮ್ಯಾನೇಜ್ ಮೆಂಟ್.

ಮೇಲಿನ ಕೋರ್ಸುಗಳಿಗೆ 01.07. 1998ಕ್ಕೆ 25 ವರ್ಷ ಪೂರೈಸಿದವರು ಮಾತ್ರ ಅರ್ಹರು.

2. ಅಂಡರ್ ಗ್ರಾಜ್ಯುಯೇಟ್ ಕೋರ್ಸುಗಳು

ಬಿ.ಎ. ಡಿಗ್ರಿ (ಮೂರು ವರ್ಷ)

ಇತಿಹಾಸ, ಸೈಕಾಲಜಿ, ಪೊಲಿಟಿಕಲ್ ಸೈನ್ಸ್, ತಮಿಳು, ಸಮಾಜಶಾಸ್ತ್ರ ಅರ್ಥಶಾಸ್ತ್ರ ಇಂಗ್ಲೀಷ್, ಪಾಪುಲೇಶನ್ ಸ್ಟಡೀಸ್,

ಬಿ.ಲಿಟ್ (ತಮಿಳು)

ಬಿ.ಎಸ್ಸಿ (ಮ್ಯಾಥಮೆಟಿಕ್ಸ್)

3. ಡಿಪ್ಲೊಮಾ ಕೋರ್ಸು (ಒಂದು ವರ್ಷ)

ಡಿಪ್ಲೊಮಾ ಇನ್ ಶೈವ ಸಿದ್ಧಾಂಥ.

ಮೇಲಿನ ಎರಡು ಕೋರ್ಸುಗಳಿಗೆ 01.07. 1998ಕ್ಕೆ 18 ವರ್ಷವನ್ನು ಪೂರೈಸಿರು ವವರು ಮಾತ್ರ ಅರ್ಹರು.

ಸ್ಟಡಿ ಸೆಂಟರ್ಸ್ :

ಚೆನ್ನೈ, ತಿರುಚಿ, ಸೇಲಂ, ನಾಗರಕೋಯಿಲ್, ತಿರುನ್‌ವೆಳ್ಳಿ, ವೆಲ್ಲೂರು, ಮಧುರೈ, ಕೊಯ ಮತ್ತೂರು, ಕಾರೈಕುಡಿ, ನ್ಯೂಡೆಲ್ಲಿ, ಕಲ್ಕತ್ತ.

ಆಯ್ಕೆ ವಿಧಾನ:

ಅಭ್ಯರ್ಥಿಗಳು ವಿಶ್ವವಿದ್ಯಾಲಯವು ನಡೆಸುವ

ಅಂಚೆ ಮೂಲಕ ಪಡೆಯಬಹುದು ಅಥವಾ ನೇರವಾಗಿಯೂ ಪಡೆಯಬಹುದು.

ಅರ್ಜಿಗಳನ್ನು ಪಡೆದುಕೊಳ್ಳಲು ಕೊನೆಯ ದಿನಾಂಕ 24.08.1998

ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ 31.08.1998.

ಮದ್ರಾಸ್ ವಿಶ್ವವಿದ್ಯಾಲಯ ಕರೆಸ್ಪಾಂಡೆನ್ಸ್ ಎಜುಕೇಷನ್

1998-99ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶವನ್ನು ಕರೆಯಲಾಗಿದೆ.

ಅಕಾಡೆಮಿಕ್ ವರ್ಷದ ಕೋರ್ಸುಗಳು

ಬಿ.ಎ.

ಇತಿಹಾಸ, ಅರ್ಥಶಾಸ್ತ್ರ, ಸೈಕಾಲಜಿ, ಇಂಡಿಯನ್ ಮ್ಯೂಸಿಕ್, ಕೋ-ಆಪರೇಷನ್, ಕಾರ್ಪೊರೇಟ್ ಸೆಕ್ರೆಟರಿಷಿಪ್, ತಮಿಳು ಮತ್ತು ಇಂಗ್ಲೀಷ್ ಸಾಹಿತ್ಯ.

ಬಿ.ಎಸ್ಸಿ. ಮ್ಯಾಥಮೆಟಿಕ್ಸ್ ಮತ್ತು ಜಿಯಾಗ್ರಫಿ.

ಬಿ.ಕಾಮ್.

ಬಿ.ಬಿ.ಎ., ಬಿ.ಬ್ಯಾಂಕ್ ಮ್ಯಾನೇಜ್‌ಮೆಂಟ್, ಬಿ.ಲಿಟ್ (ತಮಿಳು)

ಬಿ.ಸಿ.ಎ.

ಈ ಕೋರ್ಸುಗಳು ಮೂರು ವರ್ಷದ ಅವಧಿ

ಸ್ನಾತಕೋತ್ತರ ಪದವಿ ಕೋರ್ಸುಗಳು

ಎಂ.ಎ.

ಇತಿಹಾಸ, ಪೊಲಿಟಿಕಲ್ ಸೈನ್ಸ್, ಪಬ್ಲಿಕ್ ಅಡ್ಮಿನಿಸ್ಟ್ರೇಷನ್, ಅರ್ಥಶಾಸ್ತ್ರ, ತಮಿಳು ಮತ್ತು ಇಂಗ್ಲೀಷ್ ಲಿಟರೇಚರ್.

ಎಂ.ಕಾಂ.

ಈ ಸ್ನಾತಕೋತ್ತರ ಪದವಿ ಕೋರ್ಸುಗಳು ಕೇವಲ ರೆಗ್ಯುಲರ್ ಪದ್ಧತಿಯಲ್ಲಿದ್ದು ಅವುಗಳಿಗೆ ಪದವಿಯನ್ನು ಪಡೆದಿರಬೇಕು.

ಕ್ಯಾಲೆಂಡರ್ ವರ್ಷದ ಕೋರ್ಸುಗಳು (1999)

ಮೂರು ತಿಂಗಳ ಸರ್ಟಿಫಿಕೇಟ್ ಕೋರ್ಸ್, ಒಂದು ವರ್ಷದ ಬ್ಯಾಚುಲರ್ ಹಾಗೂ ಒಂದು ವರ್ಷದ ಸ್ನಾತಕೋತ್ತರ ಪದವಿ ಲೈಬ್ರರಿ ಮತ್ತು ಇನ್‌ಫರ್ಮೇಷನ್ ಸೈನ್ಸ್ ಕೋರ್ಸುಗಳು, ಬಿ.ಎಡ್ (2 ವರ್ಷ) ಡಿ.ಕೋರ್ಸ್, 1. ಲೇಬರ್‌ಲಾ 2. ಟ್ಯಾಕ್ಸೇಷನ್ (ಒಂದು ವರ್ಷ), ಎಂ.ಸಿ.ಎ. (ಮೂರು ವರ್ಷಗಳು)

ವಿಶೇಷ ಸೂಚನೆ :

1. ಮೂರು ವರ್ಷದ ಪದವಿ ಕೋರ್ಸುಗಳನ್ನು ಮುಕ್ತ ವಿಶ್ವವಿದ್ಯಾಲಯದ ಪದ್ಧತಿಯಲ್ಲಿ ಮಾಡಲಿಚ್ಛಿಸುವವರಿಗೆ 11. 10. 1998 ರಂದು ಪ್ರವೇಶ ಪರೀಕ್ಷೆಯಿರುತ್ತದೆ.

2. ಬಿ.ಎಡ್ ಕೋರ್ಸುಗಳಿಗೆ ಕೇವಲ ವೃತ್ತಿ ನಿರತ ಟೀಚರ್ಸ್‌ಗಳು ಜೊತೆಗೆ ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವಂತಹ ಶಾಲೆಗಳಲ್ಲಿ ಎರಡು ವರ್ಷದ ಟೀಚಿಂಗ್ ಅನುಭವವನ್ನು ಹೊಂದಿರುವವರು ಅರ್ಹರು.

ಹೆಚ್ಚಿನ ವಿವರಗಳು :

ಪ್ರಾಸ್ಪೆಕ್ಟಸ್ ಹಾಗೂ ಅರ್ಜಿ ಫಾರಂನ್ನು ಪಡೆಯಲು 70/- ರೂಪಾಯಿಗಳ ಕ್ರಾಸ್ಡ್ ಡಿಮ್ಯಾಂಡ್ ಡ್ರಾಫ್ಟನ್ನು ಡೈರೆಕ್ಟರ್, ಇನ್‌ಸ್ಟಿಟ್ಯೂಟ್ ಆಫ್ ಕರೆಸ್ಪಾಂಡೆನ್ಸ್ ಎಜುಕೇಷನ್, ಯೂನಿವರ್ಸಿಟಿ ಆಫ್ ಮದ್ರಾಸ್, ಚೆಪಾಕ್, ಚೆನ್ನೈ - 600 005 ಇವರ ಹೆಸರಿನಲ್ಲಿ ಪಡೆದು ಸಾಕಷ್ಟು ಅಂಚೆ ಚೀಟಿ ಹಚ್ಚಿದ ಲಕೋಟೆಯಿರಿಸಿ ಅಂಚೆ ಮೂಲಕ ಪಡೆದುಕೊಳ್ಳಬಹುದು. ಮುಖ್ಯವಾಗಿ ತಾವು ಬಯಸುವ ಕೋರ್ಸಿನ ಹೆಸರನ್ನು ನಮೂದಿಸತಕ್ಕದ್ದು. ಭರ್ತಿಮಾಡಿದ ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ :

ಅ) ಅಂಡರ್ ಗ್ರ್ಯಾಜ್ಯುಯೇಟ್ ಕೋರ್ಸುಗಳಿಗೆ

ಮುಕ್ತ ವಿಶ್ವವಿದ್ಯಾಲಯದ ಪದ್ಧತಿ **14.08.1998**

ರೆಗ್ಯುಲರ್ ಪದ್ಧತಿ **18.09.1998**

ಆ) ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ **16.10.1998**

ಇ) ಕ್ಯಾಲೆಂಡರ್ ವರ್ಷದ ಕೋರ್ಸುಗಳು **30.10.1998**

ಎ.ಎಮ್.ಐ.ಇ ವಿದ್ಯಾರ್ಥಿಗಳಿಗೆ ಕೋಚಿಂಗ್ ಸೌಲಭ್ಯ

ವಿಂಟರ್-98 ಎ.ಎಮ್.ಐ.ಇ. (AMIE) ಪರೀಕ್ಷೆಗಳಿಗೆ ಹಾಜರಾಗುತ್ತಿರುವ ಸೆಕ್ಷನ್ 'ಎ' ಹಾಗೂ ಸೆಕ್ಷನ್ 'ಬಿ' ವಿದ್ಯಾರ್ಥಿಗಳಿಗೆ 'ಇಂಜಿನಿಯರ್ಸ್ ಸ್ಟಡಿ ಸರ್ಕಲ್' ಎಂಬ ಸಂಸ್ಥೆ ಕೋಚಿಂಗ್ ಕ್ಲಾಸುಗಳನ್ನು ವಾರದ ದಿನಗಳಲ್ಲಿ ಸಂಜೆ 6.15 ರಿಂದ 8.30 ರವರೆಗೆ ನಡೆಸುತ್ತಿದೆ. ತರಗತಿಗಳು ಆಡಿಯೋ ವಿಶುಯಲ್ ಮತ್ತು ಕಂಪ್ಯೂಟರೈಸ್ಡ್ ನೋಟ್ಸ್‌ಗಳನ್ನು ಒಳಗೊಂಡಿರುತ್ತದೆ. ಆಸಕ್ತ ವಿದ್ಯಾರ್ಥಿಗಳು ಕೋರ್ಸ್ ಕೋ- ಆರ್ಡಿನೇಟರ್, ಶಬರಿ ಕಾಂಪ್ಲೆಕ್ಸ್, 24, ರೆಸಿಡೆನ್ಸಿ ರಸ್ತೆ, ಬೆಂಗಳೂರು ಅಥವಾ ದೂರವಾಣಿ ಸಂಖ್ಯೆ 5595849/ 5304039 ಇವರನ್ನು ಸಂಪರ್ಕಿಸಬಹುದು.

ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ

ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಶಾಖೆಗಳು ದೇಶದ ಪ್ರಮುಖ ಪಟ್ಟಣಗಳಲ್ಲಿ ಮಾತ್ರ ಇವೆ. ಅಂದರೆ ಬೆರಳೆಣಿಕೆಯಷ್ಟು ಶಾಖಾ ಕಛೇರಿಗಳು ಇವೆ. ಇವುಗಳಲ್ಲಿ ಸಹ ನೇಮಕಾತಿ ಮಾಡಿಕೊಳ್ಳುವಾಗ ಬ್ಯಾಂಕಿಂಗ್ ಸೇವಾ ನೇಮಕಾತಿಯ ನಿಯಮಗಳನ್ನು ಹೆಚ್ಚಾಗಿ ಅನುಸರಿಸಲಾಗುತ್ತದೆ.

ಈ ನೇಮಕಾತಿಯಲ್ಲಿ ಗುಮಾಸ್ತ ಹುದ್ದೆಯೊಂದಿಗೆ ಕಾಯಿನ್ ಆ್ಯಂಡ್ ನೋಟ್ ಎಕ್ಸಾಮಿನರ್ ಎಂಬ ಹುದ್ದೆಗಳೂ ಇರುತ್ತವೆ. ಇಲ್ಲಿ ಕೂಡ ಗಣಿತ ಹಾಗೂ ಸಾಮಾನ್ಯ ಜ್ಞಾನಗಳು ಹೆಚ್ಚು ಪ್ರಯೋಜನಕಾರಿ.

ರೈಲ್ವೆ ಇಲಾಖೆಯಲ್ಲಿ ಉದ್ಯೋಗಾವಕಾಶ

ರೈಲ್ವೆ ನೇಮಕಾತಿ ಮಂಡಳಿ, ಸೌತ್ ಲಲ್ಲಾಗುಡಾ, ಸಿಕಂದರಾಬಾದ್ ಇವರು ಸೌತ್ ಸೆಂಟ್ರಲ್ ರೈಲ್ವೆಯಲ್ಲಿರುವ ಉದ್ಯೋಗಾವಕಾಶಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆದಿದ್ದಾರೆ.

ಹುದ್ದೆಗಳು

1. ಸೀನಿಯರ್ ಕ್ಲರ್ಕ್
2. ಎನ್‌ಕ್ವಯಿರಿ-ಕಮ್-ರಿಸರ್ವೇಶನ್ ಕ್ಲರ್ಕ್

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 01.08.98ಕ್ಕೆ 18 ರಿಂದ 30 ವರ್ಷದೊಳಗಿರಬೇಕು. ಎಸ್.ಸಿ/ ಎಸ್.ಟಿ/ ಒಬಿಸಿ/ ಎಕ್ಸ್ ಸರ್ವೀಸ್ ಮ್ಯಾನ್ ಇವರಿಗೆ ಸರಕಾರಿ ನಿಯಮದಂತೆ ವಯಸ್ಸಿನ ಸಡಿಲಿಕೆ ಇದೆ.

ವಿದ್ಯಾರ್ಹತೆ :

1ನೇ ಕೆಟಗರಿ ಹುದ್ದೆಗಳಿಗೆ ಅಂಗೀಕೃತ ವಿಶ್ವವಿದ್ಯಾಲಯದ ಪದವಿ.

2ನೇ ಕೆಟಗರಿ ಹುದ್ದೆಗಳಿಗೆ ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಜೊತೆಗೆ ಟೈಪರೇಟಿಂಗ್ 30 W.P.M (ಇಂಗ್ಲೀಷ್) ಅಥವಾ 25 W.P.M (ಹಿಂದಿ)ನ ಸಾಮರ್ಥ್ಯ.

ಪರೀಕ್ಷಾ ಶುಲ್ಕ :

30 ರೂಪಾಯಿಗಳ ಕ್ರಾಸ್ಡ್ ಪೋಸ್ಟಲ್ ಆರ್ಡರ್‌ನ್ನು "ಅಸಿಸ್ಟೆಂಟ್ ಸೆಕ್ರೆಟರಿ, ರೈಲ್ವೆ ರಿಕ್ರ್ಯೂಟ್‌ಮೆಂಟ್ ಬೋರ್ಡ್, ಸಿಕಂದರಾಬಾದ್" ಇವರ ಹೆಸರಿನಲ್ಲಿ ಪಡೆದು ಅರ್ಜಿಯ ಜೊತೆಯಲ್ಲಿ ಲಗತ್ತಿಸಿ ಕಳುಹಿಸಬೇಕು. ಪೋಸ್ಟಲ್ ಆರ್ಡರ್‌ನ ಹಿಂಬದಿಯಲ್ಲಿ ಅಭ್ಯರ್ಥಿಯು ತನ್ನ ಹೆಸರು, ಪೂರ್ಣವಿಳಾಸ, ಕೆಟಗರಿ ನಂ ಎಲ್ಲವನ್ನೂ ಸ್ಫುಟವಾಗಿ ಬರೆದಿರಬೇಕು.

ಎಸ್.ಸಿ./ಎಸ್.ಟಿ. ಹಾಗೂ ಎಕ್ಸ್-ಸರ್ವೀಸ್ ಮ್ಯಾನ್ ಇವರಿಗೆ ಪರೀಕ್ಷಾ ಶುಲ್ಕ ಇರುವುದಿಲ್ಲ.

ಇನ್ನಿತರ ವಿವರ :

ಭರ್ತಿ ಮಾಡಿದ ಅರ್ಜಿಯ ಜೊತೆಗೆ ಎರಡು ಇತ್ತೀಚಿನ ಭಾವಚಿತ್ರಗಳಲ್ಲಿ (ಅವುಗಳ ಮೇಲೆ ಸಹಿಮಾಡಿರಬೇಕು) ಒಂದನ್ನು ಅರ್ಜಿ ಫಾರಂಗೆ ಅಂಟಿಸಿ ಮತ್ತೊಂದನ್ನು ಅರ್ಜಿಫಾರಂಗೆ ಲಗತ್ತಿಸಬೇಕು.

ನಿಮ್ಮ ವಿದ್ಯಾರ್ಹತೆಯನ್ನು ದೃಢೀಕರಿಸುವ ನಕಲು ಅಂಕಪಟ್ಟಿಗಳ ಜೊತೆಗೆ ಎರಡು ಸ್ವವಿಳಾಸದ ಅಂಚೆ ಲಕೋಟೆ ಇಡಬೇಕು.

ಯಾವುದೇ ಕಾರಣಕ್ಕೂ ನಿಮ್ಮ ವಿದ್ಯಾರ್ಹತೆಗೆ ಸಂಬಂಧಿಸಿದ ಒರಿಜಿನಲ್ ಅಂಕ ಪಟ್ಟಿಗಳನ್ನು ಕಳುಹಿಸಬಾರದು.

ಕೊನೆ ದಿನಾಂಕ

ಭರ್ತಿ ಮಾಡಿದ ನಿಗದಿತ ನಮೂನೆಯ ಅರ್ಜಿ ಫಾರಂಗಳು 13.08.1998ರೊಳಗೆ ಆರ್ಡಿನರಿ ಪೋಸ್ಟ್‌ನಲ್ಲಿ ***"ಅಸಿಸ್ಟೆಂಟ್ ಸೆಕ್ರಟರಿ, ರೈಲ್ವೆ ರಿಕ್ರ್ಯೂಟ್‌ಮೆಂಟ್ ಬೋರ್ಡ್ ಲಲ್ಲಾಗುಡಾ, ಸಿಕಂದರಾಬಾದ್ - 560 017"*** *ಇವರನ್ನು ತಲುಪಬೇಕು.*

ಉದ್ಯೋಗಪರ ಪದವಿ ಶಿಕ್ಷಣ

ಪ್ರತಿವರ್ಷ 35 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪಡೆದು ಹೊರಬರುತ್ತಾರೆ. ಆದರೆ ಕೇವಲ 5 ಲಕ್ಷ ವಿದ್ಯಾರ್ಥಿಗಳು ಮಾತ್ರ ಸಂಘಟಿತ ಕ್ಷೇತ್ರಗಳಲ್ಲಿ ಉದ್ಯೋಗ ಪಡೆಯುತ್ತಾರೆ. ಇನ್ನುಳಿದವರ ಪಾಡೇನು?

ಪದವಿ ಶಿಕ್ಷಣವು ಉಚ್ಚ ಶಿಕ್ಷಣದ ಮೊದಲ ಭಾಗ. ಸ್ವಾತಂತ್ರ್ಯಾನಂತರ ಶಿಕ್ಷಣದ ಕ್ರಮಗಳು ವ್ಯಾಪಕಗೊಂಡಿವೆ. ಅಂತೆಯೇ ಸಾಕ್ಷರತೆಯ ಪ್ರಮಾಣವು 52%ಕ್ಕೇರಿದೆ. ಶಾಲೆ ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿದೆ. ಉಚ್ಚ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೇಶದಲ್ಲಿ 220ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಿವೆ. ಅವುಗಳಡಿಯಲ್ಲಿ 7000ಕ್ಕೂ ಹೆಚ್ಚು ಕಾಲೇಜುಗಳು ಕಾರ್ಯಮಾಡುತ್ತಿವೆ. ಭಾರತದಲ್ಲಿ ಜಗತ್ತಿನಲ್ಲಿಯೇ ಎರಡನೇ ದೊಡ್ಡ ಉಚ್ಚ ಶಿಕ್ಷಣ ವ್ಯವಸ್ಥೆ. ಆದರೂ ಈಗ ದೇಶದಲ್ಲಿಯ 18 ರಿಂದ 23 ವಯಸ್ಸಿನ ಕೇವಲ 6% ರಷ್ಟು ಜನರಿಗೆ ಮಾತ್ರ ಉಚ್ಚ ಶಿಕ್ಷಣವು ದೊರೆಯುತ್ತಿದೆ. ಇದಕ್ಕಾಗಿ ಸರಕಾರವು ಬಹಳಷ್ಟು ವೆಚ್ಚ ಮಾಡುತ್ತಿದೆ. ಇದರ ಮೇಲೆ ಮಾಡುವ ವೆಚ್ಚವು 18% ರಿಂದ 44%ಕ್ಕೇರಿದೆ. ಉಚ್ಚ ಶಿಕ್ಷಣಕ್ಕೆ ಸರಕಾರವು ಸಬ್ಸಿಡಿಯನ್ನು ಕೊಡುತ್ತದೆ. ಇದರಿಂದಾಗಿ ಅಲ್ಲಿಯ ವಿದ್ಯಾರ್ಥಿಯು ಶೇ. 5ರಷ್ಟು ವೆಚ್ಚವನ್ನು ಮಾತ್ರ ಭರಿಸುತ್ತಾನೆ. ಇಷ್ಟೆಲ್ಲ ವೆಚ್ಚ ಮಾಡಿ ನಾವು ಸಾಧಿಸಿದ್ದೇನು? ನಮ್ಮ ವಿಶ್ವವಿದ್ಯಾಲಯಗಳು ಅವಶ್ಯಕತೆಗಿಂತಲೂ ಹೆಚ್ಚಿನ ಪದವೀಧರರನ್ನು ಸೃಷ್ಟಿಸುತ್ತಿವೆ. ಪ್ರತಿವರ್ಷ 35 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪಡೆದು ಹೊರಬರುತ್ತಾರೆ. ಆದರೆ ಕೇವಲ 5 ಲಕ್ಷ ವಿದ್ಯಾರ್ಥಿಗಳು ಮಾತ್ರ ಸಂಘಟಿತ ಕ್ಷೇತ್ರಗಳಲ್ಲಿ ಉದ್ಯೋಗ ಪಡೆಯುತ್ತಾರೆ. ಇನ್ನುಳಿದವರ ಪಾಡೇನು? ಹೀಗಾಗಿಯೆ ಪ್ರತಿವರ್ಷ ಪದವೀಧರ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಿದೆ. ಒಟ್ಟಿನಲ್ಲಿ ನಮ್ಮ ಉಚ್ಚ ಶಿಕ್ಷಣವು ವಿದ್ಯಾರ್ಥಿಗಳ ಬದುಕಿಗೆ ಮತ್ತು ಸರಕಾರದ ಖಜಾನೆಗೆ ಹೊರೆಯಾಗುತ್ತಿದೆ. ಅಂತೆಯೆ ಇದೇ ಮೇ ತಿಂಗಳಲ್ಲಿ ಸರಕಾರದ ಹಣಕಾಸು ಇಲಾಖೆ ಹೊರಡಿಸಿದ 'ಭಾರತದಲ್ಲಿ ಸರಕಾರದ ಸಹಾಯಧನ' ಎಂಬ ಪರಿಪತ್ರದಲ್ಲಿ ಉಚ್ಚ ಶಿಕ್ಷಣವನ್ನು ಅರ್ಹವಲ್ಲದ (non merit) ಸೇವೆ ಎಂದು ಗುರ್ತಿಸಲಾಗಿದೆ. ದೇಶದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಉಚ್ಚ ಶಿಕ್ಷಣದ ಕೊಡುಗೆಯನ್ನು ಅಲಕ್ಷಿಸಲಾಗಿದೆಯೆಂದು ಭಾರತೀಯ ವಿಶ್ವವಿದ್ಯಾಲಯಗಳ ಸಂಘವು ಅದಕ್ಕೆ ಪ್ರತಿಕ್ರಿಯಿಸಿದೆ. ಇವೆಲ್ಲ ಗೊಂದಲಗಳಿಗೆ ಕಾರಣವೇನು? ಪದವಿ ಶಿಕ್ಷಣವು ವಿದ್ಯಾರ್ಥಿಗಳ ಮುಂದಿನ ಬದುಕಿಗೆ ಪೂರಕವಾಗುತ್ತಿಲ್ಲ, ಜೀವನ ನಿರ್ವಹಣೆಗೆ ಸಹಾಯ ಮಾಡುತ್ತಿಲ್ಲ. ಇದನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯು.ಜಿ.ಸಿ) ಈಗ ಅರ್ಥ ಮಾಡಿಕೊಂಡಿದೆ. ಈ ತಪ್ಪನ್ನು ಸರಿಪಡಿಸುವತ್ತ ಅದು ಪ್ರಯತ್ನ ಪ್ರಾರಂಭಿಸಿದೆ.

ಪದವಿ ಶಿಕ್ಷಣವನ್ನು ಉದ್ಯೋಗಪರ ಮಾಡುವತ್ತ ಯು.ಜಿ.ಸಿಯು ಈಗ ಕಾರ್ಯ ಪ್ರಾರಂಭಿಸಿದೆ. ಶಿಕ್ಷಣ ಸುಧಾರಣೆಯಲ್ಲಿ ಇದೊಂದು ಮೈಲಿಗಲ್ಲು. ಪದವಿ ಶಿಕ್ಷಣವು ಅರ್ಥಪೂರ್ಣವಾಗಬೇಕಾದರೆ ಅದು ಮೂರು ರೀತಿಯಿಂದ ವಿದ್ಯಾರ್ಥಿಗೆ ಸಹಾಯಕವಾಗಬೇಕು

- ಜ್ಞಾನ ಸಂಗ್ರಹಿಸಲು
- ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಮತ್ತು
- ಪದವಿಯ ನಂತರ ವಿದ್ಯಾರ್ಥಿಯು ಉತ್ಪಾದಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತಹ ಶಕ್ತಿ ಪಡೆಯಲು

ಈ ಮೂರು ಗುಣವನ್ನು ವಿದ್ಯಾರ್ಥಿಗಳಲ್ಲಿ ತುಂಬುವ ಪ್ರಯತ್ನವನ್ನು ನಾವು ಮಾಡಿಲ್ಲ. ಈ ಕೊರತೆಯನ್ನು ಕೆಲಮಟ್ಟಿಗಾದರೂ ತುಂಬಿಕೊಳ್ಳುವ ಪ್ರಯತ್ನವನ್ನು ಈಗ ಯು.ಜಿ.ಸಿ. ಮಾಡಲು ಪ್ರಾರಂಭಿಸಿದೆ. ಇಲ್ಲಿಯವರೆಗೆ ಅದು ತನ್ನ ಸುಧಾರಣೆಗಳನ್ನು ಪದವಿ ನಂತರ ಮತ್ತು ಸಂಶೋಧನಾ ಕ್ಷೇತ್ರಕ್ಕೆ ಕೇಂದ್ರೀಕರಣಗೊಳಿಸಿತ್ತು. ಪದವಿ ಶಿಕ್ಷಣವನ್ನು ವಿಶ್ವವಿದ್ಯಾಲಯಗಳಿಗೆ ಮತ್ತು ರಾಜ್ಯ ಸರಕಾರಗಳಿಗೆ ಬಿಟ್ಟು ಕೊಡಲಾಗಿತ್ತು. ಇದರಿಂದಾಗಿಯೇ ಸ್ಥಿತಿ ಗಂಭೀರಗೊಂಡಿತು. ಈಗಲಾದರೂ ಅದು ಎಚ್ಚರವಾಗಿ, ಪದವಿ ಶಿಕ್ಷಣವನ್ನು ಉದ್ಯೋಗಪರ ಮಾಡುವತ್ತ ಗಮನ ಹರಿಸುತ್ತಿದೆಯೆಂಬುದು ನೆಮ್ಮದಿಯ ಸಂಗತಿ.

ಪದವಿ ಶಿಕ್ಷಣದಲ್ಲಿ ವೃತ್ತಿಪರ ಗುಣ ತುಂಬಲು ಈಗ ಯು.ಜಿ.ಸಿ ನಿರ್ಧರಿಸಿದೆ. ಮೊದಲು ಕೆಲವು ಪದವಿ ಕೋರ್ಸುಗಳನ್ನಾದರೂ ವೃತ್ತಿಪರ ಮಾಡಲು ಯೋಜಿಸಲಾಗಿದೆ. 1994ರಲ್ಲಿಯೇ ಇದು ಕಾರ್ಯರೂಪಕ್ಕೆ ಬಂದಿದೆ. ಈ ಪುನರ್‌ರಚಿತ ಮಾದರಿಯ ಉದ್ಯೋಗಪರ ಪ್ರಥಮ ಪದವಿ ಶಿಕ್ಷಣವನ್ನು 25 ವಿಶ್ವವಿದ್ಯಾಲಯಗಳಲ್ಲಿ 1994ರ ಶಾಲಾ ವರ್ಷದಿಂದ ಪ್ರಾರಂಭಿಸಲಾಯಿತು. ನಂತರ ಇನ್ನುಳಿದ ಮಾನ್ಯತೆ ಪಡೆದ ಎಲ್ಲ ವಿಶ್ವವಿದ್ಯಾಲಯಗಳಿಗೆ ವಿಸ್ತರಿಸಲಾಗಿದೆ. ಈ ಶಿಕ್ಷಣದ ಮೊದಲ ಉದ್ದೇಶವೆಂದರೆ ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ವಿಷಯದ ಬಗ್ಗೆ ಸೈದ್ಧಾಂತಿಕ ಜ್ಞಾನ ಮತ್ತು ಪ್ರಾಯೋಗಿಕ ತರಬೇತಿಯನ್ನು ಕೊಡುವುದು. ಇದರಿಂದ ಪದವಿಯ ನಂತರ ಉದ್ಯೋಗ ಮಾಡಲು ಅನುಕೂಲವಾಗುತ್ತದೆ. ಈ ಹೊಸ ವ್ಯವಸ್ಥೆಯ ಪ್ರಕಾರ, ಸಾಂಪ್ರದಾಯಕ ಪದವಿ ಶಿಕ್ಷಣದ ವಿಷಯಗಳ ಬದಲಾಗಿ ಉದ್ಯೋಗಪರ ಅಭ್ಯಾಸವಿರುವ ವಿಷಯಗಳನ್ನು ಪಠ್ಯಕ್ರಮದಲ್ಲಿ ಕೂಡಿಸಲಾಗಿದೆ. ಇಂಥ ಸುಮಾರು 35 ವಿಷಯಗಳನ್ನು ಗುರ್ತಿಸಿ ಆಯ್ಕೆ ಮಾಡಲಾಗಿದೆ. ಇದರಲ್ಲಿ ಯಾವ ವಿಷಯಗಳನ್ನು ಆಯ್ದುಕೊಳ್ಳಬೇಕೆಂಬುದನ್ನು ಆ ಕಾಲೇಜುಗಳಿಗೆ ಬಿಡಲಾಗಿದೆ. ಕಾಲೇಜುಗಳಲ್ಲಿ ವಿಷಯ ಕಲಿಸುವ ವ್ಯವಸ್ಥೆ ಮತ್ತು ಆಯಾ ಪ್ರದೇಶದಲ್ಲಿಯ ಆರ್ಥಿಕ ಚಟುವಟಿಕೆಗಳನ್ನವಲಂಬಿಸಿ ಈ ಆಯ್ಕೆ ನಡೆಯುವುದು.

ಶಿಕ್ಷಣ ಕ್ರಮದಲ್ಲಿ ಬದಲಾವಣೆಗಳನ್ನು ಮಾಡಿದಾಗ ಸಮಾಜದ ಅನೇಕ ಭಾಗಗಳಿಂದ ಟೀಕೆ ಟಿಪ್ಪಣಿಗಳು ಬರುವುದು ಸಹಜ. ಹೊಸ ಕ್ರಮವು ದೋಷಪೂರಿತವಾಗಿದ್ದರೆ ಅದು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರಬಹುದು. ಆದ್ದರಿಂದಲೇ ಈ ಹೊಸ ಕ್ರಮವನ್ನು ಪ್ರಾರಂಭಿಸುವ ಪೂರ್ವದಲ್ಲಿಯೇ ಅದರಲ್ಲಿ ನುಸುಳಬಹುದಾದ ದೋಷಗಳನ್ನು ನಿವಾರಿಸಲು ಯೋಜಿಸಲಾಗಿದೆ. ಅದಕ್ಕಾಗಿ ಯು.ಜಿ.ಸಿಯು ಈ ಕ್ರಮಗಳನ್ನು ರೂಪಿಸಿದೆ.

- ಕಾಲೇಜಿನಲ್ಲಿ ಈಗಿರುವ ಪ್ರಥಮ ಪದವಿ

ಕೋರ್ಸನ್ನು ಪುನರ್ರಚಿಸಲು ಮಾತ್ರ ಹಣಕಾಸು ಸಹಾಯ ಕೊಡಲಾಗುವುದು. ಹೊಸ ಪದವಿ ಕೋರ್ಸು ಪ್ರಾರಂಭಕ್ಕೆ ಈ ನೆರವು ಅನ್ವಯಿಸುವುದಿಲ್ಲ.

- ಹೊಸ ಪದವಿ ಶಿಕ್ಷಣವು ಅಂತಿಮ ರೂಪದ್ದು. ಪದವಿ ನಂತರ ಬೇಗನೆ ಉತ್ಪಾದಕ ಉದ್ಯೋಗದಲ್ಲಿ ತೊಡಗಲು ಸಾಧ್ಯವಾಗುತ್ತದೆ. ಉದ್ಯೋಗಕ್ಕೆ ಬೇಕಾಗುವ ಕುಶಲತೆ ಮತ್ತು ಸಾಮರ್ಥ್ಯವನ್ನು ತುಂಬುವುದಕ್ಕೆ ಪ್ರಾಶಸ್ತ್ಯ ಕೊಡಲಾಗುವುದು.
- ಕಾಲೇಜಿನೊಳಗೆ ಮತ್ತು ಹೊರಗೆ ಪ್ರಾಯೋಗಿಕ ತರಬೇತಿ ಮತ್ತು ಕಾರ್ಯಾನುಭವಕ್ಕೆ ಹೆಚ್ಚಿನ ಮಹತ್ವ
- ಉದ್ಯೋಗ ಪರ ವಿಷಯವನ್ನು ಕಲಿಸಲು ಈಗಿರುವ ಶಿಕ್ಷಕರು ಸಮರ್ಥರಾಗಿರಲಿಕ್ಕಿಲ್ಲ. ಕಾರಣ ವಿಶೇಷ ಪರಿಣತಿ ಪಡೆದ ಹೊರಗಿನವರ ಸೇವೆಯನ್ನು ಪಡೆಯಲು ಕಾಲೇಜುಗಳಿಗೆ ಸ್ವಾತಂತ್ರ್ಯವನ್ನು ಕೊಡಲಾಗಿದೆ. ಇದು ಈ ವ್ಯವಸ್ಥೆಯಲ್ಲಿಯ ಹೊಸ ಸಂಗತಿ. ಇದರಿಂದಾಗಿ ಶಿಕ್ಷಕರಲ್ಲಿರುವ ವಿಷಯಜ್ಞಾನ ಮತ್ತು ಪ್ರಾಯೋಗಿಕ ಜ್ಞಾನಗಳಲ್ಲಿರುವ ಅಂತರವನ್ನು ತುಂಬಿದಂತಾಗುತ್ತದೆ.
- ಇನ್ನೊಂದು ಹೊಸ ಸಂಗತಿಯೆಂದರೆ ಸಮೀಪದಲ್ಲಿರುವ ಔದ್ಯಮಿಕ ಮತ್ತು ವಾಣಿಜ್ಯ ಘಟಕಗಳ ಜೊತೆಗೆ ಕಾಲೇಜು ನಿಕಟ ಸಂಪರ್ಕ ಹೊಂದಿರಬೇಕು. ಇಂಥ ಸಂಸ್ಥೆಗಳ ಅರ್ಹ ವ್ಯಕ್ತಿಗಳನ್ನು ಬೋಧನೆಗಾಗಿ ಆಹ್ವಾನಿಸಬಹುದು. ವಿದ್ಯಾರ್ಥಿಗಳನ್ನು ಪ್ರಾಯೋಗಿಕ ತರಬೇತಿಗಾಗಿ ಅಲ್ಲಿಗೆ ಕಳಿಸಬಹುದು. ಪದವಿ ಮುಗಿಸಿದ ವಿದ್ಯಾರ್ಥಿಗಳು ಅಲ್ಲಿ ಉದ್ಯೋಗ ಪಡೆಯಬಹುದು. ಕಾಲೇಜು ಮತ್ತು ಉದ್ಯಮ ಸಂಸ್ಥೆಗಳಲ್ಲಿ ಮಧುರ ಬಾಂಧವ್ಯ ಸಾಧ್ಯವಾಗುತ್ತದೆ. ಇದು ಇಬ್ಬರಿಗೂ ಒಳ್ಳೆಯದು.

ಇಡೀ ದೇಶದಲ್ಲೀಗ ಪದವಿ ಕೋರ್ಸುಗಳನ್ನು ಸುಮಾರು 7000 ಕಾಲೇಜುಗಳಲ್ಲಿ ಕಲಿಸಲಾಗುತ್ತಿದೆ. ಈ ಸಂಖ್ಯೆ ಚಿಕ್ಕದೇನಲ್ಲ. ಎಲ್ಲ ಕಾಲೇಜುಗಳಲ್ಲಿ ಹೊಸ ಉದ್ಯೋಗಪರ ಪದವಿ ಕ್ರಮವನ್ನು ಪ್ರಾರಂಭಿಸುವುದು ಸುಲಭದ ಮಾತಲ್ಲ. ಕಾರಣ ಯು.ಜಿ.ಸಿ.ಯು ಮೊದಲ 5 ವರ್ಷಗಳಲ್ಲಿ ಕೇವಲ 10%ರಷ್ಟು ಕಾಲೇಜುಗಳಲ್ಲಿ ಮಾತ್ರ ಇದನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಈ ಯೋಜನೆಯಿಂದಾಗಿ ಉದ್ಯೋಗ ಪೇಟೆಗೆ ಸರಿಹೊಂದುವ ಪದವೀಧರರು ಸಿದ್ಧಗೊಂಡರೆ ಅದು ಯಶಸ್ವಿಯಾದಂತೆ. ಆಗ ಭಾರತೀಯ ಪದವಿ ಶಿಕ್ಷಣದಲ್ಲಿ ಅದೊಂದು ಮಹತ್ವದ ತಿರುವು. ಆದ್ದರಿಂದಲೇ ಹೊಸ ಪುನರ್ರಚಿತ ಪದವಿ ಶಿಕ್ಷಣ ಕೊಡಲು ಒಪ್ಪಿಕೊಂಡ ಕಾಲೇಜುಗಳಿಗೆ ಅದನ್ನು ಯಶಸ್ವಿಗೊಳಿಸಲು ಸಾಕಷ್ಟು ಶೈಕ್ಷಣಿಕ, ಹಣಕಾಸಿನ ಮತ್ತು ಆಡಳಿತಾತ್ಮಕ ಸ್ವಾತಂತ್ರ್ಯ ಕೊಡಲಾಗಿದೆ. ಸ್ವಾತಂತ್ರ್ಯಾನಂತರ ಇಷ್ಟೊಂದು ಸ್ವಾತಂತ್ರ್ಯ ಕೊಡುತ್ತಿರುವುದು ಇದೇ ಮೊದಲ ಸಲ.

ಈ ಪುನರ್ರಚಿತ ಉದ್ಯೋಗಪರ ಶಿಕ್ಷಣ ಕ್ರಮವು ಉಚ್ಚ ಶಿಕ್ಷಣದ ಮುಂದಿನ ಬೆಳವಣಿಗೆಗೆ ಮಾದರಿಯಾಗಲಿದೆ. ಅದರ ಯಶಸ್ಸಿಗೆ ಹೆಚ್ಚಿನ ಪ್ರಯತ್ನದ ಅವಶ್ಯಕತೆಯಿದೆ. ಈ ವಿಷಯವನ್ನು ಆಯಾ ಕಾಲೇಜುಗಳಿಗೆ ಈ ಹೊಸ ಕೋರ್ಸಿಗೆ ಮಂಜೂರಿ ಕೊಡುವಾಗಲೇ ಸ್ಪಷ್ಟಪಡಿಸಲಾಗಿದೆ. ಶೈಕ್ಷಣಿಕ ಪ್ರಗತಿಗಾಗಿ ನಿಜವಾದ ಪ್ರಯತ್ನ ಮಾಡುವ ಸಂಸ್ಥೆಗಳಿಗೆ ಮಾತ್ರ ಈ ಮಂಜೂರಿ ಕೊಡಲು ಉದ್ದೇಶಿಸಲಾಗಿದೆ.

1997ರಲ್ಲಿ ಈ ಹೊಸ ಕೋರ್ಸಿನ ಮೊದಲ ಪದವೀಧರರು ಹೊರಬಂದಿದ್ದಾರೆ. ಆದ್ದರಿಂದ ಈಗ ಈ ಹೊಸ ಕೋರ್ಸಿನ ಯಶಸ್ಸಿನ ಮೌಲ್ಯ ಮಾಪನ ಮಾಡಬಹುದು. ಇದರ ಆಧಾರದ ಮೇಲಿಂದ ಅದನ್ನು ಇನ್ನಷ್ಟು ಅರ್ಥಪೂರ್ಣ ಮಾಡಬಹುದು. ಉದ್ಯೋಗಪರ ಶಿಕ್ಷಣ ಸಮಿತಿಯ ಸದಸ್ಯರಿಗೆ ಈ ಮೌಲ್ಯಮಾಪನ ಕಾರ್ಯವನ್ನು ವಹಿಸಲಾಗಿತ್ತು. ಆ ಸದಸ್ಯರ ಅಭಿಪ್ರಾಯದ ಪ್ರಕಾರ, ಈ ಪುನರ್ರಚಿತ ಪದವಿ ಶಿಕ್ಷಣಕ್ಕೆ ತಮಿಳುನಾಡಿನಲ್ಲಿ ವ್ಯಾಪಕ ಸ್ವಾಗತ ದೊರೆತಿದೆ. ಆದರೆ ಕೇರಳದವರಿಗೆ ಅಷ್ಟು ಒಪ್ಪಿಗೆಯಾಗಿಲ್ಲ. ಕೇರಳದಲ್ಲಿ ಪದವಿ ಪೂರ್ವ ನಿರುದ್ಯೋಗವು ಹೆಚ್ಚಾಗಿದೆ. ಹೀಗಿರುವಾಗ ಈ ಹೊಸ ಕ್ರಮವನ್ನು ಅವರು ಮನದುಂಬಿ ಸ್ವಾಗತಿಸಬೇಕಾಗಿತ್ತು. ಕೇರಳವು ಶೈಕ್ಷಣಿಕ ದೃಷ್ಟಿಯಿಂದ ಮುಂದುವರಿದ ರಾಜ್ಯ. ಅಲ್ಲಿ ಹೀಗಾಗುವುದು ಸರಿಯಲ್ಲ. ಇನ್ನುಳಿದ ರಾಜ್ಯಗಳಾದರೂ ಈ ಯೋಜನೆಯನ್ನು ವ್ಯಾಪಕಗೊಳಿಸಿ ಅದರ ಯಶಸ್ಸಿಗೆ ಮನಃಪೂರ್ವಕ ಪ್ರಯತ್ನಿಸಿದರೆ ಶಿಕ್ಷಣವು ಯುವಕರ ಬದುಕಿಗೆ ಅರ್ಥ ಕೊಡಬಲ್ಲದು. ಇಲ್ಲವಾದರೆ ಉಚ್ಚ ಶಿಕ್ಷಣವು ತರುಣ ಜನಾಂಗಕ್ಕೆ ನೆರವಾಗುವ ಬದಲು ಹೊರೆಯಾಗುವುದರಲ್ಲಿ ಸಂಶಯವಿಲ್ಲ.

■ ಎಂ.ಎಸ್. ಬದಾಮಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು ಇವರು 1998-99ನೇ ಶೈಕ್ಷಣಿಕ ವರ್ಷದ ಪ್ರವೇಶಕ್ಕೆ ಈ ಮುಂದೆ ಸೂಚಿಸಿರುವ ಕೋರ್ಸುಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರವೇಶವನ್ನು ಈ ಕೆಳಕಂಡ ಎರಡು ನಿಯಮಾವಳಿಗಳಲ್ಲಿ ನೀಡಲಾಗುವುದು.

ನಿಯಮ-I ಪೂರ್ವ ವಿದ್ಯಾರ್ಹತೆ ಅವಶ್ಯಕವಿಲ್ಲ. ದಿನಾಂಕ 1-7-1998ಕ್ಕೆ ಮೊದಲು 18 ವರ್ಷ ಪೂರ್ಣಗೊಳಿಸಿರುವವರು ಬಿ.ಎ./ಬಿ.ಕಾಂ. ಹಾಗೂ ದಿನಾಂಕ 1-7-1998ಕ್ಕೆ ಮೊದಲು 21 ವರ್ಷಗಳನ್ನು ಪೂರ್ಣಗೊಳಿಸಿರುವವರು ಎಂ.ಎ./ಎಂ.ಕಾಂ.ಗೆ ಅರ್ಜಿ ಸಲ್ಲಿಸಬಹುದು.

ಈ ನಿಯಮಾವಳಿಯಲ್ಲಿ 3 ವರ್ಷಗಳ ಬಿ.ಎ./ಬಿ.ಕಾಂ ಹಾಗೂ ಎರಡು ವರ್ಷಗಳ ಎಂ.ಎ./ಎಂ.ಕಾಂ ಪದವಿಯನ್ನು ಈ ವಿಷಯಗಳಲ್ಲಿ ಪಡೆಯಬಹುದು. ಇಂಗ್ಲೀಷ್/ಕನ್ನಡ/ಹಿಂದಿ/ಸಂಸ್ಕೃತ/ ಉರ್ದು/ರಾಜ್ಯಶಾಸ್ತ್ರ/ಸಮಾಜಶಾಸ್ತ್ರ/ಇತಿಹಾಸ ಮತ್ತು ಅರ್ಥಶಾಸ್ತ್ರ ಈ ಮೇಲಿನ ಎಲ್ಲಾ ವಿಷಯಗಳ ಅರ್ಜಿ ಹಾಗೂ ವಿವರಣ ಪತ್ರವನ್ನು 80 ರೂ. ಸಲ್ಲಿಸಿ ಪಡೆಯಬಹುದು.

ನಿಯಮಾವಳಿ-II ಪಿಯುಸಿ 2 ವರ್ಷ ಅಥವಾ ಅದಕ್ಕೆ ತತ್ಸಮ (10+2) ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಬಿ.ಎ./ಬಿ.ಕಾಂ. ಮತ್ತು ಪಿಯುಸಿ ನಂತರದ ಕನ್ನಡ ಮತ್ತು ಪತ್ರಿಕೋದ್ಯಮ ಡಿಪ್ಲೋಮಕ್ಕೆ ಅರ್ಜಿ ಸಲ್ಲಿಸಲು ಅರ್ಹರು. ಪದವೀಧರರು ಆ ಮಟ್ಟದಲ್ಲಿ ಜ್ಞಾತ (ಕಾಗ್ನೇಟ್) ವಿಷಯಗಳನ್ನು ಅಧ್ಯಯನ ಮಾಡಿರುವವರು ಎಂ.ಎ./ಎಂ.ಕಾಂ./ಮ್ಯಾನೇಜ್‌ಮೆಂಟ್ ಡಿಪ್ಲೋಮಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುವರು. ಬಿ.ಎ./ಬಿ.ಎಸ್ಸಿ/ಬಿ.ಕಾಂ. ಪದವೀಧರರು, ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮಾನವ ಸಂಪನ್ಮೂಲ ಮ್ಯಾನೇಜ್‌ಮೆಂಟ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರು. ಬಿ.ಎ./ಬಿ.ಎಸ್ಸಿ. ಪದವೀಧರರು, ಇಂಗ್ಲೀಷ್ ಸ್ನಾತಕೋತ್ತರ ಡಿಪ್ಲೋಮಕ್ಕೆ ಅರ್ಜಿ ಸಲ್ಲಿಸಲು ಅರ್ಹರು. ಬಿ.ಎಡ್/ಎಂ.ಎಡ್/ಎಂ.ಫಿಲ್ (ಶಿಕ್ಷಣಶಾಸ್ತ್ರ)ಗೆ ಅರ್ಜಿ ಸಲ್ಲಿಸುವವರು ವಿವರಣ ಪತ್ರದಲ್ಲಿ ಸೂಚಿಸಿರುವ ಅವಶ್ಯ ವಿದ್ಯಾರ್ಹತೆಯನ್ನು ಪೂರೈಸಿರಬೇಕು.

ಈ ನಿಯಮಾವಳಿಯಲ್ಲಿ ಎಂ.ಎ./ಎಂ.ಕಾಂ ಅನ್ನು ಈ ಕೆಳಗಿನ ವಿಷಯಗಳಲ್ಲಿ ಪಡೆಯಬಹುದು. ಇಂಗ್ಲಿಷ್/ಕನ್ನಡ/ಹಿಂದಿ/ಸಂಸ್ಕೃತ/ ಉರ್ದು/ರಾಜ್ಯಶಾಸ್ತ್ರ/ಸಮಾಜಶಾಸ್ತ್ರ/ಇತಿಹಾಸ ಮತ್ತು ಅರ್ಥಶಾಸ್ತ್ರ.

ಬಿ. ಎಡ್. : ಎರಡು ವರ್ಷಗಳ ಅವಧಿಯಾಗಿದ್ದು, ಸೇವೆಯಲ್ಲಿರುವ ಪದವೀಧರ ಉಪಾಧ್ಯಾಯರು ಅರ್ಹರು.

ಎಂ.ಎಡ್ : ಎರಡು ವರ್ಷಗಳ ಅವಧಿ 50% ಅಂಕಗಳನ್ನು ಪಡೆದ ಬಿ.ಎಡ್ ಪದವೀಧರರು. (45% ಎಸ್.ಸಿ/ಎಸ್.ಟಿ)

ಎಂ. ಫಿಲ್ : ಕನ್ನಡ/ಇಂಗ್ಲಿಷ್/ಸಂಸ್ಕೃತ/ ಸಮಾಜಶಾಸ್ತ್ರ/ಇತಿಹಾಸ/ ವಾಣಿಜ್ಯಶಾಸ್ತ್ರ/ ರಾಜ್ಯಶಾಸ್ತ್ರ/ ಅರ್ಥಶಾಸ್ತ್ರ/ಶಿಕ್ಷಣಶಾಸ್ತ್ರದಲ್ಲಿ 18 ತಿಂಗಳ ಅವಧಿಯ ಎಂ.ಫಿಲ್ ಮಾಡಲು ಎಂ.ಎ/ ಎಂ.ಕಾಂ/ಎಂ.ಎಡ್‌ನಲ್ಲಿ 50% ಅಂಕಗಳಿಸಿರಬೇಕು.

ಎಂ.ಬಿ.ಎ. : 3 ವರ್ಷಗಳ ಅವಧಿ 50% ಅಂಕಗಳನ್ನು ಪಡೆದ ಯಾವುದೇ ಪದವೀಧರರು. (45% ಎಸ್.ಸಿ/ಎಸ್.ಟಿ)

ಈ ಮೇಲಿನ ವಿಷಯಗಳಿಗೆ ಅರ್ಜಿ ಹಾಗೂ ವಿವರಣ ಪತ್ರಗಳನ್ನು ಬಿ.ಎಡ್, ಎಂ.ಎಡ್‌ಗೆ 150 ರೂ.ಗಳನ್ನು, ಎಂ.ಫಿಲ್‌ಗೆ 200 ರೂ.ಗಳನ್ನು ಹಾಗೂ ಎಂ.ಬಿ.ಎಗೆ 300 ರೂ ಸಲ್ಲಿಸಿ ಪಡೆಯಬಹುದು.

ಡಿಪ್ಲೋಮ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳು

ಈ ಕೆಳಕಂಡ ವಿಷಯಗಳಲ್ಲಿ 1 ವರ್ಷದ ಡಿಪ್ಲೋಮ ಕೋರ್ಸ್‌ಗಳು

1. ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಸ್ನಾತಕೋತ್ತರ ಡಿಪ್ಲೋಮ
2. ಇಂಗ್ಲೀಷ್ ಸ್ನಾತಕೋತ್ತರ ಡಿಪ್ಲೋಮ
3. ಮಾನವ ಸಂಪನ್ಮೂಲ ಮ್ಯಾನೇಜ್‌ಮೆಂಟ್ ಸ್ನಾತಕೋತ್ತರ ಡಿಪ್ಲೋಮ
4. ಅ. ಪಿಯುಸಿ ನಂತರದ ಕನ್ನಡ ಡಿಪ್ಲೋಮ
   ಆ. ಪಿಯುಸಿ ನಂತರದ ಪತ್ರಿಕೋದ್ಯಮ ಡಿಪ್ಲೋಮ. (ಪಿಯುಸಿ/10+2 ಉತ್ತೀರ್ಣರಾದವರು ಅರ್ಹರು).
5. ಕನ್ನಡೇತರರಿಗಾಗಿ ಕನ್ನಡ ಸರ್ಟಿಫಿಕೇಟ್ ಶಿಕ್ಷಣ. ಹಿಂದಿ ಅಥವಾ ಇಂಗ್ಲೀಷ್ ಮಾಧ್ಯಮ (ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಉತ್ತೀರ್ಣರಾದವರು).

ಈ ಮೇಲಿನ ಎಲ್ಲಾ ವಿಷಯಗಳಿಗೆ 80 ರೂ.ಗಳನ್ನು ಸಲ್ಲಿಸಿ ಅರ್ಜಿಗಳನ್ನು ಪಡೆಯಬಹುದು.

ಆಯಾ ಶಿಕ್ಷಣ ಕ್ರಮಗಳಿಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ತಾವು ಸೇರ ಬಯಸುವ ಶಿಕ್ಷಣ ಕ್ರಮವನ್ನು ತಿಳಿಸಬೇಕು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು-570 006. ಈ ವಿಳಾಸಕ್ಕೆ ಡಿಮ್ಯಾಂಡ್ ಡ್ರಾಫ್ಟನ್ನು ಕಳಿಸಿಕೊಟ್ಟು ಅರ್ಜಿಗಳನ್ನು ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಮೇಲ್ಕಂಡ ವಿಳಾಸ ಅಥವಾ ನಿಮ್ಮ ಹತ್ತಿರದ ಅಧ್ಯಯನ ಕೇಂದ್ರಗಳಿಗೆ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ.

ದಂಡ ಶುಲ್ಕವಿಲ್ಲದೆ

–26ನೇ ಆಗಸ್ಟ್ 1998

50/ರೂ.ಗಳ ದಂಡದೊಂದಿಗೆ –

– 18ನೇ ಸೆಪ್ಟಂಬರ್ 1998 ■

ಬಿ.ಎಸ್ಸಿ ಗಾರ್ಮೆಂಟ್ ಡಿಸೈನ್ ಪ್ರವೇಶಕ್ಕೆ ಅವಕಾಶ

ದ್ವಿತೀಯ ಪಿ.ಯು.ಸಿ. ತತ್ಸಮಾನ ಹೊಲಿಗೆ ಮತ್ತು ಕಸೂತಿ ಕೋರ್ಸ್‌ನಲ್ಲಿ ತೇರ್ಗಡೆ ಆದ ವಿದ್ಯಾರ್ಥಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ಬಿ.ಎಸ್.ಸಿ. ಗಾರ್ಮೆಂಟ್ ಡಿಸೈನ್ ಮತ್ತು ಬಿ.ಎಸ್.ಸಿ. ಫ್ಯಾಷನ್ ಡಿಸೈನ್ ತರಗತಿಗಳಿಗೆ ದಾಖಲು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಕರ್ನಾಟಕ ರಾಜ್ಯ ವೃತ್ತಿ ಶಿಕ್ಷಣ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ. ■

ಅಂಗವಿಕಲರಿಗಾಗಿ ಸ್ವ-ಉದ್ಯೋಗ ತರಬೇತಿ

ಕರ್ನಾಟಕ ರಾಜ್ಯ ಅಂಗವಿಕಲರ ಕಲ್ಯಾಣ ಇಲಾಖೆಯು ವಯಸ್ಕ ಅಂಗವಿಕಲರಿಗಾಗಿ ಬರುವ ಸೆಪ್ಟೆಂಬರ್ ತಿಂಗಳಿನಿಂದ ವಿವಿಧ ಚಟುವಟಿಕೆಗಳಲ್ಲಿ ಸ್ವ-ಉದ್ಯೋಗ ತರಬೇತಿಗಳನ್ನು ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ (ರುಡ್‌ಸೆಟ್) ಸಂಸ್ಥೆಯ ವಿವಿಧ ಕೇಂದ್ರಗಳಲ್ಲಿ ನಡೆಸಲಿದೆ.

ಟೈಲರಿಂಗ್ (ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ) ಮೋಟಾರ್ ರಿವೈಂಡಿಂಗ್ ಹಾಗೂ ಪಂಪ್‌ಸೆಟ್ ರಿಪೇರಿ, ಗೃಹೋಪಯೋಗಿ ವಿದ್ಯುತ್ ಉಪಕರಣಗಳ ರಿಪೇರಿ ಮುಂತಾದ ವಿಷಯಗಳಲ್ಲಿ ತರಬೇತಿಯನ್ನು 6 ತಿಂಗಳ ಅವಧಿಯವರೆಗೆ ನಡೆಸಲಾಗವುದು. ಇದರಲ್ಲಿ ಒಂದು ತಿಂಗಳ ಮೂಲ ತರಬೇತಿ ಹಾಗೂ 5 ತಿಂಗಳ ಕಾರ್ಯನಿರತ ತರಬೇತಿ ನೀಡಲಾಗುವುದು. ಮೂಲ ತರಬೇತಿಯ ಸಮಯದಲ್ಲಿ ಉಚಿತ ಊಟ ಹಾಗೂ ವಸತಿ ಸೌಕರ್ಯವಿರುತ್ತದೆ. ಕಾರ್ಯನಿರತ ತರಬೇತಿಯ ಅವಧಿಯಲ್ಲಿ ಸ್ಟೈಫಂಡ್ ನೀಡಲಾಗುವುದು.

ಆಯ್ಕೆಯಾದ ಅಭ್ಯರ್ಥಿಗಳು ರುಡ್‌ಸೆಟ್ ಸಂಸ್ಥೆಯ ಉಜಿರೆ (ಮೋಟಾರ್ ರಿವೈಂಡಿಂಗ್ ಹಾಗೂ ಪಂಪ್‌ಸೆಟ್ ರಿಪೇರಿ) ಮೈಸೂರು (ಗೃಹೋಪಯೋಗಿ ವಿದ್ಯುತ್ ಉಪಕರಣ ರಿಪೇರಿ) ಅರಿಶಿನಕುಂಟೆ (ನೆಲಮಂಗಲ) (ಪುರುಷರಿಗೆ ಟೈಲರಿಂಗ್) ಹಾಗೂ ಶಿವಳ್ಳಿ (ಮಹಿಳೆಯರಿಗೆ ಟೈಲರಿಂಗ್) ಕೇಂದ್ರಗಳಲ್ಲಿ ತರಬೇತಿಯನ್ನು ಪಡೆಯಬೇಕಾಗುತ್ತದೆ. ದಕ್ಷಿಣ ಕನ್ನಡ, ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಅಭ್ಯರ್ಥಿಗಳು ಉಜಿರೆ ಕೇಂದ್ರಕ್ಕೆ ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯವರು, ಮೈಸೂರು ಕೇಂದ್ರಕ್ಕೆ ಉಡುಪಿ, ಉತ್ತರಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯವರು ಶಿವಳ್ಳಿ ಕೇಂದ್ರಕ್ಕೂ ಹಾಗೂ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಮತ್ತು ತುಮಕೂರು ಜಿಲ್ಲೆಯವರು ಅರಿಶಿನಕುಂಟೆ (ನೆಲಮಂಗಲ) ಕೇಂದ್ರಕ್ಕೆ ಅರ್ಜಿಸಲ್ಲಿಸಬೇಕು.

ಹೆಚ್ಚಿನ ವಿವರಗಳಿಗೆ :

ನಿರ್ದೇಶಕರು, ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆ ಅರಿಶಿನಕುಂಟೆ ನೆಲಮಂಗಲ - 562123. ಫೋನ್ 08118-23166 ಮತ್ತು ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಫೋಡಿಯಂ ಬ್ಲಾಕ್, ನೆಲಮಹಡಿ, ವಿಶ್ವೇಶ್ವರಯ್ಯ ಕೇಂದ್ರ, ಅಂಬೇಡ್ಕರ್ ವೀದಿ, ಬೆಂಗಳೂರು (ಫೋನ್ 2860907) ಅಥವಾ ಆಯಾ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು.

ಶಿವಳ್ಳಿ ಕೇಂದ್ರದ ವಿಳಾಸ :

ನಿರ್ದೇಶಕರು, ರುಡ್‌ಸೆಟ್ ಸಂಸ್ಥೆ, ಪಾರಂಪಳ್ಳಿ, ಶಿವಳ್ಳಿ, ಉಡುಪಿ - 576102.

ಮೈಸೂರು ಕೇಂದ್ರದ ವಿಳಾಸ :

ನಿರ್ದೇಶಕರು, ರುಡ್‌ಸೆಟ್ ಸಂಸ್ಥೆ, ನಂ.4, ಕುರುಬರಹಳ್ಳಿ, ಅಂಜಲಿ ಆಶ್ರಮದ ಎದುರು, ಚಾಮುಂಡಿ ಬೆಟ್ಟ ರಸ್ತೆ, ಮೈಸೂರು.

ಉಜಿರೆ ಕೇಂದ್ರದ ವಿಳಾಸ :

ನಿರ್ದೇಶಕರು, ರುಡ್‌ಸೆಟ್ ಸಂಸ್ಥೆ, ಸಿದ್ಧವನ, ಗುರುಕುಲ, ಉಜಿರೆ (ದ.ಕ.ಜಿಲ್ಲೆ).

■

ರಕ್ಷೆ-ಶಿಕ್ಷೆ

ಕೋಟಿ ಕೋಟಿ ರೂಪಾಯಿಗಳ
ಬಾಕಿ ಉಳಿಸಿಕೊಂಡ ಮಾಜಿ
ಸಚಿವರಿಗೆ ಸರಕಾರದ ರಕ್ಷೆ
ಕೊಟ್ಟ ಸಾಲದ ಮೇಲೆ ಮಳೆ-ಬೆಳೆ
ಇಲ್ಲದೆ ಬಡ್ಡಿ ತುಂಬಲು ತಡವಾದರೆ
ರೈತನಿಗೆ ಕೊಡುವರಲ್ಲ ಶಿಕ್ಷೆ

-ಮಹಾಲಿಂಗ ಯಾಳಗಿ

ಆಯುರ್ವೇದ ವೈದ್ಯ ಪದವಿ ತರಗತಿಗಳಿಗೆ ಅರ್ಜಿ ಆಹ್ವಾನ

1998-99ನೇ ಸಾಲಿಗೆ ಸರ್ಕಾರಿ ಕಾಲೇಜು ಮತ್ತು ಖಾಸಗಿ ಕಾಲೇಜುಗಳಲ್ಲಿ ಸರ್ಕಾರದ ಸೀಟುಗಳ ಆಯ್ಕೆಗಾಗಿ ಪ್ರಥಮ ವರ್ಷದ ಬಿಎಎಂಎಸ್, ಬಿಎಚ್ಎಂಎಸ್, ಬಿಯುಎಂಎಸ್, ಬಿಎನ್‌ವೈಎಸ್ ಪದವಿ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಕರೆಯಲಾಗಿದೆ. ಪ್ರತಿ ಕೋರ್ಸ್ ಪ್ರವೇಶಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು.

ಕರ್ನಾಟಕ ಪದವಿ ಪೂರ್ವ (ಪಿಯುಸಿ) ಶಿಕ್ಷಣ ಮಂಡಳಿಯ 2 ವರ್ಷಗಳ ಪರೀಕ್ಷೆಗಳಲ್ಲಿ ಭೌತ ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಜೀವ ಶಾಸ್ತ್ರ ವಿಷಯಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ತೇರ್ಗಡೆ ಆಗಿರಬೇಕು ಅಥವಾ ಅದಕ್ಕೆ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಆಗಿರಬೇಕು.

ಕಾನೂನಿನನ್ವಯ ಸ್ಥಾಪಿತವಾದ ವಿಶ್ವ ವಿದ್ಯಾಲಯ ಒಂದರಿಂದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಪ್ರಾಣಿಶಾಸ್ತ್ರಗಳನ್ನು ಐಚ್ಛಿಕವಾಗಿ ತೆಗೆದು ಕೊಂಡು ಪದವಿ ಪಡೆದಿರಬೇಕು. ಆದರೆ, ಯಾರು ರಸಾಯನ ಶಾಸ್ತ್ರ, ಜೀವಶಾಸ್ತ್ರ, ಪ್ರಾಣಿಶಾಸ್ತ್ರ ಗಳನ್ನು ಐಚ್ಛಿಕವಾಗಿ ತೆಗೆದುಕೊಂಡಿರುವರೋ, ಅಂತಹ ಅಭ್ಯರ್ಥಿಗಳು ಪದವಿ ಪೂರ್ವ ಪರೀಕ್ಷೆಯಲ್ಲಿ ಭೌತ ಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಉತ್ತೀರ್ಣರಾಗಿರಬೇಕು. ಅಥವಾ ರಾಜ್ಯ ಸರ್ಕಾರದಿಂದ ಅಂಗೀಕೃತವಾದ ಯಾವುದೇ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರವನ್ನು ಹೆಚ್ಚುವರಿಯಾಗಿ ತೆಗೆದುಕೊಂಡು ತೇರ್ಗಡೆ ಆಗಿರಬೇಕು.

ಅರ್ಹತಾ ಪರೀಕ್ಷೆ ಐಚ್ಛಿಕ ವಿಷಯಗಳಲ್ಲಿ ಶೇ. 50ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು . ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಕೆಟಗರಿ - 1 ಕ್ಕೆ ಸೇರಿದ ಅಭ್ಯರ್ಥಿಗಳು ಶೇ. 40 ಕ್ಕಿಂತ ಕಡಿಮೆ ಇಲ್ಲದಂತೆ ಅಂಕ ಪಡೆದಿರಬೇಕು.

1998ರ ಜನವರಿ 1 ಕ್ಕೆ 17 ವರ್ಷ ವಯಸ್ಸು ಪೂರ್ಣ ಗೊಂಡಿರಬೇಕು.

ನಿಗದಿತ ಅರ್ಜಿ ನಮೂನೆಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಕೆಟಗರಿ- 1 ಕ್ಕೆ ಸೇರಿದ ಅಭ್ಯರ್ಥಿಗಳು 25 ರೂ. ಇತರೆ ಅಭ್ಯರ್ಥಿಗಳು 50 ರೂ. ಖುದ್ದಾಗಿ ಪಾವತಿ ಮಾಡಿ ಅಥವಾ ಮನಿ ಆರ್ಡರ್ ಜೊತೆಯಲ್ಲಿ ಸಾಕಷ್ಟು ಅಂಚೆ ಚೀಟಿ ಹಚ್ಚಿದ ಸ್ವವಿಳಾಸದ ಲಕೋಟೆಯನ್ನು ಕೆಳಕಂಡವರಿಗೆ ಕಳುಹಿಸಿ ಅರ್ಜಿ ನಮೂನೆ ಪಡೆಯಬಹುದು.

ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಬೆಂಗಳೂರು-9, ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ವಿಶ್ವೇಶ್ವರಯ್ಯ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಮೈಸೂರು - 21, ಪ್ರಾಚಾರ್ಯರು, ಸರ್ಕಾರಿ ತಾರಾನಾಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ - 583101.

ಪ್ರಾಚಾರ್ಯರು, ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ, ಮಾಗಡಿ ರಸ್ತೆ ಮೈನ್‌ರೋಡ್, ಬೆಂಗಳೂರು- 1, ಪ್ರಾಚಾರ್ಯರು, ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು ರಸ್ತೆ, ಬೆಂಗಳೂರು - 26.

ಪ್ರಾಚಾರ್ಯರು, ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಹೆಗ್ಗೇರಿ ಬಡಾವಣೆ, ಹುಬ್ಬಳ್ಳಿ - 24, ಪ್ರಾಚಾರ್ಯರು, ಆಯುರ್ವೇದ ಮಹಾವಿದ್ಯಾಲಯ, ಬಾಗಲಕೋಟೆ ರಸ್ತೆ, ಬಿಜಾಪುರ - 586101, ಪ್ರಾಚಾರ್ಯರು, ಡಿ.ಜಿ.ಎಂ.ಆಯುರ್ವೇದಿಕ್ ಮೆಡಿಕಲ್ ಕಾಲೇಜು, ಗದಗ - 582101, ಪ್ರಾಚಾರ್ಯರು, ಬಿ.ಎಂ.ಕೆ. ಆಯುರ್ವೇದ ಮಹಾವಿದ್ಯಾಲಯ, ಶಹಾಪುರ, ಬೆಳಗಾವಿ - 590 002.

ಪ್ರಾಚಾರ್ಯರು, ಎಸ್.ಡಿ.ಎಂ. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಕುತ್ಪಾಡಿ - 574 118 ಉಡುಪಿ, ಪ್ರಾಚಾರ್ಯರು ಎಸ್.ಕೆ. ಜಬಶೆಟ್ಟಿ ಆಯುರ್ವೇದ ವೈದ್ಯ ಮಹಾವಿದ್ಯಾಲಯ, ಮನಹಳ್ಳಿ ರಸ್ತೆ, ಬೀದರ್ - 585 403, ಆಳ್ವಾಸ್ ಆಯುರ್ವೇದ ಮೆಡಿಕಲ್ ಕಾಲೇಜು, ಮೂಡಬಿದರೆ - 574 227, ಉಡುಪಿ ಜಿಲ್ಲೆ. ಉಪನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ವಿಭಾಗೀಯ ಕಚೇರಿ, ಗಾಜಿಪುರ ಗುಲ್ಬರ್ಗ - 585101.

ಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳೊಂದಿಗೆ ಸದಸ್ಯ ಕಾಯದರ್ಶಿ, ಆಯ್ಕೆ ಸಮಿತಿ, ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು - 9, ಇಲ್ಲಿಗೆ ಲಕೋಟೆ ಮೇಲೆ 1998-99ನೇ ಸಾಲಿನ ಭಾರತೀಯ ವೈದ್ಯಪದ್ಧತಿ ಇಲಾಖೆಯ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ (ಬಿಎಎಂಎಸ್, ಬಿಎಚ್‌ಎಂಎಸ್, ಬಿಯುಎಂಎಸ್ ಮತ್ತು ಬಿಎನ್‌ವೈಎಸ್)ಪದವಿ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಎಂಬ ಮೇಲ್ಬರಹವನ್ನು ಬರೆದು ನಿಗದಿತ ದಿನಾಂಕ ಮತ್ತು ವೇಳೆಯೊಳಗೆ ತಲುಪುವಂತೆ ಕಳಿಸಬೇಕು.

ಅರ್ಜಿಗಳನ್ನು ಸ್ವೀಕರಿಸಲು ಕಡೆ ದಿನ ಆಗಸ್ಟ್ 10ರ ಸಂಜೆ 5 ಗಂಟೆ.

■

ವಿಷಾದ

ಖಾಲಿ ಹಣತೆಯ ತುಂಬಾ
ನೀ ಬರೆದಿರುವ
ಮುನ್ನುಡಿಗಳು!
ಖಾಲಿಯಾಗಿರುವ ಪದಗಳ
ಸುತ್ತ ಕಣ್ಣರಿಸಿ ನೋಡು
ಅಲ್ಲಿ ನೋವಿದೆ, ವಿಷಾದವಿದೆ
ಬದುಕಿನ ಬೇಗುದಿ-
ಯ ಆಗರವೇ ತುಂಬಿದೆ

- ಲೀಲಾ ಬಳ್ಳಾರಿ

ಮನೆ ಕೆಲಸದಾಕೆ

ಮನೆ ಕೆಲಸಕ್ಕೆಂದು ಬಂದ ಒಬ್ಬೊಬ್ಬರದು ಒಂದೊಂದು ರೀತಿ. ಅವರ ಬೇಡಿಕೆಗಳ ಪಟ್ಟಿಯೋ ಆ ದೇವರಿಗೇ ಪ್ರೀತಿ. ಕೊನೆಗೂ ನಾನೊಂದು ನಿರ್ಧಾರಕ್ಕೆ ಬಂದೆ....

ಮನೆಯಲ್ಲಿ ತುಂಬ ಕೆಲಸ ತನಗೊಬ್ಬಳಿಗೇ ನಿಭಾಯಿಸಲಾಗದೆ ಒಬ್ಬ ಕೆಲಸದಾಕೆಯನ್ನು ನೋಡುತ್ತೇನೆಂದು ನನ್ನ ಹೆಂಡತಿ, ಸವಿತಾ ಪದೇ ಪದೇ ಹೇಳಿದರೂ ನಾನು ತಲೆಗೆ ಹಾಕಿಕೊಂಡಿರಲಿಲ್ಲ. ಏಕೆಂದರೆ ಅದು ಅವಳ ಡಿಪಾರ್ಟಮೆಂಟ್ ಅಲ್ಲವೇ? ಕೆಲಸದಾಕೆ ಬೇಕು, ಬೇಡ ಅವಳಿಗೆ ತಿಳಿದದ್ದು, ಬೇಕಿದ್ದರೆ ಹುಡುಕಿ ಸರಿಯಾದವಳನ್ನು ಆರಿಸುವುದೂ ಅವಳ ಕೆಲಸ. ನಾವು ಬೆಂಗಳೂರಿಗೆ ಇದೀಗ ವರ್ಗವಾಗಿ ಬಂದದ್ದರಿಂದ ನನಗೆಲ್ಲ ಹೊಸತು. ಕೆಲಸವೂ ಆಫೀಸಿನಲ್ಲಿ ಜಾಸ್ತಿ. ಅದರಿಂದ ''ಅಕ್ಕಪಕ್ಕ





ಗಾಂಧೀಜಿ ಜೀವನ ಪ್ರಸಂಗ

ಒಮ್ಮೆ ಅಮೇರಿಕಾದ ಮಹಿಳೆಯೊಬ್ಬಳು ಮಹಾತ್ಮಾ ಗಾಂಧೀಜಿಯನ್ನು ಕಾಣಲು ಅವರ ಆಶ್ರಮಕ್ಕೆ ಬಂದಿದ್ದಳು. ಗಾಂಧೀಜಿಯವರಿಗೆ ಆಗ ಬಿಡುವಿಲ್ಲದಿದ್ದರೂ, ದೂರದಿಂದ ಬಂದಿದ್ದಾಳಲ್ಲಾ ಎಂದು ಭೇಟಿಗೆ ಅವಕಾಶ ನೀಡಿದರು. ಆಕೆ ಅಮೇರಿಕಾ ಮತ್ತು ಅಲ್ಲಿಯ ಜನರ ಬಗ್ಗೆ ಹರಟುತ್ತಾ ಕುಳಿತಳು. ಅವಳಿಗೆ ಕೊಟ್ಟಿದ್ದ 10 ನಿಮಿಷ ಮುಗಿದು, 20 ನಿಮಿಷವಾದರೂ ಹರಟೆ ಹೊಡೆಯುತ್ತಲೇ ಇದ್ದಳು.

ಇದರಿಂದ ಬೇಸರಗೊಂಡ ಗಾಂಧೀಜಿ, ಅದನ್ನು ತೋರ್ಪಡಿಸದೆ, ಬಲವಂತವಾಗಿ ನಗೆ ಬೀರುತ್ತ 'ಆ ದೇಶದಲ್ಲಿ ಬಹಳ ಮಂದಿ ಮಹಾತ್ಮರಿದ್ದಾರೆ. ಆದರೆ ನಿಮ್ಮೆದುರು ಇರುವ ಈ ಮಹಾತ್ಮ ಎಲ್ಲರ ಹಾಗೇ ಊಟ ಮಾಡುತ್ತಾರೆ, ಆಟ ಆಡುತ್ತಾರೆ, ನಿದ್ದೆ ಹೋಗುತ್ತಾರೆ' ಎಂದವರೇ ಹಾಸಿಗೆಯ ಮೇಲೆ ಮಲಗಿ ನಿದ್ರಾವಶರಾದರು. ಸುತ್ತಲಿದ್ದವರ ಮುಖದ ಮೇಲೆ ನಗೆ! ಆಕೆ ಪೆಚ್ಚು ಮೋರೆ ಹಾಕಿಕೊಂಡು ಹೊರ ಬಂದಳು.

(ಸಂಗ್ರಹ) **ಶಂಕರಗೌಡ**

ದವರಿಗೆ ಹೇಳು, ಹುಡುಕಿ ಕೊಡುತ್ತಾರೆ'' ಎಂದೆ. ನಮ್ಮ ಅಕ್ಕ ಪಕ್ಕದವರೆಲ್ಲ ಒಬ್ಬರು ತಮಿಳಿನವ ರಾದರೆ ಒಬ್ಬರು ಮಲೆಯಾಳಿ, ಒಬ್ಬರು ಬೆಂಗಾಲಿ, ಒಬ್ಬರು ಪಂಜಾಬಿ, ಒಬ್ಬರು ತೆಲುಗು ಮಾತನಾಡುವವರು.... ಹೀಗೇ; ಒಬ್ಬರೂ ಕನ್ನಡ ಮಾತನಾಡುವವರಿಲ್ಲ. ಇದು ಬೆಂಗಳೂರೇ ಹೌದೋ ಅಲ್ಲವೋ ಅನಿಸುತ್ತದೆ ನನಗೊಮ್ಮೊಮ್ಮೆ. ಅದು ಹೇಗೋ ಏನೋ ಅವರಿಗೆಲ್ಲ ಅವರವರ ಭಾಷೆಯಲ್ಲೇ ಮಾತನಾಡುವ ಕೆಲಸದವರೇ ಸಿಕ್ಕಿದ್ದಾರೆ. ನಮಗೆ ಮಾತ್ರ ಕನ್ನಡ ಬರುವ ಕೆಲಸದಾಕೆ ಆರು ತಿಂಗಳಾದರೂ ಸಿಕ್ಕಲಿಲ್ಲ. ಪರವಾಗಿಲ್ಲ, ಕೆಲಸ ಮಾಡಿ ಹೋಗುತ್ತಾಳೆ, ಭಾಷೆ ಬರದಿದ್ದರೇನು ಎಂದು ತಮಿಳು ಮಾತನಾಡುವ ಒಬ್ಬಳನ್ನು ಕೆಲಸಕ್ಕೆ ಕರೆದೆವು. ಅವಳಿಗೆ ವಿಪರೀತ ಕೆಲಸವಂತೆ; ತನ್ನ ಗೆಳತಿಯೊಬ್ಬಳನ್ನು ನಾಳೆ ಕಳುಹಿಸುತ್ತೇನೆಂದಳು.

ಬೆಳಿಗ್ಗೆ ಆರು ಘಂಟೆಗೇ ಯಾರೋ ಕರೆಗಂಟೆಯನ್ನು ಒತ್ತಿ ಹಿಡಿದುಬಿಟ್ಟಿದ್ದಾರೆ. ಜೋರಾಗಿ ಬಾಗಿಲನ್ನು ತಟ್ಟುತ್ತಿದ್ದುದರಿಂದ ನನಗೆ ಎಚ್ಚರವಾಗಿ ''ಯಾರು ನೋಡೇ ಸವಿ'' ಎಂದರೆ ಇವಳು ''ನೀವೇ ನೋಡಿ ಪ್ಲೀಸ್'' ಎಂದು ಆ ಕಡೆಗೆ ತಿರುಗಿ ಮಲಗಿದಳು. ನಾವು ನವವಿವಾಹಿತರಾದ್ದರಿಂದ ಹಾಲಿನವನು ಕೂಡ ನಮಗೆ ತೊಂದರೆ ಕೊಡಬಾರದೆಂದು ಒಂದು ಚೀಲದಲ್ಲಿ ಹಾಲಿನ ಕೂಪನ್ ಹಾಕಿ ಹೊರಗೆ ಬಾಗಿಲಿಗೆ ನೇತುಬಿಟ್ಟಿರುತ್ತೇವೆ. ನಾವೆದ್ದ ಮೇಲೆ ಚೀಲವನ್ನು ತೆಗೆದುಕೊಳ್ಳುವ ಅಭ್ಯಾಸ. ಆದ್ದರಿಂದ ಹಾಲಿನವನಂತೂ ಅಲ್ಲ, ಇನ್ಯಾರು ಎಂದು ಬಾಗಿಲು ತೆರೆದರೆ ಸುಮಾರು ಇಪ್ಪತ್ತು - ಇಪ್ಪತ್ತೆರಡು ವರ್ಷದ ತರುಣಿಯೊಬ್ಬಳು ನಿಂತಿದ್ದಾಳೆ, ಹೊಸ ಸೀರೆ, ಕೊರಳಲ್ಲಿ ಒಂದೆಳೆಯ ಮಾಂಗಲ್ಯ ಸರ, ಕಿವಿಯಲ್ಲಿ ಝುಮಕಿ, ಬಂಗಾರದ ಕಾಜಿನ ಬಳೆಗಳು, ಎಚ್.ಎಮ್.ಟಿ. ವಾಚ್ ಕೈಯಲ್ಲಿ, ಹೊಸ ಚಪ್ಪಲಿ ಎಲ್ಲ ಧರಿಸಿರುವ ಇವಳನ್ನು ಕಂಡು ಇವಳ್ಯಾರಪ್ಪಾ, ತಪ್ಪಿ ನಮ್ಮ ಮನೆಗೇನಾದರೂ ಬಂದಿರಬಹುದೇ ಎನ್ನಿಸಿ ''ಯಾರು ಬೇಕಮ್ಮಾ'' ಎಂದೆ. ''ಎನ್ನ ಸ್ವಾಮಿ, ನೀವೇ ಕರೆದು ಈಗ ಏನು ಬೇಕು ಎನ್ನುತ್ತೀರಲ್ಲಾ'' ಕೇಳಿದಳು. ನಾನಿವಳನ್ನು ಯಾವಾಗ ಕರೆದೆ ಎಂದು ಯೋಚಿಸುವಷ್ಟರಲ್ಲಿ ಒಳಗೆ ಬಂದ ಅವಳು ''ಆಂಟಿ ಊರಲ್ಲಿಲ್ಲವಾ, ಮಲಗಿದ್ದಾರಾ'', ಕೇಳಿದಾಗ ಇವಳ್ಯಾರಪ್ಪಾ, ನನ್ನವಳಿಗೆ ಆಂಟಿ ಅನ್ನುತ್ತಿದ್ದಾಳಲ್ಲಾ ಅನ್ನಿಸಿ ''ಸವಿತಾ, ಯಾರೋ ಬಂದಿದ್ದಾರೆ ನೋಡೆ'' ಎಂದಾಗ ಇವಳೆದ್ದು ''ಯಾರು''ಎನ್ನುವಷ್ಟರಲ್ಲಿಯೇ ಬೆಡ್‌ರೂಮ್‌ಗೇ ನುಗ್ಗಿದ ಅವಳು

''ಆಂಟಿ, ಕೆಲಸಕ್ಕೆ ಜನ ಬೇಕೆಂದಿದ್ದರಂತೆ'' ಕೇಳಿದಾಗ ತಿಳಿಯಿತು ಇವಳು ನಮ್ಮ ಕೆಲಸದಾಕೆಯೆಂದು. ಸವಿತಾ, ''ಇದೇನು, ಇಷ್ಟು ಬೇಗ ಬಂದಿದ್ದೀ, ಇಷ್ಟು ಬೇಗ ನಮ್ಮ ಮನೆಯಲ್ಲಿ ಯಾವ ಕೆಲಸವೂ ಇರುವುದಿಲ್ಲ. ನಾವಿನ್ನೂ ಎದ್ದೇ ಇರುವುದಿಲ್ಲ'' ಎಂದಳು.

''ಆಂಟಿ, ನನಗೆ ಹತ್ತಾರು ಮನೆಯ ಕೆಲಸ ಇದೆ, ಈಗ ಬಂದರೇ ನನಗೆ ಎಲ್ಲರ ಮನೆಯ ಕೆಲಸ ಮಾಡಲಿಕ್ಕಾಗುತ್ತದೆ. ನಿಮಗೆ ಬೇಕಾದರೆ, ಬರುತ್ತೇನೆ ನನಗಾಗುವುದು ಈ ಸಮಯಕ್ಕೆ ಮಾತ್ರ'' ಎಂದು ಅರ್ಧತಮಿಳು, ಅರ್ಧ ಕನ್ನಡದಲ್ಲಿ ದಬಾಯಿಸಿದಾಗ ಇವಳನ್ನು ಬಿಟ್ಟರೆ ಮತ್ತೆ ಎಲ್ಲ ತನಗೇ ಬೀಳುತ್ತದೆಂದು ಸವಿತಾ ''ಸರಿ, ನಾಳೆಯಿಂದ ಬಾ, ಸಂಬಳ ಎಷ್ಟು ಕೊಡಬೇಕು?'' ಎಂದು ಕೇಳಿದ್ದಕ್ಕೆ ''ನೋಡಿ ಆಂಟಿ, ಮೂರು ಕೆಲಸ ತಾನೇ, ಪಾತ್ರೆ, ಬಟ್ಟೆ, ನೆಲ ಒರೆಸುವುದು, ಅಷ್ಟಕ್ಕೆ ನಾಲ್ಕುನೂರು ರೂಪಾಯಿ ಕೊಡಿ'' ಎಂದಾಗ ಹೌಹಾರಿದ ಇವಳು ''ಏನು, ಮೂರು ಕೆಲಸಕ್ಕೆ ನಾಲ್ಕುನೂರು ರೂಪಾಯಿಯೇ'' ಎಂದರೆ ''ಅದು ಫಿಕ್ಸಡ್‌ರೇಟ್ ಆಂಟಿ ಈ ಕಾಲೋನಿಯಲ್ಲಿ, ಒಂದೊಂದು ಕೆಲಸಕ್ಕೆ ನೂರಿಪ್ಪತ್ತೈದು ರೂಪಾಯಿ, ಬಾಲ್ಕನಿ ಗುಡಿಸುವುದು, ಮನೆ ಮುಂದಿನ ಮಳೆ ನೀರು ಗುಡಿಸುವುದು ಮಾಡಬೇಕಿದ್ದರೆ ಅದಕ್ಕೆ ಐವತ್ತು ರೂಪಾಯಿ, ನೀವು ಇಬ್ಬರೇ ಇರಿ, ಹತ್ತು ಜನ ಇರಿ, ಪರವಾಗಿಲ್ಲ, ಅಲ್ಲದೆ ಬೆಳಿಗ್ಗೆ ತಿಂಡಿ, ಕಾಫಿ ನಿಮ್ಮದೇ. ಯಾಕೆಂದರೆ ನಾನಿಲ್ಲಿಗೆ ಬರುವಾಗ ತಿಂಡಿಯ ಟೈಮಲ್ಲವೇ, ಬೇರೆಯವರ ಮನೆಯಲ್ಲಿ ಊಟ ಆಗುತ್ತದೆ'' ಎಂದವಳು ತಣ್ಣಗೆ ಹೇಳಿದಾಗ ಸವಿತಾ ''ಸರಿ, ನಾಳೆ ಬಾ, ಯಾವುದಕ್ಕೂ ಯೋಚಿಸಿ ಹೇಳುತ್ತೇವೆ'' ಎಂದವಳನ್ನು ಸಾಗಹಾಕಿ ''ಏನು ಮಾಡೋಣಾರೀ?'' ಎಂದು ನನ್ನನ್ನು ಕೇಳಿದಾಗ ''ಪಕ್ಕದವರನ್ನು ವಿಚಾರಿಸು'' ಎಂದೆ. ಅವರೆಲ್ಲ ಗಂಡ-ಹೆಂಡತಿ ಇಬ್ಬರೂ ಕೈತುಂಬಾ ಸಂಬಳ ತರುವವರು. ಆದ್ದರಿಂದ ಹೇಳಿದರು, ''ಅದೆಲ್ಲ ನಿಜ, ನಾಲ್ಕುನೂರು ರೂಪಾಯಿಗೆ ತಿಂಗಳೆಲ್ಲ ಕೆಲಸ ಮಾಡುತ್ತಾರೆ, ಪಾಪ ಬಡವರಲ್ಲವೇ ಪರವಾಗಿಲ್ಲ ಇಟ್ಟುಕೊಳ್ಳಿ.''

''ನಮ್ಮೂರಲ್ಲಿ ಎಂಭತ್ತು - ನೂರು ರೂಪಾಯಿಗೆ ಮೂರೂ ಕೆಲಸ ಮಾಡಿ ಹೋಗುತ್ತಾರೆ. ಏನೋ ಅಮ್ಮ ಹೆಚ್ಚಾದದ್ದು, ಮನೆಯಲ್ಲಿ ಉಳಿದದ್ದು ಕೊಡುತ್ತಾಳೆ. ಇಲ್ಲಿ ಎಲ್ಲದಕ್ಕೂ ಕಂಡೀಷನ್ನೇ, ಏನು ಊರೋ ಎಲ್ಲದಕ್ಕೂ ವಿಪರೀತ ಬೆಲೆ'' ಎಂದೆಲ್ಲ ಸವಿತಾ ಶುರುಮಾಡಿದಾಗ ''ಇದು ಬೆಂಗಳೂರು,

ನಿಮ್ಮಮ್ಮನ ಊರಲ್ಲ. ಬೇಕಾದರೆ ಇಟ್ಟುಕೋ, ಬೇಡವಾದರೆ ನೀನೇ ನಿಧಾನವಾಗಿ ಮಾಡು, ನಾನೂ ಬೇಕಿದ್ದರೆ ಹೆಲ್ಪ್ ಮಾಡುತ್ತೇನೆ, ಇಲ್ಲದಿದ್ದರೆ ನಾನು ಸಂಜೆ ಬರುವವರೆಗೆ ನೀನೂ ಫ್ರೀಯಾಗಿಯೇ ಇರುತ್ತೀಯಲ್ಲ'' ನಾನು ಕೇಳಿದೆ. ''ನೀವು ಹೆಲ್ಪ್ ಮಾಡೋದು ನನಗೆ ಗೊತ್ತಿಲ್ಲವೇ, ನನ್ನ ಕಷ್ಟ ನಿಮಗೇನು ಗೊತ್ತು, ಇಡೀ ದಿನ ಕೆಲಸವೇ ಆಗುತ್ತದೆ, ಹೀಗಾದರೆ ನನ್ನ ಬೇರೆ ಕೆಲಸಗಳಿಗೆ ಬಿಡುವೆಲ್ಲಿರುತ್ತದೆ'' ಎಂದಾಗ ಅದೂ ನಿಜ ಎನ್ನಿಸಿತು. ಸವಿತಾಗೆ ಬೇರೆ ಒಳ್ಳೊಳ್ಳೆಯ ಹವ್ಯಾಸಗಳಿರುವುದರಿಂದ ಇದನ್ನೇ ಮಾಡುತ್ತ ಕುಳಿತರೆ ಅವುಗಳಿಗೆ ಸಮಯ ದೊರಕುವುದಿಲ್ಲ ವೆಂದು ''ಸರಿ, ಹಾಗಿದ್ದರೆ, ಇವತ್ತು ಬಂದವಳನ್ನೇ ಇಟ್ಟುಕೋ'' ಎಂದೆ.

ಈಗ ಕೆಲಸಕ್ಕೆ ಬರುವವಳ ಹೆಸರು ತಂಗಮಣಿ. ಅವಳು ಬೆಳಿಗ್ಗೆಯೇ ಬರುವವಳಾದ್ದರಿಂದ ತನಗೆ ಏಳಲಿಕ್ಕಾಗುವುದಿಲ್ಲ, ನೀವೇ ಎದ್ದು ಬಾಗಿಲನ್ನು ತೆರೆಯುವದಷ್ಟೇ ನಿಮ್ಮ ಕೆಲಸ. ಬಟ್ಟೆ (ಹಿಂದಿನ ದಿನದ) ರಾತ್ರಿಯೇ ತೋಯಿಸ್ಸಿಟ್ಟಿರುತ್ತೇನೆ, ಪಾತ್ರೆ, ಪೌಡರ್ ಅಲ್ಲಿಯೇ ಇರುತ್ತದೆ, ನೆಲ ಒರೆಸುವಷ್ಟೊತ್ತಿಗೆ ನಾನೆದ್ದು ಅವಳಿಗೇನಾದರೂ ತಿನ್ನಲು ಮಾಡಿಕೊಡುತ್ತೇನೆಂದು ಸವಿತಾ ರಾತ್ರಿಯೇ ಆಜ್ಞೆ ಮಾಡಿ ಮಲಗಿದ್ದಳು. ನಮ್ಮ ಮನೆಯಲ್ಲಿ ನಾವು ಬೆಳಗಿನ ತಿಂಡಿ ಮಾಡುವುದಿಲ್ಲ. ಚಪಾತಿ ಪಲ್ಯವನ್ನೇ ಬೇಗ ತಿಂದು ಬಿಟ್ಟು ಆಫೀಸಿಗೆ ಹೋಗುತ್ತೇನೆ. ಆಫೀಸಿನಲ್ಲೇ ಊಟವಾಗುವುದರಿಂದ ಸಂಜೆ ತಿಂಡಿ ತಿಂದು ಅಭ್ಯಾಸ. ಆದರೆ ಈ ಮಣಿಗೆ ಎರಡು ದಿನಕ್ಕೇ ಚಪಾತಿ ಬೇಸರವಾಗಿ 'ಆಂಟಿ, ದಿನವೂ ಚಪಾತಿ ನನಗೆ ಇಷ್ಟ ಆಗುವುದಿಲ್ಲ, ದೋಸೆ, ಇಡ್ಲಿ, ಬ್ರೆಡ್ ಹೀಗೆ ವೆರೈಟಿ ಬೇಕು ನನಗೆ. ನಿಮ್ಮನೆಯಲ್ಲಿ ಇವನ್ನೆಲ್ಲಾ ಮಾಡುವುದಿಲ್ಲವೇ? ನಿಮಗೂ ಒಂದೇ ಥರಹ ತಿನ್ನಲು ಬೇಜಾರಿಲ್ಲವೇ?'' ಎಂದಳಂತೆ. ''ಅದನ್ನೆಲ್ಲ ಸಂಜೆ ಮಾಡುತ್ತೇನೆ. ಭಾನುವಾರ ಇಲ್ಲವೇ ರಜಾ ದಿನಗಳಲ್ಲಿ ಮಾತ್ರ ಬೆಳಿಗ್ಗೆ ಅಂತಹ ತಿಂಡಿಗಳನ್ನು ಇಷ್ಟ ಪಡುತ್ತಾರ ಇವರು'' ಎಂದು ಸವಿತಾ ಹೇಳಿದರೆ ''ಹಾಗಿದ್ದರೆ ಫ್ರಿಜ್‌ನಲ್ಲಿ ಹಿಟ್ಟಿರುತ್ತದಲ್ಲ ದೋಸೆ, ಇಡ್ಲಿದು, ನನಗಷ್ಟೇ ಬೆಳಿಗ್ಗೆ ಮಾಡಿಕೊಡಿ'' ಎಂದಾಗ ಇವಳದು ಅತಿಯಾಯಿತು ಎನ್ನಿಸಿದರೂ ಬಿಡಿಸುವ ಧೈರ್ಯವಿಲ್ಲದೆ ಇವಳು ಅವಳಿಗೆ ದಿನವೂ ಬೇರೆ ಬೇರೆ ತಿಂಡಿ ಮಾಡಿಕೊಡತೊಡಗಿದಳು.

ನಾವಿಬ್ಬರೇ ಮನೆಯಲ್ಲಿ ಇರುವವ ರಾದ್ದರಿಂದ ಅಡಿಗೆಯನ್ನು ಹೆಚ್ಚಾಗಿ ಮಾಡಿ ಕೆಡಿಸುತ್ತಿರಲಿಲ್ಲ ಸವಿತಾ. ಒಂದು ದಿನ ನನ್ನ ಗೆಳೆಯರೆಲ್ಲ ಬಂದು ಬಿರ್ಯಾನಿ ಮಾಡಿ ಹೆಚ್ಚಾಗಿ ಉಳಿದದ್ದರಿಂದ ಮಣಿ ಸಂಜೆ ಪಾತ್ರೆ ತೊಳೆಯಲು ಬಂದಾಗ ಕೊಟ್ಟರೆ ನಮ್ಮ ಮುಂದೆಯೇ ಅದನ್ನು ಕಸದ ಬುಟ್ಟಿಗೆ ಹಾಕಿ ಪಾತ್ರೆ ತೊಳೆದಿಟ್ಟಳು. ವಿಪರೀತ ಕೋಪಗೊಂಡ ನಾನು ಯಾಕೆಂದು ಕೇಳಿದರೆ ''ನಮ್ಮ ಮನೆಯಲ್ಲಿ ತಂಗಳು ತಿನ್ನುವವರು ಯಾರೂ ಇಲ್ಲ, ನನ್ನ ಗಂಡ, ನನ್ನ ಮಕ್ಕಳು ಬಿಸಿ ಬಿಸಿ ಅನ್ನ ಕೇಳುತ್ತಾರೆ, ಇದನ್ನು ನಾನೇ ತಿನ್ನಬೇಕಾಗುತ್ತದೆ ಅದಕ್ಕೆ ಚೆಲ್ಲಿದೆ'' ಎಂದವಳೇ ಭರಭರನೇ ಹೋಗುವುದೇ! ಇವಳ ಮುಖ ನೋಡಿ ಸುಮ್ಮನಾಗಬೇಕಾಯಿತು ನಾನು.

ಇಷ್ಟರಲ್ಲಿ ಮಣಿಗೂ ತನ್ನನ್ನು ಬಿಟ್ಟು ಇವರಿಗೆ ಗತಿಯಿಲ್ಲ ಎನ್ನಿಸಿತೋ ಏನೋ, ಇನ್ನು ಮೇಲೆ ಪ್ರತೀ ಭಾನುವಾರ ರಜೆ ಎಂದಳಂತೆ. ಇವರೆಲ್ಲ ಸೇರಿಯೇ ಮಾತನಾಡಿಕೊಂಡಿದ್ದರೋ ಏನೋ, ಪಕ್ಕದ ಮನೆಯವರ ಕೆಲಸದವಳನ್ನು ಕೇಳಿದರೆ ಅವಳೂ ಅದನ್ನೇ ಹೇಳಿದಳು. ಸವಿತಾ ನನ್ನ ಸಮಾಧಾನಕ್ಕೆ ''ಇರಲಿಬಿಡಿ, ಹೇಗೂ ನಮಗೂ ಭಾನುವಾರ ಎಲ್ಲಿಗಾದರೂ ಹೋಗುವುದಿದ್ದೇ ಇರುತ್ತದೆ. ಅವಳನ್ನು ಕಾಯುತ್ತಾ ಕುಳಿತಿರುವುದರ ಬದಲು ಸೋಮವಾರ ಬಂದು ಕೆಲಸ ಮಾಡುತ್ತಾಳೆ ಅಲ್ಲವೇ'' ಎಂದಳು. ಎರಡು ತಿಂಗಳಾಗುವಷ್ಟರಲ್ಲಿ ಮತ್ತೆ ಕಿರಿಕಿರಿ ಶುರು ವಾಯಿತು.

''ನನ್ನದು ಬರೀ ಕಸ ಗುಡಿಸುವುದಷ್ಟೇ ಕೆಲಸ, ಬೆಡ್‌ಕ್ಲೀನ್ ಮಾಡಲ್ಲ ನಾನು, ನೀವು ಮಲಗಿ ಎದ್ದಿರುತ್ತೀರಿ, ನೀವೇ ಕ್ಲೀನ್ ಮಾಡಿಟ್ಟರೆ ನಾನು

ಆಗ-ಈಗ

ತಾನು ಪ್ರೀತಿಸುವಾಗ
'ಒಲವೆಂಬುದು ಬೆಳಕು'
ಎನ್ನುತ್ತಿದ್ದ ಮಂಜು
ಹುಡುಗಿ ಕೈ ಕೊಟ್ಟಾಗ
'ಒಲವೆಂಬುದು ಕುರುಡು'
ಎಂದದ್ದು ತಪ್ಪೇ?

-ಮಂಜುನಾಥ ಎನ್. ಹೊಸಾಡ



ಡೋಂಟ್ ಲಾಫ್ ಇನ್ ಕನ್ನಡ!

ನಮ್ಮನ್ನಗಲಿದ ಜ್ಞಾನಪೀಠ ಪ್ರಶಸ್ತಿ ಪಡೆದ ಶಿವರಾಮ ಕಾರಂತರು ವ್ಯಾಸಂಗ ಮಾಡುತ್ತಿದ್ದ ದಿನಗಳಲ್ಲಿ ನಡೆದ ಒಂದು ಘಟನೆ ಇದು. ಅವರು ಓದುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯರು, ಎಲ್ಲ ವಿದ್ಯಾರ್ಥಿಗಳೂ ಇಂಗ್ಲಿಷ್‌ನಲ್ಲಿಯೇ ಮಾತನಾಡಬೇಕೆಂದು ಕಡ್ಡಾಯ ಮಾಡಿದ್ದರು. ಹಾಗೆ ಇಂಗ್ಲಿಷ್‌ನಲ್ಲಿ ಮಾತನಾಡದ ವಿದ್ಯಾರ್ಥಿಗಳನ್ನು ದೂಷಿಸಿ, ಶಿಕ್ಷಿಸುತ್ತಿದ್ದರು. ಇದು ಕಾರಂತರಿಗೆ ಸರಿ ಬರಲಿಲ್ಲ.

ಒಂದು ದಿನ ಶಾಲೆಯ ಆವರಣದಲ್ಲಿ ಕಾರಂತರು ತಮ್ಮ ಸಹಪಾಠಿಗಳೊಂದಿಗೆ ಮಾತನಾಡುತ್ತಿದ್ದರು. ಸಹಪಾಠಿಗಳಲ್ಲಿ ಕೆಲವರು ಕೇಕೆ ಹಾಕಿ ನಗುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಮುಖ್ಯೋಪಾಧ್ಯಾಯರು ಅಲ್ಲಿಯೇ ಹಾದು ಹೋಗುತ್ತಿದ್ದುದನ್ನು ಗಮನಿಸಿದ ಕಾರಂತರು ಥಟ್ಟನೆ - 'ಏಯ್ ... 'ಫೂಲ್....! ಲಾಫ್ ಇನ್ ಇಂಗ್ಲಿಷ್. ಡೋಂಟ್ ಲಾಫ್ ಇನ್ ಕನ್ನಡ!' (ಏ... ಮೂರ್ಖ...! ಇಂಗ್ಲಿಷಿನಲ್ಲಿ ನಗು, ಕನ್ನಡದಲ್ಲಿ ನಗಬೇಡ) ಎಂದು ಮುಖ್ಯೋಪಾಧ್ಯಾಯರಿಗೆ ಕೇಳುವಂತೆ ಹೇಳಿದರು.

(ಸಂಗ್ರಹ) **ಶಂಕರಗೌಡ**



ಬ್ರೇಕ್‌ಡ್ಯಾನ್ಸ್‌ನ ಉಗಮ

ಸುಮಾರು ಅರುವತ್ತು ವರ್ಷಗಳ ಚರಿತ್ರೆಯನ್ನು ಹೊಂದಿದೆ ಎಂದು ಭಾವಿಸಲಾಗುವ ಬ್ರೇಕ್‌ಡ್ಯಾನ್ಸ್‌ನ ಮೂಲವನ್ನು ಆಫ್ರಿಕಾದ ಗ್ರಾಮೀಣ ನೃತ್ಯ ಪ್ರಕಾರದಲ್ಲಿ ಕಾಣಬಹುದಾಗಿದೆ. ಆಫ್ರಿಕಾದ 'ಇಬಡಿಬೇಡಿ' ಎಂಬ ನೃತ್ಯದ ಸಮನಾಂತರ ರೂಪವೇ ಬ್ರೇಕ್‌ಡ್ಯಾನ್ಸ್ ಎಂದು ವಾದಿಸುವವರು, ಇದು ಯುರೋಪ್‌ನಲ್ಲಿ ಮೊಳಕೆಯೊಡೆಯಿತೆಂಬುದನ್ನು ಅಲ್ಲಗೆಳೆಯುತ್ತಾರೆ. ಒಬ್ಬ ಸೈನಿಕನ ಕೊಲೆಯಾದಾಗ ಈ ಹೋರಾಟಗಾರನ ತೆರವಾದ ಸ್ಥಾನಕ್ಕೇರುವ ಶಕ್ತಿ ನೃತ್ಯವೇ ಇಬಡಿಬೇಡಿ. ಈ ನೃತ್ಯಕ್ಕೆ ಪ್ರತ್ಯೇಕವಾದ ನಾಡ ವಾದ್ಯಗಳನ್ನೂ ಉಪಯೋಗಿಸಲಾಗುತ್ತಿತ್ತು. ಐವತ್ತರ ದಶಕದಲ್ಲಿ ಅಮೇರಿಕಕ್ಕೆ ವಲಸೆ ಬಂದ ಆಫ್ರಿಕಾದ ಗ್ರಾಮೀಣ ನೃತ್ಯಗಾರರು 'ಇಬಡಿಬೇಡಿ'ಯ ರುಚಿ ಹಚ್ಚಿಸಿದರು. ಇದಕ್ಕೆ ಆರಂಭಿಕ ಪ್ರಚಾರ ಕೊಟ್ಟವನೆಂದರೆ ಆಫ್ರಿಕಾದ 'ಚೆಕ್‌ಡೇವಿಸ್' ಎಂಬುವನು. ಮುಂದೆ ಇದು 'ಬ್ರೇಕ್‌ಡ್ಯಾನ್ಸ್' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

(ಸಂಗ್ರಹ) **ಶಂಕರಗೌಡ**

ಕಸಗುಡಿಸುತ್ತೇನೆ, ಇಲ್ಲವೆ ಅದಕ್ಕೆ ಎಕ್ಸಟ್ರಾ ದುಡ್ಡು ಕೊಡಿ ತಿಂಗಳಿಗೆ ಇಪ್ಪತ್ತೈದು ರೂಪಾಯಿ''. ಮಣಿಯ ಮಾತು ಕೇಳಿ ನನ್ನ ಮೈ ಉರಿದುಹೋಯಿತು. ''ಅಲ್ಲಮ್ಮಾ, ಇದೇ ಎಲ್ಲದಕ್ಕೂ ಅನ್ವಯಿಸುತ್ತದಲ್ಲ, ನಾವು ಊಟ ಮಾಡಿರುತ್ತೇವೆ, ನೀನೇಕೆ ತೊಳೆಯಬೇಕು, ಕಸ ನಮ್ಮ ಮನೆಯಲ್ಲಿ ನಾವೇ ಹರಡಿರುತ್ತೇವೆ, ನೀನೇಕೆ ಗುಡಿಸಬೇಕು, ಹೀಗೆಂದರೆ ನೀನ್ಯಾಕಿಲ್ಲಿ ಬರಬೇಕು, ಬರೀ ಸಂಬಳ ಮಾತ್ರ ಬೇಕು ದೊಡ್ಡ ಗಾತ್ರದ್ದು, ಕೆಲಸ ಬೇಡವಾ, ಬೇಕಿದ್ದರೆ ಮಾಡು, ಇಲ್ಲದಿದ್ದರೆ ಬಿಟ್ಟು ಬಿಡು'' ಎಂದು ಹೇಳಿ ನಾನು ಆಫೀಸಿಗೆ ಹೊರಟುಹೋದೆ. ''ನಿನ್ನ ಗಂಡ ಎಲ್ಲದರಲ್ಲೂ ಮಾತನಾಡಲು ಬಂದು ಬಿಡುತ್ತಾರೆ, ನೀನು ನೋಡಿದರೆ ಏನೂ ಹೇಳುವುದಿಲ್ಲ, ನೀನು ಬೇರೆಯವರನ್ನು ನೋಡಿಕೊ'' ಎಂದು ಮಣಿ ಹೊರಟುಹೋದಳಂತೆ. ಇವಳಿಗೆ ಮತ್ತೆ ಶುರುವಾಯಿತು ತಲೆನೋವು.

ಹೀಗೇ ಒಂದು ತಿಂಗಳು ಹುಡುಕಿದ ಮೇಲೆ ಲಕ್ಷ್ಮೀ ಎನ್ನುವವಳೊಬ್ಬಳು ಸಿಕ್ಕಿ ಕೆಲಸಕ್ಕೆ ಬರತೊಡಗಿದಳು. ಮೊದಲಿಗಿಂತ ಐವತ್ತು ರೂಪಾಯಿ ಹೆಚ್ಚು ಸಂಬಳ, ಭಾನುವಾರಗಳಲ್ಲದೆ, ಹಬ್ಬ ಹರಿದಿನಗಳಿಗೆಲ್ಲ ರಜೆ. ಅವಳು ತಪ್ಪಿಸಿದರೂ, ನಾವೇ ಊರಿಗೆ ಹೋದರೂ ಸಂಬಳದಲ್ಲಿ ಕಡಿತ ಮಾಡುವಂತಿಲ್ಲ. ಇವಳು ಬರುವ ಟೈಮ್ ಊಟದ್ದಾದ್ದರಿಂದ ಊಟ ಕೊಡುವ ನಿಯಮವನ್ನು ಹಾಕಿಯೇ ಬಂದಿದ್ದಳು. ಬಂದು ವಾರವಾಗಿಲ್ಲ, ''ನಿಮ್ಮ ಮನೆಯ ಅನ್ನ ಯಾಕೋ ಚೆನ್ನಾಗಿರುವುದೇ ಇಲ್ಲ, ರೇಷನ್ ಅಕ್ಕಿಯಾ, ಹೀಗೇಕೆ ಮುದ್ದೆ ಮುದ್ದೆ ಇರುತ್ತದೆ'' ಎಂದು ಕೇಳಿದಳಂತೆ. ನನಗೆ ಉದುರು ಅನ್ನ ಇಷ್ಟವಿಲ್ಲ ಎಂದು ಮೆತ್ತಗೆ ಆಗಲೆಂದು ಸವಿತಾ ಸ್ವಲ್ಪ ಹೆಚ್ಚು ನೀರನ್ನು ಹಾಕಿಯೇ ಅನ್ನ ಮಾಡುತ್ತಿದ್ದಳು. ಆಗೇನೋ ಅವಳಿಗೆ ದಬಾಯಿಸಿದರೂ ಸವಿತಾ ಅವಳಿಗಿಷ್ಟವಾಗುವಂತೆ ಉದುರುದುರಾಗಿ ಅನ್ನ ಮಾಡತೊಡಗಿ, ನನ್ನಿಂದ ಬಯ್ಯಿಸಿಕೊಳ್ಳತೊಡಗಿದಳು. ಸವಿತಾಳಿಗೆ ಪಲ್ಯಗಳಿಗೆಲ್ಲ ಸ್ವಲ್ಪ ರುಚಿಗೆ ಸಕ್ಕರೆ ಹಾಕಿ ಅಭ್ಯಾಸ. ''ಇದೇನು ಸ್ವೀಟ್, ಸ್ವೀಟ್ ಮಾಡುತ್ತೀರಿ, ನನಗೆ ಪಲ್ಯ ತಿನ್ನಲಾಗುತ್ತಲೇ ಇಲ್ಲ, ಸುಮ್ಮನೆ ನನಗೆ ಅನ್ನ, ಚಪಾತಿ ಕಟ್ಟಿಕೊಡಿ, ಮನೆಗೆ ಹೋಗಿ ತಿನ್ನುತ್ತೇನೆ'' ಲಕ್ಷ್ಮಿ ಹೇಳಿದಾಗ ಸವಿತಾ ''ನಾನು ನಿಮ್ಮ ಸಲುವಾಗಿ ಅಡುಗೆ ಮಾಡುವುದೋ ಅಥವಾ ನಮ್ಮ ಸಲುವಾಗಿಯೋ'' ಎಂದು ಬಯ್ದರೂ ಮನೆಗೆ ಕಟ್ಟಿ ಕೊಡುವುದು ಪ್ರಾರಂಭವಾಯಿತು.

ಕೆಲಸ ನೋಡಿದರೆ ಬರೀ ಹಾಳು, ಕಸ ಗುಡಿಸಲು ಐದೇ ನಿಮಿಷ . ಎಲ್ಲ ಕೆಲಸಗಳೂ ಸೇರಿ ಅರ್ಧಘಂಟೆಯಲ್ಲಿ ಮುಗಿಸಿಬಿಡುತ್ತಿದ್ದಳು. ಪರಿಣಾಮವಾಗಿ ನಮ್ಮ ಬಟ್ಟೆಗಳು ಬಣ್ಣ ಕಳೆದುಕೊಂಡು ಬೇಗ ಹರಿದುಹೋಗತೊಡಗಿದವು. ಇಷ್ಟರಲ್ಲಿ ದೀಪಾವಳಿ ಹಬ್ಬ ಬಂದಿತು. ''ನನಗೊಂದು ಸೀರೆ ಕೊಡಿ'' ಎಂದದ್ದಕ್ಕೆ ನಾನು ''ನಿನ್ನದೇ ಹಳೆಯದು ಕೊಡು'' ಎಂದಾಗ ಸವಿತಾ ಕೊಟ್ಟಳು. ''ಇದಂತೂ ಹಳೆಯದಮ್ಮ, ಹಬ್ಬಕ್ಕೆ ಹೊಸತು ಕೊಡಿ'' ಎಂದು ಜಗಣೆಯಂತೆ ಕಾಡತೊಡಗಿದಾಗ ಒಂದು ಸೀರೆ ತಂದುಕೊಟ್ಟೆವು. ಅದನ್ನು ನೋಡಿ ಅವಳು ''ಇದೇನು ಸೀರೆ ಎಂದು ತಂದಿರಿ, ನಾನುಡುವುದು ಬರೀ ಪೂನಮ್ ಸೀರೆ ಮಾತ್ರ, ಅದೊಂದೇ ಸೀರೆ ನನಗೆ ಉದ್ದ, ಅಗಲ ಇದ್ದು ಸರಿ ಆಗುತ್ತದೆ, ಅದು ಬಿಟ್ಟು ನೀವು ಫಾರಿನ್ ಸೀರೆ ಕೊಟ್ಟರೂ ಬೇಡ ನನಗೆ'' ಎನ್ನುವುದೇ! ದಂಗಾದ ನಾವು ಆ ಸೀರೆಯನ್ನು ನಾವೇ ಇಟ್ಟುಕೊಂಡು ಇನ್ನೂರು ರೂಪಾಯಿ ಕೊಡಲು ಹೋದರೆ ''ಅಷ್ಟಕ್ಕೆ ಬರುವುದಿಲ್ಲಮ್ಮ, ಮುನ್ನೂರು, ಮುನ್ನಾರೈವತ್ತು ಬೇಕು'' ಎಂದಳು. ''ನಮಗಾಗುವುದಿಷ್ಟೇ, ಬೇಕಿದ್ದರೆ ತೆಗೆದುಕೋ, ಇಲ್ಲ ಬಿಡು'' ಕೋಪದಿಂದ ಸವಿತಾ ಹೇಳಿದಾಗ ಗೊಣಗುತ್ತಾ ತೆಗೆದುಕೊಂಡಳು. ನಾವು ಹಬ್ಬಕ್ಕೆ ಹೊಸ ಬಟ್ಟೆ ತೆಗೆದುಕೊಳ್ಳದಿದ್ದರೂ ಪರವಾಗಿಲ್ಲ, ಇವಳಿಗೆ ಪೂನಮ್ ಸೀರೆ ಬೇಕಂತೆ, ಅಬ್ಬಾ ಕೆಲಸದವರೇ ಎಂದುಕೊಂಡೆವು.

ಇಷ್ಟರಲ್ಲಿ ನಮಗೊಂದು ಪುಟ್ಟ ಮಗುವಾಗಿತ್ತು. ಅದರ ಬಟ್ಟೆ ತಾನು ತೊಳೆಯುವುದಿಲ್ಲವೆಂದು ಮೊದಲೇ ಹೇಳಿದಳು. ನನ್ನ ಅಮ್ಮನೇ ಪುಟ್ಟ ಮಗುವಿನ ಬಟ್ಟೆ ಅದೆಷ್ಟಿರುತ್ತದೆ ಬಿಡು ಎಂದು ತೊಳೆಯುತ್ತಿದ್ದರು. ಎಂದಾದರೂ ಒಮ್ಮೆ ತಪ್ಪಿ ಪಾಪೂನ ಬಟ್ಟೆ ಬಂದರೆ ''ಥೂ ಏನು ವಾಸನೆ'' ಎನ್ನತೊಡಗಿದಾಗ ಅಮ್ಮ ಈ ಸಾರಿ ಲಕ್ಷ್ಮಿಯನ್ನು ತೆಗೆದುಹಾಕಿದರು. ಅತ್ತೆಯ ಕಷ್ಟ ನೋಡಲಾರದೆ ಮತ್ತೆ ಶುರುವಾಯಿತು ಬೇಟೆ.

ಹೀಗೇ ಮೂರ್ನಾಲ್ಕು ಜನ ಬಂದರು, ಎರಡು ತಿಂಗಳಲ್ಲಿ ಹೋದರು. ಅವರೆಲ್ಲರ ಸರದಿ ಮುಗಿದ ಮೇಲೆ ಬಂದವಳು ಪೊನ್ನಿ. ಅವಳಿಗೆ ಊಟ-ತಿಂಡಿಯ ಕೆಲಸ ಹಚ್ಚಿಕೊಳ್ಳಬಾರದೆಂದು ನಿರ್ಧರಿಸಿದ್ದರಿಂದ ಐವತ್ತು ರೂಪಾಯಿ ಹೆಚ್ಚಿಗೆ ಕೊಡುವುದು, ಬಾತ್‌ರೂಮ್ ತೊಳೆದರೆ ಐವತ್ತು ಹೆಚ್ಚಿಗೆ, ಮೊದಲಿನ ಎಲ್ಲ ಕರಾರುಗಳೊಂದಿಗೆ ಇವಳ ಹೊಸ ಕರಾರುಗಳೆಂದರೆ ಬೆಡ್‌ಶೀಟ್ಸ್ ಒಗೆಯುವುದಿಲ್ಲ, ಪ್ಯಾಂಟ್, ಶರ್ಟ ವಾರಕ್ಕೊಮ್ಮೆ ಮಾತ್ರ ಹಾಕಬೇಕು, ಮಗು ದೊಡ್ಡದಾಗುವವರೆಗೆ

ಇರಲಿ ಅನಿವಾರ್ಯ ಎಂದುಕೊಂಡರೆ ಪಾತ್ರೆಯಲ್ಲಿಯ ಪೌಡರ್ ಪಾತ್ರೆಯಲ್ಲಿಯೇ, ಒಮ್ಮೆ ಬಟ್ಟೆ ತೋಯ್ಸಿದರೆ ಸಾಕು. ಇಡಿ ಮನೆಯನ್ನೆಲ್ಲ ಅದರಲ್ಲಿಯೇ ಒರೆಸುವುದು, ಬಟ್ಟೆಗಳೆಲ್ಲ ಬಿಳಿಯಿಂದ ಹಳದಿಗೆ, ಗುಲಾಬಿಯಿಂದ ಕಪ್ಪಗೆ, ಹೀಗೇ ಬಣ್ಣ ಬದಲಾಯಿಸಿದವು. ಪೊನ್ನಿ ನೀರಲ್ಲಿ ಜಾಲಾಡಿಸಿ ಬಟ್ಟೆ ಒಣಹಾಕಿಬಿಡುತ್ತಿದ್ದುದರಿಂದ ಕೊಳೆ ಅದರಲ್ಲಿಯೇ ಉಳಿದು ಬೇಗ ಹರಿದು ಹೋಗತೊಡಗಿ ಒಳಉಡುಪುಗಳನ್ನೆಲ್ಲ ಎರಡು ತಿಂಗಳಿಗೊಮ್ಮೆ ಹೊಸದಾಗಿ ಕೊಳ್ಳಬೇಕಾಯಿತು ನಾವು. ಹೀಗ್ಯಾಕೆ ಎಂದು ಅಮ್ಮ ಬಯ್ಯ ತೊಡಗಿದಳು. ಅಮ್ಮ ಇಲ್ಲದಿರುವಾಗ ಪೊನ್ನಿ ಸವಿತಾಗೆ ಹೇಳಿದಳಂತೆ "ನಿಮ್ಮತ್ತೆಯದು ತುಂಬಾ ಕಿರಿಕಿರಿ, ನನಗೇ ಇಷ್ಟು ಬೇಜಾರು, ನೀನು ಹೇಗೆ ಸಹಿಸುತ್ತಿಯೋ, ಹತ್ತು ಮನೆಯ ಕೆಲಸ ಮಾಡುವ ನಾನು ನಿಮಗೇ ನನ್ನ ಸಮಯವನ್ನೆಲ್ಲಾ ಉಪಯೋಗಿಸಬೇಕೇ"? ಅವಳಿಗೇನಾದರೂ ಅಂದರೆ ಮತ್ತೆ ಅವಳೂ ಬಿಟ್ಟಾಳೆಂದು ಸವಿತಾ ಸುಮ್ಮನೆ ಸಹಿಸಿದಳು. ಲಂಗ ಕೊಡಿ, ಸೀರೆ ಕೊಡಿ, ಶರ್ಟು ಕೊಡಿ ಎನ್ನುವ ಕಿರಿಕಿರಿ ಸಹಿಸುತ್ತಿದ್ದರೂ ಪೊನ್ನಿ ಮತ್ತೆ ಹೊಸ ಕರಾರು ಹಾಕತೊಡಗಿದಳು. ಅದೇನೆಂದರೆ ನಮ್ಮ ಮನೆಗೆ ವಿಪರೀತ ಅತಿಥಿಗಳು ಬರುತ್ತಾರೆ. ಹಾಗೆ ಯಾರಾದರೂ ಬಂದಾಗ ಲೊಮ್ಮೆ ಪೊನ್ನಿಗೆ ಹೆಚ್ಚಿಗೆ ದುಡ್ಡು ಎಂದು. ಅವಳು ಮಾಡುವ ಕೆಲಸಕ್ಕೆ ಅದೊಂದು ಕೇಡು ಎಂದರು ಅಮ್ಮ. ಆ ತಿಂಗಳ ಕೊನೆಗೆ ಪೊನ್ನಿ ಹೇಳಿದಳು, ನಿಮ್ಮ ಅಮ್ಮ ತುಂಬ ಪಾತ್ರೆ, ಬಟ್ಟೆ ಹಾಕುತ್ತಾರೆ, ಅವರು ಇಲ್ಲಿಯೇ ಇರುವುದಾದರೆ ಐವತ್ತು ರೂಪಾಯಿ ಹೆಚ್ಚಿಗೆ ಕೊಡಬೇಕು, ಅವರ ಕಿರಿಕಿರಿಯೂ ಹೆಚ್ಚು".

ಇಷ್ಟೊತ್ತಿಗಾಗಲೇ ಸೋತು ಹೋಗಿದ್ದ ಸವಿತಾ "ಇನ್ನು ನೀನು ನಮ್ಮ ಮನೆ ಕೆಲಸಕ್ಕೆ ಬರ ಬೇಡ, ನಮಗೆ ಕೆಲಸದವರೇ ಬೇಕಾಗಿಲ್ಲ" ಎಂದು ಕಳಿಸಿಬಿಟ್ಟಳು. ನಾನೂ ಹೇಳಿದೆ "ಹೇಗೂ ಪಾಪೂ ದೊಡ್ಡದಾಗಿದೆ. ನೀನು ಎಕ್ಸರ್‌ಸೈಜ್‌ಗೆ, ಎರೋಬಿಕ್ಸಗೆ ಸೇರಿ ಬೇರೆಯವರಂತೆ ಸಣ್ಣಗಾಗಲು ಪ್ರಯತ್ನಿಸುವ ಬದಲು ಮನೆಕೆಲಸವನ್ನೇ ಮಾಡಿದರೆ ಸಾಕು, ಸಣ್ಣಗೂ ಆಗುತ್ತೀ, ಆರೋಗ್ಯ ಸುಧಾರಿಸುವುದರ ಜೊತೆಗೆ ಹಣದ ಉಳಿತಾಯವೂ ಆಗುತ್ತದೆ. ಅವಳಿಗೆ ಕೊಡುವ ಐನೂರು-ಆರ್ನೂರು ರೂಪಾಯಿಯಲ್ಲಿ ನಿನಗೆ ಬೇಕಾದ ಸಾಮಾನೋ, ಸೀರೆಯೋ ಕೊಳ್ಳಬಹುದು. ಬೆಳಿಗ್ಗೆ ನಾನು ಕಸಗುಡಿಸಿ ನಿನಗೆ ಸಹಾಯ ಮಾಡುತ್ತೇನೆ. ನನಗೂ ಒಳ್ಳೆಯ ವ್ಯಾಯಾಮ ಆಗುತ್ತದೆ. ವಾರಕ್ಕೆರಡು ಸಾರಿ ಕ್ಲೀನಾಗಿ ನೆಲ ಒರೆಸಿದರೆ ಸಾಕು" ಎಂದೆ.

ಇದಾದ ಮೇಲೆ ತುಂಬ ನೆಮ್ಮದಿಯಿಂದಿದ್ದೇವೆ ನಾವು ನಾವಿಬ್ಬರು, ನಮಗೊಂದು ಮಗು ಎದೆ. ಈಗ ಯಾರ ಕಾಟವೂ ಇಲ್ಲದೆ, ಕೆಲಸದವರ ಕಿರಿಕಿರಿ, ಚುಚ್ಚುವಿಕೆ, ಹಣಕ್ಕಾಗಿ ಅವರ ಜಗಳ, ಕಾಟ ಇಲ್ಲದೆ ಹಾಯಾಗಿದ್ದಾಳೆ ನನ್ನ ಸವಿತಾ.

■ ಸುಮಾ ನಾಯಕ

49-ಎ/6, 'ಅಕ್ಷಯ' ಅಪಾರ್ಟ್‌ಮೆಂಟ್ಸ್
ವೆಲಕಮ್ ಕಾಲೋನಿ ಹತ್ತಿರ ಪಾರ್ಕ್ ರಸ್ತೆ
ಅಣ್ಣಾನಗರ ವೆಸ್ಟ್ ಎಕ್ಸ್‌ಟೆನ್‌ಷನ್,
ಚೆನ್ನೈ - 40.

ಆಕಾಶದಿಂದ ಬೀಳುವ ಕಪ್ಪೆ, ಮೀನುಗಳು!



ಈ ರೀತಿ ಆಗಸದಿಂದ ಕಪ್ಪೆಗಳ ಸುರಿಮಳೆಯಾದ ವರದಿಗಳು ಹಲವಾರು ದೇಶಗಳಲ್ಲಿ ಇವೆ.

5

■ ನಾರಾಯಣ ಎಂ. ಭಟ್

ಆಕಾಶದಿಂದ ಮಳೆ ನೀರು ಸುರಿಯುವುದು ಎಲ್ಲರಿಗೂ ಗೊತ್ತು. ಆದರೆ, ಕಪ್ಪೆ, ಮೀನು, ಏಡಿ ಇತ್ಯಾದಿಗಳ ಸುರಿಮಳೆಯಾಗುವುದರ ಬಗ್ಗೆ ಗೊತ್ತೇ?

1954ರ ಜೂನ್ ತಿಂಗಳ 12ನೇ ತಾರೀಖು. ಬ್ರಿಟೀಷ್ ಮಹಿಳೆಯೊಬ್ಬಳು ತನ್ನ ಮಕ್ಕಳೊಂದಿಗೆ ರಾಯಲ್ ನೇವಿ (RoyalNavy)ಯ ಕವಾಯಿತು ಪ್ರದರ್ಶನ ನೋಡಿದ ಬಳಿಕ ಮನೆಗೆ ಹಿಂತಿರುಗುತ್ತಿದ್ದಳು. ಆಗ, ಒಮ್ಮಿಂದೊಮ್ಮೆಲೆ ಭಾರಿ ಮಳೆ ಶುರು ಆಯಿತು. ಅವಳ ಮಗಳು ಪುಟ್ಟ ಕೊಡೆಯೊಂದನ್ನು ಬಿಚ್ಚಿ ಹಿಡಿದುಕೊಂಡಳು. ಕೊಡೆಯ ಮೇಲೆ ಏನೋ ಬೀಳುತ್ತಿರುವಂತೆ ಭಾಸವಾಯಿತು. ನೋಡು, ನೋಡುತ್ತಿದ್ದಂತೆಯೇ, ಚಿಕ್ಕ ಕಪ್ಪೆಗಳ ಸುರಿ ಮಳೆಯಾಯಿತು. ತಾಯಿ ಹಾಗು ಮಕ್ಕಳು ಈ ದೃಶ್ಯವನ್ನು ನೋಡಿ ದಂಗಾಗಿ ಬಿಟ್ಟರು.

ಅವರಿಗೆ ಒಂದು ಹೆಜ್ಜೆಯೂ ಮುಂದಿಡಲಾಗಲಿಲ್ಲ. ಎಲ್ಲಿ ನೋಡಿದರಲ್ಲಿ ಕಪ್ಪೆಗಳೇ ತುಂಬಿಕೊಂಡಿದ್ದವು. ಮುಕ್ಕಾಲು ಇಂಚಿನಷ್ಟು ಪುಟ್ಟದಾಗಿರುವ ಈ ಕಪ್ಪೆ ಮರಿಗಳು ಖಾಕಿ ಬಣ್ಣದಾಗಿದ್ದು, ಅವುಗಳು ಇದೇ ತಾನೆ ಮರಿ ಅವಸ್ಥೆಯನ್ನು ಪಡೆದಿರುವಂತಿತ್ತು.

ಈ ರೀತಿ ಆಗಸದಿಂದ ಕಪ್ಪೆಗಳ ಸುರಿಮಳೆಯಾದ ವರದಿಗಳು ಹಲವಾರು ದೇಶಗಳಲ್ಲಿ ಇವೆ.

ಲಂಡನ್‌ನ Sunday express ನಲ್ಲಿ ಅಂದಿನ ಪ್ರಸಿದ್ಧ ಅಂಕಣಕಾರ್ತಿಯಾಗಿದ್ದ ವರೊನಿಕಾ ಪಾಪ್ ವರ್ತ್ ಸಹ ತನ್ನ ಅನುಭವವನ್ನು ಹೇಳಿಕೊಂಡಿದ್ದಾಳೆ. ಪಾರ್ಟಿಗೆ ಹೊರಟಿದ್ದ ಅವಳ ಮೇಲೆ ಕಪ್ಪೆಗಳ ಸುರಿಮಳೆ ಆಯಿತಂತೆ. ಆದರೆ, ಪಾರ್ಟಿಯಲ್ಲಿ ಇದನ್ನು ಹೇಳಿದರೆ ಎಲ್ಲರೂ ತನ್ನನ್ನು ಅಪಹಾಸ್ಯ ಮಾಡಿಯಾರು ಎಂದು ಸುಮ್ಮನಿದ್ದಳಂತೆ. ಅವಳ 'ದೊಗಲೆ ಪ್ಯಾಂಟ' ನಿಂದ ಚಂಗನೇ ಹಾರಿ ಬಂದ ಕಪ್ಪೆಮರಿಗಳು ಸತ್ಯಾಂಶವನ್ನು ಎಲ್ಲರಿಗೂ ಸಾರಿ ಹೇಳಿದವು!

ಚಾರ್ಲ್ಸ್ ಫೋರ್ಟ್ ಇಂತಹ ವಿಚಿತ್ರ ಸುರಿಮಳೆಗಳ ಹಲವು ದಾಖಲೆಗಳನ್ನು ಸಂಗ್ರಹಿಸಿದ್ದ. (ಕಳೆದ ಸಂಚಿಕೆ ನೋಡಿ)

ಪೆಯೋನಿಯಾ ಹಾಗು ದಾರ್‌ದಾನಿಯ ಎಂಬ ಸ್ಥಳಗಳಲ್ಲಿ ಅದೆಷ್ಟು ಜೋರಾಗಿ ಹಾಗು ಭಯಂಕರವಾಗಿ ಕಪ್ಪೆಗಳ ಸುರಿಮಳೆಯಾಯಿತೆಂದರೆ ಊರ ಜನ ಅಲ್ಲಿ ವಾಸ ಮಾಡಲಾಗದೆ ಊರು ಬಿಟ್ಟು ಹೊರ ಓಡಿದರಂತೆ.

ಪಾಪ, ಮತ್ತಿನ್ನೇನು ಮಾಡಲು ಸಾಧ್ಯ? ಅವರಲ್ಲಿರುವ ಪ್ರತಿಯೊಂದು ಪಾತ್ರೆ, ಪಗಡಿ ತುಂಬೆಲ್ಲಾ ಬರೀ ಕಪ್ಪೆ ಮರಿಗಳೇ ದೊರೆತರೇ. ಅವರು ಬೇಯಿಸಿಕೊಂಡು ತಿನ್ನುವುದಾದರೂ ಹೇಗೆ? ಸತ್ತು ಬಿದ್ದ ಕಪ್ಪೆ ರಾಶಿಗಳ ದುರ್ಗಂಧ ನಾತವನ್ನು ತಾಳಲಾರದೆ ಅವರೆಲ್ಲ ತಮ್ಮ ಊರನ್ನೇ ಬಿಟ್ಟು ಬಿಟ್ಟರಂತೆ.

ಸುಪ್ರಸಿದ್ಧ The Guardian ಪತ್ರಿಕೆಯೂ ಫ್ರಾನ್ಸ್‌ನಲ್ಲಿ ಸುರಿದ ಕಪ್ಪೆಗಳ ಸುರಿಮಳೆಯನ್ನು "Raining cats and frogs' ಎಂದು ಶೀರ್ಷಿಕೆ ನೀಡಿ ಪ್ರಕಟಿಸಿತ್ತು.

ನಮ್ಮ ದೇಶದಲ್ಲಿಯೂ ಇಂತಹ ವಿಚಿತ್ರ ಮಳೆಯಾದ ಬಗ್ಗೆ ದಾಖಲೆಗಳಿವೆ. Journal and proceeding of the Asiatic Society of Bengal ನಲ್ಲಿ ಒಬ್ಬ ವಿಜ್ಞಾನಿಯು ಮುಜಾಫರ್‌ಪುರನಲ್ಲಿ 'ಟೆನಿಸ್' ಆಟದ ಮೈದಾನದಲ್ಲಿ ಸಣ್ಣ ಬಿಳಿ ಬಣ್ಣದ ಮೀನುಗಳ ಸುರಿಮಳೆಯಾದ ಬಗ್ಗೆ ವಿವರಿಸಿದ್ದಾನೆ. ಒಂದೊಂದು ಬಾರಿ ಆಗುವ ಇಂತಹ ಮೀನು ಮಳೆ ಜನರಿಗೆ ಅಪಾರ ಸಂತಸ ಉಂಟು ಮಾಡುತ್ತಿತ್ತಂತೆ. ಅನಾಯಾಸವಾಗಿ ದೊರೆತ ಮೀನುಗಳಿಂದ ಪ್ರತಿಯೊಬ್ಬರು ಭಾರಿ ಭರ್ಜರಿ ಮೀನಿನ ಊಟ ಮಾಡಿ ಸಂತೃಪ್ತಿಯಿಂದ ತೇಗುತ್ತಿದ್ದರಂತೆ!

ಈ ರೀತಿಯ ಹಲವು ವಿಕಾರ ಪ್ರಳಯಗಳ ಬಗ್ಗೆ ಬರೆಯುತ್ತಾ ಹೋದರೆ ಒಂದು ಇಡೀ ಪುಸ್ತಕವೇ ಬೇಕಾದೀತು! ಆದರೆ ಕೆಲವು ಪ್ರಮುಖವಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು. Weather wise ಎನ್ನುವ ಪ್ರತಿಷ್ಠಿತ ಅಮೇರಿಕನ್ ಹವಾಮಾನ ಪತ್ರಿಕೆಯ ಸಂಪಾದಕರ ಬಳಿ, 1819ರಲ್ಲಿ ನ್ಯೂಯಾರ್ಕ್‌ನಲ್ಲಿ 13 ಇಂಚು ಉದ್ದವಿರುವ Herringಗಳ ಸುರಿಮಳೆಯಾದ ಬಗ್ಗೆ ವರದಿ ಇದೆ. 1894ರಲ್ಲಿ ಬೋವಿನಾ

ಪ್ರದೇಶದಲ್ಲಿ ಆಮೆಯೊಂದು ಬಿದ್ದ ಹಾಗೆ ಉಲ್ಲೇಖವಿದೆ. ಹಿಮಗಟ್ಟಿದ ಬಾತುಕೋಳಿಗಳ ಸುರಿಮಳೆ 1933ರಲ್ಲಿ ವರ್‌ಕೆಸ್ಟರ್ ಪ್ರಾಂತ್ಯದಲ್ಲಿ ಆಯಿತು ಎಂದು ತಿಳಿಸುವ ದಾಖಲೆಗಳು ಇಂದಿಗೂ ಲಭ್ಯ.

1829ರಲ್ಲಿ 'ರೇ ಗೇಟ್' ಎನ್ನುವಲ್ಲಿ ಆಕಾಶದಿಂದ 'ಏಡಿ'ಗಳು ಬಿದ್ದ ಬಗ್ಗೆ Lord Eastnor ಎನ್ನುವಾತ ವರದಿ ಮಾಡಿದ್ದಾನೆ.

ಹಾಗಾದ್ರೆ, ನಿಜಕ್ಕೂ ಆಕಾಶದಿಂದಲೇ ಈ ಎಲ್ಲ ಜೀವಿಗಳು ಬಿದ್ದವೇ? ಈ ಪ್ರಶ್ನೆಗೆ ಸಮರ್ಪಕವಾದ ಉತ್ತರ ಯಾರಿಗೂ ಗೊತ್ತಿಲ್ಲ.

ಆದರೂ, William R. Carliss ಎಂಬಾತ ತಾನು ರಚಿಸಿದ Handbook of Unusual natural phenomena' ಎಂಬ ಪುಸ್ತಕದಲ್ಲಿ ಈ ವಿದ್ಯಮಾನದ ಬಗ್ಗೆ ಹೀಗೆ ವಿವರಣೆ ನೀಡಿದ್ದಾನೆ.

ಈ ರೀತಿಯ ವಿಚಿತ್ರ ಮಳೆಗೆ ಕಾರಣ, ಬಹುಶಃ ಹತ್ತಿರದಲ್ಲಿರುವ ನೀರಿನ ಕೊಳ ಅಥವ ನದಿ, ಸಮುದ್ರ ಇತ್ಯಾದಿಗಳಲ್ಲಿ ಉಂಟಾದ ಅಸಹಜ ಸುಂಟರಗಾಳಿಯಿಂದಾಗಿ ಅಲ್ಲಿ ಬದುಕುವ ಮೀನು, ಕಪ್ಪೆ ಇತ್ಯಾದಿಗಳು ನೀರಿನಿಂದ ಮೇಲಕ್ಕೆ ಸೆಳೆಯಲ್ಪಟ್ಟು ಆಕಾಶವನ್ನು ಸೇರಿರಬೇಕು ಎಂದು ವಿವರಿಸಬಹುದಾದರೂ, ಇಲ್ಲಿ ಕೆಲವು ಸಂಗತಿಗಳು ಬಗೆಹರಿಯದೆ ಉಳಿದು ಬಿಡುತ್ತವೆ. ಅಸಹಜ ಸುಂಟರಗಾಳಿಯು ಕೇವಲ ಒಂದೇ ರೀತಿಯ (ಪ್ರಭೇದದ) ಜೀವಿಗಳನ್ನಷ್ಟೇ ಯಾಕೆ ಸಾಗಿಸುತ್ತದೆ? ಅಂದರೆ ನೀರಿನಲ್ಲಿ ಎಷ್ಟೋ ಬಗೆಯ ಕಪ್ಪೆಗಳಿದ್ದರೂ ಕೇವಲ ಒಂದೇ ಬಗೆಯ ಕಪ್ಪೆಗಳು ಮಾತ್ರವೇ ಈ ಸುಂಟರಗಾಳಿಗೆ ಸಿಲುಕಿದವೇ?

ಹಾಗೂ ಕೇವಲ ಒಂದೆ ಗಾತ್ರದ ಮೀನು/ಕಪ್ಪೆಗಳು ಮಾತ್ರವೇ ಯಾಕೆ ಬೀಳುತ್ತವೆ? ಮತ್ತು ಅವುಗಳ ಜೊತೆ ಮರಳು ಅಥವಾ ಇನ್ನಿತರ ಗಿಡಗಂಟೆಗಳು ಯಾಕೆ ಬೀಳುವುದಿಲ್ಲ? ಕೆಲವೊಮ್ಮೆ ಉಪ್ಪು ನೀರಿನ ಮೀನುಗಳು ಬಿದ್ದಾಗ ಮಳೆ ಹನಿಗಳಲ್ಲಿ ಸಮುದ್ರದ ನೀರಿನ ಅಂಶವೇ ಕಾಣಸಿಗುವುದಿಲ್ಲ ಯಾಕೆ? ಹೀಗೆ ಇನ್ನು ಅನೇಕ ಸಂಗತಿಗಳು ಇಂದಿಗೂ ನಿಗೂಢವಾಗಿಯೇ ಉಳಿದಿವೆ. 1947ರಲ್ಲಿ ಅಮೆರಿಕನ್ ಸಾಗರ ವಿಜ್ಞಾನಿ ಆ್ಯಲನ್ ಉಜಿಕೋವ್ ಮಾರ್ಕ್ಸ್‌ವಿಲ್ಲೆಯಲ್ಲಿನ ಕೆಫೆಯೊಂದರಲ್ಲಿ ಉಪಹಾರ ಮಾಡುತ್ತಿರುವಾಗ, ಮೀನುಗಳ ಸುರಿಮಳೆಯಾದದ್ದನ್ನು ಕಣ್ಣಾರೆ ಕಂಡರು. ಅವುಗಳು ಚಂಡಮಾರುತ ಅಥವಾ ಸುಂಟರಗಾಳಿಯ ಪ್ರಭಾವದಿಂದ ಬಂದಿರಬೇಕು ಎಂದು ಅವರು ಮೊದಲಿಗೆ ತಿಳಿದರು. ಆದರೆ, ಅಲ್ಲಿಂದ ಸಮುದ್ರವು (ಮೆಕ್ಸಿಕನ್ ಕೊಲ್ಲಿ) 130 ಕಿ.ಮೀ. ದೂರದಲ್ಲಿತ್ತು ಹಾಗೂ ಆ ಸಮಯದಲ್ಲಿ ಯಾವುದೇ ರೀತಿಯ ಚಂಡ ಮಾರುತ ಬೀಸಿದ ವರದಿಗಳು ಇರಲಿಲ್ಲ!

ಈ ವಿದ್ಯಮಾನಕ್ಕೆ ಇನ್ನೊಂದು ವಿಶ್ಲೇಷಣೆಯೂ ಲಭ್ಯವಿದೆ. ಕಪ್ಪೆಗಳು Tadpole (ತೊಂದೆ) ಸ್ಥಿತಿಯಿಂದ ಮರಿಕಪ್ಪೆಗಳಾಗಿ ಮಾರ್ಪಾಡಾಗುವ ಸಮಯದಲ್ಲಿ, ಅಸಂಖ್ಯ ತೊಂದೆಗಳು ಏಕಕಾಲದಲ್ಲಿಯೇ ಮರಿಕಪ್ಪೆಗಳಾಗಿ ಇಡೀ ಪ್ರದೇಶವನ್ನೇ ತುಂಬಿಬಿಡುತ್ತವೆ. ಇದನ್ನು ಆಕಾಶದಿಂದ ಸುರಿದ ಮಳೆಯ ಜೊತೆ ಬೆಸೆಯಲು ಜನಸಾಮಾನ್ಯರಿಗೆ ಕಷ್ಟವೇನಿಲ್ಲ.

ಕೆಲವೊಮ್ಮೆ ಮಳೆಯಾದ ಮಾರನೆಯ ದಿನ ಊರಾಚೆಯ ದೊಡ್ಡ ತಗ್ಗು, ಗುಂಡಿಗಳಲ್ಲಿ ಮೀನು ಹಿಡಿಯಲು ಗಾಳ ಬೀಸಿರುವ ಹುಡುಗರನ್ನು ನೀವೆಲ್ಲ ನೋಡಿಯೇ ಇರುತ್ತೀರಿ? ಮಳೆಗೆ ಮುಂಚೆ ಅಲ್ಲಿ ಒಂದು ಹನಿ ನೀರು ಇರುವುದಿಲ್ಲ. ಆದರೆ ಮಳೆಯಾದ ಮಾರನೆಯ ದಿನವೇ ಅಲ್ಲಿ ಮೀನುಗಳು ಹಲವು ಪುಟ್ಟವು ಹಾಗು ಕೆಲವು ಮಧ್ಯಮ ಗಾತ್ರದವು ಕಾಣಸಿಗುತ್ತವೆ. ಅವು ಹೇಗೆ ಮತ್ತು ಎಲ್ಲಿಂದ ಬಂದವು? ಮಳೆಯೊಂದಿಗೆ ಬಂದವೇ ಅಥವಾ ರಾತ್ರೋರಾತ್ರಿ ಸೃಷ್ಟಿಯಾದವೇ?

ನೀವೂ ಯೋಚಿಸಿ ನೋಡಿ!

ನಿಗೂಢ ಜಗತ್ತಿನ ಮುಂದಿನ ಕಂತಿನಲ್ಲಿ 'ಯೇಲೆ'ಗಳ ಬಗ್ಗೆ ರೋಚಕ ವಿವರಣೆ ನೀಡಲಾಗುವುದು.

ಬಾಗಲಕೋಟೆ ಇಂಜಿನಿಯರಿಂಗ್ ಕಾಲೇಜಿಗೆ ಪ್ರಶಸ್ತಿ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತು, ಬೆಂಗಳೂರು ಹಾಗೂ ಎಂ. ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಇವರ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ವಿಚಾರ ಸಂಕಿರಣ ಹಾಗೂ ಪ್ರದರ್ಶನದಲ್ಲಿ ಬಾಗಲಕೋಟೆಯ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಕಂಡು ಹಿಡಿದ 'ಹಿಲ್ ಹೋಲ್ಡರ್' ಹಾಗೂ 'ಕನ್ನಡ ಕಮಾಂಡ್ ಪ್ರೊಫೆಸರ್ ಫಾರ್ ಪಿ.ಸಿ. ಪ್ರತ್ಯಕ್ಷಿಕೆಗಳು', ಕಾಲೇಜಿಗೆ ರಾಜ್ಯದ 'ಅತ್ಯುತ್ತಮ ಕಾಲೇಜು' ಬಿರುದು ತಂದುಕೊಟ್ಟಿರುತ್ತವೆ.

ಈ ಹೊಸ ಯೋಜನೆ 'ಹಿಲ್ ಹೋಲ್ಡರ್'ಗೆ ಅದ್ವಿತೀಯ ಹಾಗೂ ಶ್ರೇಷ್ಠ ಎಂಬ ಎರಡು ಪ್ರಶಸ್ತಿಗಳು ಲಭಿಸಿದ್ದು, ಈ ಪ್ರಾಜೆಕ್ಟ್‌ನಿಂದಾಗಿ ಮಧ್ಯಮ ಹಾಗೂ ಭಾರಿ ಡ್ಯೂಟಿ ವಾಹನಗಳ ಏರಿಕೆ ಹಾಗೂ ಇಳಿಕೆಯಲ್ಲಿ ವಾಹನ ಚಾಲಕರಿಗೆ ಇರುವ ತೊಂದರೆಗಳ ನಿವಾರಣೆಯಾಗುತ್ತದೆ. ಈಗಿರುವ ವಾಹನಗಳಲ್ಲಿ ಏರಿಕೆ ಹಾಗೂ ಇಳಿಕೆಗಳಲ್ಲಿ ವಾಹನಗಳು ನಿಂತು ಚಲಿಸಬೇಕಾದ ಪ್ರಸಂಗದಲ್ಲಿ ಚಾಲಕರು ತಮ್ಮ ಎರಡೂ ಪಾದಗಳಿಂದ ಮೂರು ಪೆಡಲ್‌ಗಳನ್ನು ಅಂದರೆ, ಬ್ರೇಕ್, ಕ್ಲಚ್, ಮತ್ತು ಎಕ್ಸಲೇಟರಗಳನ್ನು ಒಟ್ಟಿಗೆ ಉಪಯೋಗಿಸಬೇಕಾಗುತ್ತದೆ. ಈ ಹೊಸ ಯೋಜನೆಯಲ್ಲಿ ಬ್ರೇಕ್, ಪೆಡಲ್‌ಗಳನ್ನು ಒತ್ತುವುದು ಅವಶ್ಯಕತೆಯಿಲ್ಲ. ಚಾಲಕರಿಗೆ ಉಳಿದೆರಡು ಪೆಡಲ್‌ಗಳನ್ನು ತಮ್ಮೆರಡು ಪಾದಗಳಿಂದ ಸರಳವಾಗಿ ಉಪಯೋಗಿಸಲು ಜೋಡಣೆ ಅನುಕೂಲ ಮಾಡಿಕೊಟ್ಟಿದೆ. ಪ್ರಸಿದ್ಧ ಕಂಪನಿಗಳು ಈ ಪ್ರಾಜೆಕ್ಟ್ ಮಾದರಿಯನ್ನು ಬಳಸಿಕೊಂಡು ಉತ್ಪಾದಿಸಿದರೆ ಚಾಲಕರಿಗೆ ಇದು ವರವಾಗಬಲ್ಲದು.

ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಬಾಲಕೃಷ್ಣ, ಜಯವಂತ ನಂದಿಯವರು ಪ್ರೊ. ಎನ್. ಎನ್ ಕುರುಬೆಟ್ ಹಾಗೂ ಪ್ರೊ. ಎನ್. ಎನ್. ಹಿರೇಮಠ ಅವರ ಮಾರ್ಗದರ್ಶನದಲ್ಲಿ ಈ ಮಾದರಿಯನ್ನು ಕಂಡು ಹಿಡಿದಿದ್ದಾರೆ.

ಎನ್.ಎನ್. ಕುರುಬೆಟ್ ಹಾಗೂ ಪ್ರೊ. ಎನ್.ಎನ್. ಹಿರೇಮಠ ಇವರ ಮಾರ್ಗದರ್ಶನದ ಪ್ರಾಜೆಕ್ಟ್‌ಗಳು ಕಳೆದ ವರ್ಷವೂ ಪ್ರಶಸ್ತಿ ಗಳಿಸಿಕೊಟ್ಟು ಕಾಲೇಜಿಗೆ ಕೀರ್ತಿ ತಂದಿವೆ.

ಇದೇ ಕಾಲೇಜಿನ ಕಂಪ್ಯೂಟರ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ತೀರ್ಥ ಕುಮಾರ, ವಿಜಯ ನಾಡಿಗೇರ, ಶ್ರೀಧರ ಗುಪ್ತಾ ಹಾಗೂ ಜ್ಞಾನನಂದ ರೆಡ್ಡಿ ಇವರುಗಳು ಪ್ರೊ. ಪಿ.ಬಿ. ಕೋಟೂರ್ ಇವರ ಮಾರ್ಗದರ್ಶನದಲ್ಲಿ 'ಕನ್ನಡ ಕಮಾಂಡ ಪ್ರೊಫೆಸರ್ ಫಾಲ್ ಪಿ.ಸಿ.' ಎಂಬ ಕನ್ನಡ ಸಾಫ್ಟ್‌ವೇರನ್ನು ಅಭಿವೃದ್ಧಿಪಡಿಸಿದ್ದಾರೆ.

ಈ ರೀತಿ ಅಭಿವೃದ್ಧಿ ಪಡಿಸಿದ ಸಾಫ್ಟ್‌ವೇರ್ ಕರ್ನಾಟಕದಲ್ಲಿ ಇದೇ ಮೊದಲು ಎಂಬುದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಕೆ.ಎಸ್. ಸಿ. ಎಸ್. ಟಿ. ವಿಚಾರ ಸಂಕಿರಣದಲ್ಲಿ ಬಹಿರಂಗಗೊಂಡಿತು.

ವಿಶಿಷ್ಟ ಕಾರ್ಯ ಕಂಪ್ಯೂಟರ್‌ಗೆ ಕೊಡಬೇಕಾದ ಎಲ್ಲ ಆದೇಶಗಳನ್ನು (ಕಮಾಂಡ್) ಕನ್ನಡದಲ್ಲಿಯೇ ಕೊಡಬಹುದಾಗಿದ್ದು, ಈ ರೀತಿ ಕೊಟ್ಟ ಕನ್ನಡ ಆದೇಶಗಳನ್ನು ಮತ್ತು ಅವುಗಳ ಅರ್ಥವಿನ್ಯಾಸಗಳನ್ನು 'ಕನ್ನಡ ಕಮಾಂಡ್ ಪ್ರೊಫೆಸರ್' ಕಾರ್ಯ ನಿರ್ವಹಿಸುತ್ತದೆ.

ಕನ್ನಡ ಕಾಗುಣಿತ, ಅಂಕಿ ಸಂಖ್ಯೆ ಸಂಗ್ರಹ ಸಂಸ್ಕರಣಕ್ಕೆ 'ಸಿ. ಡಾನ್‌ನ ಬೆಸ್ಟ್‌ಪ್ಲಗ್ ಇನ್ ಕಾರ್ಡ್' ಬಳಸಲಾಗಿದೆ. ಈ ಮೂಲಕ ಡಾನ್‌ನ ೨೦ ಆಂತರಿಕ ಆದೇಶ, ನಾಲ್ಕು ಹೊರ ಆದೇಶ ತತ್ವ ಕಾರ್ಯ ನಿರ್ವಹಣೆ ಗೊಳಿಸಲಾಗಿದ್ದು ತೃಪ್ತಿಕರ ಫಲಿತಾಂಶ ಬಂದಿದೆ.

ವಿಚಾರ ಸಂಕಿರಣದ ಪ್ರಮುಖ ನಿರ್ಣಾಯಕ ಹಾಗೂ ಖ್ಯಾತ ತಂತ್ರಜ್ಞ ಡಾ. ಡಿ.ಕೆ. ಸುಬ್ರಮಣಿಯನ್ ಅವರು ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದ್ದಕ್ಕೆ ಬೆನ್ನು ತಟ್ಟಿ, ಆದಷ್ಟು ಬೇಗ ಮಾರುಕಟ್ಟೆಗೆ ತರಲು ಪ್ರೇರಣೆ ನೀಡಿದ್ದಾರೆ.

ಪ್ರತಿ ವರ್ಷದಂತೆ ಈ ಬಾರಿಯೂ ಕಾಲೇಜಿಗೆ ಅಧಿಕ ಸಂಖ್ಯೆಯ ಪ್ರಾಜೆಕ್ಟ್‌ಗಳು. ರಾಜ್ಯ ವಿಜ್ಞಾನ ಹಾಗೂ ತಂತ್ರಜ್ಞಾನ ಪರಿಷತ್ತಿನ ಅನುಮೋದನೆ ಪಡೆದಿದ್ದು, ಕಾಲೇಜಿನ ಸಾಧನೆಗೆ ದ್ಯೋತಕವಾಗಿದೆ. ಎರಡನೆ ಬಾರಿ 'ವರ್ಷದ ಶ್ರೇಷ್ಠ ಕಾಲೇಜ್' ಪ್ರಶಸ್ತಿ ದೊರೆತದ್ದು ಬಾಗಲಕೋಟೆಯ ಶೈಕ್ಷಣಿಕ ವಲಯಕ್ಕೆ ಹೆಮ್ಮೆ ತರುವ ವಿಷಯವಾಗಿದೆ. 'ಬಿಸಿಲ ಬದುಕು' ಮಾಸಿಕದ ಜೊತೆ ಈ ಎಲ್ಲ ವಿವರಗಳನ್ನು ಹಂಚಿಕೊಳ್ಳುತ್ತ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ರಾಜಶೇಖರಯ್ಯ, ಬಿ.ವಿ.ವಿ. ಸಂಸ್ಥೆಯ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹಾಗೂ ಗೌರವ ಕಾರ್ಯದರ್ಶಿ ಸಿದ್ದಣ್ಣ ಶೆಟ್ಟರ್ ಇವರು ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ಅಧ್ಯಾಪಕರಿಗೆ ತುಂಬು ಹೃದಯದಿಂದ ಅಭಿನಂದಿಸಿದರು.



■ಶೇಖರ್ ಬಿ. ಮಲ್ಲೂರ

ಒಲವಿನ ಒಳಗುಟ್ಟು

ಹೆಜ್ಜೆ - 13



ಸಫಲ ವ್ಯಕ್ತಿತ್ವವನ್ನು ಹೊಂದ ಬಯಸುವವರೆಲ್ಲರಿಗೆ ಎರಡು ಪ್ರಶ್ನೆಗಳು ಕಾಡುತ್ತವೆ. ಶಂಕರ ಆಕರ್ಷಣೆಯ ಕೇಂದ್ರವೇಕೆ? ಶಂಕರಿಯನ್ನು ಸಂಧಿಸಿದವರು ಅವಳಿಂದ ತಪ್ಪಿಸಿಕೊಳ್ಳ ಬಯಸುವುದೇತಕ್ಕೆ?

ಮಮತೆಯ ಮರ್ಮ ಅಥವಾ ಒಲವಿನ ಒಳಗುಟ್ಟಿನ ಬಗ್ಗೆ ಈಗ ಮಾತನಾಡುತ್ತ ಸಾಗೋಣ.

ಬೇರೆಯವರು ನಿಮ್ಮನ್ನು ಇಷ್ಟಪಡುತ್ತಾರೆಯೇ? ಹೌದಾದರೆ ನೀವು ಅಭಿನಂದನೀಯರು. ಏಕೆಂದರೆ ಸಫಲ ವ್ಯಕ್ತಿತ್ವದ ಕುರುಹುಗಳಲ್ಲಿ ಇದೂ ಒಂದು.

ಪ್ರೀತಿವಂಚಿತರು ತಮ್ಮ ಜೀವನದಲ್ಲಿ ಅಸುಖಿಗಳಾಗಿರುತ್ತಾರೆ. ಅನಾಥ ಮಕ್ಕಳು, ತಂದೆ-ತಾಯಿಗಳಿಂದ ಶಾಶ್ವತವಾಗಿ ದೂರವಾದವರು, 'ನಾನು ಯಾರಿಗೂ ಬೇಡವಾದವ' ಎಂದು ಭಾವಿಸುವ ಅಂಗವಿಕಲ, 'ನನ್ನ ಕುಟುಂಬಕ್ಕೂ ಸಮಾಜಕ್ಕೂ ನಾನೊಂದು ಹೊರೆ' ಎಂದು ಗೋಳಾಡುವ ಸೇವಾ ನಿವೃತ್ತ ಇವರೆಲ್ಲರೂ ಉದಾಹರಣೆಗಳು. ಮಿತ್ರರಿರುವುದು, ಅವರ ಸಂಖ್ಯೆಯೂ ಹೆಚ್ಚಿರುವುದು ನೀವು ಪ್ರೀತಿಸಲ್ಪಡುತ್ತಿದ್ದೀರಿ ಎಂಬುದರ ಸಂಕೇತವಲ್ಲ. ಏಕೆಂದರೆ ಶ್ರೀಮಂತರು, ರಾಜಕಾರಣಿಗಳು ಅಸಂಖ್ಯಾ ಮಿತ್ರರನ್ನು ಹೊಂದಿರುತ್ತಾರೆ. ಆದರೆ ಆ ಮಿತ್ರರ ಕಣ್ಣು ಶ್ರೀಮಂತರ ಹಣದ ಚೀಲದ ಮೇಲೆ, ರಾಜಕಾರಣಿಗಳ ಕುರ್ಚಿಗಳ ಮೇಲಿರುತ್ತದೆ. ಇದು ತೋರಿಕೆಯ ಪ್ರೀತಿ.

ಹೆರವರಿಂದ ಪ್ರೀತಿಸಲ್ಪಡಲು ಬಯಸುವ ಈ ಸಾಮಾನ್ಯ ಮಾನವ ಸ್ವಭಾವ ಸ್ವಾರ್ಥ ಪೂರಿತವಲ್ಲ. ಏಕೆಂದರೆ ತನ್ನ ಸಹಚರರು ತನ್ನನ್ನು ಬಯಸದೆ, ಯಾವುದೋ ನಿಗೂಢ ದೂರದ ಕಾರಣಕ್ಕಾಗಿ ತನ್ನ ಸಹಚರ್ಯವನ್ನು 'ತಾಳಿಕೊಳ್ಳುತ್ತಿದ್ದಾರೆ' ಎಂದು ತಿಳಿದಾಗ ಆಗುವುದು ದುಃಖ. ಆಗ ತಾನು ಹೊರೆಯಾಗುತ್ತಿದ್ದೇನೆಂಬ ಭಾವನೆ ಕುಡಿಯೊಡೆಯತೊಡಗುತ್ತದೆ.

ಸಫಲ ವ್ಯಕ್ತಿತ್ವವನ್ನು ಹೊಂದ ಬಯಸುವವರೆಲ್ಲರಿಗೆ ಎರಡು ಪ್ರಶ್ನೆಗಳು ಕಾಡುತ್ತವೆ. ಶಂಕರ ಆಕರ್ಷಣೆಯ ಕೇಂದ್ರವೇಕೆ? ಶಂಕರಿಯನ್ನು ಸಂಧಿಸಿದವರು ಅವಳಿಂದ ತಪ್ಪಿಸಿಕೊಳ್ಳ ಬಯಸುವುದೇತಕ್ಕೆ? ಮೂರನೆಯ ಪ್ರಶ್ನೆಯೂ ಒಮ್ಮೊಮ್ಮೆ ಎದುರಾಗುತ್ತದೆ. ಕೆಲವರನ್ನು ಕಂಡಾಗ ಇವೆರಡೂ ಭಾವನೆಗಳು ಉಂಟಾಗದಿರುವುದೇತಕ್ಕೆ?

ಬೇರೆಯವರು ನಮ್ಮ ಸ್ನೇಹವನ್ನು ಬಯಸಲು ಅಥವಾ ಬಯಸದಿರಲು ಕಾರಣಗಳೇನು? ನಾಲ್ಕು ಕಾರಣಗಳನ್ನು ಹೀಗೆ ಗುರುತಿಸಬಹುದು:

1. ಸ್ನೇಹಿತರ ಮೂಲಕ ನನ್ನ 'ಅಹಂ'ನ್ನು ಬೆಳೆಯಿಸುವುದು ನನ್ನ ಅಭಿಲಾಷೆ.
2. ನನ್ನ ಆಸೆಗಳನ್ನು ಈಡೇರಿಸುವ ಸಾಮರ್ಥ್ಯ ಹಾಗೂ ಇಚ್ಛೆಯುಳ್ಳವರನ್ನು ನಾನು ಪ್ರೀತಿಸುತ್ತೇನೆ.
3. ನನಗೆ ಆಪ್ಯಾಯಮಾನವಾದ ಅನುಭವಗಳಲ್ಲಿ ಪಾಲುದಾರರಾಗಿರುವವರು ನನಗೆ ನೆಚ್ಚಿನವರು.
4. ನನ್ನನ್ನು ಬಯಸುವವರು ನನಗೆ ಹಿಡಿಸುತ್ತಾರೆ.

ಸ್ನೇಹ, ಮಮತೆಗಳ ಬಂಧನದ ಬಗ್ಗೆ ನಮಗೆಷ್ಟು ತಿಳಿದಿದೆ? ಸ್ನೇಹ ಬಂಧನ ಎಷ್ಟು ಗಟ್ಟಿಯಾಗಿದೆ ಎಂಬುದರ ಕುರುಹು ನಾವು ಯಾರೊಬ್ಬರನ್ನು ಎಷ್ಟು ಇಷ್ಟಪಡುತ್ತೇವೆ ಎಂಬುದು. ಆಕೆ ಹೇಳಿದಂತೆ ಮಾಡುವುದು ನನಗೆ ಆನಂದ ತರುತ್ತದೆ : ಅವಳು ಏನು ಮಾಡಲು ಹೇಳಿದರೂ ನಾನು ಮಾಡಲು ತಯಾರು ಎಂಬ ಘೋಷಣೆಗಳು ಇಂಥ ಪ್ರೀತಿಯ ರುಜುವಾತುಗಳು. ಆಕೆಯ ವ್ಯಕ್ತಿತ್ವದ ಬಗೆಗಿನ ಬೆರಗು ಆಕೆಯೊಡನೆ ನಾನು ಸಹಕರಿಸಬಯಸುವ, ಅವಳ ಕನಸುಗಳನ್ನು ನನಸುಮಾಡಬೇಕೆಂದು ಪ್ರಯತ್ನಿಸುವುದರ ತಳಹದಿ. ವ್ಯಕ್ತಿಯನ್ನು ನಾವು ಹೆಚ್ಚೆಚ್ಚು ಇಷ್ಟಪಡುತ್ತಾ ಸಾಗಿದಂತೆ ಆ ವ್ಯಕ್ತಿಯ ಪ್ರಭಾವಕ್ಕೆ ಒಳಗಾಗುತ್ತಾ ಸಾಗುತ್ತೇವೆ. ಪ್ರಭಾವದ ಹೆಚ್ಚುವಿಕೆ ಏರುತ್ತಾ ಸಾಗಿದಂತೆ ಬೆರಗಿನ ಪ್ರಮಾಣವೂ ಹೆಚ್ಚುತ್ತದೆ. ಇದೇ 'ವ್ಯಕ್ತಿತ್ವ ಸಾಫಲ್ಯ ಚಕ್ರ'. ನಾವು ಇಷ್ಟಪಡುತ್ತಿರುವವರನ್ನು ಸಂತೋಷಪಡಿಸಲು, ಅವರಿಗೆ ಸೋಲಲು ನಾವು ಬಯಸುತ್ತೇವೆ. ಅಂಥವರೊಡನೆಯ ಪ್ರೀತಿಯ ಬಂಧನ ನಮ್ಮ ಸಂಬಂಧ ಸೇತುವೆಯನ್ನು ಗಟ್ಟಿಗೊಳಿಸುತ್ತಾ ಸಾಗುತ್ತದೆ. ನಿಮ್ಮಲ್ಲಿ ಬೇರೆಯವರಿಗೆ ಏನನ್ನಾದರೂ ಹಂಚುವ ಹಂಬಲವಿದೆಯೇ? ಹಾಗಾದರೆ ಪ್ರೀತಿಯನ್ನು ಹಂಚಿನೋಡಿ! ಒಂದು ಕೈಯಿಂದ ನೀಡಿದ್ದನ್ನು ಹತ್ತು ಕೈಗಳಿಂದ ಬಾಚಿಕೊಳ್ಳುವುದು ಅದೆಷ್ಟು ಲಾಭದಾಯಕ!

'ಬೇರೆಯವರು ನನ್ನನ್ನು ಒಳ್ಳೆಯವನೆಂದು ತಿಳಿಯಲಿ; ನನ್ನ ಬಗೆಗೆ ಗೌರವಯುತವಾದ ಸ್ನೇಹ ಭಾವನೆಯನ್ನಿಟ್ಟುಕೊಳ್ಳಲಿ' ಎಂದು ಅನೇಕರು ಹಪಹಪಿಸುತ್ತಾರೆ. ಅದಕ್ಕಾಗಿ ಅರ್ಹರಾಗಿರಲು ಒದ್ದಾಡುತ್ತಾರೆ. 'ಸ್ನೇಹ'ವು ಅತ್ಯಂತ ವಿಶ್ವಾಸಾರ್ಹವಾದ ಮತ್ತು ದೀರ್ಘಕಾಲ ಬಾಳುವ ಪ್ರಭಾವದ ತಳಹದಿಯಾಗಿದೆ. ನಮ್ಮ ನಿಜವಾದ ಸ್ನೇಹಿತರಿಂದ ನಾವು ಪ್ರಭಾವಿತರಾಗುತ್ತೇವೆ; ಅವರ ಒಡನಾಟ

ಬಯಸುತ್ತೇವೆ. ಆದರೆ ಜೀವನದ ಅನೇಕ ರಂಗಗಳಲ್ಲಿ ಇಂಥ ಶುದ್ಧ ನಂಬುಗೆಯನ್ನು ದುರುಪಯೋಗ ಪಡಿಸಿಕೊಳ್ಳುವ ದುರುಳರಿದ್ದಾರೆ. ಆದುದರಿಂದಲೇ ಸ್ನೇಹಿತರ 'ಸ್ನೇಹದ ಗುಣ'ವನ್ನು ಆಗಾಗ ಪರೀಕ್ಷೆಗೆ ಒಳಪಡಿಸುವುದು ಅಗತ್ಯ.

ಇತರರಿಗೆ ಇಷ್ಟವಾಗುವ ವ್ಯಕ್ತಿತ್ವ ಹೊಂದುವುದರ ಲಾಭಗಳೇನು? ನೀವು ಶ್ರೇಷ್ಠ ವೃತ್ತಿಪರರಾಗಲೀ, ಪಕ್ವರಾಜಕಾರಣಿಯಾಗಲೀ, ಯಶಸ್ವಿ ವಾಣಿಜ್ಯೋದ್ಯಮಿಯಾಗಲೀ ಆಗಿದ್ದರೆ ನಿಮಗೆ, ಬೇರೆಯವರಿಗೆ ಇಷ್ಟವಾಗುವ ವ್ಯಕ್ತಿತ್ವ ಹೊಂದಿರುವದರ ಲಾಭದ ಕಲ್ಪನೆ ಇದ್ದೇ ಇರುತ್ತದೆ. ನಿಮ್ಮ ವ್ಯಕ್ತಿತ್ವ ಆ ರೀತಿ ಇರುವುದರಿಂದಲೇ ನೀವು, ಮಾರಾಟಗಾರರಾಗಿದ್ದರೆ ಹೆಚ್ಚು ವಸ್ತುಗಳನ್ನು ಹಲವರಿಗೆ ಮಾರಲು; ರಾಜಕಾರಣಿಯಾಗಿದ್ದರೆ ಮತಗಳನ್ನು ಗಳಿಸಲು; ವೃತ್ತಿಪರರಾಗಿದ್ದರೆ ವೃತ್ತಿಯಲ್ಲಿ ಖ್ಯಾತಿಗಳಿಸಲು ಸಾಧ್ಯವಾಯಿತು. ಕೆಲವು ಅಂಗಡಿಗಳಿಗೆ ಮೇಲಿಂದ ಮೇಲೆ ಹೋಗಲು ನಿಮಗೆ ಮನಸ್ಸಾಗುತ್ತದೆ. ಇದಕ್ಕೆ ಕಾರಣ? ಅಲ್ಲಿಯ ಸಿಬ್ಬಂದಿ ನಿಮಗೆ ಅಚ್ಚುಮೆಚ್ಚು. ಪಕ್ಷದ ಕಟ್ಟಾಜ್ಞೆಯ ಭಯವಿಲ್ಲದ ಮತದಾರನ ಮತ ತಾನು ಇಷ್ಟ ಪಡುವ ಅಭ್ಯರ್ಥಿಗೇ ಮಾತ್ರ ಮೀಸಲು ಎಂಬುದು ಸರಳ ತರ್ಕ. ಉದ್ಯಮಗಳಲ್ಲಾಗಲೀ, ಶೈಕ್ಷಣಿಕ ರಂಗದಲ್ಲಾಗಲೀ ಯಶಸ್ಸಿನ ಮೆಟ್ಟಿಲುಗಳನ್ನೇರಿದವರು ತಾಂತ್ರಿಕ ದಕ್ಷತೆಯ ಕಾರಣದಿಂದಲ್ಲ; ಪ್ರಿಯ ವ್ಯಕ್ತಿತ್ವವನ್ನು ಹೊಂದಿರುವುದರಿಂದ.

ಸಶಕ್ತ ವ್ಯಕ್ತಿತ್ವದ ವ್ಯವಹಾರಿಕ ಅಳತೆಗೋಲು ಯಾವುದು? ನಿಮ್ಮ ವೃತ್ತಿಯಲ್ಲಿ ನೀವು ಯಶಸ್ವಿಯಾಗಿದ್ದರೆ ಅದಕ್ಕೆ ಕಾರಣ ನಿಮ್ಮ ಎತ್ತರದ ವ್ಯಕ್ತಿತ್ವ ಮೌಲ್ಯಾಂಕನವೇ ಹೊರತು ನೀವು ಗಳಿಸಿದ ಪದವಿ, ಬಿರುದುಗಳಲ್ಲ. ಜೀವನದ ವಿವಿಧ ರಂಗಗಳಲ್ಲಿಯ ಯಶಸ್ಸಿನ ಹಿಂದೆ ಸಂಬಂಧಿತ ವ್ಯಕ್ತಿ ತನ್ನ ಸಾಮಾಜಿಕ ಜೀವನದಲ್ಲಿ ಸಾಧಿಸಿದ ಹೊಂದಾಣಿಕೆಯ ಇತಿಹಾಸವಿದೆ; ಆ ವ್ಯಕ್ತಿಯ ಪಾಂಡಿತ್ಯ ಇತ್ಯಾದಿಗಳಿಗೆ ನಂತರದ ಸ್ಥಾನ. ಬೇರೆಯವರನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಉತ್ತಮ ವ್ಯಕ್ತಿತ್ವ ಹೊಂದಿದವರಿಗೆ ಮಾತ್ರ ಸಾಧ್ಯ. ಕೆಲವರಿಗೆ ಜೀವನದಲ್ಲಿ ಕೆಲವು ಸಲ ಪ್ರಗತಿಯ ಅವಕಾಶಗಳು ವಶೀಲಿ, ಲಂಚ, ಇತ್ಯಾದಿಗಳ ಮೂಲಕ ಲಭ್ಯವಾಗುವುದನ್ನು ತಳ್ಳಿಹಾಕುವಂತಿಲ್ಲ. ಆದರೆ ಇಲ್ಲಿಯ ಚರ್ಚೆಗೆ ಅವು ಅಪವಾದಗಳು ಮಾತ್ರ.

ಬೇರೆಯವರು ವ್ಯಕ್ತಿಯ ಸಾಂಗತ್ಯವನ್ನು ಬಯಸುವುದರ ಜೊತೆಗೆ ಆತನೊಡನೆ ಉತ್ತಮ ಸಂಬಂಧಗಳನ್ನು ಬೆಸೆದುಕೊಳ್ಳುವುದು, ಆತನ ಅಭಿಪ್ರಾಯಗಳನ್ನು ತಿಳಿಯಬಯಸುವುದು ಹಾಗೂ ಅವುಗಳನ್ನು ಗೌರವಿಸುವುದು ಉತ್ತಮ ವ್ಯಕ್ತಿತ್ವದ ಲಕ್ಷಣ. ಇವರೇ ಯಶಸ್ವೀ ನೇತಾರರು ತಾವು ಸಮಾಜದಲ್ಲಿ ದೊರಕಿಸಿದ ಸದಭಿಪ್ರಾಯದ ಜೊತೆಗೇ ಅವರಿಗೆ ಸಾಮಾನ್ಯ ಜ್ಞಾನ, ತಾಂತ್ರಿಕ ಕೌಶಲ್ಯ ಮತ್ತು ಕಾರ್ಯದಕ್ಷತೆಗಳ ಅವಶ್ಯಕತೆಯಿದೆ. ಇವುಗಳಿಲ್ಲದಿದ್ದರೆ ತಮ್ಮ ಅಧೀನೋದ್ಯೋಗಿಗಳಿಂದ ನಿರಂತರ ಗೌರವ ಪಡೆಯುವುದು ಅಸಂಭವ. ಒಟ್ಟಿನಲ್ಲಿ ಪರಿಣಾಮಕಾರಿ ವ್ಯಕ್ತಿತ್ವವೆಂದರೆ ದೈಹಿಕ, ಮಾನಸಿಕ, ಭಾವನಾತ್ಮಕ ಹಾಗೂ ಸಾಮಾಜಿಕ ಗುಣಗಳ ಹಿತವಾದ ವೈಶಿಷ್ಟ್ಯಪೂರ್ಣ ಸಂಗಮವೆಂಬುದನ್ನರಿತೆವು.

ಈಗ ವ್ಯಕ್ತಿತ್ವದ ಸುಧಾರಣೆಯತ್ತ ದೃಷ್ಟಿ ಬೀರೋಣ. 'ನಿನ್ನರಿವೇ ನಿನಗೆ ಗುರು' ಎಂಬುದು ಬಹು ಅರ್ಥಗರ್ಭಿತ ಉಪದೇಶವೆಂಬುದೇನೋ ನಿಜ. ಆದರೆ ಆಜೀವ ಪರ್ಯಂತ ಪ್ರಯತ್ನಿಸಿದರೂ ಸಾಧಿಸಲಾರದ ಕೆಲವು ಸಾಧನೆಗಳಂತೆಯೇ ಇದೂ ಸಹ. 'ನಮ್ಮ ಬೆನ್ನು ನಮಗೆ ಕಾಣದು' ಎಂಬುದನ್ನು ಈಗಾಗಲೇ ತಿಳಿದಿದ್ದೇವೆ. ಅದರಂತೆಯೇ ನಮ್ಮ ಲೋಪಗಳು ನಮಗೆ ಅತಿ ಗೌಣವಾಗಿ ಕಾಣಬಹುದು. ಆದುದರಿಂದಲೇ 'ಅಂತರ್‌ಮುಖತೆ'ಯ ಪ್ರಯತ್ನದಲ್ಲಿ ಪೂರ್ಣ ಯಶಸ್ವಿಯಾಗುವುದು ವಿರಳ.

ಇತರರಿಗೆ ಇಷ್ಟವಾಗುವ ವ್ಯಕ್ತಿತ್ವ ಹೊಂದುವುದರ ಲಾಭಗಳೇನು? ನೀವು ಶ್ರೇಷ್ಠ ವೃತ್ತಿಪರರಾಗಲೀ, ಪಕ್ವರಾಜಕಾರಣಿಯಾಗಲೀ, ಯಶಸ್ವಿ ವಾಣಿಜ್ಯೋದ್ಯಮಿಯಾಗಲೀ ಆಗಿದ್ದರೆ ನಿಮಗೆ, ಬೇರೆಯವರಿಗೆ ಇಷ್ಟವಾಗುವ ವ್ಯಕ್ತಿತ್ವ ಹೊಂದಿರುವದರ ಲಾಭದ ಕಲ್ಪನೆ ಇದ್ದೇ ಇರುತ್ತದೆ.

ಇತರರು ನಮ್ಮನ್ನು ಹೇಗೆ ತಿಳಿದಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ವಸ್ತುನಿಷ್ಠತೆಯ ಕಡೆಗೆ ನಮ್ಮನ್ನು ಕರೆದೊಯ್ಯುವುದರಿಂದ ನಮ್ಮ ವ್ಯಕ್ತಿತ್ವ ಸುಧಾರಣೆ ಸಾಧ್ಯ. ಅದು ಉಪಯೋಗಿಯೂ ಹೌದು. ಆದರೆ ಇಲ್ಲೊಂದು ತೊಡಕಿದೆ. ಬೇರೆಯವರು ನಾವು ಇದ್ದಂತೆಯೇ ನಮ್ಮನ್ನು ಪರಿಗಣಿಸಲು ಸಮರ್ಥರಾಗಿದ್ದಾರೆಂಬುದರ ಖಾತರಿ ಏನು? ಅವರೂ ತಮ್ಮ ಅಂದಾಜಿನಲ್ಲಿ ಎಡವಿರಬಹುದು.

ಹೆರವರು ನಮ್ಮನ್ನು ಟೀಕಿಸಿದಾಗ ಹುಬ್ಬು ಗಂಟಿಕ್ಕುವುದು ಸಾರ್ವತ್ರಿಕವಾಗಿ ನೋಡಲು ಸಿಗುವ ದೃಶ್ಯ. ಆದರೆ ಅವರ ಟೀಕೆಗಳಿಗೆ ಆಹಾರವಾದ ನಮ್ಮ ಲೋಪಗಳ ಬಗೆಗೆ ನಮಗೆ ದುಃಖವಿಲ್ಲ. ಈ ಟೀಕಾಕಾರರು ನಮ್ಮ ಸ್ನೇಹಿತರೇ ಆಗಿದ್ದರಂತೂ ಇನ್ನೂ ಕಷ್ಟ. ಆಗ ಸ್ನೇಹತಂತುವೇ ಕಡಿದುಬಿಡಬಹುದು. ಸ್ನೇಹಿತರ ಟೀಕೆಗೆ ನಮ್ಮ ಪ್ರತಿಕ್ರಿಯೆ ಹೀಗೇಕೆ? ಏಕೆಂದರೆ ನಮ್ಮ ವೈರಿಗಳು ಮಾತ್ರ ನಮ್ಮ ಲೋಪಗಳನ್ನು ಕಂಡು ಹಿಡಿದು, ಎತ್ತಿತೋರಿಸಿ ಅವುಗಳಿಗೆ ಭೂತಗನ್ನಡಿ ಹಿಡಿಯುತ್ತಾರೆಂಬುದು ನಮ್ಮಲ್ಲಿ ಬೇರೂರಿದ ಅಭಿಪ್ರಾಯ. ಆದುದರಿಂದ ಇಂಥ ಸಂದರ್ಭಗಳಲ್ಲಿ ನಮ್ಮ ಅತ್ಯಂತ ಪ್ರೀತಿಪಾತ್ರ ಸ್ನೇಹಿತರೂ ವೈರಿಗಳಾಗಿ ಮಾರ್ಪಡುವ ಭಯವುಂಟಾಗುತ್ತದೆ. ನಮ್ಮ ಅನೇಕ ಸ್ನೇಹಿತರಿಗೆ ಇದನ್ನು ತಿಳಿಯುವಷ್ಟು ಜಾಣತನವಿದೆ. ಅವರು ನಮ್ಮ ವೈರಿಗಳಾಗಲು ತಯಾರಿಲ್ಲ! ಹಾಗಾದರೆ ಇಂಥ ಪ್ರಸಂಗಗಳಲ್ಲಿ ನಿಜವಾಗಿ ಸೋತವರಾರು? ವ್ಯಕ್ತಿತ್ವ ಸುಧಾರಣೆಯ ಸುವರ್ಣಾವಕಾಶ ವಂಚಿತರಾದ ನಾವೇ!

ವ್ಯಕ್ತಿತ್ವವನ್ನು ಸ್ವ-ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆಯಲ್ಲಿ ಸಫಲರಾಗುವುದು ವಿರಳವೆಂಬುದನ್ನು ಈಗಾಗಲೇ ಅರಿತಿದ್ದೇವೆ. ಬುದ್ಧಿವಂತರು ತಾವು ಇದ್ದುದಕ್ಕಿಂತ ಕಡಿಮೆ ಬುದ್ಧಿವಂತರೆಂದೂ, ಕಡಿಮೆ ಬುದ್ಧಿವಂತರು ತಾವು ಇದ್ದುದಕ್ಕಿಂತ ಹೆಚ್ಚಿಗೆ ಬುದ್ಧಿವಂತರೆಂದೂ ತಿಳಿಯುವುದು ಕಂಡುಬಂದಿದೆ. ನಮ್ಮನ್ನು ನಾವು ಸರಿಯಾಗಿ ಪರೀಕ್ಷಿಸಲು ಸಮರ್ಥರಾದರೆ ನಮ್ಮ ವ್ಯಕ್ತಿತ್ವ ಪರಿಪೂರ್ಣತೆಯತ್ತ ವಾಲುತ್ತಿದೆಯೆಂದರ್ಥ. ಅಂಥ ವ್ಯಕ್ತಿಯಲ್ಲಿ ಆತ್ಮಸಂತೋಷ, ಭಾವನಾತ್ಮಕ ಸ್ಥಿರತೆ, ಸಾಮಾಜಿಕ ಹೊಂದಾಣಿಕೆ ವಿಪುಲವಾಗಿರುತ್ತವೆ. ಆತನ ಸ್ವ- ಪರೀಕ್ಷೆಯಲ್ಲಿಯ ಯಶಸ್ಸಿನ ಗುಟ್ಟು ಯಾವುದೆಂದರೆ ಆತನಿಗೆ ತನ್ನ ವ್ಯಕ್ತಿತ್ವದಲ್ಲಿದ್ದಷ್ಟೇ ಆಸಕ್ತಿ, ಸಮಾಜದ ಇತರರೊಡನೆಯ ತನ್ನ ಸಂಬಂಧದಲ್ಲಿಯೂ ಇದೆ.

ಈಗ ಚರ್ಚೆಯನ್ನು ನಿಲ್ಲಿಸೋಣ.

■ ಕೃಶಾಂಗ


ಧೀಮಂತ ನಾಯಕ ಮಾರ್ಕ್ ಟೇಲರ್

1997 ಆಸ್ಟ್ರೇಲಿಯ ಕ್ರಿಕೆಟ್‌ಗೆ ಆಶಾದಾಯಕವಾದ ವರ್ಷ. ಟೆಸ್ಟ್ ಕ್ರಿಕೆಟ್‌ನ ಸಾರ್ವಭೌಮತ್ವವನ್ನು ಆ ವರ್ಷ ಆಸ್ಟ್ರೇಲಿಯ ಸ್ಥಾಪಿಸಿತು. ತಾಯ್ನಾಡಿನಲ್ಲಿ ವಿಂಡೀಸರನ್ನು 3-2 ರಿಂದ ಬಗ್ಗುಬಡಿದು, ಬಲಿಷ್ಠ ದಕ್ಷಿಣ ಆಫ್ರಿಕಾವನ್ನು ಅದರ ನೆಲದಲ್ಲಿಯೇ 2-1 ರಿಂದ ಮಣಿಸಿ, ಆ್ಯಷಸ್ ಸರಣಿಯಲ್ಲಿ ಇಂಗ್ಲೆಂಡನ್ನು ಅವರ ನೆಲದಲ್ಲೇ 3-2 ರಿಂದ ಸೋಲಿಸಿತು. ವರ್ಷಾಂತ್ಯದ ವೇಳೆಗೆ ನ್ಯೂಜಿಲ್ಯಾಂಡ್ ವಿರುದ್ಧ 2-0 ಸುಲಭ ಜಯ ಗಿಟ್ಟಿಸಿತು. ಇಷ್ಟೆಲ್ಲಾ ಜಯದ ಹಿಂದಿದ್ದ ಪ್ರೇರಣಾ ಶಕ್ತಿಯೇ ಮಾರ್ಕ್‌ಟೇಲರ್‌ರವರ ಚಿಂತನಾತ್ಮಕ ನಾಯಕತ್ವ.

ವ್ಹಾ ಸಹೋದರರ ಉಪಯುಕ್ತ ಬ್ಯಾಟಿಂಗ್, ಮೆಕ್‌ಗ್ರಾಥ್‌ರವರ ವೇಗದ ಬೌಲಿಂಗ್, ಶೇನ್ ವಾರ್ನ್‌ರವರ ಲೆಗ್‌ಸ್ಪಿನ್ ಚಮತ್ಕಾರ... ಹೀಗೆ ಕೆಲವರ ಆಟಗಳು ಆಸ್ಟ್ರೇಲಿಯಾದ ವಿಜಯದಲ್ಲಿ ಪ್ರಮುಖವಾದವುಗಳಾಗಿದ್ದರೂ ಟೇಲರ್‌ರವರ ಚತುರ ನಾಯಕತ್ವದ ಕಾಣಿಕೆಯೂ ಗಮನಾರ್ಹ. ನಿರಂತರ ವಿಜಯವನ್ನು ಸಂಪಾದಿಸುವುದೆಂದರೆ ಸುಲಭದ ಮಾತಲ್ಲ.

1994ರಲ್ಲಿ ಆಸ್ಟ್ರೇಲಿಯಾದ ಪ್ರಖ್ಯಾತ ಆಟಗಾರ ಮತ್ತು ನಾಯಕ ಅಲನ್ ಬಾರ್ಡರ್‌ರವರು ನಿವೃತ್ತರಾದಾಗ ಆ ಸ್ಥಾನವನ್ನು ಟೇಲರ್ ಅಲಂಕರಿಸಿದರು. ಟೇಲರ್‌ರವರ ತಂಡ ಹೋದೆಡೆಯಲ್ಲೆಲ್ಲಾ ಜಯಿಸಿತು. ಆದರೆ ವೈಯಕ್ತಿಕವಾಗಿ ಟೇಲರ್ ತಮ್ಮ 'ಫಾರಂ' ಕಳೆದುಕೊಂಡಿದ್ದರು. ಇದರಿಂದಾಗಿ ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿಯಲ್ಲಿ ಬಹಳ ಚರ್ಚೆಗಳಾದವು. ಇವರ ನಾಯಕತ್ವದ ವಿರುದ್ಧ ಧ್ವನಿಗಳೆದ್ದವು. ಆದರೂ ಕೂಡ ಆ್ಯಷಸ್ ಸರಣಿಯಲ್ಲಿ ಟೇಲರ್ ತನ್ನ ಬ್ಯಾಟ್ ಮೂಲಕ ಇವಕ್ಕೆಲ್ಲ ಉತ್ತರ ಹೇಳಿದರು. ರನ್ ದಾಹವನ್ನೇ ಅನುಭವಿಸುತ್ತಿದ್ದ ಅವರು ಆ ಸರಣಿಯ ಪ್ರಥಮ ಟೆಸ್ಟ್‌ನಲ್ಲಿ ಶತಕ ಹೊಡೆದರು. 5ನೇ ಟೆಸ್ಟ್‌ನಲ್ಲೂ ಉತ್ತಮವಾಗಿ ಆಡಿ ತಂಡದ ಸರಣಿ ಜಯದಲ್ಲಿ ಮಹತ್ತರ ಪಾತ್ರ ವಹಿಸಿದರು.

1998ರಲ್ಲೂ ಕೂಡ ವಿಜಯೋತ್ಸವವನ್ನು ಮುಂದುವರಿಸುವಂತೆ ಕಂಡ ಟೇಲರ್ ಪಡೆ ಆರಂಭದಲ್ಲೇ ದಕ್ಷಿಣ ಆಫ್ರಿಕಾವನ್ನು ಸ್ವದೇಶದಲ್ಲಿ 1-0 ಯಿಂದ ಸೋಲಿಸಿತು. ಆದರೆ ಇದನ್ನು ಭಾರತದಲ್ಲಿ ಸಾಧಿಸಲು ಅವರಿಂದ ಸಾಧ್ಯವಾಗಲಿಲ್ಲ. ಮಾರ್ಚ್ ತಿಂಗಳಲ್ಲಿ ನಡೆದ 3 ಟೆಸ್ಟ್‌ಗಳಲ್ಲಿ ಆಸ್ಟ್ರೇಲಿಯ 2-1 ರಿಂದ ಪರಾಭವ ಕಂಡಿತು. ಅದರಲ್ಲೂ ಕಲ್ಕತ್ತಾದಲ್ಲಿ ನಡೆದ 2ನೆಯ ಟೆಸ್ಟ್‌ನಲ್ಲಿ ಹೀನಾಯ ಸೋಲು ಕಂಡಿತು. ಆದರೂ ಕೂಡ ಬೆಂಗಳೂರಿನಲ್ಲಿ ನಡೆದ ಕೊನೆಯ ಟೆಸ್ಟ್‌ನಲ್ಲಿ ಗೆಲುವು ಸಾಧಿಸಿತು. ಟೇಲರ್ ಶತಕಧಾರಿಯಾದರು. ಟೇಲರ್ ಸದಾ ವೈಫಲ್ಯ ಕಾಣುತ್ತಿದ್ದಾಗ್ಯೂ ತಮ್ಮ ಕೆಲವು ಒಳ್ಳೆಯ ಇನ್ನಿಂಗ್ಸ್‌ಗಳಿಂದ ಬಚಾವಾಗುತ್ತಿದ್ದರು.



ವ್ಹಾ ಸಹೋದರರ ಉಪಯುಕ್ತ ಬ್ಯಾಟಿಂಗ್, ಮೆಕ್‌ಗ್ರಾಥ್‌ರವರ ವೇಗದ ಬೌಲಿಂಗ್, ಶೇನ್‌ವಾರ್ನ್‌ರವರ ಲೆಗ್‌ಸ್ಪಿನ್ ಚಮತ್ಕಾರ... ಹೀಗೆ ಕೆಲವರ ಆಟಗಳು ಆಸ್ಟ್ರೇಲಿಯಾದ ವಿಜಯದಲ್ಲಿ ಪ್ರಮುಖವಾದವುಗಳಾಗಿದ್ದರೂ ಟೇಲರ್‌ರವರ ಚತುರ ನಾಯಕತ್ವದ ಕಾಣಿಕೆಯೂ ಗಮನಾರ್ಹ.

ಆಸ್ಟ್ರೇಲಿಯ ಕ್ರಿಕೆಟ್ ಹುಟ್ಟುಹಾಕಿದ ಹೊಸ ಪರಂಪರೆ ಟೇಲರ್‌ರಂತಹವರನ್ನು ಮೂಲೆಗುಂಪಾಗಿಸಿತು. ಇವರ ತಂಡ ಇಂಗ್ಲೆಂಡ್ ನೆಲದಲ್ಲಿ ಆ್ಯಷಸ್ ಸರಣಿ ಪಡೆಯಿತಾದರೂ ಅದಕ್ಕೂ ಪೂರ್ವದಲ್ಲಿ ನಡೆದ ಮೂರು ಒಂದು ದಿನದ ಪಂದ್ಯಗಳಲ್ಲಿ ಸೋತಿತು. ಸ್ವದೇಶಕ್ಕೆ ಹಿಂದಿರುಗಿದ ಬಳಿಕ ತಂಡದ ಅನುಭವಿ ಆಟಗಾರ ಸ್ಟೀವ್ ವ್ಹಾ ವ್ಯತ್ಯಸ್ಥ ನಾಯಕ ಪದ್ಧತಿಯನ್ನು ಬೆಂಬಲಿಸಿದರು. ಟೇಲರ್ ಇದನ್ನು ಖಂಡಿಸಿದರೂ ಅಲ್ಲಿನ ಕ್ರಿಕೆಟ್ ಬೋರ್ಡ್ ದ್ವಿಕಪ್ತಾನ ಪದ್ಧತಿಗೆ ನಾಂದಿ ಹಾಡಿತು. ಟೇಲರ್ ನಾಯಕತ್ವ ಕಳೆದುಕೊಂಡರಲ್ಲದೆ ಏಕದಿನ ಪಂದ್ಯಗಳಿಂದಲೇ ಹೊರಬಿದ್ದರು. 67 ಪಂದ್ಯಗಳಲ್ಲಿ ನಾಯಕನಾಗಿ 37ರಲ್ಲಿ ವಿಜಯ ತಂದು ಕೊಟ್ಟ ಇವರನ್ನು ಈ ರೀತಿ ನಡೆಸಿಕೊಂಡದ್ದು ಸರಿಯಲ್ಲ. ಇದರಿಂದ ಹತಾಶರಾದ ಟೇಲರ್ ಒಮ್ಮೆ ಈ ರೀತಿ ಹೇಳಿದ್ದರು. ''ನಾನು ನನ್ನ ಕೊನೆಯ ಏಕದಿನ ಪಂದ್ಯವನ್ನು ಈಗಾಗಲೇ ಆಡಿದ್ದೇನೆ.''

ಮಾರ್ಕ್‌ಟೇಲರ್ ಇದುವರೆಗೆ 39 ಟೆಸ್ಟ್‌ಗಳಲ್ಲಿ ನಾಯಕರಾಗಿ 20 ರಲ್ಲಿ ಜಯ ಸಾಧಿಸಿದ್ದಾರೆ. 12 ಟೆಸ್ಟ್‌ಗಳಲ್ಲಿ ಅಪಜಯ ಕಂಡಿದ್ದರೆ 7 ಟೆಸ್ಟ್‌ಗಳು ಡ್ರಾ ಆಗಿವೆ. ಟೇಲರ್ ಇಂದು ಓರ್ವ ಪ್ರಶ್ನಾತೀತ ನಾಯಕ. ಸುಮಾರು ಒಂದು ದಶಕದ ಕ್ರಿಕೆಟ್ ಬದುಕಿನಲ್ಲಿ ಹಲವಾರು ಏರಿಳಿತಗಳನ್ನು ಕಂಡವರು. ಇವರ ಭವಿಷ್ಯವೂ ಕೂಡ ಅನಿಶ್ಚಿತವಾಗಿಯೇ ಇದೆ. ಇವುಗಳೇನೇ ಇದ್ದರೂ ಟೇಲರ್ ಜಂಟ್ಲಮನ್ ಎನಿಸಿರುವ ಕ್ರಿಕೆಟ್‌ನ ಧೀಮಂತ ನಾಯಕ.

■ ಗರ್ತಿಕೆರೆ ವಿ. ಪ್ರಕಾಶ್

ಆತ್ಮವಿಶ್ವಾಸ ಹಿಗ್ಗಿಸಿದ ಕೊಲಂಬೊ ಗೆಲುವು



ಮುಂದಿನ ವರ್ಷದ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯ ಹಿನ್ನೆಲೆಯಲ್ಲಿ ಇತ್ತೀಚೆಗಷ್ಟೇ ಕೊಲಂಬೊದಲ್ಲಿ ಭಾರತೀಯ ಕ್ರಿಕೆಟ್ ತಂಡ ಸಾಧಿಸಿದ ಗೆಲುವು ಮಹತ್ವದ್ದು. ಅಂತಿಮ ಪಂದ್ಯದಲ್ಲಿ ಅಂತಿಮ ಹಂತದವರೆಗೂ ಮುನ್ನಡೆಯಲ್ಲಿದ್ದ ವಿಶ್ವ ಚಾಂಪಿಯನ್ ಲಂಕನ್ನರನ್ನು ಕೊನೆಯ ಹಂತದಲ್ಲಿ ಬದಿಗೊತ್ತಿ ಸಾಧಿಸಿದ ಗೆಲುವು ಅಜರ್ ತಂಡಕ್ಕೆ ನೂರು ಆನೆ ಬಲ ನೀಡುವಂತಹುದು. ಈ ವರ್ಷವೊಂದರಲ್ಲೇ ಢಾಕಾದಲ್ಲಿ ಬೆಳ್ಳಿ ಹಬ್ಬದ ಪಂದ್ಯಾವಳಿ, ಕಲಕತ್ತಾ ಹಾಗೂ ಶಾರ್ಜಾಗಳಲ್ಲಿ ಕೋಕೋ ಕೋಲಾ ಕಪ್‌ಗಳನ್ನೆತ್ತಿಕೊಂಡಿದ್ದ ಭಾರತೀಯ ತಂಡ ಕೊಲಂಬೊದಲ್ಲಿ ಸಿಂಗರ್ ಆಕಾಯ್ ನಿಧಾಸ್ ಟ್ರೋಫಿ ಜಯಿಸಿದ್ದು ಅದರ ಆತ್ಮವಿಶ್ವಾಸ ಹಿಗ್ಗಿಸಿದೆಯೆಂದರೆ ತಪ್ಪಾಗಲಾರದು.

ವಿಶ್ವಕಪ್ ಸಮೀಪಿಸಿರುವಂತೆಯೆ, ಭಾರತೀಯರ ಪ್ರದರ್ಶನ ದಿನದಿಂದ ದಿನಕ್ಕೆ ಉತ್ತಮಗೊಳ್ಳುತ್ತಿರುವುದು ಸಂತಸದ ವಿಷಯವೇ. ಅದೂ ಲಂಕನ್ನರನ್ನು ಅವರ ನೆಲದಲ್ಲಿಯೇ ಮಣಿಸುವುದು ಸುಲಭದ ವಿಷಯವೇನಲ್ಲ. ಕೊಲಂಬೊದಲ್ಲೂ ಲಂಕಾ ಯಾವ ಹಂತದಲ್ಲೂ ಸುಲಭದ ತುತ್ತಾಗಿರಲೇ ಇಲ್ಲ. ಆದರೆ ಎರಡೂ ತಂಡಗಳ ನಡುವೆ ವ್ಯತ್ಯಾಸವನ್ನುಂಟು ಮಾಡಿದ್ದು ಸಚಿನ್ ಸೌರವ್ ನಡುವಿನ ಆ ವಿಶ್ವ ದಾಖಲೆಯ 252 ಓಟಗಳ ಜೊತೆಯಾಟ!

ನಿಜ, ಸಚಿನ್-ಸೌರವ್‌ರ ಎಡ-ಬಲಗೈ ಜೋಡಿ ಭಾರತಕ್ಕೆ ಪ್ರಾರಂಭಿಕ ಜೋಡಿಯ ಸಮಸ್ಯೆಯಾಗದಂತೆ ನೋಡಿಕೊಂಡಿದೆ ಎಂದರೆ ತಪ್ಪಲ್ಲ. ಒಂದೆಡೆ ಸಚಿನ್ ತಮ್ಮ ಎಂದಿನ ಬಿರುಗಾಳಿ ವೇಗದ ಬ್ಯಾಟಿಂಗ್ ಮುಂದುವರಿಸಿಕೊಂಡು ಹೋಗಿದ್ದರೆ, ಇನ್ನೊಂದೆಡೆ ತಮ್ಮ ದೈಹಿಕ ಫಿಟ್‌ನೆಸ್ ವೃದ್ಧಿಸಿಕೊಂಡಿರುವ ಸೌರವ್ ವಿಕೆಟ್‌ಗಳ ನಡುವಿನ ಓಟವನ್ನೂ ತ್ವರಿತಗೊಳಿಸಿಕೊಂಡಿರುವುದು ಭಾರತದ ಪಾಲಿಗೆ ತೀವ್ರ ಸಂತಸದ ವಿಷಯ.

ಸಚಿನ್-ಸೌರವ್ ವಿಶ್ವದಾಖಲೆಯ ಜೊತೆಯಾಟ ಹೆಚ್ಚು ಕಡಿಮೆ 45 ಓವರ್‌ಗಳನ್ನೇ ವ್ಯಯಿಸಿದ್ದು. ಆ ಹಂತದಲ್ಲಿ ಭಾರತ 275-280ರ ಮೊತ್ತವನ್ನು ತಲುಪಬಹುದೇ ಎಂಬ ಸಂಶಯ ಮೂಡಿತ್ತು. ಆದರೆ ಅಜಯ್ ಜಡೇಜಾ ಆಗ ಆಡಿದ ಆಟ ಮಹತ್ವದ್ದು. ತಂಡದ ಮೊತ್ತವನ್ನು 307ನ್ನೂ ತಲುಪಿಸುವಲ್ಲಿ ಅವರ ಪಾತ್ರ ಹಿರಿಯದು.

ಒಮ್ಮೆ ಮುನ್ನೂರರ ಗಡಿ ದಾಟಿದ ಮೇಲೆ ಅದು ಲಂಕೆಗೆ ಕೈಗೆಟುಕದ ಮೊತ್ತ ಎಂದು ಭಾರತ ಅಂದುಕೊಂಡಿರಬಹುದಾದರೂ ಅರವಿಂದ ಡಿಸಿಲ್ವಾರ ಅದ್ಭುತ ಬ್ಯಾಟಿಂಗ್ ಪಂದ್ಯವನ್ನು ಹೆಚ್ಚು ಕಡಿಮೆ ಭಾರತದ ಹಿಡಿತದಿಂದ ಕಿತ್ತು ಕೊಂಡೇ ಬಿಟ್ಟಿತ್ತು. ಆದರೆ ಮಹತ್ವದ ಹಂತದಲ್ಲಿ ಅಜಯ್ ಜಡೇಜಾ ಹಾಗೂ ನಯನ್ ಮೊಂಗಿಯಾರ ಸಮಯ ಪ್ರಜ್ಞೆಯಿಂದ ಆದ ರನ್ ಔಟ್‌ಗಳು ಪಂದ್ಯದ ಚಕ್ರವನ್ನೇ ಬದಲಿಸಿದವು. ಹೊಸಬ ಅಜಿತ್ ಆಗರಕರ್ ಇನ್ನೊಂದೆಡೆ ನೀಡಿದ ನಾಲ್ಕು ಪೆಟ್ಟುಗಳು ಲಂಕಾ ಪಾಲಿಗೆ ಮರಣಾಂತಿಕವಾದವು. ತಾವು ಬೌಲಿಂಗ್‌ಗೆ ಮರಳಿದಾಗಲೆಲ್ಲ ವಿಕೆಟ್ ಪಡೆದ ಅಜಿತ್ ಮುಂಬರುವ ದಿನಗಳಲ್ಲಿ ಭಾರತದ ದಾಳಿಯ ಪ್ರಮುಖ ಅಸ್ತ್ರವಾದಾರೆಂದು ಊಹಿಸಿದರೆ ತಪ್ಪಿಲ್ಲ. ಇನ್ನೊಬ್ಬ ಪ್ರಮುಖ ಬೌಲರ್ ಅನಿಲ ಕುಂಬ್ಳೆ ಪ್ರಾರಂಭದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬೌಲಿಂಗ್ ಮಾಡಲಿಲ್ಲವಾದರೂ ನಂತರ ಮಹತ್ವದ ಹಂತದಲ್ಲಿ ತಮ್ಮೆಲ್ಲ ಅನುಭವ ಬಳಸಿ ದಾಳಿ ನಿರ್ವಹಿಸಿದ್ದು ಲಂಕಾ ಜಯದ ಹಾದಿಯಲ್ಲಿ ಮುಗ್ಗರಿಸುವಂತೆ ಮಾಡಿತು. ಹಾಗೆ ನೋಡಿದರೆ ಭಾರತ ಬೌಲಿಂಗ್ ಬಗ್ಗೆ ಪಂದ್ಯದ ನಂತರ ನಾಯಕ ಅಜರ್ ಅತೃಪ್ತಿ ವ್ಯಕ್ತಪಡಿಸಿರುವುದರಲ್ಲಿ ಅಚ್ಚರಿಯೇನೂ ಇಲ್ಲ.

ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಸಾಧನೆ ನೀಡಲೇ ಬೇಕೆಂದಿದ್ದರೆ ಭಾರತ ತೀವ್ರ ಗಮನ ಹರಿಸಬೇಕಿರುವುದು ತನ್ನ ಕ್ಷೇತ್ರ ರಕ್ಷಣೆಯತ್ತ. ಕೊಲಂಬೊದಲ್ಲಂತೂ ಅದು ನಿರೀಕ್ಷಿತ ಮಟ್ಟಕ್ಕಿಂತ ಸಾಕಷ್ಟು ಕೆಳಕ್ಕಿಳಿದಿತ್ತು. ಕನಿಷ್ಠ 20 ರಿಂದ 25 ಓಟಗಳು ಅನಾವಶ್ಯಕವಾಗಿ ನೀಡಲ್ಪಟ್ಟವು. ಹರಭಜನ್‌ಸಿಂಗ್, ವೆಂಕಟೇಶ ಪ್ರಸಾದ್ ಅಷ್ಟೇ ಏಕೆ ಅನಿಲ್ ಕುಂಬ್ಳೆ ಸಹ ಮೈದಾನದಲ್ಲಿ 'ಭಾರ' ವಾಗಿ ಕಂಡುಬಂದರು. ಚೆಂಡಿನ ಮೇಲೆ ಧಾವಿಸುವಲ್ಲಿ ಚುರುಕುತನ ತೋರುತ್ತಿರುವ ಇವರು ನಂತರ ಚೆಂಡನ್ನು

ಮೊದಲ ಪ್ರಯತ್ನದಲ್ಲಿಯೇ ಹೆಕ್ಕಿ ತೆಗೆಯುತ್ತಾರೆಂದಿಲ್ಲ. ಕಾರಣ ಇವರಿರುವೆಡೆ ಚೆಂಡನ್ನು ಆಡಿದ ಎದುರಾಳಿ ತಂಡದ ಬ್ಯಾಟ್ಸಮನ್‌ಗಳು ಒಂದರ ಬದಲು ಎರಡು ಓಟ ಕದಿಯುವಲ್ಲಿ ಎಂದೂ ಹಿಂಜರಿಯುವುದಿಲ್ಲ.

ಮುಂದಿನ ವಿಶ್ವಕಪ್ ಎದುರೇ ಇರುವ ಹಿನ್ನೆಲೆಯಲ್ಲಿ ಭಾರತಕ್ಕೆ ತನ್ನ ತಪ್ಪು ತಿದ್ದಿಕೊಳ್ಳಲು ಬಹಳಷ್ಟು ಸಮಯವೇನೂ ಇಲ್ಲ. ಭಾರತ ಇದೇ ತಿಂಗಳು ಮಲೇಷ್ಯಾದಲ್ಲಿ ತ್ರಿರಾಷ್ಟ್ರ ಪಂದ್ಯಾವಳಿ ಹಾಗೂ ನಂತರ ಸಪ್ಟಂಬರ್ 12 ರಿಂದ 20 ರವರೆಗೆ ಟೊರೊಂಟೊದಲ್ಲಿ ಸಹಾರಾ ಕಪ್ ಪಂದ್ಯಾವಳಿಗಳ ನಂತರ ಭಾರತ ಹೆಚ್ಚು ಕಡಿಮೆ ವಿಶ್ವಕಪ್‌ನ ಬಾಗಿಲಲ್ಲೇ ಬಂದು ನಿಂತಿರುತ್ತದೆ. ಈ ನಡುವೆ ಕೌಲಾಲಂಪುರದಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟವೂ ತಂಡವನ್ನೂ 'ಮೊನಚು' ಗೊಳಿಸಲು ಇನ್ನೊಂದು ಅವಕಾಶ ಒದಗಿಸಲಿದೆ.

ವಿಶ್ವಕಪ್‌ಗಾಗಿ ಸಂಭವನೀಯರ ಪಟ್ಟಿ ಇದೇ ಅಗಸ್ಟ 8 ರಂದು ಹೊರಬೀಳಲಿದ್ದು, ಆಸ್ಟ್ರೇಲಿಯದ ಹಿಂದಿನ ನಾಯಕ ಬಾಬಿ ಸಿಂಪ್ಸನ್ ತಂಡದ ಉಸ್ತುವಾರಿಯನ್ನು ಆಗಸ್ಟ ಕೊನೆಯಲ್ಲಿ ವಹಿಸಿಕೊಳ್ಳಲಿದ್ದು, ಅದು ಮಹತ್ವದ ತಿರುವಾಗಲಿದೆ.

ಭಾರತೀಯ ತಂಡದಲ್ಲಿ ಇನ್ನೋರ್ವ ಬ್ಯಾಟ್ಸಮನ್ ಸೇರ್ಪಡೆ ಆಗಲೇಬೇಕಿದೆ. ಆ ಸ್ಥಾನವನ್ನು ಯಾರು ಪಡೆಯುತ್ತಾರೋ ಎನ್ನುವುದು ಮಹತ್ವದ್ದು. ಢಾಕಾ ಪಂದ್ಯಾವಳಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಆಡಲು ವಿಫಲರಾದ ರಾಹುಲ್ ದ್ರಾವಿಡ್ ಭವಿಷ್ಯದ ಬಗ್ಗೆ ಈಗ ಸಂಶಯ ಮೂಡಿದ್ದು ಸುಳ್ಳಲ್ಲ. ಅದೇ ರೀತಿ ಜಾವಗಲ್ ಶ್ರೀನಾಥ್ ಭಾರತೀಯ ತಂಡಕ್ಕೆ ಮರಳಿದ್ದಾದರೆ, ದಾಳಿಗೆ 'ಮೊನಚು' ಬರುವುದು ಖಚಿತ. ಆದರೆ ಕೊಲಂಬೊ ಫೈನಲ್ ಆಡಿದ ತಂಡದಲ್ಲಿ ಓರ್ವ ಬ್ಯಾಟ್ಸಮನ್ ಹಾಗೂ ಶ್ರೀನಾಥ್ ವಾಪಾಸಾಗುವುದಾದರೆ ಸ್ಥಳ ತೆರವು ಮಾಡಬೇಕಾದ ಇಬ್ಬರು ಯಾರು ಎಂಬ ಪ್ರಶ್ನೆ ಮಾತ್ರ ಮಿಲಿಯನ್ ಡಾಲರ್‌ನದು!

■ ವಸಂತ ಮುರ್ಡೇಶ್ವರ

ಕ್ರೀಡೆ ಬಗ್ಗೆ ತಿಳಿಯಿರಿ


■ ಶಂಕರಗೌಡ ಪಾಟೀಲ

1. ಭಾರತದ ಪರ ಪ್ರಥಮ ಟೆಸ್ಟ್ ಶತಕ ಗಳಿಸಿದವರು ಯಾರು?
2. ಒಂದು ದಿನದ ಅಂತರ್‌ರಾಷ್ಟ್ರೀಯ ಪಂದ್ಯದಲ್ಲಿ ಖ್ಯಾತ ಆಲ್‌ರೌಂಡರ್ ಆಟಗಾರ ಕಪಿಲ್‌ದೇವ್ ಅವರ 50ನೇ ಬಲಿ ಯಾರು?
3. ಕ್ರಿಕೆಟ್ ಇತಿಹಾಸದಲ್ಲಿ ಥರ್ಡ್ ಅಂಪೈರಿನ ಮೊದಲ ಬಲಿ ಯಾರು?
4. ಬ್ರಾಡ್‌ಮನ್ ತಮ್ಮ ಟೆಸ್ಟ್ ಕ್ರಿಕೆಟ್‌ನಲ್ಲಿ ಎಷ್ಟು ಶೂನ್ಯ ಗಳಿಸಿದ್ದಾರೆ?
5. ಒಂದು ದಿನದ ಅಂತರ್‌ರಾಷ್ಟ್ರೀಯ ಪಂದ್ಯದಲ್ಲಿ ಭಾರತದ ಪರ ಪ್ರಥಮ ಶತಕವನ್ನು ಗಳಿಸಿದವರು ಯಾರು?
6. ಟೆನ್ನಿಸ್ ಪಟು ಮೈಕೆಲ್ ಚಾಂಗ ಯಾವ ದೇಶದವರು?
7. ಚದುರಂಗ (ಚೆಸ್) ಆಟದಲ್ಲಿ 'ಗ್ರ್ಯಾಂಡ್ ಮಾಸ್ಟರ್' ಎಂದು ಖ್ಯಾತಿ ಪಡೆದಿರುವ ವಿಶ್ವನಾಥನ್ ಆನಂದ್ ಯಾವ ರಾಜ್ಯದವರು?
8. ಕೆನಡಾದ ರಾಷ್ಟ್ರೀಯ ಆಟ ಯಾವುದು?
9. 13ನೇ ವಿಶ್ವಕಪ್ ಫುಟ್‌ಬಾಲ್‌ನಲ್ಲಿ ಬ್ರೆಜಿಲ್ ತಂಡ ಎಷ್ಟನೇ ಸ್ಥಾನ ಗಳಿಸಿತ್ತು?
10. 1994ರಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದ ಆಸ್ಟ್ರೇಲಿಯಾ ಎಷ್ಟು ಚಿನ್ನದ ಪದಕಗಳನ್ನು ಗಳಿಸಿತು?
11. 1951 ರ 'ಏಶಿಯನ್ ಗೇಮ್ಸ್' ಎಲ್ಲಿ ನಡೆಯಿತು?
12. 1994ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತಕ್ಕೆ ಎಷ್ಟು ಕಂಚಿನ ಪದಕ ಲಭಿಸಿದವು?
13. ಒಲಿಂಪಿಕ್ ಕ್ರೀಡಾಕೂಟವನ್ನು ಪ್ರಾರಂಭ ಮಾಡಿದ ದೇಶ ಯಾವುದು?
14. 1924ರ ಒಲಿಂಪಿಕ್ಸ್ ಕ್ರೀಡಾಕೂಟವು ಎಲ್ಲಿ ನಡೆಯಿತು?
15. 1984ರ ಒಲಿಂಪಿಕ್ಸ್ ಕ್ರೀಡಾಕೂಟವು ಎಲ್ಲಿ ಜರುಗಿತು?
16. ಕ್ಯಾಲೆಂಡರ್ ವರ್ಷವೊಂದರಲ್ಲಿ ಟೆಸ್ಟ್ ಪಂದ್ಯಗಳಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಯಶಸ್ಸು ಭಾರತದ ಯಾವ ಬೌಲರ್‌ಗೆ ಸಲ್ಲುತ್ತದೆ?
17. ಗಾಲ್ಫ್ ರಂಧ್ರದ ವ್ಯಾಸವು ಎಷ್ಟು ಇರುತ್ತದೆ?
18. 'ಜಿಗ್ಲರ್ ಪಾಟ್' ಯಾವ ಕ್ರೀಡೆಯಲ್ಲಿ ಬಳಕೆಯಾಗುವ ಪದವಾಗಿದೆ?
19. ಪಾಲಿ ಉಮ್ರಿಗರ್ ಟೆಸ್ಟ್ ಕ್ರಿಕೆಟ್ ರಂಗ ಪ್ರವೇಶಿಸಿದ್ದು ಯಾವಾಗ?
20. ಪೋಲೋ ಆಟದ ಮೈದಾನದ ಅಳತೆ ಎಷ್ಟಿರುತ್ತದೆ?
21. ವಿಶ್ವದಲ್ಲಿ ಮೊಟ್ಟಮೊದಲು ಚದುರಂಗ (ಚೆಸ್) ಆಡಿದ ದೇಶ ಯಾವುದು?
22. 1985ರ ಏಶಿಯನ್ ಕ್ರೀಡಾಕೂಟದಲ್ಲಿ ಹಾಕಿ ಪ್ರಶಸ್ತಿ ಪಡೆದ ದೇಶ ಯಾವುದು?
23. ಸುನೀಲ್ ಗವಾಸ್ಕರ್ ಚಲನಚಿತ್ರವೊಂದರಲ್ಲಿ ನಟಿಸಿದ್ದಾರೆ. ಆ ಚಿತ್ರ ಯಾವುದು ?
24. ಜುಡೋ ಕಲೆ ಇಂದಿನ ರೂಪ ತಾಳುವಂತೆ ಮಾಡಿದವರು ಯಾರು?
25. ಕ್ರಿಕೆಟ್ ಟೆಸ್ಟ್‌ಗಳಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರ ಯಾರು?

ಉತ್ತರಗಳು

1. ಲಾಲಾ ಅಮರನಾಥ್
2. ಲ್ಯಾರಿ ಗೋಮ್ಸ್
3. ಸಚಿನ್ ತೆಂಡೂಲ್ಕರ್
4. ಏಳು
5. ಕಪಿಲ್‌ದೇವ್
6. ಅಮೇರಿಕಾ
7. ತಮಿಳುನಾಡು
8. ಐಸ್ ಹಾಕಿ
9. ಐದನೇ ಸ್ಥಾನ
10. ಎಂಬತ್ತೇಳು
11. ದೆಹಲಿಯಲ್ಲಿ
12. ಏಳು
13. ಗ್ರೀಸ್ ದೇಶ
14. ಪ್ಯಾರಿಸ್ (ಫ್ರಾನ್ಸ್)
15. ಲಾಸ್ ಏಂಜಲೀಸ್
16. ಕಪಿಲ್‌ದೇವ್ (84 ವಿಕೆಟ್)
17. ನಾಲ್ಕೂವರೆ ಅಂಗುಲ
18. ಬಿಲಿಯರ್ಡ್ಸ್
19. 1948-49
20. 300 ಗಜ ಉದ್ದ, 160 ಗಜ ಅಗಲ
21. ಭಾರತ ದೇಶ
22. ಪಾಕಿಸ್ತಾನ
23. ಸವತಿ ಪ್ರೇಮಾಚಿ (ಮರಾಠಿ)
24. ಪ್ರೊ. ಜಿಗಾರೋ ಕಾನೋ
25. ಮುಸ್ತಾಕ್ ಮಹ್ಮದ್ (ಪಾಕಿಸ್ತಾನ)

ಪದಬಂಧ - 7



ಪದಬಂಧ 6 ರ ಸರಿಯುತ್ತರ

ಎಡದಿಂದ ಬಲಕ್ಕೆ:

೧. ಮಕರಂದ ೪. ಮದುಮಗ ೬. ರವಿ, ೮. ಹರ ೯. ಚಾಟಿ ೧೦. ಮಹಲು ೧೨. ಮಗ ೧೫. ಮಹಾಸಂತೋಷ ೧೮. ರುಜು ೧೯. ಸಾಹಸ ೨೧. ತಿದಿ ೨೨. ಜಗ ೨೩. ಯಶ ೨೫. ಕಡುಕೋಪ ೨೬.ವಧುವರ.

ಮೇಲಿನಿಂದ ಕೆಳಕ್ಕೆ :

೨. ಕಲ್ಪನಾ ಚಾವ್ಲಾ ೩. ದರ ೪. ಮರ ೫. ಮದುಮಗಳು ೭. ವಿರಾಮ ೮. ಹಗಲು ೧೧.ವಿದೇಶಯಾನ ೧೩.ಕುರಾನ ೧೪.ಭಾಷಣ ೧೬. ಮರುಕಪಡು ೧೭. ಆದಿಮಾನವ ೧೯. ಸಾರಂಗ ೨೦. ಸಮಯ ೨೨. ಜಪ ೨೪. ಶವ.

ಎಡದಿಂದ ಬಲಕ್ಕೆ

೧. ಬಂಡಿ ಅನ್ನ ತಿಂದ ಬಲಶಾಲಿ ಪಾಂಡವರ ಸಹೋದರ............ (೪)
೪. ಸತಿಯೊಂದಿಗೆ ಶಪಥ ಮಾಡಿ ತುಳಿದ ಏಳು ಗೆರೆಗಳು .... (೪)
೬. ಭಯದಿಂದ ಓಡಿ ಹೋದ ಕುದುರೆ ತಿರುಗಿದೆ.................... (೨)
೮. ಆಡಳಿತ ಮಾಡುವಾಗ ತೋರಿಸಿದ ಅಧಿಕಾರದ ಗರ್ವ .... (೨)
೯. ಕತ್ತಿಯ ಹೊಡೆತಕ್ಕೂ ಒಡೆಯದ ಮೊಟ್ಟೆ........................ (೨)
೧೦. ಮಣ ಬಂಗಾರ ಗಳಿಸಿದರೂ ತಪ್ಪಲಾರದ ಸ್ಮಶಾನ .... (೩)
೧೨. ಅವಿರತವಾಗಿ ಹೋರಾಡಿದ ಮಹಾಶೂರ .... (೨)
೧೫. ಕನ್ನಡದ ಹೆಮ್ಮೆಯ ನಟ ಈ ಅರಸು ಸುಪುತ್ರ .... (೫)
೧೮. ರಮಣಿ ಬಯಸಿದ ಬೆಲೆಬಾಳುವ ಮಾಣಿಕ್ಯದ ಹರಳು .... (೨)
೧೯. ಕುಡಿತಕ್ಕೂ ಸಿಕ್ಕ ರಿಯಾಯಿತಿ.. (೩)
೨೧. ಮೊಲ ಹಿಡಿಯಲು ಬೀಸಿದ ದಾರದ ಜಾಳಿಗೆ..................... (೨)
೨೨. ಕಮರಿಯಲ್ಲಿ ಬಿದ್ದ ಆನೆ .... (೨)
೨೩. ಕೆಲಸಕ್ಕೆ ಬಾರದ ಹೊಲಸು ವಸ್ತು.. (೨)
೨೫. ನರಮನುಷ್ಯರು ಮಾಡಿದ ವಂದನೆ....................................... (೩)
೨೬. ತಿರುಕ ಭಿಕ್ಷೆ ಬೇಡಲು ಹೋದ ತಿಮ್ಮಪ್ಪನ ಊರು .... (೪)

ಮೇಲಿನಿಂದ ಕೆಳಕ್ಕೆ

೨. ಮನಸ್ಸಿನಲ್ಲಿಯೇ ಮನೆ ಮಾಡಿರುವ ಯಾರಿಗೂ ಹೇಳದ ನೋವು (೫)
೩. ಸಮಯ ಬಂದಾಗ ತೋರಿಸಿದ ಮೃದುತನ .... (೨)
೪. ಸರಿ ರಾತ್ರಿಯಲ್ಲಿ ನಿಧಿ ಕಾಯುವ ಮಹಾಹಾವು..................... (೨)
೫. ಪರಿ, ಪರಿಯಿಂದ ಕೇಳಿದಾಗ, ಸೇವೆ ಮಾಡಿದ ಸೇವಕ .... (೫)
೭. ಹಮದ ನಡುವೆ ಬಂದ ರಾಮನ ಭಕ್ತ............................. (೩)
೮. ಧಪ್ಪನೇ ಬಿದ್ದು ಒಡೆದ ಕನ್ನಡಿ .... (೩)
೧೧. ಸಕತ್ತಾಗಿ ಸರಂಜಾಮು ಹೇರಿಕೊಂಡು ಬಂದಿರುವ ಗಾಡಿ .... (೫)
೧೩. ಅವಿರತವಾಗಿ ದುಡಿದ ನಂತರ ಸಿಕ್ಕ ವಿಶ್ರಾಂತಿ..................... (೩)
೧೪. ಗತಿ ನೀನೇ ಎಂದು ಗಂಡನನ್ನು ಪೂಜಿಸಿದ ಧರ್ಮಪತ್ನಿ........... (೩)
೧೬. ಗಮಾರನು ಹವನದ ನೆಪಮಾಡಿ ನಡೆಸಿದ ಕಗ್ಗೊಲೆ............... (೫)
೧೭. ಕೋಪದಿಂದ ಹತ್ಯೆ ಮಾಡಿದಾಗ ನ್ಯಾಯಸ್ಥಾನದಿಂದ ಸಿಕ್ಕ ಅಪವಾದ .... (೫)
೧೯. ಕತ್ತಲಲ್ಲಿ ಬಟ್ಟೆ ತುಂಡು ಮಾಡಲು ಉಳಿಸಿದ ಸಾಧನ .... (೩)
೨೦. ಥಕ ಥಕ ಕುಣಿಯುವ ಆತುರ .... (೩)
೨೨. ನೌಕರ ಪಾವತಿಸಿದ ತೆರಿಗೆ .... (೨)
೨೪. ಸಮರಸದಿಂದ ಜೀವನ ನಡೆಸಿದ ಪತ್ನಿ............................... (೨)

■ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ನೀವು ಕಥೆಗಾರರಾಗಬೇಕೆ?

ಕಳೆದ ತಿಂಗಳ ಅಪೂರ್ಣ ಕಥೆ

ಶಿವಪುರದ ಶಾಲೆಯಲ್ಲಿ ಪಾರ್ವತಿಯೆಂದರೆ ಎಲ್ಲರಿಗೂ ಅಚ್ಚುಮೆಚ್ಚು. ಆಟಪಾಠಗಳಲ್ಲಿ ಸದಾ ಅವಳೇ ಮುಂದು. ಪ್ರತಿದಿನ ಎರಡು ಮೈಲು ದೂರದ ಹಳ್ಳಿಯಿಂದ ನಡೆದುಕೊಂಡು ಬರುತ್ತಿದ್ದರೂ ಅವಳು ಸದಾ ಉಲ್ಲಾಸದಿಂದಿರುತ್ತಿದ್ದಳು.

ಹೀಗಿರಲು ಒಂದು ದಿನ ತನ್ನ ಸಹಪಾಠಿ ರತ್ನಾ ಶಾಲೆಗೆ ಬಂದಿರಲಿಲ್ಲ. ದಿನಾಲೂ ತನ್ನೂರಿನಿಂದ ಶಾಲೆಗೆ ಬರಲು ಅವಳೇ ಜೊತೆಗಾತಿ. ಆದರೆ ಇಂದು ಶಾಲೆಯಿಂದ ಪಾರ್ವತಿ ಒಬ್ಬಂಟಿಯಾಗಿ ತನ್ನ ಹಳ್ಳಿಗೆ ಮರಳಿ ಹೋಗಬೇಕಾಯಿತು. ಕಾಡಿನ ಮಧ್ಯೆ ಕಾಲುಜಾಡು. ಮೋಡ ಕವಿದು ಮಸುಕಾಗಿದೆ. ಈ ದಿನವೇಕೆ ಹಾದಿಯಲ್ಲಿ ಒಂದು ನರಪಿಳ್ಳೆಯೂ ಇಲ್ಲವಲ್ಲ ಎಂದು ಅವಳು ಅಂಜುತ್ತಲೇ ನಡೆದಳು. ಮಳೆ ಬಿದ್ದರೆ ಹೇಗೆಂಬ ಧಾವಂತದಲ್ಲಿ ದಡಬಡ ಹೆಜ್ಜೆ ಹಾಕತೊಡಗಿದಳು... ಇದ್ದಕ್ಕಿದ್ದಂತೆ ಪಕ್ಕದ ಪೊದೆಯಲ್ಲಿ ಏನೋ ಮಿಸುಕಾಡಿದಂತಾಯಿತು!

ಮಕ್ಕಳು ಬರೆದ ಕತೆಯ ಮುಕ್ತಾಯ

1

ಅದನ್ನು ಕೇಳಿ ಅವಳ ಮನಸ್ಸಿನಲ್ಲಿ ಏನೋ ಒಂದು ರೀತಿಯ ತಳಮಳ ಉಂಟಾಯಿತು. ಆಕಾಶವೆಲ್ಲಾ ಕಪ್ಪಾದ ಮೋಡಗಳಿಂದ ಕೂಡಿದ್ದು ಆಗೊಮ್ಮೆ ಈಗೊಮ್ಮೆ ಮಿಂಚು ಗುಡುಗು. ಆ ಶಬ್ದವನ್ನು ಕೇಳಿದೊಡನೆ ಅವಳಿಗೆ ಇನ್ನೂ ಭಯವಾಯಿತು. ಕಾಡಿನಲ್ಲಿನ ಹಕ್ಕಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡಿಹೋದವು. ಪಾರ್ವತಿಗಂತೂ ಏಕಾದರೂ ಈ ದಿನ ನಾನು ಶಾಲೆಗೆ ಬಂದೆನೂ ಎಂದು ಮನಸ್ಸಿನಲ್ಲಿಯೇ ಚಡಪಡಿಸುತ್ತಾ ಮುಂದೆ ಸಾಗುತ್ತಿದ್ದಳು.

ದಾರಿಯುದ್ದಕ್ಕೂ ದಟ್ಟವಾದ ಕಾಡು. ಅಂಜುತ್ತಾ ಅಳುಕುತ್ತಾ ನಡೆಯುತ್ತಿದ್ದವಳಿಗೆ ದೂರದಲ್ಲಿ ಯಾರೋ ಒಬ್ಬ ವ್ಯಕ್ತಿ ಕಾಣಿಸಿದಂತಾಯಿತು. ಅವರನ್ನು ಕಂಡ ಅವಳಿಗೆ ಸ್ವಲ್ಪ ಧೈರ್ಯ ಬಂದಿತು. ಸರಸರನೆ ಹೆಜ್ಜೆ ಹಾಕುತ್ತಾ ಮನೆಗೆ ಬಂದು 'ಅಬ್ಬಾ' ಬದುಕಿದೆಯಾ ಬಡಜೀವ ಎನ್ನುತ್ತಾ ಕುರ್ಚಿಯ ಮೇಲೆ ಕುಳಿತು ಹಾಗೆಯೇ ನಿದ್ದೆ ಹೋದಳು.

-ಆರ್.ವಿ. ಪ್ರದೀಪ್
9ನೇ ತರಗತಿ, ನವೋದಯ ವಿದ್ಯಾಲಯ, ಏನಿಗದಲೆ,
ಚಿಂತಾಮಣಿ(ತಾ),ಕೋಲಾರ (ಜಿಲ್ಲೆ).

2

ಹೀಗೆ ಹೋಗುತ್ತಿರುವಾಗ ಪಟ-ಪಟ ಮಳೆ ಹನಿ ಪ್ರಾರಂಭವಾಯಿತು. ಆಗ ಆಗಸ್ಟ್ ತಿಂಗಳಾಗಿದ್ದರಿಂದ ಅದೇ ತಿಂಗಳು ಶ್ರಾವಣ ಮಾಸವಾದ ಕಾರಣ ಹಗಲು ಕಡಿಮೆಯಿತ್ತು. ಶಾಲೆ ಬಿಟ್ಟ ವೇಳೆಯು ಸಂಜೆಯಾಗಿದ್ದರಿಂದ ಆ ಸಮಯದಲ್ಲಿ ಅವಳಿಗೆ ಅವಳ ಅಜ್ಜಿಯು ಹೇಳಿದ ದೆವ್ವದ ಕಥೆ ನೆನಪಾಯಿತು. ಇನ್ನೂ ಆತಂಕವು ಹೆಚ್ಚಾಯಿತು. ಹೀಗೆ ಒಂದೊಂದು ಹೆಜ್ಜೆಯನ್ನು ಇಡುತ್ತಾ ಮುಂದೆ ಸಾಗಿದಳು. ಅಷ್ಟರಲ್ಲಿ ಊರಿನಲ್ಲಿ ಕತ್ತಲೆಯಾಗಿದ್ದ ಕಾರಣ ಕಂದೀಲಿನ ಬೆಳಕನ್ನು ತೋರಿಸುತ್ತಾ ಯಾರೋ ಒಬ್ಬರು ಬಂದರು. ಅವರು ಬೇರೆ ಯಾರು ಆಗಿರಲಿಲ್ಲ. ಅವಳ ಮಾವನವರು ಆಗಿದ್ದರು. ಆಗ ಅವಳಿಗೆ ಸಮಾಧಾನವಾಯಿತು. ಆನಂದದಿಂದ ಮನೆ ಸೇರಿ ಶಾಲೆಯಲ್ಲಿ ಹೇಳಿದ ಪಾಠಗಳನ್ನು ಪರೀಶಿಲನೆ ಮಾಡಿ, ಊಟವನ್ನು ಮಾಡಿ ನಿದ್ದೆ ಮಾಡಿದಳು.

-ಬಿ. ಭವಾನಿ
9ನೇ ತರಗತಿ 'ಅ' ವಿಭಾಗ, ಎಂ.ಎನ್.ಎಂ. ಪ್ರೌಢಶಾಲೆ
ಗಂಗಾವತಿ - 583 227, ಕೊಪ್ಪಳ ಜಿಲ್ಲೆ.


3

ಮನದಲ್ಲಿ ಭಯವು ಉಂಟಾಗುತ್ತಿತ್ತು. ಸರಸರನೇ ಹೆಜ್ಜೆ ಹಾಕುವಾಗ ಹಾವು, ಚೇಳು ಬಂದರೆ ಹೇಗೆ? ಎಂಬ ಭಯ. ಅದೇ ದಿನ ಶಾಲೆಯಲ್ಲಿ ''ಭೂತ ಬಂಗಲೆ'' ಕಥೆ ಹೇಳಿದ್ದು. ಅದರಲ್ಲಿಯ ಸನ್ನಿವೇಶಗಳು ಅವಳ ಕಣ್ಣ ಮುಂದೆ ಬಂದಂತಾಗುತ್ತಿದ್ದವು. ಮಸುಕಾದ ಸಮಯ ಬೇರೆ, ಕತ್ತಲಲ್ಲಿ ಸರಿಯಾಗಿ ಏನೂ ಕಾಣುತ್ತಿರಲ್ಲಿಲ್ಲ. ಮಳೆ ಹನಿಗಳು ಒಂದೊಂದಾಗಿ ಬೀಳಲಾರಂಭಿಸಿದವು. ಇದ್ದಕ್ಕಿದ್ದಂತೆ ಮಿಸುಕಾಡಿದ ಆ ಸ್ಥಳದಿಂದ ಮಾರುದ್ದದ ಹಾವೊಂದು ಹರಿದು ಹೋಗುವುದನ್ನು ಕಂಡು ಪಾರ್ವತಿ ಚಿಟ್ಟನೆ ಚೀರಿದಳು.

ಪಾರ್ವತಿ ಇಷ್ಟೊತ್ತಾದ್ರೂ ಮನೆಗೆ ಬಂದಿಲ್ಲಾ ಎಂದು ತಿಳಿದ ಅವಳ ಅಣ್ಣ ಶಂಕರ ಹುಡುಕಿ ಕೊಂಡು ಬರುವಾಗ ಅವಳ ಚೀರಿದ ಶಬ್ದ ಗಮನಿಸಿ ಅವಳ ಹತ್ತಿರ ಅವಸರದಿಂದ ನಡೆದು ಹೋಗುವಷ್ಟರಲ್ಲಿ ಹಾವು ಜೀವದ ಭಯದಿಂದ ಅಲ್ಲಿಂದ ಕಣ್ಮರೆಯಾಯಿತು.

ಅಣ್ಣ ಬಂದ ನಂತರ ಧೈರ್ಯ ತಂದು ಕೊಂಡ ಪಾರ್ವತಿ ತನಗಾದ ಭಯದ ಅನುಭವವನ್ನು ಹೇಳುತ್ತಾ ಮನೆಯ ಕಡೆ ಹೆಜ್ಜೆ ಹಾಕಿದಳು. ಮಾತು ಮುಗಿಯುವಷ್ಟರಲ್ಲೇ ಮನೆ ಬಂದೇ ಬಿಟ್ಟಿತು. ಬಾಗಿಲಲ್ಲಿ ಅವರ ಬರುವಿಕೆಯ ನಿರೀಕ್ಷೆಯಲ್ಲಿದ್ದ ಅವಳ ಅಪ್ಪ ಅಮ್ಮ ಖುಷಿಪಟ್ಟು ಅವಳನ್ನು ತಬ್ಬಿಕೊಂಡರು. ಮತ್ತೆ ಎಂದಿನಂತೆ ಗೆಳತಿ ರತ್ನಾಳ ಜೊತೆ ಮರುದಿನ ಶಾಲೆಗೆ ಹೋಗಿ ಬರಲು ಸಿದ್ಧಳಾದಳು.

- ನಿರ್ಮಲಾ ಹಿರೇಮಠ
10ನೇ ತರಗತಿ, ಬಸವೇಶ್ವರ ನಿಲಯ, ಎಲ್ಲಮ್ಮನ
ಗುಡಿ ಹತ್ತಿರ, ಯಲಬುರ್ಗಾ 583 236, ಕೊಪ್ಪಳ ಜಿಲ್ಲೆ.



ದೇಶ ಮುಂದೆ ಬರಬೇಕಾದರೆ
ಬಡತನ ರೇಖೆ ಅಳಿಸಬೇಕಂತೀರಿ.
ತಗೊಳ್ಳಿ ಈ ರಬ್ಬರ್....!

ನೀವೂ ಚುಟುಕ ಬರೆಯಬಹುದು

ಗುಬ್ಬಿ ಮರಿ ಗುಬ್ಬಿ ಮರಿ
ಹೊರಟಿಹೆ ನೀ ಎಲ್ಲಿಗೆ
ಬೇಳೆ-ಕಾಳನು ಕೊಂಡುತರಲು
ದೂರದ ಹಳ್ಳಿಯ ಪೇಟೆಗೆ

ಈ ಪದ್ಯದ ಎರಡನೇ ಹಾಗೂ ನಾಲ್ಕನೇ ಸಾಲಿನ ಕೊನೆಯಪದ ಪ್ರಾಸಬದ್ಧವಾಗಿದೆಯಲ್ಲ? ಇದೇ ರೀತಿ ನೀವು ನಾಲ್ಕು ಸಾಲಿನ ಚುಟುಕವನ್ನು ಬರೆದು ಕಳಿಸಿ.

- ಈ ತಿಂಗಳ ಚುಟುಕ ನಾಲ್ಕು ಸಾಲುಗಳಿದ್ದು, ಒಂದು ಮತ್ತು ಮೂರನೆ ಸಾಲಿನ ಕೊನೆಯ ಪದ ಪ್ರಾಸಬದ್ಧವಾಗಿರಲಿ.
- ಚುಟುಕವು ಕೇವಲ ಪ್ರಾಸಕ್ಕಾಗಿ ಹೆಣೆದಂತಿರಬಾರದು. ಅದು ಒಟ್ಟಾರೆ ಒಂದು ಚಿತ್ರಣ ನೀಡುವಂತಿರಲಿ ಅಥವಾ ಯಾವುದಾದರೊಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿರಲಿ. ಚುಟುಕಕ್ಕೆ ಒಂದು ಬಂಧ ಮುಖ್ಯ.
- ಹತ್ತನೆಯ ತರಗತಿವರೆಗಿನ ವಿದ್ಯಾರ್ಥಿಗಳು ಮಾತ್ರ ಚುಟುಕ ಬರೆದು ಕಳುಹಿಸಬೇಕು. ಅದು ಇತರರ ಸಹಾಯವಿಲ್ಲದೆ ಬರೆದ ನಿಮ್ಮ ಸ್ವಂತ ಚುಟುಕವಾಗಿರಬೇಕು.
- ಆಯ್ದ ಮೂರು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗಲಿವೆ.
- ಚುಟುಕವನ್ನು ಪೋಸ್ಟ್‌ಕಾರ್ಡಿನಲ್ಲಿ ಮಾತ್ರ ಬರೆದು ಕಳಿಸಬೇಕು. ನಿಮ್ಮ ಹೆಸರು, ತರಗತಿ, ಶಾಲೆಯ ವಿಳಾಸ ಕಾರ್ಡಿನ ಹಿಂಬದಿಯಲ್ಲಿ ಸ್ಪಷ್ಟವಾಗಿರಲಿ.
- ನಿಮ್ಮ ಚುಟುಕ ನಮಗೆ ತಲುಪಲು ಕೊನೆಯ ದಿನಾಂಕ 15.8.98

ಮಕ್ಕಳು ಬರೆದ ಚುಟುಕಗಳು

ಅಕ್ಷರ ಕಲಿಯಲು ಆಸಕ್ತಿಬೇಕು
ರೊಕ್ಕವನ್ನುಳಿಸಲು ಲೆಕ್ಕವು ಬೇಕು
ಸಂಸಾರ ಸಾಗಿಸಲು ಬುದ್ಧಿಯು ಬೇಕು.

- ನೀಲವ್ವ ಹನುಮಂತಪ್ಪ ಮೇಗಲಮನಿ
7ನೇ ತರಗತಿ, ಸರಕಾರಿ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆ, ಶಿರಹಟ್ಟಿ, ಗದಗ.

★

ತಲೆ ತಿನ್ನುವ ಮನೆಗೆಲಸ ಸಾಕಪ್ಪ ಸಾಕು
ಖುಷಿ ಕೊಡುವ ಆಟಗಳು ಬೇಕಪ್ಪ ಬೇಕು
ಗೆಳೆಯರೊಂದಿಗೆ ನಾ ಕುಣಿದು
ಕುಪ್ಪಳಿಸಬೇಕು.

- ನವೀನ ಡಿ.ಬಡಿಗೇರ
7ನೇ ತರಗತಿ, ಕೆ.ಸಿ.ಎ.ಜಿ. ಶಾಲೆ,
ಹರಪನಹಳ್ಳಿ - 583 131, ದಾವಣಗೆರೆ ಜಿಲ್ಲೆ

★

ಅಕ್ಷರ ಕಲಿಯಬೇಕು
ಅಜ್ಞಾನ ಕಳೆಯಬೇಕು
ಅದುವೇ ಬಾಳಿನ ಬೆಳಕು

- ವಿಜಯಲಕ್ಷ್ಮಿ ಅಂಗಡಿ
5ನೇ ತರಗತಿ, ಸಿ,(ಸ್ಟೇಶನ್ ರೋಡ್),
ಎಂ.ಹೆಚ್.ಪಿ. ಶಾಲೆ, ಕೊಪ್ಪಳ - 583 231.

ನಾಗರ ಪಂಚಮಿ

ಅಂತೂ ಬಂತು ನಾಗರ ಪಂಚಮಿ
ಹೆಣ್ಣು ಮಕ್ಕಳ ಸಡಗರ ಪಂಚಮಿ

ನಾಗಪ್ಪನಿಗೆ ಹಾಲೆರೆಯುವ ಹಬ್ಬ
ಮಕ್ಕಳಿಗೆ ಜೋಕಾಲಿಯ ಹಬ್ಬ
ಮರದಿಂದ ಮರಕ್ಕೆ ಜೀಕುವ ಹಬ್ಬ
ಹೆಣ್ಣುಮಕ್ಕಳು ತವರಿಗೆ ಹೋಗುವ ಹಬ್ಬ

ತಂಬಿಟ್ಟು ನೈವೇದ್ಯ ನಾಗಪ್ಪನಿಗೆ
ಜೋಕಾಲಿಯ ಸಡಗರ ಮಕ್ಕಳಿಗೆ

ಮನೆಯಲ್ಲಿ ಮಾಡುವರು ಸಿಹಿತಿಂಡಿ
ಎಲ್ಲರಿಗೂ ಇಷ್ಟ ಅಳ್ಳುಂಡಿ

ಮಕ್ಕಳು ಬುಗರಿ ಆಟ ಆಡುವರು
ಅಳ್ಳು ಸಿಹಿ ತಿಂಡಿ ತಿನ್ನುವರು

ಶಾಲೆಯಲ್ಲಿ ಸರಸ್ವತಿ ಪೂಜೆ ಮಾಡುವರು
ಮಕ್ಕಳಿಗೆ ಗುರುಗಳು ಹರಸುವರು

- ಸವಿತಾ ಮಹಾದೇವ ಹೂಗಾರ
ದ್ವಿತೀಯ ಪಿ.ಯು.ಸಿ. ಕಲಾವಿಭಾಗ
ಮುಧೋಳ

ಯಾರಿವಳು?

ಅಪ್ಪಿಕೊಳ್ಳಲು
ಮುತ್ತಿಕ್ಕುವಳು
ಹೊಡೆಯಲು
ಗೋಡೆ ಸೇರುವಳು
- ಯಾರಿವಳು?

ಮುತ್ತಿಕ್ಕಲು
ಉರಿಬರಿಸುವಳು
ನೋಡಲು
ಓಡಿ ಹೋಗುವಳು
- ಯಾರಿವಳು?

ಹೊಡೆಯಲು
ಮುತ್ತಿಕ್ಕುವಳು
ಕೊಲ್ಲಲು
ರಕ್ತವಿಲ್ಲದೆ ಸಾಯುವಳು
- ಯಾರಿವಳು ?

(ಉತ್ತರ: ಚೇಳು)

- ಅಮೃತ ಎಸ್. ಕುಂಬಾರ ನಿರ್ಣಾ

ಪ್ರಾಸ ಪದ್ಯಗಳು

ಬೆಳೆದು ತಂದ ನಗ

ತಂದೆಯಂತೆ ಮಗ
ಹೊರಟ ಹೊತ್ತು ನೊಗ
ನೆಲವನುತ್ತು
ಬೀಜ ಬಿತ್ತಿ
ಬೆಳೆದು ತಂದ ನಗ

ಕೊಂಡು ತಂದಳು ಬ್ಯಾಳಿ

ಕಂಕುಳಲ್ಲಿ ಕೋಳಿ
ಅವುಚಿಕೊಂಡು ಕಾಳಿ
ಸಂತೆಯಲ್ಲಿ
ಮಾರಿ ಅದನು
ಕೊಂಡು ತಂದಳು ಬ್ಯಾಳಿ.

ತಿಂದು ಮುಗಿಸಿತು ಮೂಷಿಕ

ಮಣ್ಣಿನಿಂದ ಮಾಡಿ ಬೆನಕ
ಪೂಜಿಸಿದಳು ಕನಕ
ಚಕ್ಕುಲಿ ಕಡುಬು
ಮೋದಕ
ತಿಂದು ಮುಗಿಸಿತು ಮೂಷಿಕ

- ಎಚ್. ಎನ್. ಸೋಮಶೇಖರ

ನೀವು ಕಥೆಗಾರರಾಗಬೇಕೆ?

ನಿಮಗೂ ಕಥೆಗಾರರಾಗಬೇಕೆಂಬ ಆಸೆ ಇರಬಹುದಲ್ಲವೆ? ನಿಮ್ಮಂತಹ ಚಿಗುರುಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಿಕ್ಕಾಗಿಯೇ ಈ ಅಂಕಣ ಮೀಸಲು. ನೀವು ಮಾಡಬೇಕಾದುದಿಷ್ಟೇ; ಈ ಕೆಳಗೆ ನಾವೊಂದು ಕಥೆ ನೀಡಿದ್ದೇವೆ. ಆದರೆ ಅದು ಅಪೂರ್ಣ. ಅದನ್ನು ಪೂರ್ಣಗೊಳಿಸಬೇಕಾದವರು ನೀವೇ!

ಕಥೆ

ಶ್ರಾವಣ ಮಾಸವೆಂದರೆ ಮಲ್ಲಿಗೆ ತಿಳಿಯದು. ಆಗಸ್ಟ್ ತಿಂಗಳಿನಲ್ಲಿ ಅಜ್ಜಿಯ ಊರಿಗೆ ಹೋಗಬೇಕೆಂಬುದಷ್ಟೇ ಅವನಿಗೆ ಗೊತ್ತು. ಅಲ್ಲಿ ಜಾತ್ರೆಯ ಆಕರ್ಷಣೆಯ ಜೊತೆಗೆ ಊರ ಮಂದೆ ಹರಿಯುವ ಹಗರಿಯಲ್ಲಿ ಜಿಗಿದಾಡುವುದೆಂದರೆ ಅವನಿಗೆ ಪಂಚಪ್ರಾಣ.

ಪ್ರತಿವರ್ಷದಂತೆ ಈ ವರ್ಷವೂ ಅಮ್ಮನೊಂದಿಗೆ ಅಜ್ಜಿಯ ಊರಿಗೆ ಬಂದಿಳಿದ ಮಲ್ಲಿ, ಊರು ತಲುಪುತ್ತಲೇ ಅವನು ಹಗರಿಗೆ ಹೋಗುತ್ತೇನೆಂದು ಹಠಮಾಡಿ ಅಳತೊಡಗಿದ. ಅಷ್ಟರಲ್ಲಿ ಎದುರುಮನೆಯ ನಿರ್ಮಲತ್ತೆ ಬಂದು, 'ಬಾ ಮಲ್ಲೂ, ನಾನೂ ಬಟ್ಟೆ ಒಗೆಯಾಕ ಹಗರಿಗೆ ಹೋಗ್ತದೀನಿ, ಕರಕೊಂಡು ಹೋಗ್ತೀನಿ ಬಾ' ಎಂದು ಕರೆದಳು. ಮಲ್ಲಿಯನ್ನು ಕಳಿಸುವಾಗ ಅಜ್ಜಿ 'ನಿರ್ಮಲಾ, ಇವನ ಕೈಯಾಗ ಉಂಗುರಾ ಐತೆ, ಹುಷಾರು' ಎಂದು ಹೇಳಿ ಕಳಿಸಿದಳು.

ಜಾತ್ರೆಯ ಸಮಯವಾದ್ದರಿಂದ ಹಗರಿಯ ತುಂಬ ಜನವೋ ಜನ. ನಿರ್ಮಲಾ ಬಟ್ಟೆ ಒಗೆಯುತ್ತಿದ್ದರೆ ಮಲ್ಲಿ ಜುಳು ಜುಳು ಹರಿಯುವ ನೀರಿನಲ್ಲಿ ಜಿಗಿದಾಡುತ್ತಾ ಉಸುಕಿನಲ್ಲಿ ಬೀಳುತ್ತಾ ಶಂಖ-ಕವಡೆಗಳನ್ನು ಆರಿಸಿಕೊಳ್ಳುತ್ತಿದ್ದ. ಅವನು ಎಗರಿದಾಗೊಮ್ಮೆ ಜೇಬಿನಲ್ಲಿನ ಶಂಖ-ಕವಡೆಗಳು ಘಲ್ ಘಲ್ ಎನ್ನುತ್ತಿದ್ದವು.

ತೊಳೆದ ಬಟ್ಟೆಗಳನ್ನೆಲ್ಲ ಬಕೆಟ್ಟಿನಲ್ಲಿಟ್ಟುಕೊಂಡು ನಿರ್ಮಲಾ ತಿರುಗಿ ನೋಡಿದಳು. ಅಲ್ಲಿ ಮಲ್ಲಿ ಇರಲಿಲ್ಲ! ಗಾಬರಿಯಿಂದ ಆಕೆ 'ಮಲ್ಲೂ' ಎಂದು ಗಟ್ಟಿಯಾಗಿ ಕೂಗಿದಳು.

ಸೂಚನೆಗಳು :

- ಹತ್ತನೆಯ ತರಗತಿಯವರಗಿನ ವಿದ್ಯಾರ್ಥಿಗಳು ಮಾತ್ರ ಈ ಕಥೆಯನ್ನು ಪೂರ್ಣಗೊಳಿಸಿ ಕಳುಹಿಸಲು ಅರ್ಹರು.
- ನಿಮ್ಮ ಬರವಣಿಗೆ ಅರ್ಧ ಪೂಲ್‌ಸ್ಕೇಪ್ ಹಾಳೆ ಮೀರದಿರಲಿ.
- ಆ ಹಾಳೆಯ ಹಿಂಬದಿಯಲ್ಲಿ 'ಕಿಲ ಕಿಲ ಕೂಪನ್' ಅಂಟಿಸಿರಬೇಕು.
- ಮುಂದಿನ ಸಂಚಿಕೆಯಲ್ಲಿ ಫಲಿತಾಂಶ.
- ನಿಮ್ಮ ಬರವಣಿಗೆ ನಮಗೆ ತಲುಪಲು ಅಂತಿಮ ದಿನಾಂಕ 15.8.98

ಕಿಲ ಕಿಲ ಕೂಪನ್ – (ಆಗಸ್ಟ್ 98)

ಹೆಸರು..

ತರಗತಿ.............................. ವಯಸ್ಸು....................

ತಂದೆ...

ತಾಯಿ...


ವಿಳಾಸ...

....

....

....

ಹುಲಿ-ಕುರಿ ಆಟ



ಹಳ್ಳಿಗಾಡಿನ ಗುಡಿಗುಂಡಾರ ಮಂಟಪಗಳಲ್ಲಿ ಹಾಸಿರುವ ಬಂಡೆಗಳ ಮೇಲೆ ಈ ತರಹದ ಚಿತ್ರವನ್ನು ಕೊರೆದಿರುವುದು ಸಾಮಾನ್ಯ. ನೂರಾರು ವರ್ಷಗಳಿಂದ ಜನರನ್ನು ರಂಜಿಸುತ್ತಿರುವ ಈ ಆಟಕ್ಕೆ 'ಹುಲಿಮನೆ ಕಟ್ಟೆ' ಅಥವಾ 'ಹುಲಿ-ಕುರಿ ಆಟ' ಎನ್ನುವರು. ಈ ಆಟಕ್ಕೆ ನಯಾ ಪೈಸೆಯೂ ಖರ್ಚಾಗದು. ಸ್ಥಳದಲ್ಲೇ ಸಿಗುವ ಚಿಕ್ಕ ಪುಟ್ಟ ಕಲ್ಲುಗಳೇ ಆಟದ ಸಾಮಗ್ರಿಗಳು! ಇಷ್ಟು ಸರಳವಾದ ಈ ಆಟ ನಗರದಲ್ಲಿನ ಮಕ್ಕಳಿಗಂತೂ ಗೊತ್ತೇ ಇರುವುದಿಲ್ಲ.

ಈ ಆಟಕ್ಕೆ ಬೇಕಾಗಿರುವುದು 4 ಕೊಂಚ ದೊಡ್ಡ ಗಾತ್ರದ ಕಲ್ಲುಗಳು ಹಾಗೂ 18 ಚಿಕ್ಕ ಗಾತ್ರದ ಕಲ್ಲುಗಳು. ಅಂದರೆ 4 ಹುಲಿಗಳು ಮತ್ತು 18 ಕುರಿಗಳ ಮಧ್ಯೆ ಆಟ ನಡೆಯುತ್ತದೆ. ಒಬ್ಬನ ಕೈಯಲ್ಲಿ 4 ಹುಲಿಗಳಿದ್ದರೆ, ಪ್ರತಿಸ್ಪರ್ಧಿಯ ಕೈಯಲ್ಲಿ 18 ಕುರಿಗಳಿರುತ್ತವೆ.

ಪ್ರತಿಯೊಂದು ಮೂಲೆ ಹಾಗೂ ಎರಡು ರೇಖೆಗಳು ಕೂಡುವ ಕೇಂದ್ರಕ್ಕೆ 'ಮನೆ' ಎನ್ನುವರು. ಪ್ರತಿಯೊಂದು ಮನೆಯನ್ನು ವೃತ್ತದಿಂದ ಗುರುತಿಸಲಾಗಿದೆ. ಮೊದಲಿಗೆ ಹುಲಿಯ ಪಕ್ಷದವ 4 ಹುಲಿಗಳನ್ನು 1, 2, 3, 4, ಸಂಖ್ಯೆಯ ಮನೆಯಲ್ಲಿ ಒಮ್ಮೆಲೆ ಕೂಡಿಸುತ್ತಾನೆ. ನಂತರ ಕುರಿಯ ಪಕ್ಷದವ ಒಂದು ಕುರಿಯನ್ನು ತನಗಿಷ್ಟ ಬಂದ ಮನೆಯಲ್ಲಿ ಕೂಡಿಸುತ್ತಾನೆ. ಆಗ, ಒಂದು ಹುಲಿ ತಾನು ಕೂತ ಮನೆ ಬಿಟ್ಟು ಪಕ್ಕದ ಮನೆಗೆ ಹಾರುತ್ತದೆ. ಹೀಗೆ ಒಂದು ಕುರಿ ಬಂದಾಕ್ಷಣ, ಒಂದು ಹುಲಿ ಹೊಂಚುಹಾಕಿ ಪಕ್ಕದ ಮನೆಗೆ ಹಾರುತ್ತದೆ.

ಇದರ ನಿಯಮಗಳು ಹೀಗಿವೆ:

- ಒಂದು ಹೊಸ ಕುರಿ ಬಂದಾಕ್ಷಣ, ಯಾವುದಾದರೊಂದು ಹುಲಿ ಪಕ್ಕದ ಯಾವುದಾದರೊಂದು ಮನೆಗೆ ಸರಿಯಲೇಬೇಕು. ಒಮ್ಮೆಲೆ 2-3 ಮನೆ ಹಾರುವಂತಿಲ್ಲ.
- ಹುಲಿಯ ಪಕ್ಕದ ಮೊದಲ ಮನೆಯಲ್ಲಿ ಕುರಿ ಇದ್ದು, ಎರಡನೆಯ ಮನೆ ಖಾಲಿ ಇದ್ದಾಗ, ಹುಲಿಯು ಕುರಿಯ ಮೇಲೆ ಹಾರಿ ಹೋಗಿ ಎರಡನೆಯ ಮನೆಯಲ್ಲಿ ಕೂಡಬೇಕು. ಆಗ ಆ ಕುರಿ ಸತ್ತಂತೆ. ಅಂದರೆ ಆ ಕಲ್ಲನ್ನು (ಕುರಿಯನ್ನು) ಹುಲಿಯ ಪಕ್ಷದವ ಎತ್ತಿಕೊಳ್ಳುತ್ತಾನೆ. ಹೀಗೆ ಒಂದೊಂದೇ ಬಲಿ ತೆಗೆದುಕೊಳ್ಳುತ್ತಾ ಎಲ್ಲ ಕುರಿಗಳೂ ಸತ್ತರೆ ಹುಲಿಯ ಪಕ್ಷ ಗೆದ್ದಂತೆ.
- ಕುರಿಗಳು ಗೆಲ್ಲುವುದು ಹೇಗೆ?
- ಹುಲಿಯ ಪಕ್ಕದ ಮೊದಲ ಮನೆಯಲ್ಲಿ ಕುರಿ ಇದ್ದು, ಎರಡನೆಯ ಮನೆಯಲ್ಲೂ ಕುರಿಯಿದ್ದರೆ ಆ ದಿಕ್ಕಿನಲ್ಲಿ ಹುಲಿ ಹಾರುವಂತಿಲ್ಲ. ಹೀಗೆ ಹುಲಿಯ ಚಲನೆಗೆ ಲಭ್ಯವಿರುವ ದಿಕ್ಕುಗಳನ್ನೆಲ್ಲ ಜಾಣ್ಮೆಯಿಂದ ಬಂದ್ ಮಾಡಿ ದಿಗ್ಬಂಧನದಿಂದ ಹುಲಿಯನ್ನೂ ಸೆರೆ ಹಿಡಿಯಬಹುದು.
- ಒಂದು ಕುರಿ ಒಂದು ಮನೆ ಸರಿದಾಗ, ಹುಲಿಯೂ ಸಹ ಕಡ್ಡಾಯವಾಗಿ ಒಂದು ಮನೆ ಸರಿಯಲೇ ಬೇಕು.
- ಸರಿ, ಕಲ್ಲುಗಳನ್ನು ಆರಿಸಿಕೊಂಡು ಬನ್ನಿ ಹೋಗಿ! ಒಂದ್ನಿಮಿಷ. 24 ಮನೆಗಳ ಈ ಆಟದಲ್ಲಿ 4 ಹುಲಿ, 18 ಕುರಿಗಳ ಜಟಾಪಟಿ ನಡೆಯುವಾಗ ಪ್ರತಿಯೊಂದು ಹೆಜ್ಜೆಯೂ ಕುತೂಹಲ, ರೋಮಾಂಚಕ! ಯಾವಾಗ। ನೀವು ಜಾಣರಾಗಿದ್ದಾಗ!

ಉದುರುತ್ತಿರುವ ಹೀರೋಗಳು

ಉಪೇಂದ್ರರ 'ಎ' ಚಿತ್ರ ಯಶಸ್ವಿಯಾಗೋದಕ್ಕೆ ಇರುವ ಅಸಂಖ್ಯ ಕಾರಣಗಳಲ್ಲಿ ಮುಖ್ಯವಾದದ್ದು ಯಾವುದು? ಯಾವುದೇ ಪ್ರೈಮರಿ ಶಾಲಾ ವಿದ್ಯಾರ್ಥಿಯೂ ಸಲೀಸಾಗಿ ಹೇಳಿಬಿಡುತ್ತಾನೆ.



ಮೇಜರ್‌ಸಾಬ್ ಚಿತ್ರ ಯಾಕೆ ಸೋಲುತ್ತದೆ?

ಅಮಿತಾಬ್‌ಗೆ ವಯಸ್ಸಾಗಿದೆ ಅಥವಾ ಅವನನ್ನು ವಯಸ್ಸಾದವನಂತೆ ತೋರಿಸಿದ್ದು ಜನಕ್ಕೆ ಮೆಚ್ಚುಗೆಯಾಗಲಿಲ್ಲ. ಅದ್ಯಾವುದೂ ಅಲ್ಲ ಅಮಿತಾಬ್ ಚರಿಷ್ಮಾವೇ ಖತಂ ಆಗಿದೆ, ಈಗೇನಿದ್ದರೂ ಶಾರುಕ್, ಗೋವಿಂದರ ಕಾಲ.

ಹೀಗೇ ಕಾರಣಗಳ ಮೇಲೆ ಕಾರಣಗಳನ್ನು ಸೇರಿಸುತ್ತಲೇ ಹೋಗಬಹುದು. ಸಿನಿಮಾ ಪಂಡಿತರಿಗೆ ಮೆಚ್ಚಿನ ಕೆಲಸವೆಂದರೆ ಚಿತ್ರವೊಂದರ ಸೋಲಿಗೆ ಕಾರಣಗಳನ್ನು ಪತ್ತೆ ಮಾಡುವುದು. ಚಿತ್ರ ಗೆದ್ದರೆ ಅವರಿಗೆ ಇಷ್ಟೊಂದು ರೋಮಾಂಚನವಾಗುವುದಿಲ್ಲ. ಯಾಕೆಂದರೆ ಆಗ ನಟನೊಬ್ಬನ ಚಾರಿತ್ರ್ಯವಧೆ ಮಾಡುವ ಸುವರ್ಣಾವಕಾಶ ತಪ್ಪಿಹೋಗುತ್ತದೆ, ಹೊಸ ಸಂಶೋಧನೆಗಳನ್ನು ಮಂಡಿಸುವ ಅವಕಾಶ ಜಾರಿಹೋಗುತ್ತೆ.

ಇತ್ತೀಚೆಗೆ ಜೀನತ್ ಅಮಾನ್ ಎಂಬ ಮಾಜಿ ಸುಂದರಿಯ ಮೇಲೆ ಆಕೆಯ ಮಗನೇ ಕೈ ಮಾಡಿದ್ದು ರಾಷ್ಟ್ರಮಟ್ಟದ ಸುದ್ದಿಯಾಯಿತು. ಆಕೆ ಇಂಥದ್ದಕ್ಕೆ ಅರ್ಹಳು, ಯಾಕೆಂದರೆ ಆಕೆ ಗಂಡನನ್ನು ಬಿಟ್ಟವಳು, ನಾಲ್ಕೈದು ಗಂಡಸರ ಜೊತೆ ಮೈ ಮನಸ್ಸನ್ನು ಹಂಚಿಕೊಂಡವಳು, ಎಂದೆಲ್ಲಾ ಹಳೇ ಜಾತಕವನ್ನು ಹೊರತೆಗೆದು ಆಕೆಯ ಜನ್ಮಜಾಲಾಡಿದರು. ಆದರೆ ಮಗನನ್ನೇ ಅಮ್ಮನ ವಿರುದ್ಧ ಎತ್ತಿಕಟ್ಟುವ ದುಷ್ಟಮನಸ್ಸುಗಳ ಬಗ್ಗೆ ಯಾರೂ ಚಿಂತಿಸಲಿಲ್ಲ.

ಸಿನಿಮಾ ಪತ್ರಿಕೆಯ ಓದುಗರಿಗೆ ಚಿತ್ರ ನಟನಟಿಯರ ಸಂದರ್ಶನಗಳ ಬಗ್ಗೆ ಆಸಕ್ತಿ ಕಡಿಮೆಯಾಗಿದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಸಂದರ್ಶನದಲ್ಲಿ ಇರೋದಾದರೂ ಏನು? ಬರೀ ಆತ್ಮರತಿ, ತನ್ನಷ್ಟು ಮುಕ್ತ ಮನಸ್ಸಿನವರಾರೂ ಇಲ್ಲ ಎಂದು ತೋರಿಸಿಕೊಳ್ಳುವ ಹಪಾಹಪಿ, ಪರನಿಂದೆ, ನಟನ ಮುಂದಿನ ಹಾಗೂ ಹಿಂದಿನ ಚಿತ್ರಗಳ ಬಗ್ಗೆ ವಿವರ. ಅದರ ಬದಲಾಗಿ ಈ ಸಂದರ್ಶನವನ್ನೇ ವರದಿಗಾರನೊಬ್ಬ ತನ್ನ ಕೈಚಳಕ ಪ್ರಯೋಗಿಸಿ ಸ್ಕೂಪ್ ಅಥವಾ ಸ್ಕ್ಯಾಂಡಲ್ ಥರ ಪ್ರಕಟಿಸಿದಲ್ಲಿ ಓದುಗರಿಗೂ ಮಜಾ ಸಿಗುತ್ತದೆ. ಸಂಬಂಧಿಸಿದ ನಟ ಅಥವಾ ನಟಿಗೂ ಮೈಲೇಜ್ ಸಿಗುತ್ತದೆ. ಇವೆಲ್ಲಾ ಟ್ರೇಡ್ ಸೀಕ್ರೆಟ್.

ಉಪೇಂದ್ರರ 'ಎ' ಚಿತ್ರ ಯಶಸ್ವಿಯಾಗೋದಕ್ಕೆ ಇರುವ ಅಸಂಖ್ಯ ಕಾರಣಗಳಲ್ಲಿ ಮುಖ್ಯವಾದದ್ದು ಯಾವುದು? ಯಾವುದೇ ಪ್ರೈಮರಿ ಶಾಲಾ ವಿದ್ಯಾರ್ಥಿಯೂ ಸಲೀಸಾಗಿ ಹೇಳಿಬಿಡುತ್ತಾನೆ.

'ಉಪೇಂದ್ರ ಹಾಗೂ ಪ್ರೇಮಾ ಅವರ ನಡುವಣ ಪ್ರೇಮಪ್ರಸಂಗ ಹಾಗೂ ಅದು ಭಗ್ನವಾಗಿದ್ದರ ವರದಿಯೇ ಈ ಚಿತ್ರ ಎನ್ನುವ ಪ್ರಚಾರ'.

ಇದನ್ನೇ ಮಾದರಿಯಾಗಿಸಿಕೊಂಡು ಇನ್ನೊಬ್ಬ ನಿರ್ಮಾಪಕ 'ಝಿಡ್' ಎಂಬ ಚಿತ್ರ ತೆಗೀತಾರೆ. ಅದರಲ್ಲಿ 'ಪ್ರೇಮ' ಕಥೆಯ ಇನ್ನೊಂದು ಮುಖವನ್ನು ಪರಿಚಯಿಸಲಾಗುವುದು ಎನ್ನುತ್ತದೆ ಜಾಹಿರಾತು. 'ಎ' ನೋಡಿದವರೆಲ್ಲಾ ಸಹಜವಾಗಿಯೇ ಈ ಚಿತ್ರವನ್ನೂ ನೋಡುತ್ತಾರೆ. ತೆರೆಮರೆಯ (ಹಾಗೊಂದಿದ್ದರೆ) ಪ್ರೇಮಕಥೆ ತೆರೆಯ ಮೇಲೆಯೂ ಲಾಭವನ್ನು ತಂದುಕೊಡುವ ಸರಕಾಗುತ್ತದೆ. ಈ ಹಿಂದೆ ಹಿಂದಿಯಲ್ಲಿ ರಾಜ್‌ಕಪೂರ್ ಇಂಥದ್ದೇ ಕೆಲಸ ಮಾಡಿದ್ದ. ಅಮಿತಾಬ್-ರೇಖಾ ಪ್ರೇಮಪ್ರಸಂಗವೂ ಚಿತ್ರವಾಗಿತ್ತು. ಇದು ಒಂದು ವಿಧಾನವಾದರೆ, ಭೂಗತ ಜಗತ್ತಿನ ದೊರೆಗಳು, ರಾಜಕಾರಣಿಗಳು ಸಿನಿಮಾಗೆ ವಸ್ತುವಾಗಿದ್ದನ್ನೂ ನಾವು ಕಂಡಿದ್ದೇವೆ. ಮುಂಬೈ ಕೊಳಚೆಗೇರಿಯೊಂದರ ನಾಯಕನಾಗಿ ಮೆರೆದ ವರದರಾಜ ಮೊದಲಿಯಾರ್‌ನ್ನೇ ದೃಷ್ಟಿಯಲ್ಲಿಟ್ಟುಕೊಂಡು ಮಣಿರತ್ನಂ 'ನಾಯಗನ್' ಚಿತ್ರ ನಿರ್ದೇಶಿಸಿದ್ದರು. ಅವರ ಇನ್ನೊಂದು ಚಿತ್ರ 'ಇರುವರ್'ಗೆ ಎಂಜಿಆರ್ ಹಾಗೂ ಕರುಣಾನಿಧಿ ಅವರ ಬದುಕಿನ ಫ್ಲ್ಯಾಷ್‌ಬ್ಯಾಕ್ ಆಧಾರವಾಗಿತ್ತು. ಇಂಥ ಅಸಲಿ ಕಥೆಗಳನ್ನು ತೆರೆಯ ಮೇಲೆ ತರುವ ಹೊತ್ತಿಗೆ ಅವುಗಳು ಡಾಕ್ಯುಮೆಂಟರಿಯ ರೂಪ ತಾಳಬಾರದು ಎನ್ನೋ ಕಾರಣಕ್ಕೇ ಹೊಡೆದಾಟ, ಹಾಡುಗಳು ಸೇರ್ಪಡೆಯಾಗುತ್ತವೆ. ಆಗ ಸಿನಿಮಾ ಬಿದ್ದುಹೋಗುತ್ತದೆ.

ತಮಾಷೆಯೆಂದರೆ ವೀರಪ್ಪನ್‌ನಂಥ ಕುಖ್ಯಾತನ ಬಗ್ಗೆ ನಿರ್ಮಾಣವಾದ 'ವೀರಪ್ಪನ್' ಚಿತ್ರಕ್ಕೆ ರಾಜ್ಯಸರ್ಕಾರದ ಪ್ರಶಸ್ತಿ ಸಲ್ಲುತ್ತದೆ, ಅದರಲ್ಲಿ ವೀರಪ್ಪನ್ ಆಗಿ ಪ್ರೇಕ್ಷಕರನ್ನು ರಂಜಿಸಿದ (?) ದೇವರಾಜ್‌ಗೆ ಶ್ರೇಷ್ಠನಟ ಪ್ರಶಸ್ತಿ ಬರುತ್ತದೆ. ಈ ಬಗ್ಗೆ ಚರ್ಚೆ ನಡೆದಾಗ ಸಿನಿಮಾವನ್ನು, ಸಿನಿಮಾ ಆಗಿಯೇ ಅದರ ಸಿನಿಮ್ಯಾಟಿಕ್ ಎಕ್ಸಲೆನ್ಸಿ ದೃಷ್ಟಿಯಿಂದ, ನೋಡಬೇಕು. ಅದನ್ನು ವಾಸ್ತವದ ಘಟನೆಯೊಂದಿಗೆ ಸಮೀಕರಿಸುವುದು ತಪ್ಪು ಎಂಬ ವಾದ ಬರುತ್ತದೆ. ಗಾಡ್‌ಫಾದರ್ ಚಿತ್ರಕ್ಕೆ ಆಸ್ಕರ್ ಪ್ರಶಸ್ತಿ ಬರಲಿಲ್ಲವೇ? ಎಂಬ ಪ್ರಶ್ನೆಯೂ ಹಾಜರಾಗುತ್ತದೆ. ಅದನ್ನು ಒಪ್ಪುತ್ತಲೇ ಈ ದೇಶದಲ್ಲಿ ಪ್ರೇಕ್ಷಕರು ಸಿನಿಮಾವನ್ನು ಸ್ವೀಕರಿಸುವ ರೀತಿಯ ಬಗ್ಗೆಯೂ ಯೋಚಿಸಬೇಕಾಗುತ್ತದೆ. ವೀರಪ್ಪನ್ ಯಾರೂಂತ ಎಲ್ಲರಿಗೂ ಗೊತ್ತು. ಆ ಹೆಸರಿನ ಸಿನಿಮಾ ಬಂದಾಗ ಪ್ರೇಕ್ಷಕ ಬೇರೆ ದೃಷ್ಟಿಯಲ್ಲಿ ಸಿನಿಮಾವನ್ನು ನೋಡುವುದೂ ಅಸಾಧ್ಯ. ಅವನನ್ನು ರಾಬಿನ್‌ಹುಡ್ ಥರ ವೈಭವೀಕರಿಸಿದಾಗ ಪ್ರೇಕ್ಷಕನೂ ಆರಾಧನಾ ದೃಷ್ಟಿಯಲ್ಲೇ ರಿಯಲ್ ವೀರಪ್ಪನ್‌ನನ್ನೂ ನೋಡುವ ಅಪಾಯವಿದೆ.

ಒಂದು ಕಾಲಕ್ಕೆ ಫಿಲಂಫೇರ್ ಪ್ರಶಸ್ತಿಗಳ ಬಗ್ಗೆ ಚಿತ್ರೋದ್ಯಮಕ್ಕೆ ಹಾಗೂ ಜನರಿಗೆ ಬಹಳ ಗೌರವವಿತ್ತು. ಈಗ ಫಿಲಂಫೇರ್ ಪ್ರಶಸ್ತಿಯನ್ನೂ ಖರೀದಿಸಬಹುದು ಎಂಬ ಮಾತಿದೆ. ಜನರಿಗೆ ಎಲ್ಲದರ ಬಗ್ಗೆಯೂ ನಂಬಿಕೆ ಹೊರಟುಹೋಗುತ್ತಿದೆ. ಇಂದಿನ ಹೀರೋ ನಾಳೆಗೆ ಅಲರ್ಜಿಯಾಗುತ್ತಾನೆ, ಹಿಂದಿನ ಕ್ಲಾಸಿಕ್ ಈಗ ಡಬ್ಬಾ ಚಿತ್ರದ ಥರ ಕಾಣುತ್ತದೆ. ಅಕ್ಷಯ ಕುಮಾರ್‌ನ ಡ್ಯಾನ್ಸ್ ಬೋರಾಗತೊಡಗಿದೆ, ಗೋವಿಂದ ಕಪಿ ಥರಾ ಕಾಣಿಸುತ್ತಿದ್ದಾನೆ. ಕನ್ನಡದಲ್ಲೋ ಈಗ ಹೀರೋಗಳೇ ಇಲ್ಲ ಎಂಬ



ಒಂದು ಕಾಲಕ್ಕೆ ಫಿಲಂಫೇರ್ ಪ್ರಶಸ್ತಿಗಳ ಬಗ್ಗೆ ಚಿತ್ರೋದ್ಯಮಕ್ಕೆ ಹಾಗೂ ಜನರಿಗೆ ಬಹಳ ಗೌರವ ವಿತ್ತು. ಈಗ ಫಿಲಂಫೇರ್ ಪ್ರಶಸ್ತಿಯನ್ನೂ ಖರೀದಿಸ ಬಹುದು ಎಂಬ ಮಾತಿದೆ. ಜನರಿಗೆ ಎಲ್ಲದರ ಬಗ್ಗೆಯೂ ನಂಬಿಕೆ ಹೊರಟುಹೋಗುತ್ತಿದೆ. ಇಂದಿನ ಹೀರೋ ನಾಳೆಗೆ ಅಲರ್ಜಿಯಾಗುತ್ತಾನೆ,

ಸರಳ ತೀರ್ಮಾನಕ್ಕೆ ಜನರು ಬಂದಂತಿದೆ. ಎರಡೂವರೆ ತಾಸಿನ ಚಿತ್ರವನ್ನು ಒಂದೆಡೆ ಕುಳಿತು ನೋಡುವ ತಾಳ್ಮೆ ಯಾರಿಗೂ ಇಲ್ಲ. ಈ ಅವಧಿಯಲ್ಲೇ ಮೂರು ಸಿನಿಮಾಗಳನ್ನು ನೀಡುವ ಕಾಲ ಬರಬಹುದು.

ಹೊಸ ತಂತ್ರಗಳ, ಹೊಸ ಮ್ಯಾನರಿಸಮ್‌ಗಳ ಅವಿಷ್ಕಾರ ನಡೆದೇ ಇದೆ. ಕಮಲಾಹಾಸನ್ ತನ್ನ ಅಭಿನಯದ ಬತ್ತಳಿಕೆ ಖಾಲಿಯಾದಾಗ ಮುದುಕ ನಾಗಿ, ಹೆಣ್ಣಾಗಿ, ಕುರೂಪಿಯಾಗಿ, ಇನ್ನೇನೇನೋ ಆಗಿ ಜನರನ್ನು ರಂಜಿಸಲು ಹೆಣಗಾಡುತ್ತಿ ರುವುದನ್ನು ನಾವು ನೋಡುತ್ತಿದ್ದೇವೆ. ಗಹಗಹಿ ಸುವ ಖಳನ ಜಾಗದಲ್ಲಿ, ಮಾತೇ ಆಡದ ಖಳ ಬಂದಿದ್ದಾನೆ. ಬಂದೂಕಿನ ಜಾಗದಲ್ಲಿ ಮಚ್ಚು ಬಂದಿದೆ. ಕುಣಿತವೆನ್ನುವುದು ಯೋಗಾಸನದ ರೂಪ ತಾಳಿದೆ. ಗ್ರಾಫಿಕ್ ತಂತ್ರದಲ್ಲಿ ನೀವಿದ್ದಲ್ಲಿಗೇ ಸಿಮ್ಲಾದ ಬ್ಯಾಕ್‌ಗ್ರೌಂಡ್‌ನ್ನು ತರಬಹುದು.

ಇಷ್ಟಾದರೂ ಹೀರೋ ಇಲ್ಲದ ಸಿನಿಮಾವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ? ಅದೇ ಸಪ್ತಸಾಗರ ವನ್ನು ದಾಟಿ, ಸಪ್ತಬೆಟ್ಟಗಳನ್ನೇರಿ, ಏಳುಸುತ್ತಿನ ಕೋಟೆಯನ್ನು ಭೇಧಿಸಿ ರಾಜಕುಮಾರಿಯನ್ನು ರಕ್ಕಸನ ಕೈಯಿಂದ ರಕ್ಷಿಸಿ, ಆಕೆಯನ್ನು ವರಿಸಿ ಊರಿಗೆ ಬರುವ ವೀರ. ಅವನು ಎತ್ತರ ಇರ ಬಹುದು. ಬಣ್ಣ ಕೆಂಪಿಲ್ಲದೇ ಇರಬಹುದು, ಆದರೆ ಸ್ವಭಾವ ಬದಲಾಗುವುದು ಸಾಧ್ಯವೇ ಇಲ್ಲ.

ಅಂದು ಅಮಿತಾಬ್, ಇಂದು ಶಾರೂಕ್. ಅಮಿತಾಬ್‌ನ ಅಭಿಮಾನಿಗೆ ಈಗ ಆತನಂತೆಯೇ ವಯಸ್ಸಾಗಿದೆ. ಸಿನಿಮಾ ನೋಡೋದೆಂದರೆ ಬೇಜಾರು. ಶಾರುಕ್ ಅಭಿಮಾನಿಗೂ ನಾಳೆ ವಯ ಸ್ಸಾಗಿ ಬೋರಾಗಬಹುದು. ಆದರೆ ಶಾರುಕ್‌ಗೆ

ಬಿನ್ನಪ

ಸೃಷ್ಟಿಯ ಸೌಂದರ್ಯ
ಹಾಲಧರಗಳ ಮಾಧುರ್ಯ
ಹೊನ್ನಿನ ಹೃದಯ
ಎಲ್ಲವೂ ನಿನ್ನದೇ;
ನಿನ್ನಿಚ್ಛೆಯ ಮೇರೆಗೆ
ಅವುಗಳನ್ನಾರಿಗಾದರೂ-
ಕೊಟ್ಟು ಬಿಡು;
ಆದರೆನ್ನ ಪ್ರಿಯೆ
ಮುಂದಿನ ಜನ್ಮದಲ್ಲಾದರೂ
ಒಬ್ಬರಿಗೆ ಮಾತ್ರ
ಮೀಸಲಿಡು!!

- ಎಂ. ಮೊಹ್ಮೆದ್‌ಬಾಷ ಗೂಳ್ಯಂ

ಬೋರಾಗಬೇಕಲ್ಲ, ಈ ಮಾಯೆಯನ್ನು ಬಿಡುವ ಮನಸ್ಸಾಗಬೇಕಲ್ಲ. ಆಗ ಪಂಡಿತರು ಬರೆಯು ತ್ತಾರೆ 'ಶಾರುಕ್' ಚರಿಷ್ಮಾ ಮಾಯವಾಗುತ್ತಿದೆ.

ಈಗ ನಮ್ಮಲ್ಲೇ ನೋಡಿ. ಶಿವರಾಜ್ ಕುಮಾರ್, ರಮೇಶ್ ಬಿಟ್ಟರೆ ಮಿಕ್ಕವರ್‍ಯಾರಿಗೂ ಮಾರ್ಕೆಟ್ ಇಲ್ಲ ಎನ್ನುತ್ತದೆ ಗಾಂಧಿನಗರ. ಹಾಗಿ ದ್ದರೆ ದೇವರಾಜ್, ರಾಮ್‌ಕುಮಾರ್, ಶಶಿ ಕುಮಾರ್, ಅಭಿಜಿತ್, ಪ್ರಭಾಕರ್, ಇವರೆಲ್ಲಾ ಎಲ್ಲಿ ಹೋಗಬೇಕು. ಹೀರೋ ಆಗೋಣ ಅಂದರೆ ಜನ ಒಪ್ಪೋಲ್ಲ. ಅದಕ್ಕೂ ಮುಂಚೆ ನಿರ್ಮಾಪಕ ನೇ ಒಪ್ಪೋಲ್ಲ. ಖಳನಾಯಕನಾಗೋಣ ಅಂದರೆ ಇಮೇಜ್ ರಗಳೆ. ಪೋಷಕನಟನಾಗೋದಕ್ಕೆ ಇನ್ನೂ ವಯಸ್ಸಾಗಿಲ್ಲ. ಎಂಥ ವಿಚಿತ್ರ ಸಮಸ್ಯೆ ಅಲ್ಲವೇ. ನಮ್ಮ ಹಿಂದಿನ ಹೀರೋಗಳಾದ ಶ್ರೀನಾಥ್, ರಾಜೇಶ್, ಕಲ್ಯಾಣ್ ಕುಮಾರ್ ಅವರಿಗೆ ಇಂಥ ಸಂಕಷ್ಟ ಎದುರಾಗಿರಲಿಲ್ಲ. ಯೌವನದಲ್ಲಿ ನಾಯಕ, ನಡುವಯಸ್ಸಿಗೆ ಪೋಷಕ, ಹೀಗೇ ಸರಾಗವಾಗಿ ಅವರ ವೃತ್ತಿ ಬದುಕು ನಡೆದಿತ್ತು. ಈಗಿನ ಹೀರೋಗಳು ಈ ಅಕಾಲ ನಿರುದ್ಯೋಗವನ್ನು ಅನುಭವಿಸಲೇ ಬೇಕಾಗಿದೆ.

ಯಾಕೆಂದರೆ ಜನರಿಗೆ ಬೋರಾಗಿದೆ.

■ **ಕೇಶವ ನಾಡಕರ್ಣಿ**



ಪತ್ರಿಕಾ ಸಿನಿಮಾ
ಅವರ ಕತ್ತು ಹುಟ್ಟಿದಾಗಲೇ ಹಾಗಿಲ್ಲ ಸ್ವಾಮಿ, ಮತ್ತೊಬ್ಬರ ಕ್ಷೇಮವಲ್ಲಯ ಪತ್ರಿಕೆಯನ್ನು ಓದುವಾಗ ಕತ್ತು ಚಾಚಿ ಚಾಚಿ ಹಾಗಾಗಿದೆ ಅಷ್ಟೇ...
ಬಂದ ಬೀಗರು ನಾವೇ ಇಷ್ಟೆಲ್ಲಾಂದು ಪತ್ರಿಕೆಗಳನ್ನು ತರಿಸ್ತೀವಿ ಅಂತಾ ತಿಳಿದು ನಮಗೆ ಬುದ್ಧಿ ಜೀವಿಗಳು ಅಂತಾ ಹೊಗಳಿದ್ರು ಕಣೇ.. ಈ ಪತ್ರಿಕೆಗಳೆಲ್ಲ ಪಕ್ಕದ ಮನೆಯವರಿಂದ ತಂದದ್ದು ಅಂತ ಅವರಿಗೇನು ಗೊತ್ತು..?
ನನ್ನ ಕೆಲ್ಸ ಕಾಂಪೋಸ್ ಕೆಲ್ಸ ಅಂದಾಕ್ಷಣ ದನಾ ಕಾಂಪೋಸ್‌ದಲ್ಲಂವನ್ನಾ.. ಲೈಬ್ರರಿಂಮಲ್ಲ ಮುನ್ಸಿಕದಲ್ಲಿಂತು ಹಾಳೆಗಳನ್ನು ಕದಿಂಪೋಸನ್ನು ಕಾಂಪೋಸ್ ಕೆಲ್ಸ...

BISILA BADUKU Kannada Monthly AUGUST 1998 RNI No. 67406 / 97 Regd. BGW / 394